ಶುಕ್ರವಾರ, ಡಿಸೆಂಬರ್ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 332 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಅನುಭವ ಮಂಟಪ
ಜಾತಿ ಗಣತಿ ಇಲ್ಲದ ಸಾಮಾಜಿಕ ನ್ಯಾಯ ಅವೈಜ್ಞಾನಿಕ

'ಸರ್ಕಾರಿ ಆಸ್ತಿ: ಬೇಕಾಬಿಟ್ಟಿ ಬಳಕೆ ಸಲ್ಲ' 8

ಮಹಾರಾಷ್ಟ್ರ ಸಚಿವರ ಪ್ರವಾಸ ಮುಂದಕ್ಕೆ 8

ಇಂದು ಸಿನಿಮಾ ಪುರವಣಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,284	18,812	₹54,650 (ಬೆಂಗಳೂರು)	₹65,300 (ಬೆಂಗಳೂರು)	81.26

₹ 1.50 ಲಕ್ಷ ಕೋಟಿಯಲ್ಲಿ ಸ್ಥಿರವಾಗುತ್ತಿರುವ ವರಮಾನ ಸಂಗ್ರಹ

ಜಿಎಸ್‌ಟಿ ಸಂಗ್ರಹ ₹ 1.46 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ನವೆಂಬರ್‌ನಲ್ಲಿ ₹ 1.46 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಅಕ್ಟೋಬರ್‌ನಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಇದು ಶೇ 3.9ರಷ್ಟು ಕಡಿಮೆ.

ಆದರೆ, ಹಿಂದಿನ ವರ್ಷದ ನವೆಂಬರ್ ತಿಂಗಳ ಜಿಎಸ್‌ಟಿ ಸಂಗ್ರಹಕ್ಕೆ ಹೋಲಿಸಿದರೆ ಈ ಬಾರಿ ಶೇಕಡ 11ರಷ್ಟು ಹೆಚ್ಚಳ ಕಂಡುಬಂದಿದೆ.

ಹಿಂದಿನ ವರ್ಷದ ನವೆಂಬರ್‌ಗೆ ಹೋಲಿಸಿದರೆ, ಈ ವರ್ಷದ ನವೆಂಬರ್‌ನಲ್ಲಿ ಗ್ರಾಹಕರು ಉತ್ಪನ್ನಗಳನ್ನು ಹೆಚ್ಚು ಖರೀದಿಸಿದ್ದಾರೆ ಮತ್ತು ಸೇವೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಂಡಿದ್ದಾರೆ ಎಂಬುದನ್ನು ಜಿಎಸ್‌ಟಿ ಸಂಗ್ರಹಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಹೇಳುತ್ತಿವೆ. ನವೆಂಬರ್ ತಿಂಗಳನ್ನೂ ಪರಿಗಣಿಸಿದರೆ ಜಿಎಸ್‌ಟಿ ವರಮಾನ ಸಂಗ್ರಹವು ಸತತ ಒಂಬತ್ತು ತಿಂಗಳುಗಳಿಂದ ₹ 1.40 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಇದ್ದಂತಾಗಿದೆ.

ಈ ವರ್ಷದ ಅಕ್ಟೋಬರ್‌ನಲ್ಲಿ ಜಿಎಸ್‌ಟಿ ವರಮಾನ ಸಂಗ್ರಹವು ₹ 1.52 ಲಕ್ಷ ಕೋಟಿ ಆಗಿತ್ತು. ಜಿಎಸ್‌ಟಿ ವರಮಾನ ಸಂಗ್ರಹ ಪ್ರಮಾಣವು ₹ 1.50 ಲಕ್ಷ ಕೋಟಿಯ ಆಸುಪಾಸಿನಲ್ಲಿ ಸ್ಥಿರವಾಗುತ್ತಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮದುವೆಯ ಋತು ಶುರುವಾಗಿರುವುದು ಹಾಗೂ ನವೆಂಬರ್ ತಿಂಗಳ ಹಬ್ಬಗಳು ಜಿಎಸ್‌ಟಿ ಸಂಗ್ರಹ ಹೆಚ್ಚಲು ನೆರವಾಗಿವೆ ಎಂದು ಎನ್.ಎ. ಶಾ ಅಸೋಸಿಯೇಟ್ಸ್‌ನ ಪಾಲುದಾರ ಪರಾಗ್ ಮೆಹ್ತಾ ಹೇಳಿದ್ದಾರೆ. 'ರಿಯಲ್ ಎಸ್ಟೇಟ್ ವಲಯದ ಉದ್ಯಮಗಳಲ್ಲಿ ಹೆಚ್ಚಿನ ಮಾರಾಟ ಕಂಡುಬಂದಿದೆ. ಅಲ್ಲದೆ, ವಾಹನ ಮಾರುಕಟ್ಟೆಯಲ್ಲಿ ಕೂಡ ಏರಿಕೆ ದಾಖಲಾಗಿದೆ. ಗ್ರಾಹಕರು ಹೆಚ್ಚು ಹಣ ಖರ್ಚು ಮಾಡಿದ್ದಾರೆ. ತೆರಿಗೆ ಇಲಾಖೆ ಅಧಿಕಾರಿಗಳು ತೆರಿಗೆ ವಂಚಕರ ವಿರುದ್ಧ ಕ್ರಮ ಜರುಗಿಸುತ್ತಿದ್ದಾರೆ' ಎಂದು ಮೆಹ್ತಾ ವಿವರಿಸಿದ್ದಾರೆ.

ನವೆಂಬರ್‌ನಲ್ಲಿ ಸರಕುಗಳ ಆಮದಿನಿಂದ ಬರುವ ವರಮಾನದಲ್ಲಿ ಶೇ 20ರಷ್ಟು ಹೆಚ್ಚಳ ಆಗಿದೆ.

ಜಿಎಸ್‌ಟಿ ವರಮಾನ ಸಂಗ್ರಹ



ಅಂಕಿ ಅಂಶ (ಕೋಟಿ ₹ಗಳಲ್ಲಿ)

₹25,681 ಕೇಂದ್ರ ಜಿಎಸ್‌ಟಿ	₹32,651 ರಾಜ್ಯ ಜಿಎಸ್‌ಟಿ
₹77,103 ಏಕೀಕೃತ ಜಿಎಸ್‌ಟಿ	₹10,433 ಸೆಸ್

(ನವೆಂಬರ್ ತಿಂಗಳ ಜಿಎಸ್‌ಟಿ ಸಂಗ್ರಹದಲ್ಲಿ ಪಾಲು)

ಮೂರು ತಿಂಗಳ ಗರಿಷ್ಠ ಮಟ್ಟಕ್ಕೆ ತಯಾರಿಕಾ ಚಟುವಟಿಕೆ

ದೇಶದಲ್ಲಿ ತಯಾರಿಕಾ ವಲಯದ ಚಟುವಟಿಕೆಗಳು ನವೆಂಬರ್‌ನಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿವೆ. ರಫ್ತು ಹೆಚ್ಚಾಗಿದ್ದು ಹಾಗೂ ಮಾರುಕಟ್ಟೆಯಲ್ಲಿ ಬೇಡಿಕೆಯು ಸ್ಥಿರವಾಗಿ ಇದ್ದಿದ್ದು ಈ ಏರಿಕೆಗೆ ಕಾರಣ.

ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ನವೆಂಬರ್‌ನಲ್ಲಿ 55.7ಕ್ಕೆ ತಲುಪಿದೆ. ಇದು ಅಕ್ಟೋಬರ್‌ನಲ್ಲಿ 55.3 ಆಗಿತ್ತು.

ತಯಾರಿಕಾ ವಲಯದ ಒಟ್ಟಾರೆ ಕಾರ್ಯಾಚರಣೆ ಪರಿಸ್ಥಿತಿಯು ಸತತ 17ನೆಯ ತಿಂಗಳಿನಲ್ಲಿಯೂ ಸುಧಾರಿಸಿದೆ ಎಂಬುದನ್ನು ನವೆಂಬರ್ ತಿಂಗಳ ಪಿಎಂಐ ಅಂಕಿ–ಅಂಶ ಹೇಳುತ್ತಿದೆ. ಪಿಎಂಐ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಅದನ್ನು ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ರಾಜ್ಯದಲ್ಲೂ ಏರಿಕೆ

ಬೆಂಗಳೂರು: ರಾಜ್ಯದ ಜಿಎಸ್‌ಟಿ ವರಮಾನ ಸಂಗ್ರಹವು ನವೆಂಬರ್‌ನಲ್ಲಿ ₹ 10,238 ಕೋಟಿ ಆಗಿದೆ. ಹಿಂದಿನ ವರ್ಷದ ನವೆಂಬರ್ ಅವಧಿಗೆ ಹೋಲಿಸಿದರೆ ಇದು ಶೇಕಡ 13 ಹೆಚ್ಚು. ಈ ವರ್ಷದ ಅಕ್ಟೋಬರ್‌ನಲ್ಲಿ ₹ 10,996 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಅಕ್ಟೋಬರ್‌ಗೆ ಹೋಲಿಸಿದರೆ ವರಮಾನ ಸಂಗ್ರಹ ತುಸು ಕಡಿಮೆಯಾಗಿದೆ. 'ನವೆಂಬರ್ ತಿಂಗಳ ಹಬ್ಬಗಳು, ಮದುವೆಯ ಋತು ಆರಂಭವಾಗಿದ್ದುದು ರಿಯಲ್ ಎಸ್ಟೇಟ್, ವಾಹನ, ಚಿನ್ನಾಭರಣ, ಉಡುಪುಗಳ ಮಾರಾಟ ಹೆಚ್ಚಿಸಿವೆ. ಅಕ್ಟೋಬರ್‌ಗೆ ಹೋಲಿಸಿದರೆ ವರಮಾನ ಸಂಗ್ರಹವು ದೊಡ್ಡ ಮಟ್ಟದಲ್ಲಿ ಇಳಿಕೆ ಆಗಿಲ್ಲ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಜಿಎಸ್‌ಟಿ ಸಮಿತಿ ಅಧ್ಯಕ್ಷ ಬಿ.ಟಿ. ಮನೋಹರ್ ಹೇಳಿದರು.

ಒಂದೇ ದಿನ 506 ರನ್.

17 ವರ್ಷಗಳ ನಂತರ ಪಾಕಿಸ್ತಾನದಲ್ಲಿ ಕ್ರಿಕೆಟ್ ಸರಣಿ ಆಡುತ್ತಿರುವ ಇಂಗ್ಲೆಂಡ್ ತಂಡವು ಗುರುವಾರ ಆರಂಭವಾದ ಟೆಸ್ಟ್‌ನ ಮೊದಲ ದಿನವೇ 500ಕ್ಕೂ ಹೆಚ್ಚು ರನ್ ಗಳಿಸಿ ವಿಶ್ವದಾಖಲೆ ಬರೆಯಿತು. 112 ವರ್ಷಗಳ ಹಿಂದೆ ಆಸ್ಟ್ರೇಲಿಯಾ ನಿರ್ಮಿಸಿದ್ದ ದಾಖಲೆಯನ್ನು ಮೀರಿ ನಿಂತಿತು. ಇದಕ್ಕೆ ಕಾರಣರಾಗಿದ್ದು ಇಂಗ್ಲೆಂಡ್ ತಂಡದ ನಾಲ್ವರು ಬ್ಯಾಟರ್‌ಗಳು ಗಳಿಸಿದ ಶತಕಗಳು.

ಇಂಗ್ಲೆಂಡ್ (ಮೊದಲ ಇನಿಂಗ್ಸ್)
4ಕ್ಕೆ506 (75 ಓವರ್‌ಗಳಲ್ಲಿ)

ಹಳೆಯ ದಾಖಲೆ
ಆಸ್ಟ್ರೇಲಿಯಾ 6ಕ್ಕೆ494
ವಿರುದ್ಧ ದಕ್ಷಿಣ ಆಫ್ರಿಕಾ
ಸಿಡ್ನಿ –1910-11

ಜ್ಯಾಕ್ ಕ್ರಾಲಿ
122 (111ಎ, 4X21)

ಬೆನ್ ಡಕೆಟ್
107 (110ಎ, 4X15)

ಒಲಿ ಪೋಪ್
108 (104ಎ, 4X14)

ಹ್ಯಾರಿ ಬ್ರೂಕ್
ಬ್ಯಾಟಿಂಗ್ 101 (81ಎ, 4X14, 6X1)

ಜಿ–20 ಯೂನಿವರ್ಸಿಟಿ ಕನೆಕ್ಟ್ ಕಾರ್ಯಕ್ರಮದಲ್ಲಿ ಸಚಿವ ಎಸ್. ಜೈಶಂಕರ್

ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತಕ್ಕೆ ಅಧ್ಯಕ್ಷತೆ

ನವದೆಹಲಿ (ಪಿಟಿಐ): 'ಅಂತರರಾಷ್ಟ್ರೀಯ ವ್ಯವಹಾರಗಳಿಗೆ ಸಂಬಂಧಿಸಿದ ಸಂದಿಗ್ಧ ಪರಿಸ್ಥಿತಿಯಲ್ಲಿ ನಮಗೆ ಜಿ–20 ಗುಂಪಿನ ಅಧ್ಯಕ್ಷತೆ ದೊರೆತಿದೆ. ಜಗತ್ತಿನ ಅತಿ ದುರ್ಬಲ ವರ್ಗಗಳ ಮೇಲೆ ಪರಿಣಾಮ ಬೀರುವಂತಹ ಹಲವು ಸಮಸ್ಯೆಗಳತ್ತ ವಿಶ್ವ ನಾಯಕರು ಗಮನ ಕೇಂದ್ರೀಕರಿಸಿರುವ ಸಮಯದಲ್ಲೇ ಅಧ್ಯಕ್ಷತೆ ಸಿಕ್ಕಿರುವುದು ಮಹತ್ವದ್ದಾಗಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಭಾರತವು ಗುರುವಾರ ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡಿದ್ದು, ಇದರ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಜಿ–20 ಯೂನಿವರ್ಸಿಟಿ ಕನೆಕ್ಟ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಜಿ–20 ಅಧ್ಯಕ್ಷತೆಯ ಅವಧಿಯಲ್ಲಿ ಭಾರತವು ಇಂಧನ ಮತ್ತು ಆಹಾರ ಭದ್ರತೆ, ಆರೋಗ್ಯ ಸೇವೆಯ ಲಭ್ಯತೆ, ಹವಾಮಾನ ನ್ಯಾಯದಂತಹ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಿದೆ' ಎಂದಿದ್ದಾರೆ.

'ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕ ಒಳಗೊಂಡಂತೆ ಜಗತ್ತಿನ ದಕ್ಷಿಣ ರಾಷ್ಟ್ರಗಳ ಧ್ವನಿಯಾಗಿ ಹೊರಹೊಮ್ಮಲು ಭಾರತವು ಪ್ರಯತ್ನಿಸಲಿದೆ. ಅದು ಧ್ರುವೀಕರಣದ ಪರಿಣಾಮ ಮತ್ತು ಅಭಿವೃದ್ಧಿ ಹೊಂದಿದ ಜಗತ್ತಿನಲ್ಲಿನ ಸಂಘರ್ಷವನ್ನೂ ಎದುರಿಸಬೇಕಾಗುತ್ತದೆ' ಎಂದೂ ತಿಳಿಸಿದ್ದಾರೆ.

'ಭಾರತವು ಪ್ರಜಾಪ್ರಭುತ್ವದ ನೆಲೆಯಾಗಿದ್ದು, ಜಿ–20 ಅಧ್ಯಕ್ಷತೆಯು ಸಹಭಾಗಿತ್ವ, ಸಮಾಲೋಚನೆ ಹಾಗೂ ದೃಢತೆಯನ್ನು ಒಳಗೊಂಡಿರಲಿದೆ' ಎಂದು ಹೇಳಿದ್ದಾರೆ.

'ವಿವಿಧ ಆಸಕ್ತಿಗಳ ಸಮನ್ವಯಗೊಳಿಸುವಿಕೆಯು ಭಾರತದ ಇತಿಹಾಸ ಹಾಗೂ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿರುವ ವಿಷಯವಾಗಿದೆ. ನಾವು ಬಹಳ ಹಿಂದಿನಿಂದಲೂ ಬಹುತ್ವವಾದ ಮತ್ತು ಸಲಹಾ ಸಮಾಜದ ಭಾಗವಾಗಿದ್ದೇವೆ. ನಮ್ಮಲ್ಲಿ ಯಾವುದೇ ಸಮಸ್ಯೆ ಕುರಿತು ಸೂಕ್ತ ತೀರ್ಮಾನ ಕೈಗೊಳ್ಳುವ ಮುನ್ನ ಅದರ ಬಗ್ಗೆ ಮುಕ್ತವಾಗಿ ಚರ್ಚಿಸಲಾಗುತ್ತದೆ. ಈ ಗುಣ ನಮ್ಮ ವಂಶವಾಹಿಯಲ್ಲೇ ಬೆರೆತು ಹೋಗಿದೆ. ಹೀಗಾಗಿ ನಮಗೆ ಯಾವತ್ತೂ ವೈವಿಧ್ಯತೆ ಕುರಿತು ಅಭದ್ರತೆ ಕಾಡಿಲ್ಲ' ಎಂದೂ ತಿಳಿಸಿದ್ದಾರೆ.

'ಒಳಗೊಳ್ಳುವಿಕೆ ನಮ್ಮ ಕಾರ್ಯಸೂಚಿ': 'ಒಳಗೊಳ್ಳುವಿಕೆ, ಮಹಾತ್ವಕಾಂಕ್ಷೆ, ಕ್ರಿಯಾತ್ಮಕತೆ ಹಾಗೂ ನಿಖರತೆಯು ಭಾರತದ ಜಿ–20 ಅಧ್ಯಕ್ಷತೆಯ ಕಾರ್ಯಸೂಚಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾರತವು ಗುರುವಾರ ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡ ಬೆನ್ನಲ್ಲೇ ಸರಣಿ ಟ್ವೀಟ್ ಮಾಡಿರುವ ಮೋದಿ, 'ಒಂದು ಭೂಮಿ, ಒಂದು ಕುಟುಂಬ ಹಾಗೂ ಒಂದು ಭವಿಷ್ಯ' ಭಾರತದ ಅಧ್ಯಕ್ಷತೆಯ ಧ್ಯೇಯವಾಕ್ಯವಾಗಿದ್ದು, ಏಕತೆಯನ್ನು ಉತ್ತೇಜಿಸುವ ದಿಸೆಯಲ್ಲಿ ನಾವು ಕೆಲಸ ಮಾಡಲಿದ್ದೇವೆ' ಎಂದಿದ್ದಾರೆ.

ಇನ್ನಷ್ಟು ಸುದ್ದಿಗಳು 9

ಬೇಲಾ ಎಂ.ತ್ರಿವೇದಿ

ಹಿಮಾ ಕೊಹ್ಲಿ

'ಸುಪ್ರೀಂ': ಮಹಿಳಾ ನ್ಯಾಯಮೂರ್ತಿಗಳ ಪೀಠ ರಚನೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಇತಿಹಾಸದಲ್ಲೇ ಮೂರನೇ ಬಾರಿಗೆ ಮಹಿಳಾ ನ್ಯಾಯಮೂರ್ತಿಗಳೇ ಇರುವ ಪೀಠವೊಂದನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಗುರುವಾರ ರಚಿಸಿದ್ದಾರೆ.

ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಬೇಲಾ ಎಂ. ತ್ರಿವೇದಿ ಇರಲಿದ್ದಾರೆ. ವೈವಾಹಿಕ ವ್ಯಾಜ್ಯ ಹಾಗೂ ಜಾಮೀನು ಪ್ರಕರಣಗಳು ಸೇರಿದಂತೆ ವರ್ಗಾವಣೆಗೊಂಡ ಅರ್ಜಿಗಳ ಕುರಿತು ಈ ಪೀಠ ವಿಚಾರಣೆ ನಡೆಸಲಿದೆ. 10 ವರ್ಗಾವಣೆಗೊಂಡ ಅರ್ಜಿಗಳು, 10 ಜಾಮೀನು ಅರ್ಜಿಗಳು ಸೇರಿದಂತೆ ಒಟ್ಟು 32 ಪ್ರಕರಣಗಳು ಈ ಪೀಠದ ಮುಂದಿವೆ.

2013ರಲ್ಲಿ ಮೊದಲ ಬಾರಿಗೆ ಎಲ್ಲಾ ಮಹಿಳಾ ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠವನ್ನು ರಚಿಸಲಾಗಿತ್ತು. ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜ್ಞಾನ್ ಸುಧಾ ಮಿಶ್ರಾ ಹಾಗೂ ರಂಜನಾ ಪ್ರಕಾಶ್ ದೇಸಾಯಿ ಇದ್ದರು. ಎರಡನೇ ಬಾರಿಗೆ 2018ರಲ್ಲಿ ರಚಿಸಲಾಯಿತು. ಇದರಲ್ಲಿ ನ್ಯಾಯಮೂರ್ತಿಗಳಾದ ಆರ್. ಭಾನುಮತಿ ಮತ್ತು ಇಂದಿರಾ ಬ್ಯಾನರ್ಜಿ ಅವರಿದ್ದರು.

ಗುಜರಾತ್ ವಿಧಾನಸಭೆ ಶೇ 60.23ರಷ್ಟು ಮತದಾನ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಯ 89 ಕ್ಷೇತ್ರಗಳಿಗೆ ಗುರುವಾರ ನಡೆದ ಮತದಾನವು ಬಹುತೇಕ ಶಾಂತಿಯುತವಾಗಿತ್ತು. ಪ್ರಾಥಮಿಕ ಮಾಹಿತಿಯ ಪ್ರಕಾರ ಸಂಜೆ ಐದರ ವೇಳೆಗೆ ಶೇ 60.23ರಷ್ಟು ಮತದಾನ ದಾಖಲಾಗಿತ್ತು. ಇದು ಗುಜರಾತ್ ವಿಧಾನಸಭೆ ಚುನಾವಣೆಯ ಮೊದಲ ಹಂತದ ಮತದಾನವಾಗಿದ್ದು, ಎರಡನೇ ಹಂತದ ಮತದಾನ 5ರಂದು ನಡೆಯಲಿದೆ.

ಸಂಜೆ ಐದರ ನಂತರವೂ ಹಲವು ಮಂದಿ ತಮ್ಮ ಹಕ್ಕು ಚಲಾಯಿಸಲು ಮತಗಟ್ಟೆ ಎದುರು ಸರದಿಯಲ್ಲಿ ಇದ್ದರು. ಹೀಗಾಗಿ ಒಟ್ಟು ಮತದಾನದ ಪ್ರಮಾಣ ಹೆಚ್ಚಾಗಲಿದೆ. ಈ ಬಾರಿ ತಾಪಿ ಜಿಲ್ಲೆಯಲ್ಲಿ ಗರಿಷ್ಠ ಶೇ 72ರಷ್ಟು ಮತದಾನ ನಡೆದಿದೆ ಎಂದು ಚುನಾವಣಾ ಆಯೋಗವು ಹೇಳಿದೆ.

ಕಾಂಗ್ರೆಸ್ ದೂರು: 'ಚುನಾವಣಾ ಕರ್ತವ್ಯಕ್ಕೆ ತ್ರಿಪುರಾ ಸ್ಟೇಟ್ ರೈಫಲ್ಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು. ಆದರೆ, ಮತಗಟ್ಟೆಗಳತ್ತ ಸುಳಿಯಬೇಡಿ ಎಂದು ಅವರಿಗೆ ಸೂಚನೆ ನೀಡಲಾಗಿದೆ. ಎಲ್ಲಾ ಮತಯಂತ್ರಗಳನ್ನು ಗುಜರಾತ್ ಪೊಲೀಸರೇ ನಿರ್ವಹಣೆ ಮಾಡುತ್ತಿದ್ದಾರೆ. ಇದು ಮುಕ್ತ ಮತ್ತು ನ್ಯಾಯಸಮ್ಮತವಾಗಿ ಚುನಾವಣೆ ನಡೆಯಬೇಕು ಎಂಬುದರ ಉಲ್ಲಂಘನೆ' ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದೆ.

ಇನ್ನಷ್ಟು ಸುದ್ದಿಗಳು 13

ಅನಧಿಕೃತ ಧಾರ್ಮಿಕ ಕಟ್ಟಡ ವರದಿ ಸಲ್ಲಿಕೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಧಿಕೃತ ಧಾರ್ಮಿಕ ಕಟ್ಟಡ ತೆರವುಗೊಳಿಸುವಲ್ಲಿ ಸಾಕಷ್ಟು ವಿಳಂಬವಾಗುತ್ತಿದ್ದು, ಇಂತಹ ಕಟ್ಟಡಗಳ ತೆರವಿಗೆ ರಾಜ್ಯ ಸರ್ಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಪರಸ್ಪರ ಸಹಕಾರದೊಂದಿಗೆ ಜಂಟಿ ಕಾರ್ಯಾಚರಣೆ ನಡೆಸುವ ಅಗತ್ಯವಿದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಸಾರ್ವಜನಿಕ ಸ್ಥಳಗಳಲ್ಲಿನ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಲು ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನ ಜಾರಿಗೊಳಿಸುವ ಹಿನ್ನೆಲೆಯಲ್ಲಿ ಹೈಕೋರ್ಟ್ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಂಡಿದ್ದು, ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ಅಶೋಕ್ ಎಸ್. ಕಿಣಗಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರತಿವಾದಿಗಳ ಪರ ವಕೀಲರು, 'ಈ ಹಿಂದೆ ನೀಡಿರುವ ಆದೇಶದ ಅನುಪಾಲನಾ ವರದಿ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಹೈಕೋರ್ಟ್ ಆದೇಶ ಹೊರಡಿಸಿದ 2021ರ ಆಗಸ್ಟ್ 12ರಿಂದ ವಸ್ತುಸ್ಥಿತಿ ವರದಿ ಸಲ್ಲಿಸುವ ದಿನದ ವರೆಗೂ ಅನಧಿಕೃತ ಧಾರ್ಮಿಕ ಕಟ್ಟಡಗಳ ತೆರವಿಗೆ ಏನೆಲ್ಲಾ ಕ್ರಮ ಕೈಗೊಳ್ಳಲಾಗಿದೆ ಮತ್ತು ತೆರವುಗೊಳಿರುವ ಕಟ್ಟಡಗಳ ಅಂಕಿ-ಅಂಶಗಳನ್ನು ನಿಗದಿತ ಚಾರ್ಟ್ (ವಿವರಣಾತ್ಮಕ ನಕ್ಷೆ ಒಳಗೊಂಡ ಪಟ್ಟಿ) ರೂಪದಲ್ಲಿ ಸಲ್ಲಿಸಿ' ಎಂದು ನಿರ್ದೇಶಿಸಿ ವಿಚಾರಣೆಯನ್ನು 2023ರ ಜನವರಿ 12ಕ್ಕೆ ಮುಂದೂಡಿತು.

ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲು

ಥಳಿತ: ಎಸ್.ಸಿ ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ನಂಗಲಿ (ಕೋಲಾರ ಜಿಲ್ಲೆ): ಬೈಕ್ ಹಿಂದಿಕ್ಕಿದ ಪರಿಶಿಷ್ಟ ಜಾತಿಯ (ಎಸ್.ಸಿ) ಉದಯ್ ಕಿರಣ್ (25) ಎಂಬ ಯುವಕನನ್ನು ಒಕ್ಕಲಿಗ ಸಮುದಾಯದ ನಾಲ್ವರು ಪೆತ್ತಾಂಡ್ಲಹಳ್ಳಿ ಗ್ರಾಮದಲ್ಲಿ ಬುಧವಾರ ಮರಕ್ಕೆ ಕಟ್ಟಿ ಥಳಿಸಿದ್ದಾರೆ. ಇದರಿಂದ ಮನನೊಂದ ಆತ ಬೇವಹಳ್ಳಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಪೆತ್ತಾಂಡ್ಲಹಳ್ಳಿಯ ರಾಜು, ಶಿವರಾಜ್, ಗೋಪಾಲಕೃಷ್ಣಪ್ಪ ಹಾಗೂ ಮುನಿವೆಂಕಟಪ್ಪ ವಿರುದ್ಧ ಮೃತನ ಮಾವ ಬಿ.ಎಚ್. ನಾಗರಾಜ್ ಗುರುವಾರ ನಂಗಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಉದಯ್ ಕಿರಣ್

ಆರೋಪಿಗಳೆಲ್ಲರೂ ಸಂಬಂಧಿಗಳಾಗಿದ್ದು, ತಲೆಮರೆಸಿಕೊಂಡಿದ್ದಾರೆ. ಅವರ ವಿರುದ್ಧ ದೌರ್ಜನ್ಯ, ಹಲ್ಲೆ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಾಗಿದೆ.

'ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದ್ದೇವೆ. ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಸಬ್ ಇನ್‌ಸ್ಪೆಕ್ಟರ್ ಪ್ರದೀಪ್ ಸಿಂಗ್ ತಿಳಿಸಿದ್ದಾರೆ.

'ಬೈಕ್ ಹಿಂದಿಕ್ಕಿದ ಕಾರಣ ಜಗಳ ತೆಗೆದ ಆರೋಪಿಗಳು ಹಲ್ಲೆ ನಡೆಸಿ ಉದಯ್‌ನ ಬೈಕ್ ಮತ್ತು ಮೊಬೈಲ್ ಕಿತ್ತುಕೊಂಡು ಹೋಗಿದ್ದರು. ಅವನ್ನು ವಾಪಸ್ ಕೇಳಲು ಆತ ಪೆತ್ತಾಂಡ್ಲಹಳ್ಳಿಗೆ ಹೋಗಿದ್ದ. ಈ ಸಂದರ್ಭದಲ್ಲಿ ಆರೋಪಿಗಳು ಆತನನ್ನು ಮರಕ್ಕೆ ಕಟ್ಟಿ ಹಾಕಿ ಥಳಿಸಿ, ಜಾತಿ ನಿಂದನೆ ಮಾಡಿದ್ದರು' ಎಂದು ಮೃತನ ಮಾವ ದೂರಿನಲ್ಲಿ ತಿಳಿಸಿದ್ದಾರೆ.

ಮೂಲತಃ ಎಚ್. ಬೈಯಪ್ಪನಹಳ್ಳಿ ಗ್ರಾಮದ ಈ ಯುವಕ ಬೇವಹಳ್ಳಿಯ ಮಾವನ ಮನೆಯಲ್ಲಿ ವ್ಯವಸಾಯ ಮಾಡಿಕೊಂಡಿದ್ದ.

ಆನ್‌ಲೈನ್‌ನಲ್ಲೇ ಪದವಿ ಕೋರ್ಸ್ ಮಾರ್ಚ್‌ನಿಂದ ಆರಂಭ

ಬೆಂಗಳೂರು: 2023 ರ ಮಾರ್ಚ್ ವೇಳೆಗೆ ರಾಜ್ಯದ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲೂ ಕನಿಷ್ಠ ಒಂದು ಪದವಿ ಕೋರ್ಸ್ ಅನ್ನು ಆನ್‌ಲೈನ್ ರೂಪದಲ್ಲಿ ಆರಂಭಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು. 6

ಗ್ರ್ಯಾಚ್ಯುಟಿಗಾಗಿ ನೌಕರರ ಪ್ರತಿಭಟನೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಅಂಗನವಾಡಿ ನೌಕರರಿಗೂ ಗ್ರ್ಯಾಚ್ಯುಟಿ ಪಾವತಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರು ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. 8

ಸರ್ವರ್ ವೈಫಲ್ಯ: ಅವ್ಯವಸ್ಥೆ, ಗೊಂದಲ

ಮುಂಬೈ: ದೇಶದ ಅತಿದೊಡ್ಡ ಮತ್ತು ಹೆಚ್ಚು ದಟ್ಟಣೆಯುಳ್ಳ, ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ಟರ್ಮಿನಲ್‌ನಲ್ಲಿ ಗುರುವಾರ ಸಂಜೆ ಕಂಪ್ಯೂಟರ್ ವ್ಯವಸ್ಥೆಯಲ್ಲಿ ವ್ಯತ್ಯಯವಾಗಿದ್ದು ತೀವ್ರ ಅವ್ಯವಸ್ಥೆ, ಗೊಂದಲಕ್ಕೆ ಕಾರಣವಾಯಿತು. 12

13 ವರ್ಷ ಕಳೆದರೂ ಪ್ರಗತಿ ತೋರಿಸದ ಚೆನ್ನೈ ಮೂಲದ 'ಮಾರ್ಗ್'!

ಬಳ್ಳಾರಿ ವಿಮಾನ ನಿಲ್ದಾಣ ನಿರ್ಮಾಣ ಒಪ್ಪಂದ ರದ್ದು

• ಹೊನಕೆರೆ ನಂಜುಂಡೇಗೌಡ

ಬಳ್ಳಾರಿ: ಸಮೀಪದ ಚಾಗನೂರಿನಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲು (ಎಡಿಪಿ) ಚೆನ್ನೈ ಮೂಲದ 'ಮಾರ್ಗ್' ಕಂಪನಿ ಜತೆ ಮಾಡಿಕೊಂಡಿದ್ದ ಒಪ್ಪಂದವನ್ನು ರಾಜ್ಯ ಸರ್ಕಾರ ರದ್ದುಪಡಿಸಿದೆ. ಕಾರ್ಯಕ್ಷಮತೆ ಭದ್ರತೆಗೆ ಕಂಪನಿ ಇಟ್ಟಿದ್ದ ₹4 ಕೋಟಿ ಬ್ಯಾಂಕ್ ಗ್ಯಾರಂಟಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಮೂಲಸೌಲಭ್ಯ ಇಲಾಖೆ (ಐಡಿಡಿ) ಏಪ್ರಿಲ್ 4ರಂದು 'ಮಾರ್ಗ್' ಜತೆಗಿನ ಒಪ್ಪಂದ ರದ್ದತಿಗೆ ಶಿಫಾರಸು ಮಾಡಿತ್ತು. ನ.2 ರಂದು ಸೇರಿದ್ದ ಸಂಪುಟ ಸಭೆಯಲ್ಲಿ ಶಿಫಾರಸಿಗೆ ಅನುಮತಿ ದೊರೆತಿದ್ದರಿಂದ ಒಪ್ಪಂದ ರದ್ದುಪಡಿಸಿ ಆದೇಶ ಹೊರಡಿಸಲಾಗಿದೆ.

'ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ'ವೇ (ಕೆಎಸ್‌ಐಐಡಿಸಿ) ಸ್ಪರ್ಧಾತ್ಮಕ ಬಿಡ್ ಕರೆದು 'ಇಪಿಸಿ ಮಾದರಿ'ಯಲ್ಲಿ ವಿಮಾನ ನಿಲ್ದಾಣ ಯೋಜನೆ ಅನುಷ್ಠಾನ ಮಾಡಲಿದೆ.

ಬಳ್ಳಾರಿ ಸಮೀಪದ ಚಾಗನೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ಮೀಸಲಿಟ್ಟಿರುವ ಜಾಗ

ಚಾಗನೂರಿನಲ್ಲಿ ಸ್ವಾಧೀನ ಮಾಡಿಕೊಂಡಿರುವ 987 ಎಕರೆ ಜಮೀನಿನಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು 2010ರ ಆಗಸ್ಟ್ 6ರಂದು ಚೆನ್ನೈ ಮೂಲದ 'ಮಾರ್ಗ್' ಜತೆ ಸರ್ಕಾರ ಒಪ್ಪಂದ ಮಾಡಿಕೊಂಡಿತ್ತು. 13 ವರ್ಷ ಕಳೆದರೂ ಯೋಜನೆ ಪ್ರಗತಿ ಕಾಣದಿದ್ದರಿಂದ ಒಪ್ಪಂದ ರದ್ದಾಗಿದೆ.

'ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತ ಎಲ್ಲ ಅವಕಾಶ ಮತ್ತು ಅನುಕೂಲ ಮಾಡಿಕೊಟ್ಟರೂ ₹ 1 ಲಕ್ಷ ಈಕ್ವಿಟಿಯಲ್ಲಿ ಹೂಡಿದ್ದು ಬಿಟ್ಟರೆ ಕಂಪನಿ ಯಾವುದೇ ಹೂಡಿಕೆ ಮಾಡದಿರುವುದು ಗಮನಿಸಿದರೆ ಯೋಜನೆ ಕಾರ್ಯಗತಗೊಳಿಸಲು ಆರ್ಥಿಕ ಶಕ್ತಿ ಇಲ್ಲವೆಂಬುದು ಖಚಿತವಾಗುತ್ತದೆ' ಎಂದು ಐಡಿಡಿ ಹೊರಡಿಸಿರುವ ವಿಮಾನ ನಿಲ್ದಾಣ ಅಭಿವೃದ್ಧಿ ಯೋಜನೆ ರದ್ದು ಆದೇಶದಲ್ಲಿ ಹೇಳಲಾಗಿದೆ.

'ಮಾರ್ಗ್'ಗೆ ಜೂನ್ 8ರಂದು ವಿಮಾನ ನಿಲ್ದಾಣ ಯೋಜನೆ ವಿಳಂಬವಾಗಿರುವ ಕುರಿತು ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ಕಂಪನಿ ನೋಟಿಸ್‌ಗೆ ನೀಡಿದ್ದ ಉತ್ತರ ತೃಪ್ತಿಕರವಾಗಿರಲಿಲ್ಲ. ಬಳಿಕ ಕಾನೂನು ಮತ್ತು ಆರ್ಥಿಕ ಇಲಾಖೆ ಒಪ್ಪಿಗೆ ಪಡೆದು ಐಡಿಡಿ ಒಪ್ಪಂದ ರದ್ದುಪಡಿಸಲು ಶಿಫಾರಸು ಮಾಡಿತ್ತು.

ವಿಮಾನ ನಿಲ್ದಾಣ ಮುಂದೇನು?

ವಿಮಾನ ನಿಲ್ದಾಣ ಅಭಿವೃದ್ಧಿ ಯೋಜನೆಗೆ 'ಕನ್ಸಲ್ಟೆಂಟ್' ನೇಮಕವಾಗಲಿದೆ. ಈ ಕನ್ಸಲ್ಟೆಂಟ್ ಸಮೀಕ್ಷೆ ನಡೆಸಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಿದ್ದು, ಇದು ಅಂದಾಜು ವೆಚ್ಚ ಮತ್ತಿತರ ವಿವರ ಒಳಗೊಂಡಿರುತ್ತದೆ.

ಡಿಪಿಆರ್ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಹೋಗಲಿದೆ. ಸಂಪುಟ ಒಪ್ಪಿಗೆಯ ಬಳಿಕ ಕೆಎಸ್‌ಐಐಡಿಸಿ ಸ್ಪರ್ಧಾತ್ಮಕ ಬಿಡ್ ಕರೆಯಲಿದೆ. ಆನಂತರ ಕಾಮಗಾರಿ ಆರಂಭವಾಗಲಿದೆ. ಎರಡು ಪ್ಯಾಕೇಜ್‌ಗಳಲ್ಲಿ ವಿಮಾನ ನಿಲ್ದಾಣ ಕಾಮಗಾರಿ ನಡೆಯಲಿದೆ.

ಎಲ್ಲವೂ ತ್ವರಿತಗತಿಯಲ್ಲಿ ನಡೆದರೆ ನಾಲ್ಕೈದು ತಿಂಗಳಿಗೆ ವಿಮಾನ ನಿಲ್ದಾಣ ಯೋಜನೆ ಡಿಪಿಆರ್ ಸಿದ್ಧ ಆಗಿ ಸಂಪುಟದ ಒಪ್ಪಿಗೆ ದೊರೆಯಬಹುದು ಎಂದು ಕೆಎಸ್‌ಐಐಡಿಸಿ ಮೂಲಗಳು ತಿಳಿಸಿವೆ.

ಒಳ ಪುಟಗಳು

ರಸ್ತೆತಡೆ, ಪ್ರತಿಭಟನಕಾರರು ವಶ 8

'ದಿ ಕಾಶ್ಮೀರ್ ಫೈಲ್ಸ್' ವಿವಾದ: ಕ್ಷಮೆ ಕೇಳಿದ ನಾದವ್ ಲಾಪಿಡ್ 9

ದಕ್ಷಿಣ ಕೊರಿಯಾ ಮಹಿಳಾ ಯೂಟ್ಯೂಬರ್‌ಗೆ ಲೈಂಗಿಕ ಕಿರುಕುಳ: ಇಬ್ಬರ ಸೆರೆ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಾಹೀರಾತು

ಮಂಡಿನೋವಿಗೆ ಸರ್ಜರಿ ಇಲ್ಲದೇ ಚಿಕಿತ್ಸೆ

ಕಡಿಮೆ ವೆಚ್ಚದಲ್ಲಿ, ಗಂಟೆಗಟ್ಟಲೇ ಆಸ್ಪತ್ರೆ ವಾಸವಿಲ್ಲದೇ ನೋವು ಉಪಶಮನ.

ನಮ್ಮದೇಹದ ಅತಿ ದೊಡ್ಡಕೀಲು ಅಥವಾ ಜಾಯಿಂಟ್ ಅಂದರೆ ಮಂಡಿ, 3 ಮೂಳೆಗಳ ಒಟ್ಟು ಗೂಡುವಿಕೆಯಿಂದ ಮಂಡಿರೂಪುಗೊಂಡಿದೆ. ಅದರ ಮೇಲೊಂದು ಚಿಪ್ಪುಇರುತ್ತದೆ. ದೇಹದ ಹೆಚ್ಚಿನ ಭಾರ ಮಂಡಿಮೇಲೆಯೇ ಬೀಳುತ್ತದೆ.

ಮಂಡಿ ನೋವು ಏಕೆ ಬರುತ್ತದೆ ?
ಮಂಡಿಯ ಕೀಲುಗಳು ತೂಕ ಹೊರುವ ಕಾರಣದಿಂದ ಸವೆಯುತ್ತವೆ. ಮುಂಚೆ 60ರ ಬಳಿಕ ಕೀಲುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಆರ್ಥರೈಟಿಸ್ ಈಗ 45–50ರ ವಯಸ್ಸಿನಲ್ಲಿಯೇ ಕಾಣಿಸುತ್ತದೆ.

ಒಂದೇ ಕಡೆ ಬಹಳ ಹೊತ್ತು ಕುಳಿತು ಕೆಲಸ ಮಾಡುವುದು, ವಿಟಾಮಿನ್ "ಡಿ' ಕೊರತೆ, ಕ್ಯಾಲ್ಸಿಯಂ ಕೊರೆತೆ, ಸ್ನಾಯುಗಳು ದುರ್ಬಲವಾಗುವುದು, ವ್ಯಾಯಾಮ ಮಾಡದೇ ಇರುವುದು, ಮಹಿಳೆಯರಲ್ಲಿದಿಢೀರನೇ ಹೆಚ್ಚುವ ತೂಕದ ಕಾರಣದಿಂದ ಮಂಡಿನೋವು ಬಾಧಿಸುತ್ತದೆ. ಸಕ್ಕರೆ ಕಾಯಿಲೆಯಿಂದ ನೇರವಾಗಿ ಮಂಡಿ ನೋವು ಬರುವುದಿಲ್ಲವಾದರೂ ಅದರಿಂದ ಸ್ನಾಯುಗಳು, ಲಿಗಮೆಂಟ್‌ಗಳು, ದುರ್ಬಲವಾಗುತ್ತವೆ.

ಈ ಕಾರಣದಿಂದ ಆರ್ಥರೈಟಿಸ್ ಉಂಟಾಗಬಹುದು. ನಮ್ಮ ದೇಹದಲ್ಲಿ ಯೂರಿಕ್ ಮಟ್ಟ ಹೆಚ್ಚಾದಾಗ ಮಂಡಿಯಲ್ಲಿ ಶೇಖರಣೆಗೊಂಡು ಅದು ಅರ್ಥರೈಟಿಸ್‌ಗೆ ಕಾರಣವಾಗಬಹುದು. ಕೀಲು ಭಾಗದಲ್ಲಿ ಇರುವ ಜೆಲ್ ದ್ರವರೂಪ ಪಡೆದುಕೊಂಡು ಊತ ಕಾಣಿಸಿಕೊಳ್ಳುತ್ತದೆ.

ಏನೇನು ಲಕ್ಷಣಗಳು ?
ಮಂಡಿಯ ಭಾಗದಲ್ಲಿವಿಪರೀತ ನೋವು, ಮೆಟ್ಟಿಲು ಹತ್ತಲು ಕಷ್ಟವಾಗುವುದು, ಕಾಲನ್ನು ಮಡಚಲು ಆಗದಿರುವುದು, ಮುಂಜಾನೆ ಎದ್ದಾಗ ಮಂಡಿ ದಪ್ಪಗಾಗಿರುವಂತೆ ಅನಿಸುವುದು, ಮಂಡಿಯಲ್ಲಿ ಸದ್ದು ಬರುವುದು ಅದರ ಮುಖ್ಯ ಲಕ್ಷಣಗಳು.

ಲಾಭಗಳು:
- ನೈಸರ್ಗಿಕ ಚಿಕಿತ್ಸಾ ವಿಧಾನ
- ದೀರ್ಘಕಾಲದ ನೋವಿಗೂ ಆಪರೇಷನ್ ಇಲ್ಲದೇ ಉಪಶಮನ
- ನೋವು ಏನೇ ಇರಲಿ, ಶಸ್ತ್ರಚಿಕಿತ್ಸೆ ಇಲ್ಲದೇ ಪರಿಹಾರ

ಅಲಿವಿಯೇಟ್‌ನ ಚಿಕಿತ್ಸೆ ಹೇಗೆ?

1) ಕೂಲ್ಡ್ ರೇಡಿಯೋ ಫ್ರಿಕ್ವೆನ್ಸಿ ಅಬ್ಲೇಷನ್: ಈ ಚಿಕಿತ್ಸೆಯು USFDA ನಿಂದ ಅನುಮೋದಿಸಲ್ಪಟ್ಟ ಪ್ರಪ್ರಥಮ ಮತ್ತು ಏಕೈಕ ರೇಡಿಯೋ ಫ್ರೀಕ್ವೆನ್ಸಿ ಚಿಕಿತ್ಸಾ ವಿಧಾನವಾಗಿದೆ.

ಇದು ನೋವನ್ನು ಮೂಲದಲ್ಲಿಯೇ ತಡೆಗಟ್ಟುವ ಚಿಕಿತ್ಸಾ ವಿಧಾನವಾಗಿದೆ. ನೋವಿಗೆ ಕಾರಣವಾಗುವ ನರಗಳನ್ನು ಗುರುತಿಸಿ, ಅವು ಮೆದುಳಿಗೆ ನೋವಿನ ಸಂದೇಶ ನೀಡದಂತೆ ತಡೆಯುವ ಕೆಲಸ ಇದು ಮಾಡುತ್ತದೆ.

ಆ ರಕ್ತನಾಳದ ಅಂಗಾಂಶದಿಂದ ಉತ್ಪತ್ತಿಯಾದ ಸನ್ನೆಯನ್ನು ತಡೆಯುವುದರಿಂದ ನೋವು ಕಡಿಮೆಯಾಗುತ್ತದೆ.

2) ಪ್ಲೇಟ್ಲೆಟ್ ರಿಚ್ ಪ್ಲಾಸ್ಮಾ (ಪಿ.ಆರ್.ಪಿ) ಚಿಕಿತ್ಸೆ : ಪಿಆರ್‌ಪಿ ಚಿಕಿತ್ಸೆಯಲ್ಲಿ, ತೆಳುವಾದ ಸೂಜಿಯನ್ನು ಬಳಸಿ ರೋಗಿಯ 20–30 ಮಿ.ಲಿ ರಕ್ತವನ್ನು ತೆಗೆದುಕೊಳ್ಳಲಾಗುತ್ತದೆ. ತದನಂತರ ವಿಶೇಷ ಯಂತ್ರವನ್ನು ಬಳಸಿ, 2 ಮಿಲಿ ಪ್ಲೇಟ್‌ಲೆಟ್ ಸಮೃದ್ಧ

ಪ್ಲಾಸ್ಮಾವನ್ನು ರಕ್ತದಿಂದ ಹೊರತೆಗೆಯಲಾಗುತ್ತದೆ. ಇದರ ನಂತರ ಮೊಣಕಾಲಿನ ಹಾನಿಗೊಳಗಾದ ಪ್ರದೇಶಕ್ಕೆ ಚುಚ್ಚಲಾಗುತ್ತದೆ. ಈ ಪ್ರಕ್ರಿಯೆಯಿಂದ ಮೈಯಲ್ಲಿ ಬಿಡುಗಡೆಯಾದ ಹಲವಾರು ಬೆಳವಣಿಗೆಯ ಅಂಶಗಳು ಮತ್ತು ಕಿಣ್ವಗಳು ಕೊಲಾಜನ್ (Collagen) ರಚನೆಮಾಡುತ್ತದೆ. ಆ ಮೂಲಕ ಹಾನಿಗೊಳಗಾದ ಮಂಡಿಯು ಪುನರುತ್ಪಾದನೆಗೊಳ್ಳುತ್ತದೆ. ಇದರಿಂದಾಗಿ ನೋವು ಕ್ರಮೇಣ ಕಡಿಮೆಯಾಗುತ್ತದೆ.

ಈ ಚಿಕಿತ್ಸೆಯು ಕೇವಲ ಒಂದೆರಡು ಗಂಟೆಗಳ ಪ್ರಕ್ರಿಯೆ ಆಗಿದ್ದು, ಮುಗಿದ ನಂತರ ರೋಗಿಯು ತಮ್ಮ ನಿತ್ಯ ಚಟುವಟಿಕೆಗಳಲ್ಲಿ ಕಿಂಚಿತ್ತೂ ಬಾಧೆಯಿಲ್ಲದೆ ತೊಡಗಿಸಿಕೊಳ್ಳಬಹುದು.

ಅಲಿವಿಯೇಟ್‌ನಲ್ಲಿ ಮಂಡಿನೋವಿನ ಹೊರತಾಗಿ ಬೆನ್ನು, ಕುತ್ತಿಗೆ, ಭುಜ, ಪಾದ, ಕ್ಯಾನ್ಸರ್ ನೋವು, ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆ ನೀಡುತ್ತಾರೆ.

ಅಲಿವಿಯೇಟ್
ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್
ಶಸ್ತ್ರಚಿಕಿತ್ಸೆ ಇಲ್ಲದೇ ನೋವು ನಿವಾರಣೆಗಾಗಿ

CALL NOW 84949 73146 96202 44761

ಅಲಿವಿಯೇಟ್ ರವರ ಕ್ಲಿನಿಕ್‌ಗಳು ಬೆಂಗಳೂರಿನಲ್ಲಿ ಇಲ್ಲಿವೆ
ಸದಾಶಿವನಗರ | ಇಂದಿರಾನಗರ
ಜಯನಗರ | ಟಿ. ದಾಸರಹಳ್ಳಿ

ಗಡಿ ಭಾಗದಲ್ಲಿ ನೀರಿನ ಸಮಸ್ಯೆ: ₹ 2,000 ಕೋಟಿ ಘೋಷಿಸಿದ ಶಿಂದೆ

ಮುಂಬೈ: ಗಡಿ ಭಾಗದ ನೀರಿನ ಸಮಸ್ಯೆಯನ್ನು ಪರಿಹರಿಸಲು ಮಹಿಷಾಳ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು. ಈ ಉದ್ದೇಶಕ್ಕಾಗಿ ಜನವರಿಯಲ್ಲಿ ₹ 2000 ಕೋಟಿ ಮೊತ್ತದ ಟೆಂಡರ್ ನೀಡಲಾಗುವುದು ಎಂದು ರಾಜ್ಯದ ಮುಖ್ಯಮಂತ್ರಿ ಏಕನಾಥ ಶಿಂದೆ ಘೋಷಿಸಿದ್ದಾರೆ.

ಮುಂಬೈನಲ್ಲಿ ಗುರುವಾರ ನಡೆದ ಬಾಳಾಸಾಹೇಬ್ ಠಾಕ್ರೆ ವೈದ್ಯಕೀಯ ನೆರವು ಘಟಕದ 5ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಜತ್ತ ತಾಲ್ಲೂಕು ಜನರು ಮಧ್ಯರಾತ್ರಿ ಅರ್ಧ ಗಂಟೆಯ ಹೊತ್ತಿಗೆ ನನ್ನನ್ನು ಭೇಟಿಯಾಗಲು ಬಂದರು. ಅವರಿಗಾಗಿ ಮಹಿಷಾಳ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲು ಸರ್ಕಾರವಾಗಿ ನಾವು ನಿರ್ಧರಿಸಿದ್ದೇವೆ. ಮಹಿಷಾಳ ಕಾಲುವೆ ಮೂಲಕ ಏಳೆಂಟು ಕೆರೆಗಳನ್ನು ಹೇಗೆ ತುಂಬಿಸಬಹುದು ಎಂಬುದನ್ನೂ ನಿರ್ಧರಿಸುತ್ತಿದ್ದೇವೆ. ಆದ್ದರಿಂದ ಅವರಿಗೆ ತಕ್ಷಣವೇ ಸಹಾಯ ಮಾಡಬಹುದು’ ಎಂದರು. ‘ಮಹಾರಾಷ್ಟ್ರದಿಂದ ನಮಗೆ ಸೇವೆ ಸಿಗದೆ, ವಂಚಿತರಾಗಿದ್ದೇವೆ ಎಂಬ ಕಾರಣಕ್ಕೆ ಒಂದೇ ಒಂದು ಹಳ್ಳಿ, ಒಬ್ಬ ವ್ಯಕ್ತಿಯೂ ಬೇರೆಡೆಗೆ ಹೋಗಬಾರದು. ಇದು ರಾಜ್ಯ ಸರ್ಕಾರದ ಜವಾಬ್ದಾರಿ. ಗಡಿಭಾಗದ ಸಂಬಂಧಪಟ್ಟವರಿಗೆ ಅವರ ಬೇಡಿಕೆಯಂತೆ ಆ ಪ್ರದೇಶದಲ್ಲಿ ಕೆಲಸ ಹೇಗೆ ಸಿಗುತ್ತದೆ ಎಂಬುದನ್ನು ಪರಿಶೀಲಿಸುವಂತೆ ಶಂಭುರಾಜ್ ದೇಸಾಯಿ, ಚಂದ್ರಕಾಂತ್ ಪಾಟೀಲ, ದೀಪಕ್ ಕೇಸರಕರ್, ಉದಯ್ ಸಾಮಂತ್ ಅವರಿಗೆ ಸೂಚಿಸಿದ್ದೇನೆ. ಕೂಡಲೇ ಉದಯ್ ಸಾಮಂತ್ ಆ ಭಾಗಕ್ಕೆ ಹೋಗುತ್ತಾರೆ’ ಎಂದಿದ್ದಾರೆ.

ಮಹಾರಾಷ್ಟ್ರ- ಕರ್ನಾಟಕ ಗಡಿ ವಿವಾದ ಮತ್ತೊಮ್ಮೆ ಬಿಸಿಯೇರಿದೆ. ಜತ್ತ ಹಾಗೂ ಅಕ್ಕಲಕೋಟ ತಾಲ್ಲೂಕನ್ನು ಕರ್ನಾಟಕಕ್ಕೆ ಸೇರಿಸಿ ಎಂದು ಹೋರಾಟ ಮಾಡಿದ್ದರು. ಅಲ್ಲಿನ ಜನರಿಗೆ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಹೇಳಿಕೆ ನೀಡಿದ್ದರು. ಎಚ್ಚೆತ್ತುಕೊಂಡ ಶಿಂದೆ ಬೇಡಿಕೆಗೆ ತುರ್ತಾಗಿ ಸ್ಪಂದಿಸಿದ್ದಾರೆ.

ರಸ್ತೆ ವಿಭಜಕಕ್ಕೆ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ವೇಗವಾಗಿ ಬಂದ ಬೈಕ್ ಚಾಲಕನ ನಿಯಂತ್ರಣ ತಪ್ಪಿ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ, ಕೆಂಗೇರಿ ಉಪನಗರದ ಕೃಷ್ಣಪ್ಪ (50) ಬುಧವಾರ ರಾತ್ರಿ ಮೃತಪಟ್ಟಿದ್ದಾರೆ. ಅಪಾರ್ಟ್‌ಮೆಂಟ್ ನಿವಾಸಿಗಳ ಬಟ್ಟೆ ಕೊಂಡೊಯ್ದು ಇಸ್ತ್ರಿ ಮಾಡಿಕೊಡುತ್ತಿದ್ದರು. ಬಟ್ಟೆ ಕೊಟ್ಟು ಮನೆಗೆ ತೆರಳುವಾಗ ಈ ಅವಘಡ ಸಂಭವಿಸಿದೆ.

ಖೋಡೆ ಈಶ್ವರ್‌ಸಾ & ಸನ್ಸ್

(ಖೋಡೆ ಆರ್‌ಸಿಎ ಇಂಡಸ್ಟ್ರೀಸ್ ಎಂಬ ಟ್ರೇಡ್ ನೇಮ್‌ನಿಂದ ಕರೆಯಲಾಗುತ್ತದೆ)
ನೋಂದಾಯಿತ ಕಛೇರಿ ವಿಳಾಸ: ನಂ. 9, ಶೇಷಾದ್ರಿ ರಸ್ತೆ, ಬೆಂಗಳೂರು–560 009
(ಪಾಲುದಾರಿಕೆ ಕಾಯ್ದೆ 1932ರ ಅಡಿಯಲ್ಲಿ ನೋಂದಾಯಿತ ಸಂಖ್ಯೆ: 2632/1985–86)

ಸಾರ್ವಜನಿಕ ಪ್ರಕಟಣೆ

15ನೇ ಅಕ್ಟೋಬರ್ 2022ರಂದು ನಡೆದ ಸಭೆಯಲ್ಲಿ ಖೋಡೆ ಈಶ್ವರ್‌ಸಾ & ಸನ್ಸ್ ಸಂಸ್ಥೆಯ ಪಾಲುದಾರರ ಬಹುಮತದ ಮೂಲಕ ಅಂಗೀಕರಿಸಿದ ನಿರ್ಣಯದನ್ವಯ ಸಂಸ್ಥೆಯ ಯಾವುದೇ ಮತ್ತು ಎಲ್ಲಾ ಕ್ರಿಯೆಗಳನ್ನು ಬಹುಪಾಲು ಪಾಲುದಾರರ ಮತದಿಂದ ಮಾತ್ರ ಕೈಗೊಳ್ಳಲಾಗುತ್ತದೆ ಮತ್ತು ಸಂಸ್ಥೆಯು ಬಹುಪಾಲು ಪಾಲುದಾರರು ಲಿಖಿತವಾಗಿ ಅನುಮೋದಿಸಿದ ಕ್ರಮಗಳಿಗೆ ಮಾತ್ರ ಬದ್ಧವಾಗಿರುತ್ತದೆ ಎಂಬುದನ್ನು 1932ರ ಪಾಲುದಾರಿಕೆ ಕಾಯ್ದೆಯಂತೆ ಮತ್ತು ದಿನಾಂಕ 31ನೇ ಮೇ 2017ರ ಪಾಲುದಾರಿಕೆ ಕರಾರುಪತ್ರದ ಷರತ್ತು 14ರ ಪ್ರಕಾರ ಮರುದೃಢೀಕರಿಸಲಾಗಿದೆ ಮತ್ತು ಪುನರುಚ್ಚರಿಸಲಾಗಿದೆ ಎಂದು ಈ ಸೂಚನೆ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಖೋಡೆ ಈಶ್ವರ್‌ಸಾ & ಸನ್ಸ್ ಪರವಾಗಿ
ಸಹಿ/–
ಕೆ.ಹೆಚ್. ಶ್ರೀನಿವಾಸ್ – ಪಾಲುದಾರರು

ಸ್ಥಳ : ಬೆಂಗಳೂರು
ದಿನಾಂಕ : 30.11.2022

ತುಷಾರ್ ಗಿರಿನಾಥ್ ಆಸ್ಪತ್ರೆಗೆ ದಾಖಲು

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅನಾರೋಗ್ಯದಿಂದ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ನ.27ರಿಂದಲೂ ಆರೋಗ್ಯದಲ್ಲಿ ಏರುಪೇರಾಗಿತ್ತು. ಆಗಾಗ್ಗೆ ಜ್ವರ ಬರುತ್ತಿತ್ತು. ಮನೆ ಹಾಗೂ ಕಚೇರಿಯಲ್ಲೇ ಚುಚ್ಚುಮದ್ದು ತೆಗೆದುಕೊಂಡು ಕಾರ್ಯ ನಿರ್ವಹಿಸುತ್ತಿದ್ದರು. ಬುಧವಾರ ಆರೋಗ್ಯ ತೀವ್ರ ಹದಗೆಟ್ಟಿದ್ದರಿಂದ ಚಾಲುಕ್ಯ ವೃತ್ತದಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಜ್ವರ ತೀವ್ರಗೊಂಡಿತ್ತು. ಜೊತೆಗೆ ಮೂತ್ರ ಸಂಬಂಧಿ ಸೋಂಕು ಹೆಚ್ಚಾಗಿದ್ದರಿಂದ ವೈದ್ಯರು ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯಲು ಸೂಚಿಸಿದ್ದಾರೆ. ಇನ್ನೂ ಎರಡು ದಿನ ಆಸ್ಪತ್ರೆಯಲ್ಲೇ ಇರಬೇಕು ಎಂದು ವೈದ್ಯರು ಸೂಚಿಸಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಫ್ಯಾನ್ಸಿ ಸಂಖ್ಯೆ: ₹3.30 ಲಕ್ಷಕ್ಕೆ ಹರಾಜು

ಬೆಂಗಳೂರು: ಸಾರಿಗೆ ಇಲಾಖೆ ನಗರದಲ್ಲಿ ನಡೆಸಿದ 26 ಫ್ಯಾನ್ಸಿ ನೋಂದಣಿ ಸಂಖ್ಯೆ ಹರಾಜಿನಲ್ಲಿ ₹30.26 ಲಕ್ಷ ವರಮಾನ ಸಂಗ್ರಹಿಸಿದೆ. ಕೆಎ-01, ಎಂಝಡ್ 9999 ಸಂಖ್ಯೆ ₹3.30 ಲಕ್ಷಕ್ಕೆ ಹರಾಜಾಗಿದೆ. ಕೆ.ಎ-01, ಎಂಝಡ್-0009 ಸಂಖ್ಯೆಗೆ ₹2 ಲಕ್ಷಕ್ಕೆ ಬಿಕರಿಯಾಗಿದೆ. ಎಂಝಡ್-999 ಸಂಖ್ಯೆ ₹1.80 ಲಕ್ಷಕ್ಕೆ, ಕೆ.ಎ.01, ಎಂಝಡ್-001 ಸಂಖ್ಯೆ ₹1.30 ಲಕ್ಷಕ್ಕೆ, ಕೆ.ಎ-01, ಎಂಝಡ್-0099 ಸಂಖ್ಯೆ ₹ 80 ಸಾವಿರಕ್ಕೆ ಹರಾಜಾಗಿದೆ.

1 NATION TAX MARKET GST

स्वच्छ भारत एक कदम स्वच्छता की ओर

Government of India
Ministry of Finance
Department of Revenue
OFFICE OF THE PRINCIPAL CHIEF COMMISSIONER OF CENTRAL TAX, BENGALURU ZONE,
P.B.NO.5400, C.R. BUILDING, QUEEN'S ROAD, BENGALURU–560001
Phone No.: 080-22864523 e-mail: ccbz-excise@nic.in

C. No. GCCO/LGL/MISC/2/2020-LEGAL Dated: 24/11/2022

Applications are invited from the interested eligible candidates in the prescribed format for Fresh appointment of Senior and Junior Standing Counsels for handling cases of Indirect Taxation matters (Customs, GST, Central Excise & Service Tax), before High Court of Karnataka (including Dharwad and Kalaburagi Bench) and other fora.

The Central Board of Indirect Taxes and Customs (CBIC) vide letters F. No.278 A / 18 / 2022-Legal dated 07.11.2022 and 11.08.2022 proposes to draw panel of Senior and Junior Standing Counsels for the Hon'ble Karnataka High Court at Bangalore Bench, Dharwad Bench and Kalaburagi Bench for handling indirect tax cases as detailed below:

High Court of Karnataka	Bengaluru Bench	Sr & Jr. Standing Counsels
High Court of Karnataka	Dharwad Bench	Sr & Jr. Standing Counsels
High Court of Karnataka	Kalaburagi Bench	Sr & Jr. Standing Counsels

The eligible candidates who have handled the indirect tax cases in the High Courts and other fora may send their application to the undersigned on or before 30.12.2022. The terms and conditions of the appointment and the guidelines are as per Annexure-I & II and revised fee structure communicated by CBIC vide letter dated 14.09.2012 (http://gstkarnataka.gov.in/whats%20new/counsel_empanelment_guidelines.pdf refers). The particulars to be furnished by an advocate/other eligible persons, meeting the specified criteria are in Proforma A & 'A-1' respectively. Applicants may also clearly indicate the Bench in respect of which they would like to be considered for appointment as Standing Counsels (to be indicated against Sl.No.15 in Proforma-A or Proforma A-1).
For application, terms and conditions, please login to website:
https://gstkarnataka.gov.in/Press_Release.htm

Last date for receiving the applications in prescribed format (with supporting documents)	30 /12/2022
Time for processing the applications and issuing the call letter for interview	10 /01/2023
Evaluation and forwarding of recommendations to the Board after evaluation	31 /01/2023

(Nadig Vishwas H S)
Joint Commissioner (PCCO), BENGALURU

TORQUE

“ಹಾಡಿರಿ ಮಿಯಾ ಮಲ್ಹಾರ್ ಅಥವಾ ಭೀಮಪಲಾಸಿ, TOREX ಕಾಫ್ ಸಿರಪ್ ಇದ್ದಲ್ಲಿ ಕೆಮ್ಮಿಗೆ ಜಾಗವಿಲ್ಲ”

TOREX®
COUGH SYRUP HAI TO ALVIDA KHANSI
Follow us on: /TorexSyrup /TorexSyrup /TorexSyrup
For more information, please call or WhatsApp us: +91 977 921 4455 / care@torquepharma.com

ಹೊಸ ಮದುವೆಯ ರೇಂಜ್, ಈಗ ಸ್ಟೋರ್‌ಗಳಲ್ಲಿ ಲಭ್ಯವಿದೆ. ಸೀರೆ | ಬ್ಲೌಸ್ | ಕುರ್ತಾ ಸೆಟ್‌ಗಳು

Shop online at TANEIRA.com taneirasarees taneira_sarees +91 8147349464 Shop on call 1800 266 0123

Now open in Banashankari: #298, 7th block, 100ft ring road, Banashankari 3rd stage, Ph:8904431212 | **Also available at: Malleshwaram:** 116/5, 11th cross, Margosa Road, Ph: 080-49703080 | **Indiranagar:** 283, 100 Feet Road, HAL 2nd Stage, Ph: 080-48540026 | **Jayanagar:** 3rd Block, 11th Main Road, Ph: 080-48528312 | **Orion Mall:** 116, 2nd Floor, Dr. Rajkumar Road, Ph: 080-2268 2310 | **Phoenix Market City Mall:** LG-28 Lower Ground Floor, Mahadevpura, Ph: 080-49626263 | **HSR layout:** No.818, 27th Main Road, 1st Sector, Ph: 080-41711715 | **Kammanahalli:** 401/B, 2nd Block, Near Tanishq Showroom, Ph: 080-46014779

Scan QR code to shop this collection online. Visit taneira.com

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ತೆಲುಗು ಸ್ಮಾರ್ತ ವೇದಿಕೆಯು 2022ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ 90 ಹಾಗೂ ಅದಕ್ಕಿಂತ ಹೆಚ್ಚಿನ ಅಂಕ ಪಡೆದ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವುದಾಗಿ ಘೋಷಿಸಿದೆ.

ಅರ್ಹ ಅಭ್ಯರ್ಥಿಗಳು ಶ್ರೀನಿವಾಸನಗರದಲ್ಲಿರುವ ಸಂಘದ ಕಚೇರಿಯಲ್ಲಿ ಇದೇ 10ರೊಳಗೆ ಅರ್ಜಿಗಳನ್ನು ಪಡೆದು, ಇದೇ 20ರೊಳಗೆ ಸಲ್ಲಿಸಬೇಕು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್. ವೆಂಕಟೇಶ ಶಾಸ್ತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 7892028600 ಅಥವಾ 9845326041

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ, ಬೆಂಗಳೂರು

ಸಂ: ಕರಾನಿ/ಕಾನಿಅ/ಬೆಂ/ಕಿಅ/567/2022–23 ದಿನಾಂಕ: 01.12.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05 & 06/2022–23

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿದಾರರುಗಳು ಇ–ಆಡಳಿತರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರ್ ಪ್ರಕಟಣೆಯ ಸಂ.	ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಮುಂಗಡ ಠೇವಣಿ ರೂ.ಗಳಲ್ಲಿ	ಕಾಲಾವಧಿ (ಮಳೆಗಾಲ ಸೇರಿ)
1	ಚಿಕ್ಕಬಳ್ಳಾಪುರ ಬಸ್–ಘಟಕದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಯಂತ್ರೋಪಕರಣಗಳೊಂದಿಗೆ ನಿರ್ಮಿಸುವುದು (4ನೇ ಕರೆ)	05/2022–23	17.86	44,650.00	1½ ತಿಂಗಳು (45 ದಿನಗಳು)
2	ಚಿಂತಾಮಣಿ ಬಸ್–ಘಟಕದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಯಂತ್ರೋಪಕರಣಗಳೊಂದಿಗೆ ನಿರ್ಮಿಸುವುದು (4ನೇ ಕರೆ)	06/2022–23	17.86	44,650.00	1½ ತಿಂಗಳು (45 ದಿನಗಳು)

ಹೆಚ್ಚಿನ ವಿವರಗಳನ್ನು http://www.eproc.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3317/ಆಕಾರ್/22–23

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-243/2082/2022–23 ದಿನಾಂಕ: 01.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ. ಅಶ್ವಿನಿ ರೆಡ್ಡಿ	ಆನೇಕಲ್	ಸರ್ಜಾಪುರ	ರಾಮನಾಯಕನಹಳ್ಳಿ	2/3	01–20	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/195/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-193/2086/2022–23 ದಿನಾಂಕ: 01.12.2022

ಪ್ರಕಟಣೆ

ಶ್ರೀ.ಜಿ.ಸಿ.ಚಂದ್ರಶೇಖರ್ ಬಿನ್ ಲೇಟ್ ಚಲುವೇಗೌಡ, ನಂ.1, 9ನೇ ಕ್ರಾಸ್, ಆರ್.ಬಿ.ಐ ಲೇಔಟ್, ಜೆ.ಪಿ.ನಗರ 7ನೇ ಫೇಸ್, ಬೆಂಗಳೂರು–560 078 ರವರು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಚುಂಚಘಟ್ಟ ಗ್ರಾಮದ ಸರ್ವೆ ನಂ.19/4 ರಲ್ಲಿ 00 ಎಕರೆ 7.12 ಗುಂಟೆ ವಿಸ್ತೀರ್ಣದ ಜಮೀನನ್ನು ಉದ್ಯಾನವನ ಮತ್ತು ಬಯಲು ಜಾಗ ವಲಯದಿಂದ ಶೈಕ್ಷಣಿಕ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರಡಿಯಲ್ಲಿ ಭೂಉಪಯೋಗ ಮರುನಿಗದಿಪಡಿಸಲು ಕೋರಿರುತ್ತಾರೆ. ಭೂಉಪಯೋಗ ಮರುನಿಗದಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಮರುನಿಗದಿ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಜಿ.ಸಿ.ಚಂದ್ರಶೇಖರ್	ಬೆಂಗಳೂರು (ದಕ್ಷಿಣ)	ಉತ್ತರಹಳ್ಳಿ	ಚುಂಚಘಟ್ಟ	19/4	0–7.12	ಉದ್ಯಾನವನ ಮತ್ತು ಬಯಲುಜಾಗ	ಶೈಕ್ಷಣಿಕ
					ಒಟ್ಟು	0–7.12		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿಗೆ ಹೊಂದಿಕೊಂಡಂತೆ ಇರುವ ಜಮೀನಿನಲ್ಲಿ ನಮ್ಮ ಸಂಸ್ಥೆಯಿಂದ ಶೈಕ್ಷಣಿಕ ಉದ್ದೇಶದ ಶಾಲೆಯು ನಡೆಯುತ್ತಿದ್ದು, ಪ್ರಶ್ನಿತ ಜಮೀನಿನಲ್ಲಿ ಶಾಲೆಯನ್ನು ವಿಸ್ತರಿಸಿ ಉನ್ನತೀಕರಿಸುವುದರಿಂದ ಸಾರ್ವಜನಿಕಗೆ ಅನುಕೂಲವಾಗುತ್ತದೆ ಹಾಗೂ ಅತಿ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರ ಜೊತೆಗೆ ಅನೇಕ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಉದ್ಯೋಗ ದೊರೆಯುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು ಉದ್ಯಾನವನ ಮತ್ತು ಬಯಲುಜಾಗ ಉಪಯೋಗದಿಂದ ಶೈಕ್ಷಣಿಕ ಉಪಯೋಗಕ್ಕೆ ಭೂಉಪಯೋಗ ಮರುನಿಗದಿಪಡಿಸಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/196/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-139/2079/2022–23 ದಿನಾಂಕ: 01.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಟೋಟಲ್ ಎನ್ವೈರ್‌ಮೆಂಟ್ ಬಿಲ್ಡಿಂಗ್ ಸಿಸ್ಟಮ್ಸ್ ಪ್ರೈ. ಲಿ., ನಂ. 78, ಇಮ್ಯಾಜಿನ್, ಐಟಿಪಿಎಲ್ ಮುಖ್ಯರಸ್ತೆ, ಇಪಿಐಪಿ ಜೋನ್, ವೈಟ್‌ಫೀಲ್ಡ್, ಬೆಂಗಳೂರು–560066	ಯಲಹಂಕ	ಜಾಲ	ಬೆಟ್ಟ ಹಲಸೂರು	214/1, 214/2 ಮತ್ತು 233/1	ಒಟ್ಟು 01ಎಕರೆ 03ಗುಂಟೆ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಾಸದ ಉದ್ದೇಶಕ್ಕಾಗಿ ವಸತಿ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಿರುತ್ತೇವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಅಭಿವೃದ್ಧಿ ಪಡಿಸಿದ ವಸತಿ ಕಟ್ಟಡ ನಿವಾಸಿಗಳ ಉಪಯೋಗಕ್ಕೆ ಲಭ್ಯವಾಗುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸ್ಥಳೀಯ ಪ್ರಾಧಿಕಾರಕ್ಕೆ ಆದಾಯ ಮತ್ತು ಕರ ಸಂಪನ್ಮೂಲ ಉತ್ಪತ್ತಿಗೆ ಸಹಾಯವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/192/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ರೆಸಿಡೆನ್ಸಿ ರಸ್ತೆಯಲ್ಲಿ ಸುಗಮ ವಾಹನ ಸಂಚಾರ ● ಪೊಲೀಸರ ಪ್ರಯತ್ನ ಯಶಸ್ಸು

ಶಾಲಾ ಮೈದಾನಕ್ಕೆ ವಾಹನ ಬಿಡಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಸಿಡೆನ್ಸಿ ರಸ್ತೆಯಲ್ಲಿ ವಾಹನ ದಟ್ಟಣೆಯ ಸಮಸ್ಯೆಗೆ ಕೊನೆಗೂ ಪರಿಹಾರ ಸಿಕ್ಕಿದೆ.

ಈ ರಸ್ತೆಯಲ್ಲಿ ಕಳೆದ ಎರಡು ದಿನಗಳಿಂದ ದಟ್ಟಣೆ ಅವಧಿಯಲ್ಲೂ ವಾಹನಗಳು ಸುಗಮವಾಗಿ ಸಂಚರಿಸುತ್ತಿವೆ. ಪೊಲೀಸರ ಪ್ರಯತ್ನಕ್ಕೆ ವಾಹನ ಸವಾರರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶಾಲೆ ಆರಂಭಗೊಳ್ಳುವ ಹಾಗೂ ಶಾಲೆ ಬಿಡುವ ಸಮಯದಲ್ಲಿ ವಾಹನಗಳು ಸುಗಮವಾಗಿ ಸಾಗುತ್ತಿವೆ. ಇದರಿಂದ ಸಾರ್ವಜನಿಕರು ಹಾಗೂ ವಾಹನ ಚಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.

ರೆಸಿಡೆನ್ಸಿ ರಸ್ತೆಯಲ್ಲಿ ಆಗುತ್ತಿದ್ದ ಸಮಸ್ಯೆ ಕುರಿತು 'ಶಾಲಾ ವಲಯ... ದಟ್ಟಣೆ ತಾಪತ್ರಯ' ಶೀರ್ಷಿಕೆ ಅಡಿ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು. ವರದಿ ಪ್ರಕಟವಾದ ನಂತರ ಅಶೋಕನಗರದ ಸಂಚಾರ ಪೊಲೀಸರು ಶಾಲಾ ಆಡಳಿತ ಮಂಡಳಿಯ ಜೊತೆಗೆ ಚರ್ಚಿಸಿದ್ದರು. ಆದರೆ, ಪೋಷಕರ ವಾಹನಗಳನ್ನು ಬಿಷಪ್ ಕಾಟನ್ ಶಾಲಾ ಸಿಬ್ಬಂದಿ ಗೇಟ್ ಒಳಗೆ ಬಿಡದೆ ಪೊಲೀಸರ ಜೊತೆಗೇ ವಾಗ್ವಾದ ನಡೆಸಿದ್ದರು.

'ಈಗ ಈ ರಸ್ತೆಯಲ್ಲಿನ ಸಮಸ್ಯೆ ಶಾಲಾ ಆಡಳಿತ ಮಂಡಳಿಗೆ ಮನವರಿಕೆಯಾಗಿದೆ. ನಮ್ಮೊಂದಿಗೆ ಚರ್ಚಿಸಿ ಪೋಷಕರ ವಾಹನಗಳನ್ನು ಶಾಲಾ ಆವರಣಕ್ಕೆ ಬಿಡಲು ಒಪ್ಪಿದ್ದಾರೆ. ಎರಡು ದಿನಗಳಿಂದ ಬಿಷಪ್ ಕಾಟನ್ ಬಾಲಕರ ಶಾಲೆಯ ಮೈದಾನಕ್ಕೆ ಪೋಷಕರ ವಾಹನಗಳು ಪ್ರವೇಶಿಸುತ್ತಿವೆ' ಎಂದು ಸಂಚಾರ ಪೊಲೀಸರು ತಿಳಿಸಿದರು.

ಶಾಂತಿನಗರ ಜೋಡಿರಸ್ತೆಯ ಮಿಷನ್ ರಸ್ತೆ ಹಾಗೂ ರಿಚ್ಮಂಡ್ ವೃತ್ತಕ್ಕೆ ಹೊಂದಿಕೊಂಡಿರುವ ರೆಸಿಡೆನ್ಸಿ ರಸ್ತೆಯಲ್ಲಿ ಬಿಷಪ್ ಕಾಟನ್ ಬಾಲಕರ ಹಾಗೂ ಬಾಲಕಿಯರ ಪ್ರತ್ಯೇಕ ಶಾಲೆಗಳಿವೆ. ಆಸುಪಾಸಿನಲ್ಲಿಯೇ ಸೇಕ್ರೆಡ್ ಹಾರ್ಟ್ ಶಾಲೆಯಿದೆ. ಶಾಲೆಗೆ ಮಕ್ಕಳನ್ನು ಬಿಡಲು ಬರುವ ಪೋಷಕರು ರಸ್ತೆಯಲ್ಲೇ ವಾಹನಗಳನ್ನು ನಿಲ್ಲಿಸುತ್ತಿದ್ದರು. ಶಾಲೆಯಲ್ಲಿ ದೊಡ್ಡ ಮೈದಾನವಿದ್ದರೂ ಪೋಷಕರ ವಾಹನಕ್ಕೆ ನಿರ್ಬಂಧವಿತ್ತು. ಆಸ್ಪತ್ರೆಗೆ ರೋಗಿಗಳನ್ನು ಕರೆದೊಯ್ಯುತ್ತಿದ್ದ ಆಂಬುಲೆನ್ಸ್‌ಗಳು ಮುಂದಕ್ಕೆ ಸಾಗಲು ಸಾಧ್ಯವಾಗುತ್ತಿರಲಿಲ್ಲ. ಶಾಲಾ ಆಡಳಿತ ಮಂಡಳಿ ನಿರ್ಧಾರದಿಂದ ನಿತ್ಯ ಸಾವಿರಾರು ಪ್ರಯಾಣಿಕರು ತೊಂದರೆಗೆ ಸಿಲುಕುತ್ತಿದ್ದರು.

'ಪೋಷಕರ ವಾಹನಗಳಿಗೆ ಬಿಷಪ್ ಕಾಟನ್ ಬಾಲಕರ ಶಾಲೆಯಲ್ಲಿ ಪ್ರವೇಶ ನೀಡಲಾಗುತ್ತಿದೆ. ಶಾಲೆಗೆ ಬರುವ ಮಕ್ಕಳನ್ನು ಶಾಲಾ ಆವರಣದಲ್ಲಿಯೇ ಇಳಿಸಲಾಗುತ್ತಿದೆ. ಹೊರಹೋಗಲು ಪರ್ಯಾಯ ಮಾರ್ಗ ಸೂಚಿಸಲಾಗಿದೆ. ಬಿಷಪ್ ಕಾಟನ್ ಬಾಲಕಿಯರ ಶಾಲೆಯಲ್ಲೂ ಪ್ರವೇಶ ಮಾರ್ಗ ಗುರುತಿಸಲಾಗಿದೆ. ಹೊರಹೋಗುವ ಮಾರ್ಗ ಗುರುತಿಸಲಾಗಿದ್ದು, ಆವರಣ ಗೋಡೆ ತೆರವು ಮಾಡುವ ಭರವಸೆ ನೀಡಿದ್ದಾರೆ. ಶಾಲಾ ಆಡಳಿತ ಮಂಡಳಿ ಸಭೆಯಲ್ಲೂ ಚರ್ಚಿಸಿ ಅನುಮತಿ ಪಡೆದುಕೊಂಡಿದ್ದಾರೆ. ಇದರಿಂದ ಹತ್ತಾರು ವರ್ಷಗಳಿಂದ ಇದ್ದ ಬಹುದೊಡ್ಡ ಸಮಸ್ಯೆ ನೀಗಿದೆ' ಎಂದು ಅಶೋಕನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ರಾವ್ ಗಣೇಶ್ ಜನಾರ್ದನ್ ಮಾಹಿತಿ ನೀಡಿದರು.

'ಈ ರಸ್ತೆಯಲ್ಲಿ 30 ಮಂದಿ ಪೊಲೀಸರು ಕರ್ತವ್ಯ ಮಾಡಬೇಕಾದ ಸ್ಥಿತಿಯಿತ್ತು. ಈಗ ಶಾಲಾ ಮಕ್ಕಳು ಹಾಗೂ ಶಿಕ್ಷಕರೂ ಬೇಗ ಮನೆಗೆ ತೆರಳುತ್ತಿದ್ದಾರೆ. ಪೊಲೀಸರ ಸೂಚಿಸಿದ ಪರಿಹಾರ ಮಾರ್ಗಕ್ಕೆ ಶಾಲೆ ಸಿಬ್ಬಂದಿ ಅನುಷ್ಠಾನಕ್ಕೆ ತಂದಿದ್ದಾರೆ' ಎಂದು ಇನ್‌ಸ್ಪೆಕ್ಟರ್ ಹರ್ಷ ವ್ಯಕ್ತಪಡಿಸಿದರು.

ವರದಿ ಫಲಶ್ರುತಿ

ಸಮಸ್ಯೆಯ ಶಾಶ್ವತ ಪರಿಹಾರಕ್ಕೆ 4–5 ತಿಂಗಳಲ್ಲಿ ಹೊಸ ತಂತ್ರಾಂಶ ಅಳವಡಿಕೆ

ಬೆಸ್ಕಾಂ ವೆಬ್ ಪೋರ್ಟಲ್: 24 ಗಂಟೆ ಸೇವೆ

ವರದಿ ಫಲಶ್ರುತಿ

ಬೆಂಗಳೂರು: ಹೊಸ ವಿದ್ಯುತ್ ಸಂಪರ್ಕ ನೋಂದಣಿ, ಜನಸ್ನೇಹಿ ವಿದ್ಯುತ್ ಸೇವೆಗಳು ಸೇರಿ ಹಲವು ವಿದ್ಯುತ್ ಸೇವೆಗಳಿಗಾಗಿ ರೂಪಿಸಲಾಗಿರುವ ಆರ್-ಎಪಿಡಿಆರ್‌ಪಿ ತಂತ್ರಾಂಶದಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲಾಗಿದ್ದು, ಎಲ್ಲಾ 5 ಎಸ್ಕಾಂಗಳ ಗ್ರಾಹಕರಿಗೆ 24 ಗಂಟೆಗಳ ಸೇವೆಯನ್ನು ಒದಗಿಸಲಾಗುತ್ತಿದೆ.

ಜುಲೈ 2022ರಲ್ಲಿ ಹಾರ್ಡ್‌ವೇರ್‌ನಲ್ಲಿ ಕಂಡುಬಂದ ದೋಷದಿಂದಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಸಾಫ್ಟ್‌ವೇರ್ ನಿರ್ವಹಣೆಗೆ ಅಡಚಣೆ ಉಂಟಾಗಿತ್ತು.

ಆ ಸಂದರ್ಭದಲ್ಲಿ ಗ್ರಾಹಕರು ವೆಬ್ ಪೋರ್ಟಲ್‌ಗೆ ಲಾಗ್‌ಇನ್ ಆಗಲು, ಬೆಸ್ಕಾಂ ವ್ಯಾಪ್ತಿಯಲ್ಲಿ ಬೆಳಗ್ಗೆ 9 ರಿಂದ ಮಧ್ಯಾಹ್ನ 1.30ರವರೆಗೆ ಮತ್ತು ಇತರ ಎಸ್ಕಾಂಗಳಿಗೆ ಮಧ್ಯಾಹ್ನ 1.30 ರಿಂದ ಸಂಜೆ 7ರವರೆಗೆ ಸಮಯ ನಿಗದಿ ಪಡಿಸಲಾಗಿತ್ತು. ಇದೀಗ ಕೆಲವು ಹೆಚ್ಚುವರಿ ಸರ್ವರ್‌ಗಳು ಮತ್ತು ತಂತ್ರಾಂಶಗಳ ಉನ್ನತೀಕರಣದೊಂದಿಗೆ 24 ಗಂಟೆಗಳ ನಿರಂತರ ಸೇವೆಗೆ ಆರ್-ಎಪಿಡಿಆರ್ ವೆಬ್ ಅಪ್ಲಿಕೇಷನ್ ಸಿದ್ಧಪಡಿಸಲಾಗಿದೆ ಎಂದು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

'ಪ್ರಜಾವಾಣಿ'ಯ ಡಿ. 1ರ ಸಂಚಿಕೆಯಲ್ಲಿ 'ಎಸ್ಕಾಂ ಪೋರ್ಟಲ್ ಸಮಸ್ಯೆ: ಗ್ರಾಹಕರ ಪರದಾಟ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಇದಕ್ಕೆ ಬೆಸ್ಕಾಂ ಪ್ರತಿಕ್ರಿಯಿಸಿದೆ.

ಆರ್-ಎಪಿಡಿಆರ್‌ಪಿ (ಪುನರ್ ರಚಿಸಿದ ವೇಗವರ್ಧಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕ್ರಮಗಳು) ತಂತ್ರಾಂಶ 12 ವರ್ಷಗಳ ಹಳೆಯದಾಗಿರುವುದರಿಂದ ಗ್ರಾಹಕರು ಸರ್ವರ್‌ಗೆ ಒಮ್ಮಲೇ ಲಾಗ್‌ಇನ್ ಆದ ಸಂದರ್ಭದಲ್ಲಿ ಮಾತ್ರ ಅಡಚಣೆ ಉಂಟಾಗುತ್ತಿದ್ದು, ಅದನ್ನು ಸರಿಪಡಿಸಲು ಬೆಸ್ಕಾಂ ಕ್ರಮವಹಿಸುತ್ತಿದೆ ಎಂದು ಮಹಾಂತೇಶ ಬೀಳಗಿ ತಿಳಿಸಿದರು.

2 ವರ್ಷಗಳಿಂದ ಇನ್ಫೋಸಿಸ್ ಸಂಸ್ಥೆ ಈ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದು, ಕಾರಣಾಂತರಗಳಿಂದ ಹಿಂದೆ ಸರಿದಿರುವುದರಿಂದ ಹೊಸದಾಗಿ ಕೆಟಿಪಿಪಿ ಕಾಯ್ದೆ ಅನ್ವಯ ಟೆಂಡರ್ ಕರೆದು ಆಯ್ಕೆಯಾದ ಇನ್‌ಫೈನೈಟ್ ಕಂಪ್ಯೂಟರ್ ಸಲ್ಯೂಷನ್ಸ್ ಕಂಪನಿಗೆ ಕಾರ್ಯಾದೇಶ ನೀಡಿ ತಂತ್ರಾಂಶ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದರು.

ಸದ್ಯ ಕಾರ್ಯನಿರ್ವಹಿಸುತ್ತಿರುವ ತಂತ್ರಾಂಶದ ಲೋಪದೋಷಗಳನ್ನು ಶಾಶ್ವತವಾಗಿ ಬಗೆಹರಿಸಲು ಹೊಸ ತಂತ್ರಾಂಶವನ್ನು ಸಿದ್ಧಪಡಿಸಲಾಗುತ್ತಿದ್ದು, ಇನ್ನು 4-5 ತಿಂಗಳಲ್ಲಿ ಹೊಸ ತಂತ್ರಾಂಶ ಕಾರ್ಯಾರಂಭ ಮಾಡಲಿದೆ ಎಂದು ತಿಳಿಸಿದರು.

ಕಣ್ವ ಸೊಸೈಟಿ ವಂಚನೆ ಪ್ರಕರಣ: ಸಾವಿರಾರು ಜನರಿಂದ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಪೆ, ದಿಂಬು ಹಿಡಿದು ಬಂದ ವಯಸ್ಕರು, ಕಾಯಿಲೆಯಿಂದ ಬಳಲುತ್ತಿದ್ದರೂ ಕೈಯಲ್ಲಿ ಅರ್ಜಿ ಹಿಡಿದು ತಾಸುಗಟ್ಟಲೆ ಕಾಯುತ್ತಿದ್ದ ಜನರು, ಮಕ್ಕಳೊಂದಿಗೆ ಬಂದಿದ್ದ ತಾಯಂದಿರು...

ಇವು ಹತ್ತು ದಿನಗಳಿಂದ ಶಾಂತಿನಗರದ ಪ್ರಾದೇಶಿಕ ಆಯುಕ್ತರ ಕಚೇರಿಯ ಎದುರು ಕಂಡುಬಂದ ದೃಶ್ಯಗಳು.

ಕಣ್ವ ಸಮೂಹ ಸಂಸ್ಥೆಯ ಕಣ್ವ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿಯ ವಂಚನೆ ಪ್ರಕರಣದಲ್ಲಿ ವಂಚನೆ ಪ್ರಮಾಣದ ಮಾಹಿತಿ ಸಂಗ್ರಹಿಸುತ್ತಿದ್ದು, ಸರ್ಕಾರದ ಸೂಚನೆಯಂತೆ ಸೌಹಾರ್ದ ಫೆಡರೇಶನ್ ಹೂಡಿಕೆದಾರರಿಂದ ಕ್ಲೇಂ ಅರ್ಜಿ ಸ್ವೀಕರಿಸಿದೆ. ವಂಚನೆಗೆ ಒಳಗಾದವರು ಕಣ್ಣೀರು ಹಾಕುತ್ತಲೇ ಅರ್ಜಿ ಸಲ್ಲಿಸಿದ್ದಾರೆ.

'ಅರ್ಜಿ ಸಲ್ಲಿಕೆ ಅವಧಿ ಮುಕ್ತಾಯವಾಗಿದ್ದು, ಸಾವಿರಾರು ಅರ್ಜಿಗಳು ಸಲ್ಲಿಕೆಯಾಗಿವೆ' ಎಂದು ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆ ಮಹಾಪೋಷಕ ಶಂಕರ್ ಗುಹಾ ದ್ವಾರಕಾನಾಥ್ ಬೆಳ್ಳೂರು ತಿಳಿಸಿದರು.

'ಅಂದಾಜು 25 ಸಾವಿರದಷ್ಟು ಹೂಡಿಕೆದಾರರು ಹಾಗೂ ಷೇರುದಾರರು ಅರ್ಜಿ ಸಲ್ಲಿಸಿದ್ದಾರೆ. ಫೆಡರೇಶನ್ ಎರಡು ಪ್ರತ್ಯೇಕ ಕೌಂಟರ್ ತೆರೆದಿತ್ತು. ಬೆಳಗಾವಿ, ಕಲಬುರಗಿ, ಬೀದರ್, ರಾಯಚೂರು, ದಾವಣಗೆರೆ, ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳಿಂದ ಹೂಡಿಕೆದಾರರು, ದಾಖಲೆ ಸಹಿತ ಅರ್ಜಿ ಸಲ್ಲಿಸಿದ್ದಾರೆ. ಬ್ಯಾಂಕ್ ಎಷ್ಟು ವಂಚನೆ ನಡೆಸಿದೆ ಎಂಬುದು ಇದುವರೆಗೂ ಗೊತ್ತಾಗಿಲ್ಲ. ವಂಚನೆ ಪ್ರಮಾಣ ಹಾಗೂ ಯಾರಿಗೆ ಎಷ್ಟು ಮೋಸವಾಗಿದೆ ಎಂಬುದರ ಮಾಹಿತಿ ಸಂಗ್ರಹಿಸುವುದರ ಭಾಗವಾಗಿ ಕ್ಲೇಮ್ ಅರ್ಜಿ ಸ್ವೀಕರಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಹೂಡಿಕೆದಾರರಿಗೆ ವಂಚನೆ ಪ್ರಕರಣದ ಸಂಬಂಧ ಬಸವೇಶ್ವರ ನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು. ನೂರಾರು ಕೋಟಿ ರೂಪಾಯಿ ವಂಚನೆ ಆರೋಪ ಕೇಳಿಬಂದಿತ್ತು. ವಂಚನೆ ಸಂಬಂಧ ದೂರು ಆಧರಿಸಿ ಬ್ಯಾಂಕ್‌ನ ಹಲವರನ್ನು ಪೊಲೀಸರು ಬಂಧಿಸಿದ್ದರು.

ಛತ್ತೀಸ್‌ಗಡದ ನವ ರಾಯಪುರ ಸಾಯಿ ಸಂಜೀವನಿ ಆಸ್ಪತ್ರೆಯಲ್ಲಿ ಹೃದಯರೋಗ ಸಮಸ್ಯೆಯಿಂದ ಗುಣಮುಖರಾದ ಎರಡು ಸಾವಿರ ಮಕ್ಕಳು ಒಟ್ಟಿಗೆ ದೀಪ ಬೆಳಗಿಸಿದರು.

ಗಿನ್ನಿಸ್ ದಾಖಲೆ ಸೇರಿದ 'ಸಾಯಿ ಸಂಜೀವನಿ ಆಸ್ಪತ್ರೆ'

ಬೆಂಗಳೂರು: ಛತ್ತೀಸಗಡದ ನವ ರಾಯಪುರ ಸಾಯಿ ಸಂಜೀವನಿ ಆಸ್ಪತ್ರೆಯಲ್ಲಿ ಹೃದಯರೋಗ ಸಮಸ್ಯೆಯಿಂದ ಗುಣಮುಖರಾದ ಎರಡು ಸಾವಿರ ಮಕ್ಕಳು ಒಟ್ಟಿಗೆ ದೀಪ ಬೆಳಗಿಸುವ ಮೂಲಕ ಗಿನ್ನಿಸ್ ದಾಖಲೆ ಸೇರಿದ್ದಾರೆ.

ಅಲ್ಲಿನ ಶ್ರೀ ಸತ್ಯಸಾಯಿ ಸಂಜೀವನಿ ಮಕ್ಕಳ ಹೃದಯ ಚಿಕಿತ್ಸಾ ಹಾಗೂ ವಿಶೇಷ ಆರೈಕೆ ಕೇಂದ್ರ, ಭಾರತದ ಮೊದಲ ಚಾರಿಟೆಬಲ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ. ಸಾವು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದ ಮಕ್ಕಳಿಗೆ ಪುನರ್ ಜನ್ಮ ನೀಡಿದ ಕೀರ್ತಿ ಈ ಆಸ್ಪತ್ರೆಗೆ ಸಲ್ಲುತ್ತದೆ. ನ. 20ರಂದು ಆಸ್ಪತ್ರೆಯ 10ನೇ ವಾರ್ಷಿಕೋತ್ಸವ ಆಚರಿಸಲಾಯಿತು. ಈ ಸಮಯದಲ್ಲಿ ಗುಣಮುಖರಾದ ಮಕ್ಕಳು ಒಟ್ಟಿಗೆ ದೀಪ ಬೆಳಗಿದರು. ಎಲ್ಲ ಮಕ್ಕಳು ಬಡತನದ ಹಿನ್ನೆಲೆಯ ಕುಟುಂಬದಿಂದ ಬಂದವರು. ಹುಟ್ಟಿದಾಗಲೇ ಹೃದಯ ಸಮಸ್ಯೆಗೆ ಒಳಗಾದವರು. ಅವರಿಗೆ ಸಂಕೀರ್ಣ ಶಸ್ತ್ರಚಿಕಿತ್ಸೆಗಳು ಸೇರಿದಂತೆ ಎಲ್ಲ ರೀತಿಯ ಚಿಕಿತ್ಸೆಗಳನ್ನೂ ಸಂಪೂರ್ಣ ಉಚಿತವಾಗಿ ನೀಡಲಾಗಿದೆ ಎಂದು ಶ್ರೀ ಸತ್ಯಸಾಯಿ ಆರೋಗ್ಯ ಮತ್ತು ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಡಾ.ಸಿ.ಶ್ರೀನಿವಾಸ್ ಮಾಹಿತಿ ನೀಡಿದರು.

'ನಾವು ಪ್ರಪಂಚದ ಮಕ್ಕಳ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತೇವೆ. ದೀಪಗಳ ಬೆಳಗುವಿಕೆ ಪ್ರೀತಿಯ ಶಕ್ತಿಯ ಸಂಕೇತ. ಆಧುನಿಕ ಉಪಕರಣಗಳನ್ನು ಒಳಗೊಂಡ ಸತ್ಯಸಾಯಿ ಸಂಜೀವನಿ ಆಸ್ಪತ್ರೆ ನಿಸ್ವಾರ್ಥ ಸೇವೆಗೆ ಹೆಸರಾಗಿದೆ. ಜಾತಿ-ಮತದ ಭೇದವಿಲ್ಲದೆ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ನೀಡುತ್ತಿದ್ದೇವೆ. ಇದುವರೆಗೂ 23 ಸಾವಿರ ಜನರು ಸೌಲಭ್ಯ ಪಡೆದಿದ್ದಾರೆ' ಎಂದರು.

ಸೇನೆಯ ಪ್ರತಿನಿಧಿಗಳು, ಅರೆಸೇನಾ ಪಡೆಗಳು, ರಾಜ್ಯ ಪೊಲೀಸ್, ಎನ್‌ಸಿಸಿ, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಶಾಲಾ ಮಕ್ಕಳು ಸಂಭ್ರಮಕ್ಕೆ ಸಾಕ್ಷಿಯಾದರು.

ನೈಋತ್ಯ ರೈಲ್ವೆ

ಇ–ಹರಾಜು ಪ್ರಕ್ರಿಯೆ: ಪಾರ್ಸೆಲ್ ಜಾಗದ ಗುತ್ತಿಗೆ, ಪಾರ್ಕಿಂಗ್ & ಹೊರ ವಲಯದ ಜಾಹೀರಾತು / ಪ್ರಕಟಣೆಗಳು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ.ಹರಾಜು ಪ್ರಕ್ರಿಯೆಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ.

1) ಪಾರ್ಸೆಲ್ ಎಸ್‌ಎಲ್‌ಆರ್ & ವಿಪಿಹೆಚ್ ಗುತ್ತಿಗೆ: 05.12.2022, 12.12.2022, 19.12.2022 & 26.12.2022.
2) ಪಾರ್ಕಿಂಗ್, ಪೇ & ಯೂಜ್ ಗುತ್ತಿಗೆಗಳು: 15.12.2022, 20.12.2022 & 22.12.2022
3) ಜಾಹೀರಾತು ಮತ್ತು ಎಟಿಎಂ ಗುತ್ತಿಗೆಗಳು: 06.12.2022, 09.12.2022, 13.12.2022, 14.12.2022, 15.12.2022, 21.12.2022, 23.12.2022, 27.12.2022, 28.12.2022, 29.12.2022 & 30.12.2022
4) ಕೇಟರಿಂಗ್ ಗುತ್ತಿಗೆಗಳು: 16.1.2022

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು / ಬೆಂಗಳೂರು

PUB/520/AAD/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರ್ ಸೂಚನೆ ಸಂ.: CAO/CN/BNC/105/2022 ದಿನಾಂಕ: 08.11.2022

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಎಸ್‌ಎಂವಿಬಿ (ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು) ನಿಲ್ದಾಣದ ಕಟ್ಟಡ ಮತ್ತು ಎರಡು ಸುರಂಗಮಾರ್ಗಗಳಿಗಾಗಿ ಇಂಟೆಲಿಜೆಂಟ್ ಅಡ್ರೆಸ್ ಮಾಡಬಹುದಾದ ಫೈರ್ ಡಿಟೆಕ್ಷನ್ ಮತ್ತು ಅಲಾರ್ಮ್ ಸಿಸ್ಟಮ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ. (ಟೆಂಡರು ಸಂ. ECN-9-2022-RT)	ರೂ. 50,05,357/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.12.2022, 11:00 ಗಂಟೆಯವರೆಗೆ

ಇ–ಟೆಂಡರ್ ಸೂಚನೆ ಸಂ.: CAO/CN/BNC/109/2022 ದಿನಾಂಕ: 22.11.2022

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಲೋಂಡಾ ಜಂಕ್ಷನ್ ಹಂತ–II ರಲ್ಲಿ ಹೊಸ ಪ್ಲಾಟ್‌ಫಾರ್ಮ್, ಕಾಯ್ದಿರಿಸುವ ಕಚೇರಿ, ಎಫ್‌ಒಬಿ, ಟ್ರ್ಯಾಕ್ ಮೆಷಿನ್ ಸಿಬ್ಬಂದಿ ಕೊಠಡಿ, ಎಲ್‌ಸಿ ಗೇಟ್‌ಗಳ ವಿದ್ಯುದೀಕರಣ ಮತ್ತು ಲೋಂಡಾ ಮಿರಜ್ ಡಬ್ಲಿಂಗ್ ವಿಭಾಗದಲ್ಲಿ ಲೋಂಡಾ, ಖಾನಾಪುರ, ದೇಸೂರ್‌ಗಳಲ್ಲಿ ಟ್ರ್ಯಾಕ್ ಮೆಷಿನ್ ಸೈಡಿಂಗ್ ನಿರ್ಮಾಣ. (ಟೆಂಡರು ಸಂ. ECN-42-2022)	ರೂ. 1,95,73,602/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.12.2022, 11:00 ಗಂಟೆಯವರೆಗೆ

ಇ–ಟೆಂಡರ್ ಸೂಚನೆ ಸಂ.: CAO/CN/BNC/114/2022 ದಿನಾಂಕ: 25.11.2022

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಧಾರವಾಡ ಯಾರ್ಡ್ (ಷೆಡ್ಯೂಲ್ ಎ) ನಲ್ಲಿ 1. ಎಲ್‌ಸಿ ನಂ. 297ಗೆ ಬದಲಾಗಿ ಹಾಗೂ ಮುಳವಾಡ ಮತ್ತು ವಿಜಯಪುರ (ಷೆಡ್ಯೂಲ್ ಬಿ) ನಡುವೆ 2. ಎಲ್‌ಸಿ ನಂ. 81ಗೆ ಬದಲಾಗಿ ಆರ್‌ಒಬಿಯ ಲೈಟಿಂಗ್ ವ್ಯವಸ್ಥೆಯನ್ನು ಕಲ್ಪಿಸುವುದು. (ಟೆಂಡರು ಸಂ. ECN-56-2022)	ರೂ. 41,39,480/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12.12.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ನಿರ್ಮಾಣ ಬೆಂಗಳೂರು ದಂಡು

PUB/516/AAD/PRB/SWR/2022-23

S.W.Railways SWRRLY SWRRLY

ಮತದಾರರ ಪಟ್ಟಿ: ಮನೆ ಸಮೀಕ್ಷೆ ಶೇ 23ರಷ್ಟು ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಗಾಗಿ ನಡೆಯುತ್ತಿರುವ ಮನೆ ಮನೆ ಸಮೀಕ್ಷೆ ಶೇ 23ರಷ್ಟು ಪೂರ್ಣಗೊಂಡಿದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ಸಹಾಯಕ ಆಯುಕ್ತ ತಿಳಿಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ- 2023ರ ಕಾರ್ಯ-ಚಟುವಟಿಕೆಗಳ ಅಂಗವಾಗಿ ನ.9ರಿಂದ ಡಿ.8ರವರೆಗೆ ಬಿಎಲ್‌ಒಗಳು ಮನೆ ಮನೆ ಸಮೀಕ್ಷೆ ಕಾರ್ಯ ನಡೆಸಬೇಕಾಗಿದೆ. ಈವರೆಗೆ 28 ವಿಧಾನಸಭೆ ಕ್ಷೇತ್ರಗಳಲ್ಲಿ ಸಮೀಕ್ಷೆ ಕಾರ್ಯ ಶೇ 23ರಷ್ಟು ಪ್ರಗತಿ ಸಾಧಿಸಿದೆ.

ಆಯೋಗ ನೀಡಿರುವ ಅವಧಿಯೊಳಗೆ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಲು ಎಲ್ಲ ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದಿದ್ದಾರೆ.

ನಗರದಲ್ಲಿ ಇಂದು

ಗೋ ಗ್ರೀನ್: ಅತಿಥಿಗಳು: ಪುಟ್ಟಣ್ಣ, ಆಯೋಜನೆ: ಎಂಪಾವರ್ಡ್ ಮೈಂಡ್ಸ್, ಸ್ಥಳ: ವಿಎಲ್‌ಎಸ್ ಇಂಟರ್ ನ್ಯಾಷನಲ್ ಸ್ಕೂಲ್, ಶ್ರದ್ಧಾ ಕಾಲೊನಿ 4ನೇ ಹಂತ, ಬಸವೇಶ್ವರನಗರ, ಬೆಳಿಗ್ಗೆ 9

2022–23ರ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ: ಅತಿಥಿಗಳು: ಶಿವಕುಮಾರ್.ಎ.ಆರ್., ಕೆ.ಎನ್. ಪುಟ್ಟಮ್ಮ, ಅಧ್ಯಕ್ಷತೆ: ಕೆ.ಎನ್. ಪುಷ್ಪಲತಾ, ಆಯೋಜನೆ ಮತ್ತು ಸ್ಥಳ: ಬಿಎಸ್‌ವಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 11

ರಂಗೋಲಿ ಸಮೂಹ ಗಾಯನ, ಯುವ ಸಮೂಹ ನೃತ್ಯ, ಗಾಯನ ತರಬೇತಿ ಶಿಬಿರ: ಉದ್ಘಾಟನೆ: ಬಿ.ವಿ. ರಾಜಾರಾಮ್, ಅಧ್ಯಕ್ಷತೆ: ಎಸ್. ಎನ್. ವೆಂಕಟೇಶ್, ಅತಿಥಿಗಳು: ನೀಲಮ್ಮ, ಈಶ್ವರ ದೈತೋಟ, ಬಂಡ್ಲಹಳ್ಳಿ ವಿಜಯಕುಮಾರ್, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣ, ಯಲಹಂಕ ನ್ಯೂಟೌನ್, ಮಧ್ಯಾಹ್ನ 1

ಉದ್ಯಾನದಲ್ಲಿ ಕನ್ನಡ ಹಾಡು: ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಆಶಯ ನುಡಿ: ಮಾಯಶ್ರೀ ಗೌಡಗೆರೆ,

ಬಾದಲ್ ನಂಜುಂಡಸ್ವಾಮಿ

ಅಂತರ ರಾಷ್ಟ್ರೀಯ ಅಂಗವಿಕಲರ ದಿನಾಚರಣೆ: ಅತಿಥಿಗಳು: ಶಫೀಕ್ ಪೂಣಥಿಲ್, ರಾಜಲಕ್ಷ್ಮಿ ಎಸ್.ಜೆ., ಬಾದಲ್ ನಂಜುಂಡಸ್ವಾಮಿ, ಆಯೋಜನೆ: ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ, ಸ್ಥಳ: ಲಾಲ್‌ಬಾಗ್ ಈಸ್ಟ್‌ಗೇಟ್, ಬೆಳಿಗ್ಗೆ 10

ಅತಿಥಿಗಳು: ವಿದ್ಯಾ ಶಶಿಕುಮಾರ್, ಬಿ.ಟಿ.ಎಸ್. ನಾಗರಾಜು, ನಾ. ಶ್ರೀಧರ್, ಆಯೋಜನೆ: ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ತಮ್ಮಯ್ಯಪ್ಪ ಉದ್ಯಾನ, ಬಿನ್ನಿಪೇಟೆ ವಾರ್ಡ್, ಮಾಗಡಿ ಅಡ್ಡರಸ್ತೆ, ಸಂಜೆ 4

ಭಾಸ್ಕರದಾಸ್ ಎಕ್ಕಾರು ನೆನಪಿನ ಯಾತ್ರೆ: ಅತಿಥಿಗಳು: ಭೀಕೂ ರಾಮಜಿ ಇದಾತೆ, ನಳಿನ್ ಕುಮಾರ್ ಕಟೀಲ್, ಕೋಟಾ ಶ್ರೀನಿವಾಸ ಪೂಜಾರಿ, ಬಿ.ಎಲ್. ಹನುಮಂತಪ್ಪ, ಚಾವಡೆ. ಕೆ. ಲೋಕೇಶ್, ವೆಂಕಟರಮಣಯ್ಯ, ಕುಪ್ಪೆ ನಾಗರಾಜ್, ಅಧ್ಯಕ್ಷತೆ: ಶೇಷಪ್ಪ ಅಂದೊಳ್ಳು, ಆಯೋಜನೆ: ಕರ್ನಾಟಕ ರಾಜ್ಯ ಅಲೆಮಾರಿ, ಅರೆಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಒಕ್ಕೂಟ, ಸ್ಥಳ: ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 4

ಯೋಗಾಸನ ವಿಶ್ವಕಪ್ ಕ್ರೀಡೆಗಳು: ಉದ್ಘಾಟನೆ: ಅನುರಾಗ ಠಾಕೂರ್, ಅತಿಥಿಗಳು: ಬಸವರಾಜ ಬೊಮ್ಮಾಯಿ, ಆರ್. ಅಶೋಕ್, ಎಂ.ಆರ್. ದೊರೆಸ್ವಾಮಿ, ಆಯೋಜನೆ ಮತ್ತು ಸ್ಥಳ: ಎಸ್–ವ್ಯಾಸ, ವಿಶ್ವವಿದ್ಯಾಲಯ, ಪ್ರಶಾಂತಿ ಕುಟೀರಂ, ಸ್ವಾಮಿ ವಿವೇಕಾನಂದ ರಸ್ತೆ, ಜಿಗಣಿ, ಸಂಜೆ 4.30

ಚೆಂಗಪ್ಪ ಸ್ಮಾರಕ ಉಪನ್ಯಾಸ: ವಿಷಯ: ಭಾರತದ ಸಂವಿಧಾನ ಒಂದು ಪರಿವರ್ತನಾ ಸನ್ನದು, ಉಪನ್ಯಾಸಕರು: ಪ್ರಭುಲಿಂಗ.ಕೆ. ನಾವದಗಿ, ಅತಿಥಿಗಳು: ಪ್ರಸನ್ನ.ಬಿ. ವರಲೆ, ಆಯೋಜನೆ: ಲಹರಿ ಅಡ್ವೋಕೇಟ್ಸ್ ಫೋರಂ, ಸ್ಥಳ: ಪೇಟ್ರನ್ ಇನ್ ಚೀಫ್ ಹಾಲ್, ಹೈಕೋರ್ಟ್, ಸಂಜೆ 5

ಕಲಾನಾದಂ ಉತ್ಸವ: ಭರತನಾಟ್ಯ: ಪ್ರಸನ್ನ ಕಸ್ತೂರಿ, ಶೀಜಿತ್ ಕೃಷ್ಣ, ಕುಚಿಪುಡಿ: ಹಿಮನ್ಸಿ ಕಾತ್ರಗಡ್ಡ, ಕಥಕ್: ವಿಶ್ವದೀಪ್ ಶರ್ಮ, ಆಯೋಜನೆ: ನಾದಂ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

'ಸಂವಿಧಾನದ ಆಶಯ ಈಡೇರಿಸಲೂ ಕಮಿಷನ್ ಬೇಕಾ?'

ಬೆಂಗಳೂರು: ಸಂವಿಧಾನ ಪ್ರತಿಪಾದಿಸಿರುವ ಸಾಮಾಜಿಕ ನ್ಯಾಯದ ಆಶಯಗಳನ್ನು ಈಡೇರಿಸುವುದಕ್ಕೂ ಬಿಜೆಪಿಯವರಿಗೆ ಶೇ 40 ಕಮಿಷನ್ ನೀಡಬೇಕೇ ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಪ್ರಶ್ನಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಮೆಟ್ರಿಕ್‌ಪೂರ್ವ ಸ್ಕಾಲರ್‌ಶಿಪ್‌ಗಳನ್ನು ಕೇಂದ್ರ ಸರ್ಕಾರ ನಿಲ್ಲಿಸಿದೆ. ಶಿಕ್ಷಣ ಪಡೆಯುವುದಕ್ಕಾಗ ಕಷ್ಟ ಪಡುತ್ತಿರುವ ವಿದ್ಯಾರ್ಥಿಗಳ ಬದುಕಿನ ಪರಿಚಯವೇ ಕೇಂದ್ರಕ್ಕೆ ಇದ್ದಂತಿಲ್ಲ ಎಂದು ಟೀಕಿಸಿದ್ದಾರೆ.

ಸಂಶೋಧನಾ ವಿಭಾಗದ ವಿದ್ಯಾರ್ಥಿಗಳಿಗೂ ಸರಿಯಾಗಿ ಸ್ಕಾಲರ್‌ಶಿಪ್ ನೀಡದೇ ಅವರ ಶೈಕ್ಷಣಿಕ ಬದುಕಿಗೆ ತೊಂದರೆ ಮಾಡಲಾಗುತ್ತಿದೆ. ಅವರ ಹಕ್ಕಿಗೆ ಅನುಗುಣವಾಗಿ ಸಲ್ಲಬೇಕಾದ ವಿದ್ಯಾರ್ಥಿ ವೇತನವನ್ನು ಸರ್ಕಾರ ಕೂಡಲೇ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಬಿಜೆಪಿಗರೇ, ಸಂವಿಧಾನ ದಿನಾಚರಣೆ ಮಾಡುವ ಮೂಲಕ ಬರೀ ಪ್ರಚಾರ ಪಡೆದರೆ ಸಾಲದು ಎಂದೂ ಹೇಳಿದ್ದಾರೆ.

ಚಂದಾಪುರ ಕೆರೆಗೆ ₹500 ಕೋಟಿ ಪರಿಸರ ಪರಿಹಾರ; ಸರ್ಕಾರದ ನಿಲುವಿಗೆ ಎನ್‌ಜಿಟಿ ತರಾಟೆ

ದಂಡ ವಿನಾಯಿತಿ ಕೋರಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೆರೆಯ 2 ಎಕರೆ ಒತ್ತುವರಿ
- ಕೈಗಾರಿಕೆ ತ್ಯಾಜ್ಯ ಜಲಕಾಯಕ್ಕೆ ಬಿಡುವಂತಿಲ್ಲ
- ನೀರಿನ ಗುಣಮಟ್ಟ ಕಳಪೆ

ನವದೆಹಲಿ: ಬೆಂಗಳೂರಿನ ಚಂದಾಪುರ ಕೆರೆಗೆ ಪರಿಸರ ಪರಿಹಾರದ ರೂಪದಲ್ಲಿ ವಿಧಿಸಿದ್ದ ₹500 ಕೋಟಿ ದಂಡಕ್ಕೆ ವಿನಾಯಿತಿ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ ತಿರಸ್ಕರಿಸಿದೆ.

ಕೆರೆಗೆ ಸುತ್ತಮುತ್ತಲ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಕೈಗಾರಿಕೆಗಳ ಕೊಳಚೆ ನೀರು ಸೇರಿ ಅಪಾರ ಹಾನಿ ಉಂಟಾಗಿದ್ದು, ಈ ಪರಿಸರ ಹಾನಿ ಸರಿಪಡಿಸಲು ಕರ್ನಾಟಕ ಸರ್ಕಾರವು ಕೆರೆಗೆ ₹500 ಕೋಟಿ ಪರಿಹಾರ ನೀಡಬೇಕು ಎಂದು ಪ್ರಧಾನ ಪೀಠ ಅಕ್ಟೋಬರ್‌ನಲ್ಲಿ ಆದೇಶ ಹೊರಡಿಸಿತ್ತು.

'ಈ ಪರಿಹಾರದ ಮೊತ್ತವನ್ನು ಒಂದು ತಿಂಗಳಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಖಾತೆಯಲ್ಲಿ ಇಡಬೇಕು. ಈ ಮೊತ್ತವನ್ನು ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಬೇಕು. ಕೆರೆಯ ಪುನರುಜ್ಜೀವನಕ್ಕೆ ಸಮಗ್ರ ಯೋಜನೆ ರೂಪಿಸಬೇಕು. ಒಂದು ವೇಳೆ ಈ ಮೊತ್ತ ಕಡಿಮೆಯಾದರೆ ಹೆಚ್ಚುವರಿ ಅನುದಾನ ಒದಗಿಸಬೇಕು. ಅಭಿವೃದ್ಧಿ ಕಾಮಗಾರಿ ನಡೆಸಿ ಆರು ತಿಂಗಳಲ್ಲಿ ವರದಿ ಸಲ್ಲಿಸಬೇಕು' ಎಂದೂ ಪೀಠ ನಿರ್ದೇಶನ ನೀಡಿತ್ತು.

ಇದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಅರ್ಜಿ ಸಲ್ಲಿಸಿತ್ತು. 'ಕೆರೆಯ ಸಮಗ್ರ ಅಭಿವೃದ್ಧಿಗೆ ಮೂರು–ನಾಲ್ಕು ವರ್ಷಗಳ ಕಾಲಾವಕಾಶ ನೀಡಬೇಕು' ಎಂದು ಸರ್ಕಾರವು ಅರ್ಜಿಯಲ್ಲಿ ಕೋರಿತ್ತು.

ಈ ಅರ್ಜಿಯ ವಿಚಾರಣೆ ನಡೆಸಿದ ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯಲ್ ಅವರನ್ನು ಒಳಗೊಂಡ ಪೀಠ, 'ಕರ್ನಾಟಕ ಸರ್ಕಾರದ ವಾದ ಸಮರ್ಥನೀಯ ಅಲ್ಲ. ಘನತ್ಯಾಜ್ಯ ನಿರ್ವಹಣೆ ಹಾಗೂ ಪರಿಸರ ಪುನರುಜ್ಜೀವನಕ್ಕೆ ಸುಪ್ರೀಂ ಕೋರ್ಟ್ ಈ ಹಿಂದೆಯೇ ಗಡುವು ವಿಧಿಸಿತ್ತು. ಈ ಆದೇಶವನ್ನು ಉಲ್ಲಂಘಿಸಿ ಕರ್ನಾಟಕ ಸರ್ಕಾರವು ಮನಸ್ಸಿಗೆ ಬಂದಂತೆ ಗಡುವು ವಿಸ್ತರಿಸುತ್ತಾ ಹೋಗುತ್ತಿದೆ. ನ್ಯಾಯಪೀಠದ ಆದೇಶವನ್ನು ಪಾಲಿಸಲು ಸಿದ್ಧವಿಲ್ಲ ಎಂದರೆ ಏನರ್ಥ' ಎಂದು ಪ್ರಶ್ನಿಸಿದೆ.

'3–4 ವರ್ಷಗಳಲ್ಲಿ ಈ ಮೊತ್ತ ಖರ್ಚು ಮಾಡಲಾಗುವುದು ಎಂಬ ರಾಜ್ಯ ಸರ್ಕಾರದ ವಾದವನ್ನು ಒಪ್ಪಲು ಸಾಧ್ಯವಿಲ್ಲ. ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರ ಈಗಾಗಲೇ ವಿಫಲವಾಗಿದೆ. ಕೆರೆ ಅಭಿವೃದ್ಧಿಗೆ ಇನ್ನಷ್ಟು ಕಾಲಾವಕಾಶ ನೀಡಲು ಸಾಧ್ಯವಿಲ್ಲ' ಎಂದು ಪೀಠ ಕಟುವಾಗಿ ತಿಳಿಸಿದೆ.

'ಈ ಜಲಕಾಯವು 24.27 ಎಕರೆ ಪ್ರದೇಶದಲ್ಲಿದೆ. ಹೀಲಳಿಗೆ ಗ್ರಾಮದಲ್ಲಿ 7.2 ಎಕರೆ ಹಾಗೂ ಚಂದಾಪುರ ಪಟ್ಟಣದಲ್ಲಿ 17.25 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ನಿರ್ಮಾಣ ಚಟುವಟಿಕೆಗಳಿಗಾಗಿ ಜಲಕಾಯದ ಎರಡು ಎಕರೆಯನ್ನು ಒತ್ತುವರಿ ಮಾಡಲಾಗಿದೆ. ಕೆರೆಯ ಮೀಸಲು ಪ್ರದೇಶದಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಅಂಗಡಿಗಳು ನಿರ್ಮಾಣವಾಗಿವೆ. ಕೆರೆಯ ಸುತ್ತ ಹಾಕಿರುವ ಬೇಲಿ ಕಿತ್ತು ಹೋಗಿದೆ. ಕೆರೆಯ ಪಕ್ಕದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಇಲ್ಲ. ಹೀಗಾಗಿ, ಕೊಳಚೆ ನೀರು ನೇರವಾಗಿ ಜಲಕಾಯ ಸೇರುತ್ತಿದೆ. ಜಿಗಣಿ–ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಕೈಗಾರಿಕಾ ತ್ಯಾಜ್ಯವು ಕೆರೆಯನ್ನು ಸೇರುತ್ತಿದೆ. ಇದು ಸರ್ಕಾರ ರೂಪಿಸಿರುವ ನಿಯಮಕ್ಕೆ ವಿರುದ್ಧ. ಕೈಗಾರಿಕೆಗಳು ತ್ಯಾಜ್ಯ ನೀರನ್ನು ಜಲಕಾಯಕ್ಕೆ ಬಿಡುವಂತಿಲ್ಲ' ಎಂದು ನ್ಯಾಯಪೀಠದ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಈ ಕೈಗಾರಿಕಾ ಪ್ರದೇಶದಲ್ಲಿ ಔಷಧ ಉತ್ಪಾದಿಸುವ ಕೈಗಾರಿಕೆಗಳು, ಪವರ್ ಕೋಟಿಂಗ್, ಎಲೆಕ್ಟ್ರೋಪ್ಲೇಟಿಂಗ್ ಸೇರಿದಂತೆ ಕೆಂಪು ವರ್ಗೀಕರಣದ 195 ಕೈಗಾರಿಕೆಗಳು ಇವೆ. ಬೆಂಗಳೂರು ನಗರದ ಜನರ ಜಲದಾಹವನ್ನು ನೀಗಿಸಲು ಕೆರೆಯಲ್ಲಿ ಕೊಳಚೆ ಬಾವಿಗಳನ್ನು ಕೊರೆದು ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಜಲಕಾಯದ ನೀರಿನ ಗುಣಮಟ್ಟ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ವರದಿ ಸಲ್ಲಿಸಿದೆ' ಎಂದೂ ಪೀಠ ಹೇಳಿದೆ.

ಧನಸಹಾಯ ಯೋಜನೆ: ಮಾರ್ಗಸೂಚಿ ರದ್ದತಿಗೆ ಆಗ್ರಹ

ಸಂಸ್ಕೃತಿ ಇಲಾಖೆ ನಡೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ನೀಡುವ ಧನಸಹಾಯಕ್ಕೆ ಸಂಬಂಧಿಸಿದಂತೆ ಹಾಲಿ ಮಾರ್ಗಸೂಚಿಯನ್ನು ರದ್ದುಪಡಿಸಿ, ಕನಿಷ್ಠ ₹ 5 ಲಕ್ಷದಿಂದ ಗರಿಷ್ಠ ₹15 ಲಕ್ಷದವರೆಗೆ ಆರ್ಥಿಕ ನೆರವು ಒದಗಿಸಬೇಕು ಎಂದು ಕಲಾವಿದರು ಹಾಗೂ ಸಾಹಿತಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಆಗ್ರಹಿಸಿದ್ದಾರೆ.

ಕರ್ನಾಟಕ ರಾಜ್ಯ ಸಾಹಿತಿ ಕಲಾವಿದರ ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟ ನಗರದಲ್ಲಿ ಗುರುವಾರ ನಡೆಸಿದ ಸಭೆಯಲ್ಲಿ ಧನಸಹಾಯಕ್ಕೆ ಸಂಬಂಧಿಸಿದಂತೆ ಇಲಾಖೆಯ ನಡೆಯ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಯಿತು.

'ಧನಸಹಾಯದ ನಿಯಮಾವಳಿಯ ಬಗ್ಗೆ ಕಲಾವಿದರು, ಸಾಹಿತಿಗಳು ಮತ್ತು ಸಂಘ–ಸಂಸ್ಥೆಗಳ ಪ್ರಮುಖರೊಂದಿಗೆ ಚರ್ಚಿಸದ ಇಲಾಖೆ, ತನ್ನ ಮೂಗಿನ ನೇರಕ್ಕೆ ನಿಯಮಾವಳಿ ರೂಪಿಸಿದೆ. ಈ ನಿಯಮಾವಳಿಗಳು ಸಂಘ–ಸಂಸ್ಥೆಗಳ ಉಳಿವಿಗೆ ಮಾರಕವಾಗಿವೆ. ಆದ್ದರಿಂದ ಇನ್ನು ಮುಂದೆ ಧನಸಹಾಯ ಯೋಜನೆಯ ರೂಪು ರೇಷೆಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ವಲಯದ ಪ್ರಮುಖರೊಂದಿಗೆ ಚರ್ಚಿಸಿ, ನಿರ್ಣಯ ಕೈಗೊಳ್ಳಬೇಕು. ಸಂಘ–ಸಂಸ್ಥೆಗಳ ಕಾರ್ಯವ್ಯಾಪ್ತಿ ಅನುಸಾರ ಅನುದಾನ ನೀಡಬೇಕು. 2023–24ನೇ ಸಾಲಿನ ಧನಸಹಾಯಕ್ಕೆ ಪ್ರತ್ಯೇಕವಾಗಿ ಅನುದಾನ ಮೀಸಲಿಡಬೇಕು' ಎಂದು ಕಲಾವಿದರು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಸಾಹಿತಿ ಕಲಾವಿದರ ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟ ಆಯೋಜಿಸಿದ ಸಭೆಯಲ್ಲಿ ಕಲಾವಿದರು ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದರು.

'ಈ ಹಿಂದೆ ಸಂಘ–ಸಂಸ್ಥೆಗಳ ಹಿಂದಿನ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ಧನಸಹಾಯಕ್ಕೆ ಆಯ್ಕೆ ಮಾಡಲಾಗುತ್ತಿತ್ತು. ಉತ್ತಮವಾಗಿ ಕಾರ್ಯಕ್ರಮ ಮಾಡಿದ ಕೆಲವರಿಗೆ ₹ 10 ಲಕ್ಷದವರೆಗೂ ಅನುದಾನ ಬರುತ್ತಿತ್ತು. ಈಗ ಆಯ್ಕೆಯಾದ ಸಂಘ–ಸಂಸ್ಥೆಯೊಂದಕ್ಕೆ ಅನುದಾನದ ಗರಿಷ್ಠ ಮಿತಿಯನ್ನೂ ₹ 2 ಲಕ್ಷಕ್ಕೆ ಸೀಮಿತಗೊಳಿಸಲಾಗಿದೆ. ಇಷ್ಟು ಹಣ ಪಡೆಯಲು ಹತ್ತಾರು ನಿರ್ಬಂಧಗಳನ್ನು ವಿಧಿಸಲಾಗಿದೆ. ಇದು ಸಂಘ–ಸಂಸ್ಥೆಗಳಿಗೆ ಮಾರಕವಾಗಿದೆ. ಗರಿಷ್ಠ ನೆರವು ₹ 15 ಲಕ್ಷಕ್ಕೆ ಹೆಚ್ಚಿಸಬೇಕು' ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಸ್ಪಂದಿಸದಿದ್ದಲ್ಲಿ ಹೋರಾಟ: 'ಧನಸಹಾಯಕ್ಕಾಗಿ ಸಂಸ್ಥೆಗಳು ಅನಗತ್ಯವಾಗಿ ಅಲೆದಾಡುವುದನ್ನು ತಪ್ಪಿಸಬೇಕು. ಧನಸಹಾಯದ ವಿಚಾರದಲ್ಲಿ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಮುಂದೆ ಬೃಹತ್ ಪ್ರತಿಭಟನೆ ನಡೆಸಬೇಕು. ಹಕ್ಕೊತ್ತಾಯ ಮೆರವಣಿಗೆ ನಡೆಸಲು ಹೋರಾಟದ ರೂಪುರೇಷೆ ತಯಾರಿಸಬೇಕು' ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

ಸಭೆಯಲ್ಲಿ ಕುಮಾರ್ ಕೆ.ಎಚ್., ವೈ.ಕೆ. ಮುದ್ದುಕೃಷ್ಣ, ಪ್ರತಿಭಾ, ನಾರಾಯಣ್, ಎ.ಆರ್. ಗೋವಿಂದ್ ಸ್ವಾಮಿ ನಾಯಕ್, ತಮಟೆ ನಾಗರಾಜು, ಮಾಲತೇಶ್ ಬಡಿಗೇರ್, ಶ್ರೀನಾಥ್, ರವೀಂದ್ರ ಸೊರಗಾವಿ, ಕಿಕ್ಕೇರಿ ಕೃಷ್ಣಮೂರ್ತಿ, ಮೃತ್ಯುಂಜಯ ದೊಡ್ಡವಾಡ, ಸವಿತಾ ಗಣೇಶ್, ಪ್ರಸಾದ್ ಸಬರದ, ಪುಣ್ಯೇಶ್ ಕುಮಾರ್, ಶಂಕರ ಭಾರತಿಪುರ, ಸಬ್ಬನಹಳ್ಳಿ ರಾಜು ಸೇರಿ ನಗರದ ಕಲಾವಿದರು, ಸಂಘ ಸಂಸ್ಥೆಗಳ ಪ್ರಮುಖರು ಹಾಗೂ ಚಿಂತಕರು ಭಾಗವಹಿಸಿದ್ದರು.

ವಿದ್ಯುತ್ ಪ್ರವಹಿಸಿ ಇಬ್ಬರು ಮಕ್ಕಳು ಗಂಭೀರ

ಬೆಂಗಳೂರು: ಪಾರಿವಾಳ ಹಿಡಿಯಲು ಹೋಗಿದ್ದ ವೇಳೆ ಇಬ್ಬರು ಮಕ್ಕಳಿಗೆ ವಿದ್ಯುತ್ ಪ್ರವಹಿಸಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಕೃಷ್ಣಾನಂದ ಹಾಗೂ ವಿಜಯಾನಂದ ನಿವಾಸಿಗಳಾದ ಸುಪ್ರೀತ್ (11) ಹಾಗೂ ಚಂದ್ರು (10) ಗಾಯಗೊಂಡ ಮಕ್ಕಳು.

ವಿಕ್ಟೋರಿಯಾ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಒಬ್ಬನಿಗೆ ಶೇ 50ರಷ್ಟು, ಮತ್ತೊಬ್ಬನಿಗೆ ಶೇ 90ರಷ್ಟು ಸುಟ್ಟ ಗಾಯವಾಗಿದೆ. ನಂದಿನಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ವಿಜಯಾನಂದ ಬಡಾವಣೆಯಲ್ಲಿ ಘಟನೆ ನಡೆದಿದೆ.

'ಕಬ್ಬಿಣದ ಸರಳಿನ ಮೇಲೆ ಪಾರಿವಾಳಗಳಿದ್ದವು. ಅವುಗಳನ್ನು ಹಿಡಿಯಲು ತೆರಳಿದಾಗ ಪಕ್ಕದಲ್ಲಿಯೇ ಹಾದು ಹೋಗಿದ್ದ ಹೈಟೆನ್ಶನ್ ವಿದ್ಯುತ್ ತಂತಿಯಿಂದ ವಿದ್ಯುತ್ ಪ್ರವಹಿಸಿದ್ದರಿಂದ ಮಕ್ಕಳು ಗಾಯಗೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಚಿವ ಕೆ.ಗೋಪಾಲಯ್ಯ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಸ್ಥಿತಿಯ ಬಗ್ಗೆ ಮಾಹಿತಿ ಪಡೆದುಕೊಂಡರು.

ಭೀತಿ ಸೃಷ್ಟಿಸಿದ ಚಿರತೆ

ಕೆಂಗೇರಿ: ಕೆಂಗೇರಿ ಬಳಿಯ ಶ್ರೀಧರಗುಡ್ಡ ಗ್ರಾಮಕ್ಕೆ ಹೊಂದಿಕೊಂಡಂತಿರುವ ಪ್ರದೇಶಕ್ಕೆ ಚಿರತೆ ಕಾಣಿಸಿಕೊಂಡಿದ್ದು, ಈ ಭಾಗದಲ್ಲಿ ಭೀತಿ ಸೃಷ್ಟಿಸಿದೆ. ಚಿರತೆ ದಾಳಿಗೆ ಜಿಂಕೆ ಬಲಿಯಾಗಿದೆ.

ಗುರುವಾರ ವಾಯುವಿಹಾರಕ್ಕೆ ತೆರಳಿದ್ದ ಶಾಂತರಾಜು ಈ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ಸಿಬ್ಬಂದಿ ಜಿಂಕೆಯ ಕಳೇಬರವನ್ನು ಕೊಂಡೊಯ್ದು ಅಂತ್ಯಸಂಸ್ಕಾರ ನಡೆಸಿದ್ದಾರೆ.

ಬುಧವಾರ ಮಧ್ಯರಾತ್ರಿ ಸುಮಾರು 12.30ರ ಸಮಯದಲ್ಲಿ ಚಿರತೆಯೊಂದು ಜಿಂಕೆ ಮೇಲೆ ದಾಳಿ ನಡೆಸಿ ಕೊಂದು ಹಾಕಿತು ಎಂದು ಪ್ರತ್ಯಕ್ಷದರ್ಶಿ ಚಾಲಕರೊಬ್ಬರು ತಿಳಿಸಿದ್ದಾರೆ.

ಕಳೆದ ತಿಂಗಳು ಸೋಂಪುರ ಗ್ರಾಮಕ್ಕೆ ನುಗ್ಗಿದ್ದ ಚಿರತೆಯೊಂದು ಗಂಗಾಧರ ಎಂಬುವರ ಮನೆಯ ಹಸು ತಿಂದು ಹಾಕಿತ್ತು.

'ಸೋಂಪುರ ಗ್ರಾಮದ ಬಳಿ ರಾಷ್ಟ್ರೋತ್ಥಾನ ಶಾಲೆ, ಚಿನ್ಮಯಿ ಶಾಲೆ ಇದೆ. ಶ್ರೀಧರ ಗುಡ್ಡ ಬಳಿ ಇರುವ ಸರ್ಕಾರಿ ಶಾಲೆ ಮಕ್ಕಳು ಕೂಡ ಇದೇ ಅರಣ್ಯ ವಲಯದ ಮುಖಾಂತರ ಸಾಗಬೇಕಾಗಿದೆ. ಅರಣ್ಯ ಇಲಾಖೆ ಈಗಲೇ ಎಚ್ಚೆತ್ತುಕೊಂಡು ಚಿರತೆ ಸೆರೆಗೆ ಮುಂದಾಗಬೇಕು' ಎಂದು ಸ್ಥಳೀಯ ಮುಖಂಡ ದೇವರಾಜು ಆಗ್ರಹಿಸಿದ್ದಾರೆ.

ಚಿರತೆ ಹಿಡಿಯುವವರೆಗೆ ಮನೆಯ ಸುತ್ತಮುತ್ತಲೇ ತಿರುಗಾಡಬೇಕಾಗುತ್ತದೆ ಎಂದು ಕೋಡಿಪಾಳ್ಯ ನಿವಾಸಿ ಶಿವಕುಮಾರ್ ಬೇಸರ ಹೊರಹಾಕಿದರು.

ಚಿರತೆ ದಾಳಿಗೆ ಬಲಿಯಾದ ಜಿಂಕೆ.

ರಾಮೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಕಳೆದ ವರ್ಷ ಚಿರತೆ ದಾಳಿಗೆ ಹಸು, ನಾಯಿ ಹಾಗೂ ಕುರಿಗಳು ಬಲಿಯಾದ ಘಟನೆ ನಡೆದಿತ್ತು. ಅರಣ್ಯ ಇಲಾಖೆಯಿಂದ ಪುನುಗುಮಾರನಹಳ್ಳಿ ಬಳಿ ಇಟ್ಟಿದ್ದ ಬೋನಿಗೆ ಚಿರತೆ ಬಿದ್ದ ಪರಿಣಾಮ ಗಣಪತಿ ಹಳ್ಳಿ, ಪೆದ್ದಮಾರನಹಳ್ಳಿ, ಮಾಳಗೊಂಡನಹಳ್ಳಿ ಸುತ್ತಮುತ್ತಲ ಗ್ರಾಮಸ್ಥರು ನೆಮ್ಮದಿಯಿಂದ ಉಸಿರಾಡುವಂತಾಯಿತು. ಈಗ ಮತ್ತೆ ಚಿರತೆ ಸೆರೆಗೆ ಬೋನು ಅಳವಡಿಸಲಾಗಿದೆ.

ಕಗ್ಗಲೀಪುರ ಅರಣ್ಯಾಧಿಕಾರಿ ಗೋವಿಂದ ರಾಜು ಅವರನ್ನು ಸಂಪರ್ಕಿಸಲು 'ಪ್ರಜಾವಾಣಿ' ಪ್ರಯತ್ನಿಸಿದರೂ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ವಿಗ್ರಹ ಮಾರಾಟ: ಇಬ್ಬರ ಬಂಧನ

ಬೆಂಗಳೂರು: 'ಅದೃಷ್ಟ'ದ ಹೆಸರಿನಲ್ಲಿ ಕೆಲವು ವಿಗ್ರಹ ಹಾಗೂ ನಾಣ್ಯ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವೈಯಾಲಿಕಾವಲ್ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮುರು ತಾಲ್ಲೂಕಿನ ಭಾಗ್ಯಜ್ಯೋತಿ ನಗರದ ಮಹಮ್ಮದ್ ಮುಸ್ತಾಫ್ (38) ಹಾಗೂ ಮೊಳಕಾಲ್ಮುರು ಹಳೇ ಸಂತೆ ಮೈದಾನ ಎಸ್‌ಬಿಎಂ ಬಳಿಯ ನಿವಾಸಿ ಮೊಹಮ್ಮದ್ ಮುಬೀನ್ (44) ಬಂಧಿತರು.

'ಇಬ್ಬರೂ ಈ ವಿಗ್ರಹಗಳನ್ನು ಮನೆಗಳಲ್ಲಿ ಇಟ್ಟುಕೊಂಡರೆ ಅದೃಷ್ಟವೆಂದು ಹೇಳಿ ಮಾರಾಟ ಮಾಡಿ ಮೋಸ ಮಾಡುತ್ತಿದ್ದರು. ಬಿಂದಿಗೆ, ಬೈನಾಕ್ಯುಲರ್, ನಾಣ್ಯಗಳ ಜೊತೆಗೆ ಈ ವಿಗ್ರಹ ಸಹ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯುವತಿಯರು ವಶಕ್ಕೆ

ಬೆಂಗಳೂರು: ನಗರದ ಮಡಿವಾಳದ ಅಪಾರ್ಟ್‌ಮೆಂಟ್‌ನ ಮೇಲೆ ಎನ್‌ಸಿಬಿ ಅಧಿಕಾರಿಗಳು ಬುಧವಾರ ತಡರಾತ್ರಿ ದಾಳಿ ನಡೆಸಿದ್ದು, ಡ್ರಗ್ಸ್ ಸೇವನೆ ಮಾಡುತ್ತಿದ್ದ ಮೂವರು ಯುವತಿಯರನ್ನು ವಶಕ್ಕೆ ಪಡೆದಿದ್ದಾರೆ.

ಅಪಾರ್ಟ್‌ಮೆಂಟ್‌ಗೆ ಡ್ರಗ್ಸ್ ಪೂರೈಕೆ ಆಗುತ್ತಿದ್ದ ಮಾಹಿತಿ ತಿಳಿದು ದಾಳಿ ನಡೆಸಿದ ಅಧಿಕಾರಿಗಳಿಗೆ ಕೊಠಡಿಯಲ್ಲಿ ವಿವಿಧ ಮಾದರಿಯ ಮಾದಕ ವಸ್ತುಗಳು ಲಭಿಸಿವೆ.

ಎಫ್‌ಐಆರ್ ಅಪ್‌ಲೋಡ್: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲವು ಸೂಕ್ಷ್ಮ ಪ್ರಕರಣಗಳಲ್ಲಿ ಪ್ರಥಮ ವರ್ತಮಾನ ವರದಿಯನ್ನು (ಎಫ್‌ಐಆರ್) ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದರೆ, ಅದರ ಮಾಹಿತಿ ಆರೋಪಿಗೆ ಲಭ್ಯವಾಗುವ ಮತ್ತು ಅದರಿಂದ ಸಾಕ್ಷ್ಯ ನಾಶವಾಗುವ ಸಾಧ್ಯತೆ ಇರುತ್ತದೆ' ಎಂದು ಲೋಕಾಯುಕ್ತ, ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಈ ಸಂಬಂಧ ವಕೀಲ ಎಸ್. ಉಮಾಪತಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ಮಾಡಿತು.

ವಿಚಾರಣೆ ವೇಳೆ ಲೋಕಾಯುಕ್ತ ಪರ ವಕೀಲ ವೆಂಕಟೇಶ್ ಎಸ್. ಅರಬಟ್ಟಿ ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿ, 'ಸಮಾಜ ಮತ್ತು ಆರೋಪಿಗಳ ಹಕ್ಕುಗಳ ವಿಚಾರದಲ್ಲಿ ಸಮತೋಲನ ಕಾಯ್ದುಕೊಳ್ಳುವ ದೃಷ್ಟಿಯಿಂದ ಸೂಕ್ಷ್ಮ ಪ್ರಕರಣಗಳಿಗೆ ಸಂಬಂಧಿಸಿದ ಎಫ್‌ಐಆರ್ ಅನ್ನು ವಿಳಂಬವಾಗಿ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ. ಉಳಿದಂತೆ ಸುಪ್ರಿಂ ಕೋರ್ಟ್ ಆದೇಶದ ಅನುಸಾರ ಎಫ್‌ಐಆರ್ ದಾಖಲಿಸಿದ 24 ಗಂಟೆಯೊಳಗೆ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುವುದು' ಎಂದು ವಿವರಿಸಿದರು.

ಪ್ರಮಾಣಪತ್ರ ದಾಖಲಿಸಿಕೊಂಡ ನ್ಯಾಯಪೀಠ, 'ಲೋಕಾಯುಕ್ತರು ಕೆಲವೊಂದು ಪ್ರಕರಣಗಳಲ್ಲಿ ಗೋಪ್ಯತೆಯನ್ನು ಕಾಯ್ದುಕೊಳ್ಳಬೇಕಾಗುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿತು.

ಆಕ್ಷೇಪವೇನಿತ್ತು?: 'ಎಫ್‌ಐಆರ್ ದಾಖಲಾದ 24 ಗಂಟೆಗಳಲ್ಲಿ ಅದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂಬ ಸುಪ್ರೀಂಕೋರ್ಟ್ ಆದೇಶವನ್ನು ಸಿಬಿಐ ಸೇರಿ ಉಳಿದ ತನಿಖಾ ಸಂಸ್ಥೆಗಳು ಪಾಲಿಸುತ್ತಿವೆ. ಆದರೆ, ಲೋಕಾಯುಕ್ತ ಪೊಲೀಸರು ಪಾಲಿಸುತ್ತಿಲ್ಲ. ಇದರಿಂದ ಕಾನೂನು ಪ್ರಕ್ರಿಯೆಗೆ, ಫಿರ್ಯಾದುದಾರಿಗೆ, ಕಕ್ಷಿದಾರರು ಮತ್ತು ವಕೀಲರಿಗೆ ತೊಂದರೆಯಾಗುತ್ತಿದೆ' ಎಂದು ಅರ್ಜಿದಾರರು ಅಕ್ಷೇಪಿಸಿದ್ದರು.

ಕಪ್ಪುರಂಧ್ರ ವಿಸ್ಮಯ ಗುರುತಿಸಲು ಹಿಮಾಲಯನ್ ಟೆಲಿಸ್ಕೋಪ್ ನೆರವು

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಮಾರು 8.5 ಶತಕೋಟಿ ಜ್ಯೋತಿವರ್ಷಗಳ ದೂರದಲ್ಲಿ ಮೂಡಿರುವ, ನಕ್ಷತ್ರಗಳ ಅವಸಾನಕ್ಕೆ ಕಾರಣವಾಗುತ್ತಿರುವ ಬೃಹತ್ ಕಪ್ಪುರಂಧ್ರವನ್ನು ಮೊದಲಿಗೆ ಗುರುತಿಸಿ, ವಿಶ್ವವನ್ನು ಆ ಕುರಿತು ಜಾಗೃತಗೊಳಿಸುವಲ್ಲಿ ಲಡಾಖ್‌ನಲ್ಲಿ ಅಳವಡಿಸಿರುವ ಹಿಮಾಲಯನ್ ಟೆಲಿಸ್ಕೋಪ್ ಮತ್ತು ಭಾರತೀಯ ಖಗೋಳಶಾಸ್ತ್ರಜ್ಞರ ತಂಡ ಯಶಸ್ವಿಯಾಗಿದೆ.

ಅಪರೂಪದ ಈ ಘಟನೆಯನ್ನು ಅದರ ಅಗಾಧ ಸಾಮರ್ಥ್ಯದ ಪ್ರಕಾಶಮಾನದ ಪರಿಣಾಮ ಗುರುತಿಸಲಾಗಿದೆ. ಅದರ ಪ್ರತಿಫಲನವು ಸೂರ್ಯನ ಪ್ರಖರತೆಗಿಂತ 1000 ಟ್ರಿಲಿಯನ್‌ಗೂ ಹೆಚ್ಚು ಪ್ರಕಾಶಮಾನವಾಗಿತ್ತು. ಇದನ್ನು, 4 ಖಂಡಗಳಲ್ಲಿ ಅಳವಡಿಸಿದ್ದ ಹಾಗೂ ಬಾಹ್ಯಾಕಾಶದಲ್ಲಿನ ದೂರ ದರ್ಶಕ ಪರಿಕರಗಳಿಂದಲೂ ಗುರುತಿಸಲಾಗಿದೆ.

ಮೊದಲಿಗೆ ಈ ಬೆರಗನ್ನು ಅದು ಸಂಭವಿಸಿದ ಆರಂಭದಲ್ಲಿಯೇ ಗುರುತಿಸಿ ಜಗತ್ತಿಗೆ ಜಾಗೃತಗೊಳಿಸಲು ಕಾರಣವಾಗಿದ್ದು, ಲಡಾಖ್‌ನ ಹಾನ್ಲೆಯಲ್ಲಿ ಅಳವಡಿಸಿರುವ ಗ್ರೋಥ್–ಇಂಡಿಯಾ ಟೆಲಿಸ್ಕೋಪ್ ಆಗಿದೆ.

ಕುತೂಹಲ ಗುರುತಿಸುವ ಕಾರ್ಯ ಆರಂಭವಾಗಿದ್ದು ಫೆಬ್ರುವರಿ ಎರಡನೇ ವಾರದಲ್ಲಿ. ಕ್ಯಾಲಿಫೋರ್ನಿಯಾ ಮೂಲದ ವಿಕಿ ಟ್ರಾನ್ಸಿಯೆಂಟ್ ಸಂಸ್ಥೆಯು ಬೆಳಕಿನ ಹೊಸಮೂಲವನ್ನು ಮೊದಲಿಗೆ ಗುರುತಿಸಿತು. ಕ್ಷಿಪ್ರಗತಿಯಲ್ಲಿ ಪ್ರಕಾಶಿಸಿ, ಅಷ್ಟೇ ತ್ವರಿತವಾಗಿ ನಂದುತ್ತಿತ್ತು.

'ಇದು, ತಿಳಿದ ಕೂಡಲೇ ನಾವೂ ಕಾರ್ಯಪ್ರವೃತ್ತರಾದೆವು. ಗ್ರೋಥ್ ಇಂಡಿಯಾ ಟೆಲಿಸ್ಕೋಪ್ ಮೂಲಕ ಹೆಚ್ಚು ಗಮನಿಸಲು ಮುಂದಾದೆವು' ಎನ್ನುತ್ತಾರೆ ಐಐಟಿ ಬಾಂಬೆಯ ಪಿಎಚ್.ಡಿ ವಿದ್ಯಾರ್ಥಿ ಹರ್ಷಕುಮಾರ್.

'ನಮ್ಮ ಬಳಿಕ ಇತರೆ ಖಗೋಳ ಶಾಸ್ತ್ರಜ್ಞರು ಗಮನಿಸಿದರು' ಎಂದು ಬೆಂಗಳೂರಿನ ಭಾರತೀಯ ಖಗೋಳ ಭೌತಕೇಂದ್ರ (ಐಐಎ) ಮಾಜಿ ನಿರ್ದೇಶಕಿ ಜಿ.ಸಿ.ಅನುಪಮಾ ಹೇಳಿದರು.

ಖಗೋಳ ವಿಸ್ಮಯ ಗುರುತಿಸುವ ಕಾರ್ಯದಲ್ಲಿ ಐಯುಸಿಎಎ, ಎನ್‌ಸಿಆರ್‌ಎಗೆ ಸೇರಿದ ಪುಣೆ ಮೂಲದ 2 ತಂಡಗಳು ಅಧ್ಯಯನದಲ್ಲಿ ತೊಡಗಿದ್ದವು. ಖಗೋಳಶಾಸ್ತ್ರಜ್ಞರ ತಂಡದ ಅಧ್ಯಯನದ ಫಲಶ್ರುತಿ ವಿವರ ಗಳು ನೇಚರ್ ಮತ್ತು ನೇಚರ್ ಅಸ್ಟ್ರಾನಮಿ ಸಂಚಿಕೆಗಳಲ್ಲಿಯೂ ಪ್ರಕಟಗೊಂಡಿದೆ .

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Agricultural Land Converted

General

WANTED
AGRICULTURAL LAND
(50 - 100 ACRES)
within 5 - 10 K.M. from
1. Tondebhavi
2. Gauribidanur
3. Channapatna
4. Maddur
Genuine Owners or Agents may contact: Secretary,
THE IDEAL HOMES CO-OPERATIVE BUILDING SOCIETY LIMITED,
Ideal Homes Co-Operative Building Society Ltd, Rajarajeswari Nagar, Mysore Road, Bangalore - 98
Ph: 080-28600892
Mob: 9901500872

General

General

WE DO Agriculture Land Conversions, Change of Land Use,Phodi, Property Documentation Services and Marketable Title.Call Verna Developers, Barton Centre, MG-Road, Bengaluru. 9916310226/ 9620253180. www.vernadevelopers.com

Sites

Nagarabhavi

WANTED SITE 30X40, 40X60, 50X80 Nagarbhavi RHCS Layout ITI, MPM, NGF Vishweshwariah Layout BSK 6th Stage: 9008418631

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commercial Building

Koramangala

HOTEL FOR Sale: 19 Rooms BDA Property 3 star construction 2.75 lac Rental income in Koramangala 3.50 CR- 9449521384/ 7259132674

General

South

EXCELLENT 41×79 South facing site MPM Layout , Nagarabhavi Bangalore Broker excuse contact 9731439825

House

Yelahanka

SEMI FURNISHED, 2 BHK- 1 Unit, 1 BHK- 4 Units, Near Nitte Meenakshi, BMSIT, Manipal Medical College:- 9845014364

Sites

Anjanapura

ANJANAPURA SITE No.648 for Sale, 30x40 West Facing near 80ft Road. Good Location 9845132011, 9663554448

Hosur Road

SALE 1575 Sqft Sites at Begur. North Facing. 1km from Hosur Road Metro Station. Bank Loans: 7204020070

Hennur

30X40 WF, BBMP A Khatha, DC Converted, Geddalahalli Unity Enclave Rs. 7000/- Negotiable. Contact: 9845206422

Manyata Tech Park

SALE MANYATA Residency Techpark, Hebbal 50x80, 90x60, 80x120 sites, East facing, contact. Malnad. 9844092859/ 9632377775.

Sadashiva Nagar

WANTED SITES 30x40 40x60 90x60 and 4 BHK Flats Sanjyanagar Dollars Colony Malleshwarm Yelhanka, Judicel Layout: 7259941919

Vishweshwariah Layout

BDA SITE Sale Vishweshwaraiah Layout 6th Block East And North Face 40ft Road 9500 Negotiable Contact: 8892901567/ 9341733480

PUBLIC NOTICE

PUBLIC NOTICE
Public are hereby informed that my clients have negotiated with Sri. DEVANANDANA MOHAN also known as M. DEVANANDANA, Smt. M. JAYASHREE, Ms. KHUSHI DEV and Master KANISHK DEV to purchase site with building having ground floor bearing CITB No. 783, situated at I Phase Sarakki Extension, now on 15th Cross, J.P. Nagar, Bengaluru - 560078, bearing BBMP PID No.57-50-783 measuring East to West 80 feet, North to South 120 feet and bounded on:- East by-Property No.782, West by -Property No.784, North by -Property No.752, South by- 15th Cross Road.
If anyone has any claim on this property, they may lodge their claim with supporting documents within 7 days from the date of publication of this notice and if no claims are received, my clients will proceed to purchase the property on the premises that there are no claims and any claim received thereafter will not be entertained.
B. N. JAYADEVA, Advocate, Unit No.203, II Floor, Brigade Links, No.54/1,1st Floor, Seshadripuram, Bangalore-560 020.

PUBLIC NOTICE
BE IT KNOWN to the General Public that my client has negotiated to purchase the Immovable Property being Residential Land and Old Building bearing Municipal Corporation BBMP No.14, BBMP PID No.86-24-14, Situated at Ashoka Road, BBMP M.S. Nagar Ward No.59, Bangalore-560084. The Property measure East to West 24.3840 Meters and North to South 16.7640 Meters, totally measuring 408.7732 Square Metersor 4404 Sq. Feet with old existing building thereon and bounded on the: East by: No.47, Ashoka Road, West by: No.43 Ashoka Road, North by : Private Property and South by : Ashoka Road from its sole and the absolute lawful owner Mrs. EUGENIA THILAKAVATHY PAULUS, W/o Mr. Shailesh Kumar Vishnu Musley and daughter of late Mrs. Vimala Paulus nee Williams, residing at No.45 (Old No.14), Ashoka Road, ST.Thomas Town Post, Bengaluru - 560 084, who claims to have acquired the said property from its previous Owner Mrs. Vimala Paulus nee Williams, through a registered Gift Deed dated 18-06-2002, which property was originally acquired and owned by late Mr. Rajamani Williams the father of Mrs. Vimala Paulus nee Williams.
Other than above named Seller/owner/ Agreement Holder Any person/s, Financial Institutions, Banks, Societies, etc., having/ asserting any sort of right, title and or interest/claim over the captioned property may respond in writing with documentary proof of his/her/their title or objections, to the under signed, within TEN DAYS from the date of this publication after which date my clients will proceed to conclude the Purchase of the captioned property on the basis that there are no impediments to the sale of the captioned property.
T.CHIKKE GOWDA, B.Com, LLB ADVOCATE
2, 1st Floor, Dr.Kuvempu Road R.S.Palya, M.S.Nagar Post Bangalore-560 033
Ph.(O)080-42072881 (M) 9341221252
email- tcgowda62@gmail.com

DH DECCAN HERALD ಪ್ರಜಾವಾಣಿ
REAL ESTATE
BOOK YOUR PROPERTY AD IN DECCAN HERALD ALL KARNATAKA + PRAJAVANI BENGALURU
ON FRIDAY + SATURDAY + SUNDAY
@ 2400/-*
FOR 15 WORDS
conditions apply*
For More Details Contact:
9886213331 | 9731810277
9901641752 | 9845114560
080- 45557163 | 45557164

ADMISSION CORNER
NARGUND COLLEGE OF PHARMACY
ADMISSIONS OPEN 2022 - 2023 Intake
For B. Pharm, D. Pharm and Pharm. D
Limited Seats Only, Hurry Up!!
Call Now: 9739867524
2nd main, Dattatreyanagar, BSK 3rd stage, Bangalore-85
080 26720604 | 7019425622

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

TOURS & TRAVEL

Travel

KERALA TEMPLE Tour 23 to 28 January 2023. Contact: Ramachandra Swamy, Mob: 9945715162.

JOB OPPORTUNITIES

Multiple Vacancy

OPPORTUNITY OF Career & Income for Retired Officials, Bankers, Teachers, CAs, Professionals, Homemakers. Call: 8095301555

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Teachers/ Professors

IAS COACHING centre at konanakunte cross requires faculty for GENERAL STUDIES, CSAT and OPTIONALS. Contact 9980883950

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Lost

LOST
I, Babu M, R/at #186, Kaveri Nagar, Kavalbyrasandra, Bangalore - 560 032, have lost my Original Sale Deed (Document No. Identification of Property Site No. 37, vide document No. BNS-1-13898-2018-19, Book-I, CD No. BNSD675, dated: 28.11.2018 while in transit.
Finders please contact: 98444 34019

Change of Name

I, DINESH SHIVASHANKARAIAH have changed my name to DINESH BANGALORE SHIVASHANKARAIAH vide affidavit dated: 1/12/2022 Before Notary Manohar Jeerige Bangalore.

I, TAMBE ARVIND HANUMANT, Rank- Naik 14839619P, R/a Nirgudi, Phaltan, Satara, Maharashtra- 415523, declare that my wife's name KARISHMA has been changed to KARISHMA ARVIND TAMBE vide affidavit dated 30.11.2022 before Notary B.M. Chandrashekar, Bangalore.

I, IMTHIYAZ Pasha S/o.Late S.Sardar aged about 43 years Residing at Chinnasandra Village & Post, Kasaba Hobli, Chintamani Chikkaballapur Dist. Have changed my name to S. Imtiyaz Pasha vide affidavit dated 28.11.2022 before Notary Manjunatha Reddy Henceforth I Shall be called as S.Imtiyaz Pasha only

I, AFSHAD Ahmed Son of Zameer Ahmed, R/o 872, FJS Mansion, 4th Floor, Jayanagar 4th 'T' Block, Bangalore-41 have changed my name to AFSHAD AHMED B Z (Bajesab Zameer Ahmed), Affidavit dated: 01/12/2022. Notary: B.M.Chandrashekar

I, SATISH, Residing at #9/12/66 Near Ganesh Mandir, Vidya nagar Colony, Bidar District, Bidar, Karnataka State. I, have changed my name to SATISH MEHTRE Vide affidavit dated10/11/2022 Sworn before Notary Khadme Umesh, Bidar

Vydehi Institute of Dental Sciences & Research Centre, Bengaluru
#82, EPIP Area, Whitefield, Bengaluru - 560 066.
Tel: 080 49069000 - Website:www.vims.ac.in
PUBLIC NOTICE
Public are hereby informed that Vydehi Institute of Dental Sciences & Research Centre, Bengaluru is permanently destroying Outpatients Medical Record Dental Cards(OPD Cards) from 2003 to till 31st December 2015.
If you require any Outpatients Medical Record Dental Cards (OPD Cards) during the above said period, you are hereby requested to submit a written application along with the necessary ID proof and documents addressed to Dental College Principal on or before 31.12.2022.
For more information please contact Dental College Principal at 080-49069000 Ext No-1124, Email: vids_principal@vimsmail.com, Manager Medical Records Department (MRD) at 080-49069000 Ext No-1207, Email: ashok913@vimsmail.com.
Date: 02.12.2022
Sd/- PRINCIPAL

ಪಕ್ಷಿಗಳ ಸೀಟಿ: ಮಾಲೀಕನಿಗೆ ಥಳಿತ

ಬೆಂಗಳೂರು: 'ಹೆಂಡತಿಗೆ ಶಿಳ್ಳೆ ಹಾಕಿ ಚುಡಾಯಿಸುತ್ತಿದ್ದಾನೆ' ಎಂಬ ತಪ್ಪು ಗ್ರಹಿಕೆಯಿಂದ ಪಕ್ಕದ ಕಟ್ಟಡದ ನಿವಾಸಿಗಳು ಬ್ಯಾಂಕ್ ಉದ್ಯೋಗಿ ಶೋಬಿನ್ ಬಾನು ಎಂಬುವವರ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದು, ಹುಳಿಮಾವು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬನ್ನೇರಘಟ್ಟ ರಸ್ತೆಯ ರುಕ್ಮಯ್ಯ ಲೇಔಟ್‌ನ ನಿವಾಸಿ ಶೋಬಿನ್ ಅವರು ಮನುಷ್ಯರಂತೆಯೇ ಶಿಳ್ಳೆ ಹಾಕುವ ಕಾಕ್‌ಟೇಲ್ ಪಕ್ಷಿಗಳನ್ನು ಸಾಕಿದ್ದರು. ಅವುಗಳು ಮನುಷ್ಯರ ಹಾಗೆಯೆ ಸೀಟಿ ಹೊಡೆಯುತ್ತವೆ. ಬಾನು ಅವರೇ ಪತ್ನಿಯನ್ನು ನೋಡಿ ಸೀಟಿ ಹೊಡೆಯುತ್ತಿದ್ದಾರೆ ಎಂದು ಭಾವಿಸಿ ಪಕ್ಕದ ನಿವಾಸಿಗಳು ಹಲ್ಲೆ ನಡೆಸಿದ್ದಾರೆ. ಮಚ್ಚಿನ ಹಿಡಿಯಿಂದ ಥಳಿಸಿದ್ದು ತಲೆಗೆ ಗಾಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರು ಆಧರಿಸಿ ಮನೆಗೆ ತೆರಳಿ ಪರಿಶೀಲನೆ ನಡೆಸಿದಾಗ ಪಕ್ಷಿಗಳು ಸೀಟಿ ಹೊಡೆಯುತ್ತಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದರು.

ಭಯೋತ್ಪಾದನೆ ಕೃತ್ಯಕ್ಕೆ ಹಣ ಹೊಂದಿಸಲು ಡಕಾಯತಿ

ಮೂವರಿಗೆ ಏಳು ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದಕ ಕೃತ್ಯಗಳಿಗೆ ಹಣ ಕ್ರೋಢೀಕರಿಸುವ ಸಲುವಾಗಿ ನಗರ ವ್ಯಾಪ್ತಿಯಲ್ಲಿ ಡಕಾಯತಿ ಮಾಡಿ ಬಂಧನಕ್ಕೊಳಗಾಗಿದ್ದ ಪಶ್ಚಿಮ ಬಂಗಾಳದ ಮೂವರು ಅಪರಾಧಿಗಳಿಗೆ ನಗರದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಮಹತ್ವದ ತೀರ್ಪು ನೀಡಿದೆ.

ಈ ಕುರಿತ ಪ್ರಕರಣವನ್ನು ವಿಚಾರಣೆ ನಡೆಸಿದ ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಿ.ಎಂ. ಗಂಗಾಧರ ಅವರು, ಮೊರ್ಷಿದಾಬಾದ್ ಜಿಲ್ಲೆಯ ದಿಫಿರ್‌ಪಹಾರ್ ಗ್ರಾಮದ ನಜೀರ್ ಶೇಖ್ ಅಲಿಯಾಸ್ ಪತ್ಲಾ ಅನಸ್ (25), ಇದೇ ಜಿಲ್ಲೆಯ ಇಚಖ್ಲಿ ಗ್ರಾಮದ ಮೊಸರಫ್ ಹೊಸ್ಸೈನ್ (22) ಹಾಗೂ ಬೀರ್‌ಭುಮ್ ಜಿಲ್ಲೆಯ ಮುಲುಕ್ ಶಾಂತಿ ಪಲ್ಲಿ ಗ್ರಾಮದ ಹಬೀಬುರ್ ರಹಮಾನ್ ಅಲಿಯಾಸ್ ಎಸ್.ಕೆ.ಹಬೀಬುರ್‌ಗೆ (28) ಶಿಕ್ಷೆ ವಿಧಿಸಿದೆ.

ವಿಚಾರಣೆ ವೇಳೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, 'ಮೂವರೂ ಆರೋಪಿಗಳ ಬಾಂಗ್ಲಾದ ಜಮಾತ್ ಉಲ್ ಮುಜಾಹಿದ್ದೀನ್ (ಜೆಯುಎಂ) ಸಂಘಟನೆಯ ನಂಟು ಹೊಂದಿದ್ದಾರೆ. ಭಾರತದಲ್ಲೂ ಜೆಎಂಬಿಯ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶದಿಂದ ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಡಕಾಯತಿಗಳನ್ನು ಎಸಗಿದ್ದಾರೆ. ಈ ಮೂಲಕ ಹಣ ಸಂಗ್ರಹಿಸುವ ಕೃತ್ಯಗಳಲ್ಲಿ ತೊಡಗಿದ್ದರು ಮತ್ತು ತನಿಖೆಯ ವೇಳೆ ಸ್ಫೋಟಕ ವಸ್ತುಗಳನ್ನು ಹೊಂಚಿಕೊಂಡು ರಾಕೆಟ್ ಲಾಂಚರ್ ಪರೀಕ್ಷಿಸಿದ್ದಾರೆ' ಎಂಬ ಆರೋಪಗಳ ಕುರಿತಂತೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.

ಪ್ರಾಸಿಕ್ಯೂಷನ್ ವಾದವನ್ನು ಪುರಸ್ಕರಿಸಿರುವ ನ್ಯಾಯಾಲಯ, 'ಆರೋಪಿಗಳು ಭಾರತೀಯ ದಂಡ ಸಂಹಿತೆ–1860 ಮತ್ತು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ–1967 ಹಾಗೂ ಶಸ್ತ್ರಾಸ್ತ್ರ ಕಾಯ್ದೆ–1959ರ ವಿವಿಧ ಕಲಂಗಳ ಅನುಸಾರ ಅಪರಾಧ ಎಸಗಿರುವುದು ಸಾಬೀತಾಗಿದೆ' ಎಂಬ ತೀರ್ಮಾನದೊಂದಿಗೆ ಶಿಕ್ಷೆ ಮತ್ತು ಗರಿಷ್ಠ ಐದು ಸಾವಿರದಂತೆ ದಂಡ ವಿಧಿಸಿದೆ.

2019–20ರಲ್ಲೇ ದೋಷಾರೋಪ ಪಟ್ಟಿ

ಆರೋಪಿಗಳು 2018ರಲ್ಲಿ ನಗರದ ಕೆ.ಆರ್.ಪುರ, ಕೊತ್ತನೂರು ಮತ್ತು ಅತ್ತಿಬೆಲೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಡಕಾಯತಿ ನಡೆಸಿ ಹಣ, ಬೆಲೆಬಾಳುವ ಎಲೆಕ್ಟ್ರಾನಿಕ್ ವಸ್ತುಗಳನ್ನು ದೋಚಿದ್ದರು. ಚಿಕ್ಕಬಾಣಾವರ ವ್ಯಾಪ್ತಿಯ ಮನೆಯೊಂದರಲ್ಲಿ ಆಶ್ರಯ ಹೊಂದಿದ್ದರು. ಭಯೋತ್ಪಾದನಾ ಸಂಘಟನೆಯ ನಂಟು ಹೊಂದಿದ ಆಧಾರದಲ್ಲಿ ತನಿಖೆ ಕೈಗೊಂಡಿದ್ದ ಎನ್‌ಐಎ ತನಿಖಾಧಿಕಾರಿಗಳು ಆರೋಪಿಗಳಿಂದ ಅಪಾರ ಪ್ರಮಾಣದ ಎಲೆಕ್ಟ್ರಾನಿಕ್ ವಸ್ತುಗಳು, ರಾಸಾಯನಿಕ ಉಪಕರಣಗಳು, ಬಾಂಬ್‌ಗಳನ್ನು ತಯಾರಿಸಲು ಬಳಸುವ ಕಂಟೈನರ್, ಸುಧಾರಿತ ಸ್ಫೋಟಕ ಸಾಧನ, ಡಿಜಿಟಲ್ ಕ್ಯಾಮೆರಾ ಮತ್ತು ಕೈಬರಹದ ದಾಖಲೆಗಳನ್ನು ವಶಪಡಿಸಿಕೊಂಡು 2019 ಮತ್ತು 2020ರಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಡಿಸೈನ್ ಸಂತೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.

ಡಿಸೈನ್ ಸಂತೆ: ಕರಕುಶಲ ವಸ್ತುಗಳ ಪ್ರದರ್ಶನ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಡಿಸೈನ್ ಸಂತೆ'ಯಲ್ಲಿ (ವಿನ್ಯಾಸ) ಲೈವ್ ಆರ್ಟ್ ಮಳಿಗೆ ಸೇರಿದಂತೆ ಕುಂಬಾರಿಕೆ ಕಲೆ ಎಲ್ಲರ ಕಣ್ಮನ ಸೆಳೆದವು.

ಡಿಸೈನ್ ಸಂತೆಯಲ್ಲಿ ಆಭರಣಗಳು, ಸ್ಟಿಕ್ಕರ್‌ಗಳು, ಪೋಸ್ಟ್‌ಕಾರ್ಡ್, ಟಿ–ಶರ್ಟ್ ಮತ್ತು ವಿವಿಧ ಉತ್ಪನ್ನಗಳನ್ನು ಮಾರಾಟ ಮಾಡುವ 10ಕ್ಕೂ ಹೆಚ್ಚು ಮಳಿಗೆಗಳನ್ನು ವಿದ್ಯಾರ್ಥಿಗಳೇ ಸ್ಥಾಪಿಸಿದ್ದರು. ಇದು ಉದಯೋನ್ಮುಖ ಕಲಾವಿದರು ಮತ್ತು ವಿನ್ಯಾಸ ವಿಭಾಗದವರಿಗೆ ಅಮೂಲ್ಯವಾದ ಕಲಿಕೆಯ ಅನುಭವ ನೀಡಿತು. ಈ ಕಾರ್ಯಕ್ರಮದಿಂದ ನಾಯಕತ್ವದ ಕೌಶಲ ಹೆಚ್ಚಿಸಿಕೊಳ್ಳಲು ಉತ್ತಮ ವೇದಿಕೆಯಾಗಿದೆ ಎಂದು ಸಂಘಟನಾ ಸಮಿತಿಯ ವಿದ್ಯಾರ್ಥಿನಿ ದೇವಾಂಶಿ ತಿಳಿಸಿದರು.

'ಡಿಸೈನ್ ಸಂತೆ'ಯನ್ನು ವಿದ್ಯಾರ್ಥಿಗಳ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಇದರಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಹ ಕುಲಾಧಿಪತಿ ಪ್ರೊ.ಡಿ.ಜವಾಹರ್ ಅವರ ಪೋಷಕತ್ವದಲ್ಲಿ ಕುಲಪತಿ ಡಾ.ಸೂರ್ಯಪ್ರಸಾದ್ ಜೆ, ಕುಲಸಚಿವರಾದ ಡಾ. ಕೆ ಎಸ್ ಶ್ರೀಧರ್, ವಿದ್ಯಾರ್ಥಿ ವ್ಯವಹಾರಗಳ ಡೀನ್, ಡಾ. ವಿ. ಕೃಷ್ಣ, ಮತ್ತು ವಿನ್ಯಾಸ ವಿಭಾಗದ ನಿರ್ದೇಶಕಿ ಪ್ರೊ.ಚಿತ್ರಾ ವಿಶ್ವನಾಥನ್ ಇದ್ದರು.

ಗಮನ ಸೆಳೆದ ವರ್ಣಚಿತ್ರ ಮತ್ತು ಛಾಯಾಚಿತ್ರ ಪ್ರದರ್ಶನ

ಮಹಿಳಾ ಭಾವನೆಗಳ ತಾಕಲಾಟಕ್ಕೆ ಚಿತ್ರರೂಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನೊಳಗಿನ ಮನಸ್ಸಿನ ಭಾವನೆಯ ತಾಕಲಾಟ, ಸಮಾಜ ವಿಧಿಸಿರುವ ಕಟ್ಟುಪಾಡುಗಳನ್ನು ಸದ್ದಿಲ್ಲದೇ ಕಿತ್ತೊಗೆಯುವ ಮನಃಸ್ಥಿತಿಗಳನ್ನೇ ಚಿತ್ರಗಳಾಗಿ ರೂಪಿಸಿದ್ದಾರೆ ಮೂವರು ಕಲಾವಿದ ಸ್ನೇಹಿತೆಯರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಶೈಲಜಾ. ಎನ್. ಗಿರಿಧರ್, ಟಿ.ಎಸ್. ಶಶಿಕಲಾ, ವಿಜಯಲಕ್ಷ್ಮಿ ಸೆಂಥಿಲ್ ಕುಮಾರ್ ಅವರ ವರ್ಣಚಿತ್ರ ಮತ್ತು ಛಾಯಾಚಿತ್ರಗಳ ಪ್ರದರ್ಶನ 'ಅಸ್ಮಿತೆ'ಯಲ್ಲಿ ಸ್ನೇಹಿತೆಯರ ಬದುಕು–ಭಾವನೆಗಳು ಅನಾವರಣಗೊಂಡಿವೆ.

ಕೌಟುಂಬಿಕ ಚೌಕಟ್ಟಿನಲ್ಲೇ ಬಾಲ್ಯ, ಯೌವನವನ್ನು ಕಳೆದ ವಿಜಯಲಕ್ಷ್ಮಿ ಅವರು 26ನೇ ವಯಸ್ಸಿಗೆ ತಂದೆ–ತಾಯಿ ಹೊರತಾದ ಹೊರಜಗತ್ತಿಗೆ ತೆರೆದುಕೊಂಡಾಗ ಸಮಾಜದ ಕ್ರೌರ್ಯವನ್ನು ಕಂಡು ಬೆಚ್ಚಿದ್ದರು. ಇಂತಹ ಸಮಯದಲ್ಲಿ ತಮ್ಮ ರಕ್ಷಣೆಗೆ ಕಂಡುಕೊಂಡ ಆಯುಧ ಸೇಫ್ಟಿಪಿನ್. ಅದೇ ಸೇಫ್ಟಿಪಿನ್ ಬಳಸಿಕೊಂಡು ಅವರು ಮಹಿಳೆಯ ವಿವಿಧ ಭಂಗಿಗಳನ್ನು ಚಿತ್ರಿಸಿದ್ದಾರೆ. ಮಕ್ಕಳ ಜತೆಗಿನ ಆಟ, ಬೇಸರದ ನೋಟ, ಆತ್ಮಹತ್ಯೆ ಮತ್ತಿತರ ಸಂದರ್ಭಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

'ಅಸ್ಮಿತೆ' ಸಂಸ್ಥೆ ಆಯೋಜಿಸಿದ್ದ ಚಿತ್ರಕಲಾ ಪ್ರದರ್ಶನದಲ್ಲಿ ಮಹಿಳೆಯರು ವಿಜಯಲಕ್ಷ್ಮಿ ಅವರ ಸೇಫ್ಟಿಪಿನ್ ಕಲಾಕೃತಿ ವೀಕ್ಷಿಸಿದರು. –ಪ್ರಜಾವಾಣಿ ಚಿತ್ರ.

ಮೈಸೂರಿನ ಸಂಸ್ಥೆಯೊಂದರಲ್ಲಿ ಶಿಕ್ಷಕಿಯಾಗಿರುವ ಶೈಲಜಾ ಅವರು ಒಬ್ಬ ಮಹಿಳೆಯಾಗಿ ಚಿತ್ರಗಳ ಮೂಲಕ ತನ್ನನ್ನು ತಾನು ಸಮಾಜಕ್ಕೆ ಪರಿಚಯಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಪ್ರಕೃತಿ, ದೈವ, ಪ್ರೀತಿ ಮತ್ತಿತರ ಹೃದಯಕ್ಕೆ ಹತ್ತಿರವಾದ ಸಂಗತಿಗಳು ಚಿತ್ರಗಳ ರೂಪ ಪಡೆದಿವೆ.

ಕೆಸರಿನಲ್ಲಿ ಅರಳಿದರೂ ಕಲ್ಮಶವಿಲ್ಲದೇ ಗಮನ ಸೆಳೆಯುವ ಕಮಲದ ಹೂ ಶಶಿಕಲಾ ಅವರ ಪ್ರತಿರೂಪ. ಕಮಲವನ್ನೇ ಮುಖ್ಯ ವಿಷಯವಾಗಿ ಇಟ್ಟುಕೊಂಡ ಅವರು ವಿಭಿನ್ನ ಕಲಾಕೃತಿಗಳನ್ನು ರಚಿಸಿದ್ದಾರೆ. ರಾಷ್ಟ್ರೀಯ ಪುಷ್ಪಕ್ಕೆ ದೈವತ್ವದ ಸ್ವರೂಪ ನೀಡಿದ್ದಾರೆ.

ಚಿತ್ರಕಲಾ ಪ್ರದರ್ಶನಕ್ಕೆ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಚಾಲನೆ ನೀಡಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಎಸ್.ಎನ್.ಶಶಿಧರ, ಕಲಾವಿದ ಪ್ರೊ.ಕೆ.ಎಸ್.ಅಪ್ಪಾಜಯ್ಯ ಇದ್ದರು.

465 ಮಂದಿಗಷ್ಟೇ ನೇಮಕಾತಿ: ಅಭ್ಯರ್ಥಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗೆ ಕೆಪಿಎಸ್‌ಸಿ ಮೂಲಕ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ 503 ಅಭ್ಯರ್ಥಿಗಳಿಗೆ ಆದೇಶ ಪ್ರತಿ ನೀಡದೇ ಇಲಾಖೆಯ ಆಯುಕ್ತರು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಅಭ್ಯರ್ಥಿಗಳು ಆರೋಪಿಸಿದರು.

'ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆಯ ಐಟಿಐ 23 ಕೇಡರ್‌ಗಳ 1,520 ಕಿರಿಯ ತರಬೇತಿ ಅಧಿಕಾರಿಗಳ ನೇಮಕಾತಿಗಾಗಿ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) 2018 ಡಿಸೆಂಬರ್ 27ರಿಂದ 2019 ಜನವರಿ 3ರವರೆಗೆ ವಿವಿಧ ಕೇಡರ್‌ಗಳಿಗೆ ತಲಾ 400 ಅಂಕಗಳ ಪರೀಕ್ಷೆ ನಡೆದಿತ್ತು. 2021ಸೆಪ್ಟೆಂಬರ್ 23ರಂದು ಅಂತಿಮ ಆಯ್ಕೆ ಪಟ್ಟಿಯಲ್ಲಿ 946 ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಅದರಲ್ಲಿ 465ಕ್ಕೂ ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶ ನೀಡಲಾಗಿದೆ. ಇನ್ನೂ 503 ಅಭ್ಯರ್ಥಿಗಳಿಗೆ ಅಧಿಕಾರಿಗಳು ನೇಮಕಾತಿ ಆದೇಶ ನೀಡದೇ ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ' ಎಂದು ನೊಂದ ಅಭ್ಯರ್ಥಿಗಳು ಗುರುವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಉತ್ತಮ ಅಂಕ ಪಡೆದ ಅಭ್ಯರ್ಥಿಗಳು ತಮ್ಮ ಎಲ್ಲಾ ಮೂಲ ದಾಖಲೆಗಳನ್ನು ನೀಡಿ ತಮ್ಮ ಕೆಲಸಗಳನ್ನು ಬಿಟ್ಟು, ನೇಮಕಾತಿ ಆದೇಶಕ್ಕಾಗಿ ಕಾಯುತ್ತಿದ್ದೇವೆ. ಅಂದು ಎಲ್ಲ ದಾಖಲೆಗಳು ಸರಿಯಾಗಿವೆ ಎಂದು ಪ್ರಮಾಣೀಕರಿಸಿದ್ದರೂ, ಆ ಬಳಿಕ ಸೇವಾನುಭವ ಪ್ರಮಾಣಪತ್ರದಲ್ಲಿ 'ನಿರ್ದಿಷ್ಟ ಕಾರ್ಯಕ್ಷೇತ್ರದ ಕಾರ್ಯಾನುಭವದಲ್ಲಿ ಸ್ಪಷ್ಟತೆ ಇಲ್ಲ' ಎಂದು ಕಾರಣ ಹೇಳಿ ನೇಮಕಾತಿ ಆದೇಶ ನೀಡುತ್ತಿಲ್ಲ. ಈ ಬಗ್ಗೆ ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ತಿಳಿಸದೆ, ಕಾರ್ಖಾನೆ ಉಪನಿರ್ದೇಶಕರಿಂದ ಸೇವಾನುಭವ ಪತ್ರ ಪರಿಶೀಲನೆಗೆ ಸೂಚಿಸದೆ ಅನ್ಯಾಯ ಮಾಡಲಾಗುತ್ತಿದೆ' ಎಂದು ದೂರಿದರು.

'ವಿವಿಧ ಕೇಡರ್‌ಗಳಲ್ಲಿ ಉತ್ತಮ ಅಂಕಗಳಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ ಕಡಿಮೆ ರ್‍ಯಾಂಕ್ ಪಡೆದ ಅಭ್ಯರ್ಥಿಗಳಿಗೆ ಈಗಾಗಲೇ ಆದೇಶ ಪ್ರತಿ ನೀಡಲಾಗಿದೆ. ಇವರಿಗೆ ಯಾವುದೇ ರೀತಿಯ ಕೌನ್ಸೆಲಿಂಗ್ ಮಾಡದೇ ಅಭ್ಯರ್ಥಿಗಳಿಗೆ ಬೇಕಾದ ಸ್ಥಳಗಳಲ್ಲಿ ನಿಯೋಜನೆ ಮಾಡಲಾಗಿದ್ದು, ಇದರಲ್ಲಿ ಅಕ್ರಮ ನಡೆದಿರುವ ಅನುಮಾನವಿದೆ. ಕೂಡಲೇ ಸರ್ಕಾರ ಮಧ್ಯ ಪ್ರವೇಶಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ದಯಾಮರಣಕ್ಕಾಗಿ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಅಭ್ಯರ್ಥಿಯೊಬ್ಬರು ತಿಳಿಸಿದರು.

ತ್ವರಿತ ಇತ್ಯರ್ಥ ಕೋರಿ ಶೀಘ್ರ ಅರ್ಜಿ

'ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕೆಲ ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ(ಕೆಎಟಿ) ಹಲವು ಪ್ರಕರಣಗಳನ್ನು ದಾಖಲಿಸಿದ್ದಾರೆ. ಈ ಎಲ್ಲಾ ಪ್ರಕರಣಗಳನ್ನು ನ್ಯಾಯಾಲಯ ಒಂದೇ ಬಾರಿ ಇತ್ಯರ್ಥಗೊಳಿಸಬೇಕು ಎಂದು ಸರ್ಕಾರದ ಮೂಲಕ ಎರಡು ದಿನಗಳಲ್ಲಿ ಅರ್ಜಿ ಸಲ್ಲಿಸಲಾಗುವುದು.

ಈಗಾಗಲೇ 400ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಂತಿಮ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು' ಎಂದು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಆಯುಕ್ತೆ ಕೆ. ಜ್ಯೋತಿ 'ಪ್ರಜಾವಾಣಿ'ಗೆ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಚೇರಿ,
ಎನ್.ಆರ್ ಚೌಕ, ಬೆಂಗಳೂರು – 560 002.

ಸಂಖ್ಯೆ: ಮು.ಆ.(ಪಿಎಸ್‌ಆರ್)/2983/2022–23 ದಿನಾಂಕ: 24.11.2022

ಸಾರ್ವಜನಿಕ ಪ್ರಕಟಣೆ

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯದ ಅಧಿಸೂಚನೆ **ಸಂಖ್ಯೆ: ಜಿಎಸ್‌ಆರ್ 571(ಇ) ದಿನಾಂಕ: 12–08–2021ರಂತೆ ಏಕ ಬಳಕೆ ಪ್ಲಾಸ್ಟಿಕ್‌ನ ಉತ್ಪನ್ನ, ಅಮದು, ಸಂಗ್ರಹಣೆ, ವಿತರಣೆ, ಮಾರಾಟ ಹಾಗೂ ಬಳಕೆಯನ್ನು ದಿನಾಂಕ: 01–07–2022ರಿಂದ ನಿಷೇಧಿಸಲಾಗಿರುತ್ತದೆ.**

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮ 2016ರ ನಿಯಮ 4(2)ಕ್ಕೆ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿದ್ದು, **ಅದರಂತೆ ಪಾಲಿಸ್ಟೈರಿನ್ ಮತ್ತು ವಿಸ್ತರಿಸಿದ ಪಾಲಿಸ್ಟೈರಿನ್ ಉತ್ಪನ್ನಗಳನ್ನೊಳಗೊಂಡಂತೆ ಈ ಕೆಳಕಂಡ ಏಕ ಬಳಕೆ ಪ್ಲಾಸ್ಟಿಕ್‌ನ ಉತ್ಪನ್ನ, ಅಮದು, ಸಂಗ್ರಹಣೆ, ವಿತರಣೆ, ಮಾರಾಟ ಹಾಗೂ ಬಳಕೆಯನ್ನು ದಿನಾಂಕ: 01.07.2022ರಿಂದ ನಿಷೇಧಿಸಲಾಗಿರುತ್ತದೆ.**

(ಅ) ಪ್ಲಾಸ್ಟಿಕ್ ಕಡ್ಡಿ ಒಳಗೊಂಡ ಇಯರ್ ಬಡ್, ಪ್ಲಾಸ್ಟಿಕ್ ಕಡ್ಡಿಗಳೊಳಗೊಂಡ ಬಲೂನ್, ಪ್ಲಾಸ್ಟಿಕ್ ಧ್ವಜ, ಪ್ಲಾಸ್ಟಿಕ್ ಕ್ಯಾಂಡಿ, ಕಡ್ಡಿಗಳು, ಪ್ಲಾಸ್ಟಿಕ್ ಕಡ್ಡಿಗಳು ಅಲಂಕಾರಕ್ಕಾಗಿ ಬಳಸಲ್ಪಡುವ ಪ್ಲಾಸ್ಟಿಕ್ ಸ್ಟಿರನ್ (ಥರ್ಮಕೋಲ್)

(ಆ) ತಟ್ಟೆಗಳು, ಲೋಟಗಳು, ಮುಳ್ಳು ಚಮಚ, ಚಾಕು, ಸ್ಟ್ರಾ, ಟ್ರೇ, ಮಿಠಾಯಿ ಡಬ್ಬಗಳ ಸುತ್ತ ಬಳಸುವ ಪ್ಯಾಕಿಂಗ್ ಲೇಪಗಳು, ಆಮಂತ್ರಣ ಆಹ್ವಾನ ಪತ್ರ, ಸಿಗರೇಟ್ ಪೊಟ್ಟಣ, ಪ್ಲಾಸ್ಟಿಕ್ ಅಥವಾ ಪಿವಿಸಿ ಬ್ಯಾನರ್‌ಗಳು, ಕಲಸುವ ಸಾಧನಗಳು ಇತ್ಯಾದಿ.

ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17ಇಪಿಸಿ 2012, ದಿನಾಂಕ: 11–03–2016ರಲ್ಲಿ ಎಲ್ಲಾ ರೀತಿಯ ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಬಳಕೆ, ಉತ್ಪನ್ನ, ವಿತರಣೆ, ಶೇಖರಣೆ, ಸಾಗಾಣಿಕೆ, ಮಾರಾಟ ಹಾಗೂ ವಿತರಣೆಯನ್ನು ನಿಷೇಧಿಸಲಾಗಿರುತ್ತದೆ.

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ **ಸುತ್ತೋಲೆ ಸಂಖ್ಯೆ: ಎಫ್‌ಇಇ77ಇಎನ್‌ಜಿ2022, ದಿನಾಂಕ: 30.06.2022**ರಲ್ಲಿ ಕೇಂದ್ರ ಸರ್ಕಾರದ ತಿದ್ದುಪಡಿ ನಿಯಮ ಹಾಗೂ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಅಳವಡಿಸಿಕೊಂಡು ಅದರಂತೆ ಕಾರ್ಯನಿರ್ವಹಿಸಲು ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಅದರಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ರಾಜ್ಯ ಸರ್ಕಾರದ ಅಧಿಸೂಚನೆ ಹಾಗೂ ಕೇಂದ್ರ ಸರ್ಕಾರದ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ತಿದ್ದುಪಡಿ ನಿಯಮ 2021ಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿಷೇಧ ಅನುಷ್ಠಾನಗೊಳಿಸಲು ವಲಯ ಮಟ್ಟದ ಟಾಸ್ಕ್ ಪೋರ್ಸ್ ಸಮಿತಿಯನ್ನು ವಲಯದ ಜಂಟಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಸದರಿ ಸಮಿತಿಯು ವಲಯದ ಅಧೀಕ್ಷಕ ಅಭಿಯಂತರರು, ಸಹಾಯಕ ಅಭಿಯಂತರರು, ವಿಭಾಗದ ಹಾಗೂ ವಲಯದ ಮಾರ್ಷಲ್ ಸೂಪರ್‌ವೈಸರ್‌ಗಳು, ಕಿರಿಯ ಆರೋಗ್ಯ ಪರಿವೀಕ್ಷಕರನ್ನು ಸದಸ್ಯರನ್ನಾಗಿ ಒಳಗೊಂಡಿರುತ್ತದೆ.

ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿಷೇಧ ಜಾರಿಯಲ್ಲಿದ್ದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಏಕ ಬಳಕೆ ಪ್ಲಾಸ್ಟಿಕ್‌ಗಾಗಿ ದಂಡ ವಿಧಿಸಲಾಗುತ್ತಿದ್ದು ವಿವರ ಕೆಳಕಂಡಂತಿರುತ್ತದೆ.

ಕ್ರ. ಸಂ.	ಪಿ.ಎಂ. ಡಬ್ಲ್ಯು. 2016ರ ನಿಯಮ	ನಿಬಂಧನೆ	ಉಲ್ಲಂಘಿಸುವವರು	ಪರಿಸರ ಪರಿಹಾರ
1	4(ಸಿ)	ಯಾವುದೇ ಗಾತ್ರ ಅಥವಾ ದಪ್ಪದ ನವೀನ ಅಥವಾ ಮರುಬಳಕೆ ಪ್ಲಾಸ್ಟಿಕ್‌ನಿಂದ ಮಾಡಿದ ಕ್ಯಾರಿ ಬ್ಯಾಗ್‌ಗಳು	ತಯಾರಕರು / ಉತ್ಪಾದಕರು	1. ಉತ್ಪನ್ನಗಳ ವಶಪಡಿಸಿಕೊಳ್ಳುವಿಕೆ 2. ಘಟಕದ ಮುಚ್ಚುವಿಕೆ 3. ಪ್ರತಿ ಟನ್ ಚೀಲಗಳಿಗೆ ತಯಾರಿಸುವ / ಉತ್ಪಾಧಿಸುವ 1ನೇ ಬಾರಿ ಉಲ್ಲಂಘನೆ – ರೂ.5000/– 2ನೇ ಬಾರಿ ಉಲ್ಲಂಘನೆ – ರೂ.10000/– 3ನೇ ಬಾರಿ ಉಲ್ಲಂಘನೆ – ರೂ.20000/–
2	4(ಡಿ)	ಮಲ್ಟಿ ಲೇಯರ್ಡ್ ಪ್ಯಾಕಿಂಗ್‌ನ ಅವಿಬಾಜ್ಯ ಭಾಗವಲ್ಲದ ಪ್ಲಾಸ್ಟಿಕ್ ಹಾಳೆಯಂತಹ ಹಾಳೆಗಳು ಅಥವಾ 50 ಮೈಕ್ರಾನ್‌ಗಳಿಗಿಂತ ಕಡಿಮೆ ಇರುವ ಪ್ಯಾಕಿಂಗ್ ವ್ಯವಸ್ಥೆಗೆ ಬಳಸಲಾದ ಪ್ಲಾಸ್ಟಿಕ್ ಹಾಳೆ	ತಯಾರಕರು / ಉತ್ಪಾದಕರು	1. ಉತ್ಪನ್ನಗಳ ವಶಪಡಿಸಿಕೊಳ್ಳುವಿಕೆ 2. ಘಟಕದ ಮುಚ್ಚುವಿಕೆ 3. ಪ್ರತಿ ಟನ್ ಪ್ಲಾಸ್ಟಿಕ್ ಬಳಸಲಾಗುವ ತಂಬಾಕು ಉತ್ಪನ್ನಗಳ ಪ್ಯಾಕೇಜಿಂಗ್ 1ನೇ ಬಾರಿ ಉಲ್ಲಂಘನೆ – ರೂ.5000/– 2ನೇ ಬಾರಿ ಉಲ್ಲಂಘನೆ – ರೂ.10000/– 3ನೇ ಬಾರಿ ಉಲ್ಲಂಘನೆ – ರೂ.20000/–
3	14(1)	ಚಿಲ್ಲರೆ ವ್ಯಾಪಾರಿಗಳು ಅಥವಾ ಬೀದಿ ವ್ಯಾಪಾರಿಗಳು, ಅಧಿಕೃತವಾದ ತಯಾರಕರಿಂದ ಗುರುತಿಸಲ್ಪಟ್ಟ ಲೇಬಲ್ ಇಲ್ಲದ ಯಾವುದೇ ಪ್ಲಾಸ್ಟಿಕ್ ಚೀಲ ಅಥವಾ ಮಲ್ಟಿ ಲೇಯರ್ಸ್ ಪ್ಯಾಕೇಜ್‌ಗಳನ್ನು ಗ್ರಾಹಕರಿಗೆ ಮಾರಾಟ ಮಾಡುವುದಾಗಲೀ ಸುಂಕಗಳನ್ನು ನೀಡುವುದಾಗಲೀ ಮಾಡಬಾರದು	ಚಿಲ್ಲರೆ / ಬೀದಿ ವ್ಯಾಪಾರಿಗಳು	1. ಉತ್ಪನ್ನಗಳ ವಶಪಡಿಸಿಕೊಳ್ಳುವಿಕೆ 2. 3ನೇ ಬಾರಿ ಉಲ್ಲಂಘನೆ ದಂಡ ಮತ್ತು ವ್ಯಾಪಾರದಾಖಲೆಗಳನ್ನು ವಶಪಡಿಸಿಕೊಳ್ಳುವುದು **3. ಚಿಲ್ಲರೆ ವ್ಯಾಪಾರಿಗಳು** 1ನೇ ಬಾರಿ ಉಲ್ಲಂಘನೆ – ರೂ.2000/– 2ನೇ ಬಾರಿ ಉಲ್ಲಂಘನೆ – ರೂ.5000/– 3ನೇ ಬಾರಿ ಉಲ್ಲಂಘನೆ – ರೂ.10000/– **4. ಬೀದಿ ವ್ಯಾಪಾರಿಗಳು** 1ನೇ ಬಾರಿ ಉಲ್ಲಂಘನೆ – ರೂ.200/– 2ನೇ ಬಾರಿ ಉಲ್ಲಂಘನೆ – ರೂ.500/– 3ನೇ ಬಾರಿ ಉಲ್ಲಂಘನೆ – ರೂ.1000/–

ಅದಲ್ಲದೆ ಬೃಹತ್ ಬೆಂಗಳೂರು ಮಾಹನಗರ ಉಪನಿಯಮ, 2020ರಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಜಾರಿಗೊಳಿಸಿ ಷೆಡ್ಯೂಲ್‌ರಲ್ಲಿ ದಂಡದ ವಿವರ ನೀಡಲಾಗಿರುತ್ತದೆ.

ಕ್ರ. ಸಂ.	ನಿಯಮದ ಅನುಪಾಲನೆ ಮಾಡದಿರುವುದು ಮತ್ತು ತ್ಯಾಜ್ಯ ಉತ್ಪಾದಕರ ವರ್ಗ	ಮೊದಲ ಅಪರಾಧಕ್ಕೆ ದಂಡ/ಶಿಕ್ಷೆ	ಎರಡನೇ ಮತ್ತು ಪುನರಾವರ್ತಿತ ಅಪರಾಧಕ್ಕೆ ದಂಡ
1	ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಸಗಟು ಮಾರಾಟ, ಚಿಲ್ಲರೆ ಮಾರಾಟ ಮತ್ತು ಮಾರಾಟ	ರೂ.50,000/–	ರೂ.1,00,000/–
2	ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಬಳಕೆದಾರರು		
	ವಾಣಿಜ್ಯ ಬಳಕೆದಾರರು	ರೂ.25,000/–	ರೂ.50,000/–
	ಗೃಹ ಬಳಕೆದಾರರು	ರೂ.500/–	ರೂ.1000/–
ದಿ: 11.03.2016 ರಂದು ಹೊರಡಿಸಲಾದ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ **ಸಂಖ್ಯೆ ಏಫ್‌ಇಇ17 ಇಪಿಸಿ 2016** ಮತ್ತು ಆ ಬಳಿಕ ಮಾಡಲಾದ ತಿದ್ದುಪಡಿಗಳು			

ಪಾಲಿಕೆಯ ವ್ಯಾಪ್ತಿಯ ಎಲ್ಲಾ ಉತ್ಪನ್ನದಾರರು, ಶೇಕರಣಾದಾರರು, ಚಿಲ್ಲರೆ ವ್ಯಾಪಾರಿಗಳು, ಇ–ಕಾಮರ್ಸ್ ಕಂಪನಿಗಳು, ಬೀದಿ ವ್ಯಾಪಾರಿಗಳು, ಅಂಗಡಿ ಮುಂಗಟ್ಟುಗಳು, ವಾಣಿಜ್ಯ ಮಳಿಗೆದಾರರು, (ಮಾಲ್/ಮಾರ್ಕೆಟ್ ಸ್ಥಳಗಳು/ಸಿನಿಮಾ ಮಂದಿರಗಳು/ಪ್ರವಾಸಿ ತಾಣಗಳು/ಶಾಲಾ ಕಾಲೇಜುಗಳು/ಕಛೇರಿಗಳು/ಆಸ್ಪತ್ರೆಗಳು ಮತ್ತು ಇತರೆ ಸಂಸ್ಥೆಗಳು) ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ರಾಜ್ಯ ಸರ್ಕಾರದ ಅಧಿಸೂಚನೆ 2016, ಹಾಗೂ ಕೇಂದ್ರ ಸರ್ಕಾರದ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ತಿದ್ದುಪಡಿ ನಿಯಮ, 2021ರಂತೆ ಪ್ಲಾಸ್ಟಿಕ್ ಹಾಗೂ ಏಕ ಬಳಕೆ ಪ್ಲಾಸ್ಟಿಕ್ ಅನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ನಿಷೇಧಿಸಲಾಗಿದ್ದು, ನಿಯಮಗಳನ್ನು ಉಲ್ಲಂಘಿಸಿದ ಸಾರ್ವಜನಿಕರಿಗೆ ದಂಡ ವಿಧಿಸಲಾಗುವುದು ಹಾಗೂ ಮೇಲೆ ತಿಳಿಸದಂತೆ ವಾಣಿಜ್ಯ ಉದ್ದಿಮೆಗಳ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು.

ಸಹಿ/–
ಮುಖ್ಯ ಆಯುಕ್ತರು, ಬೃ.ಬೆಂ.ಮ.ಪಾಲಿಕೆ

ನಿಮ್ಮ ಮನೆ ಮತ್ತು ಇಂಟೀರಿಯರ್ ಅಪ್‌ಡೇಟ್ ಮಾಡಬನ್ನಿರಿ! ಇಂದಿನಿಂದ ಆರಂಭ
HOME FURNITURE EXPO
• LIFESTYLE • INTERIOR • DECOR
2 | 3 | 4 | 5 ಡಿಸೆಂಬರ್ 2022
ಬೆಳಿಗ್ಗೆ 10.00 ರಿಂದ ರಾತ್ರಿ 8.30ರ ವರೆಗೆ
ತ್ರಿಪುರವಾಸಿನಿ ಅರಮನೆ ಮೈದಾನ
(ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು)
ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಹೋಮ್ ಡೆಕೋರ್ • ಲೆದರ್ ಸೋಫಾಗಳು • ಬ್ರಾಸ್ & ಆಂಟಿಕ್ರಾಫ್ಟ್ಸ್ • ಪಾಟರಿ • ರಿಕ್ಲೈನರ್ ಸೋಫಾ ಸೆಟ್ಸ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸಸ್ • ಕರ್ಟನ್ಸ್ • ಸ್ಟೋರೇಜ್ ಯೂನಿಟ್ •ವಾಟರ್ ಫೌಂಟೇನ್ಸ್ & ಇನ್ನೂ ಅನೇಕ...
ಭಾಗವಹಿಸುವವರು
THE FURNITURE STORE · SME TRADING · Designer AN UNIT OF FURNITURE STORE · ISELLA FROM SPAIN · MONTE 1997 From Malaysia · CASAMORE FROM ITALY · LEATHER ITALIA · Mr.SOFA · S&K · SIMPLY ARTS · ZOFA Zone of Comforts · apple WOOD FURNITURE · CLASSIC FURNITURES · WOOD HEAVEN UPHOLSTRY · UNIQUE HOME FURNITURE · ROYAL TOUCH · Wood World Interior's · EXOTICA FURNITURES · ALFA FURNITURE Manufacturing & Distributors · ONYX · CLASSIC CARPET · CLASSIC FRAMES · Nature's Touch 100% Natural Latex Mattresses and Pillows · AIWA ROBOTICS · Santhosh Jula · 3D PHOTO · FLYING HANGER · OCEANIC HEALTHCARE · MAX SAFE LOCKER · SOFA TOWN A Prestigious Brand of : Sai FURNITURE ART
AN EVENT BY iads & events COMPLETE BUSINESS SOLUTIONS
exhibitions_iadsnevents · iadsnevents
ಎಲ್ಲಾ ಪ್ರಮುಖ ಡೆಬಿಟ್/ ಕ್ರೆಡಿಟ್ ಕಾರ್ಡ್ಸ್ ಸ್ವೀಕರಿಸಲಾಗುತ್ತದೆ
ಪ್ರವೇಶ ಉಚಿತ
+91 9342577908

ಕಾಂಗ್ರೆಸ್– ಬಿಜೆಪಿ ವಾಕ್ಸಮರ ● ಸಚಿವರ ಸಮರ್ಥನೆ

ಸೋಮಣ್ಣ– ರೌಡಿ ನಾಗ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಚಿವ ವಿ.ಸೋಮಣ್ಣ ಅವರನ್ನು ವಿಲ್ಸನ್‌ಗಾರ್ಡನ್ ನಾಗ ಎಂಬ ರೌಡಿ ಭೇಟಿ ಮಾಡಿರುವುದು ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಮತ್ತೆ ವಾಕ್ಸಮರಕ್ಕೆ ಕಾರಣವಾಗಿದೆ.

'ಕುಸ್ತಿ ಆಡಲು ಬಿಜೆಪಿಯವರು ರೌಡಿಗಳನ್ನು ಸೇರಿಸಿಕೊಳ್ಳುತ್ತಿದ್ದಾರೆ' ಎಂಬುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆಗೆ ಸಚಿವರಾದ ಸೋಮಣ್ಣ ಮತ್ತು ಡಾ.ಸಿ.ಎನ್.ಅಶ್ವತ್ಥನಾರಾಯಣ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೆಲ ದಿನಗಳ ಹಿಂದೆ ಮತ್ತೊಬ್ಬ ರೌಡಿ ಸೈಲೆಂಟ್ ಸುನೀಲ್ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ.ಮೋಹನ್, ಶಾಸಕ ಉದಯ್ ಗರುಡಾಚಾರ್ ಭಾಗವಹಿಸಿದ್ದು ವಿವಾದಕ್ಕೆ ಕಾರಣವಾಗಿತ್ತು. ವಿಲ್ಸನ್‌ಗಾರ್ಡನ್ ನಾಗ ಬುಧವಾರ ಸೋಮಣ್ಣ ಅವರನ್ನು ಭೇಟಿ ಮಾಡಿದ್ದು ಕಾಂಗ್ರೆಸ್- ಬಿಜೆಪಿ ಮಧ್ಯೆ ವಾಗ್ವಾದಕ್ಕೆ ಕಾರಣವಾಗಿದೆ.

ಸುದ್ದಿಗಾರರ ಜತೆ ಮಾತನಾಡಿದ ಸೋಮಣ್ಣ , 'ಶಾಸಕನಾಗಿ ಹಲವು ವರ್ಷಗಳಿಂದ ಕೆಲಸ ಮಾಡಿದ್ದೇನೆ. ನನ್ನ ಮನೆಗೆ ಸಾವಿರಾರು ಜನ ಬರುತ್ತಾರೆ. ಸಾವಿರಾರು ಜನ ಹೋಗುತ್ತಾರೆ. ಬಂದವರಲ್ಲಿ ನಾಗ ಯಾರು, ತಿಮ್ಮ ಯಾರು, ಬೊಮ್ಮ ಯಾರು ಎಂಬುದು ಹೇಗೆ ಗೊತ್ತಾಗುತ್ತದೆ. ನಾಗ ಯಾರು ಎಂಬುದು ಗೊತ್ತಿಲ್ಲ. ಅವನ ಮುಖಪರಿಚಯವೂ ಇಲ್ಲ. ಯಾರೇ ನನ್ನ ಬಳಿ ಬಂದರೂ ಒಂದೆರಡು ನಿಮಿಷಗಳ ಕಾಲ ಮಾತನಾಡಿಸುತ್ತೇನೆ. ರೌಡಿಗಳನ್ನು ಬೆಳೆಸಿ ಜೀವನ ಮಾಡುವವನಲ್ಲ. ನನ್ನ ಜೀವನ ತೆರೆದ ಪುಸ್ತಕ' ಎಂದು ಹೇಳಿದರು.

'75 ವರ್ಷದವರನ್ನು 25 ವರ್ಷದವರಿಗೆ ಹೋಲಿಕೆ ಮಾಡಬೇಡಿ. ಜೀವನೋಪಾಯಕ್ಕಾಗಿ ರಾಜಕಾರಣ ಮಾಡುತ್ತಿಲ್ಲ. ಸೇವೆ ಮತ್ತು ಅವಕಾಶ ಎಂದು ಸಾರ್ವಜನಿಕ ಜೀವನದಲ್ಲಿದ್ದೇನೆ' ಎಂದರು.

> **ಪಕ್ಷಕ್ಕೆ ಯಾವುದೇ ರೌಡಿಗಳನ್ನು ಸೇರ್ಪಡೆ ಮಾಡುವುದಿಲ್ಲ. ಯಾರಿಗೂ ಅವಕಾಶಗಳನ್ನು ಕೊಡುವುದಿಲ್ಲ. ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಪ್ರಶ್ನೆಯೇ ಇಲ್ಲ**
> **ಬಸವರಾಜ ಬೊಮ್ಮಾಯಿ**, ಮುಖ್ಯಮಂತ್ರಿ

ಕಾಂಗ್ರೆಸ್ ರೌಡಿಗಳ ಪಕ್ಷ: 'ಕಾಂಗ್ರೆಸ್ ಪಕ್ಷ ಎಂದರೆ ಗೂಂಡಾಗಳ, ರೌಡಿಗಳ ಪಕ್ಷ ಅನ್ನೋದು ಎಲ್ಲರಿಗೂ ಗೊತ್ತಿರುವ ವಿಷಯ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಹಿನ್ನೆಲೆ ನೋಡಿದರೆ ಗೊತ್ತಾಗುತ್ತದೆ' ಎಂದು ಡಾ.ಅಶ್ವತ್ಥನಾರಾಯಣ ಹೇಳಿದರು.

'ಬಿಜೆಪಿಗೆ ರೌಡಿಗಳ ಅಗತ್ಯವಿಲ್ಲ. ಜನರ ಆಶಯಗಳಿಗೆ ತಕ್ಕಂತೆ ಕೆಲಸ ಮಾಡುತ್ತೇವೆ. ಜನರ ಆಶೀರ್ವಾದ ಬಿಜೆಪಿಯ ಮೇಲಿದೆ. ರೌಡಿಗಳ ಅವಶ್ಯಕತೆ ಇದ್ದರೆ ಅದು ಕಾಂಗ್ರೆಸ್‌ಗೆ ಮಾತ್ರ. ರೌಡಿಗಳಿಗೆ ಮತ್ತು ಅಂತಹ ಚಟುವಟಿಕೆಗಳನ್ನು ನಡೆಸುವವರಿಗೆ ನಮ್ಮ ಪಕ್ಷದಲ್ಲಿ ಮಾನ್ಯತೆ ಇಲ್ಲ. ಕಾಂಗ್ರೆಸ್‌ಗೆ ಹೇಳಿಕೊಳ್ಳಲು ಯಾವುದೇ ವಿಚಾರ ಇಲ್ಲದಿರುವ ಕಾರಣ ಇಂತಹ ವಿಷಯಗಳನ್ನು ಪ್ರಸ್ತಾಪಿಸುತ್ತಿದೆ ಎಂದರು.

ರೌಡಿಗಳಿಗೆ ಬಿಜೆಪಿ ಮಣೆ: ಡಿಕೆಶಿ

ಕಲಬುರಗಿ: 'ಬಿಜೆಪಿಯ ಕಾರ್ಯಕರ್ತರು ಪಕ್ಷವನ್ನು ತೊರೆದು ಕಾಂಗ್ರೆಸ್ ಸೇರುತ್ತಿದ್ದಾರೆ. ಕಾರ್ಯಕರ್ತರ ಕೊರತೆ ನೀಗಿಸಿಕೊಳ್ಳಲು ಬಿಜೆಪಿಯವರು ರೌಡಿಗಳನ್ನು ಸೇರ್ಪಡೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

'ಬಿಜೆಪಿಯ ನೈಜ ಬಣ್ಣ ಈಗ ಹೊರ ಬರುತ್ತಿದೆ. ತಮ್ಮಲ್ಲಿ ಇರುವ ಹಗ್ಗಣ ಬಿಟ್ಟು, ಬೇರೆಯವರತ್ತ ಬೆರಳು ಮಾಡುತ್ತಿದೆ. ಕಾಂಗ್ರೆಸ್ ಬಲಿಷ್ಠವಾಗಿ ಅಧಿಕಾರಕ್ಕೆ ಬರುತ್ತದೆ ಎಂಬ ಆತಂಕ ಬಿಜೆಪಿಯಲ್ಲಿದೆ. ಅದಕ್ಕೆ ನಮಗೆ ಬರುವ ಮತಗಳನ್ನು ಕಡಿತಗೊಳಿಸಲು ಮುಂದಾಗಿದೆ' ಎಂದರು.

'ಕಾಂಗ್ರೆಸ್ ಸೇರುವವರಿಗೆ ಮುಕ್ತ ಮತ್ತು ಬೇಷರತ್ ಆಹ್ವಾನವಿದೆ' ಎಂದು ಕೋರಿದರು.

'ಸಿದ್ದರಾಮಯ್ಯ ಮತ್ತು ನನ್ನ ನಡುವೆ ಯಾವುದೇ ಬಿರುಕಿಲ್ಲ. ಬಿಜೆಪಿಯ ಸದಾನಂದಗೌಡ, ಜಗದೀಶ ಶೆಟ್ಟರ್, ಬಸನಗೌಡ ಪಾಟೀಲ ಯತ್ನಾಳ, ವಿಜಯೇಂದ್ರ ಅವರ ನಡುವಿನ ಬಿರುಕು ಮುಚ್ಚಿಕೊಳ್ಳಲಿ' ಎಂದರು.

'ಗಡಿ ವಿಚಾರದಲ್ಲಿ ರಾಜಕಾರಣ ಮಾಡುವುದನ್ನು ನಿಲ್ಲಿಸಬೇಕು. ನಮ್ಮ ಹಳ್ಳಿಗಳು ನಮ್ಮವು, ಅವರ ಹಳ್ಳಿಗಳು ಅವರದ್ದು' ಎಂದರು.

ಅಕ್ಷರ ದಾಸೋಹ ನೌಕರರ ಸಂಘ: ಲಕ್ಷ್ಮಿದೇವಿ ಅಧ್ಯಕ್ಷೆ

ಕಲಬುರಗಿ: ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆಯಾಗಿ ಲಕ್ಷ್ಮಿದೇವಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಮಾಲಿನಿ ಮೇಸ್ತಾ ಆಯ್ಕೆಯಾಗಿದ್ದಾರೆ.

ಎಸ್.ವರಲಕ್ಷ್ಮಿ ಗೌರವಾಧ್ಯಕ್ಷೆ, ಮಹಾದೇವಮ್ಮ-ಖಜಾಂಚಿ, ಯಮುನಾ -ಕಾರ್ಯದರ್ಶಿ ಮತ್ತು ಸಿದ್ದಮ್ಮ ಅವರು ಉಪಾಧ್ಯಕ್ಷೆಯಾಗಿದ್ದಾರೆ.

ಬುಧವಾರ ಸಮಾರೋಪಗೊಂಡ ಸಂಘದ 5ನೇ ರಾಜ್ಯ ಸಮ್ಮೇಳನದ ಬಳಿಕ ರಾಜ್ಯ ಸಮಿತಿ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಕ್ಷರ ದಾಸೋಹ ನೌಕರರಿಗೆ ಸರ್ಕಾರಿ ಸೌಲಭ್ಯ ಕಲ್ಪಿಸಬೇಕು, ಮಕ್ಕಳ ಮತ್ತು ರಜೆ ಸಭೆಗಳನ್ನು ನೀಡಿ ಆ ದಿನಗಳ ಭತ್ಯೆ ಕೊಡಬೇಕು, ಹೆರಿಗೆ ರಜೆ, ಹೆರಿಗೆ ಭತ್ಯೆ ನೀಡುವುದು ಸೇರಿ ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಹೋರಾಟ ರೂಪಿಸುವ ಬಗ್ಗೆ ನಿರ್ಧರಿಸಲಾಯಿತು.

ಎಲ್ಲ ವಿ.ವಿಗಳಲ್ಲೂ ಅನುಷ್ಠಾನ: ಅಶ್ವತ್ಥನಾರಾಯಣ

ಆನ್‌ಲೈನ್‌ನಲ್ಲೇ ಪದವಿ ಕೋರ್ಸ್ ಮಾರ್ಚ್‌ನಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023 ರ ಮಾರ್ಚ್ ವೇಳೆಗೆ ರಾಜ್ಯದ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲೂ ಕನಿಷ್ಠ ಒಂದು ಪದವಿ ಕೋರ್ಸ್ ಅನ್ನು ಆನ್‌ಲೈನ್ ರೂಪದಲ್ಲಿ ಆರಂಭಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ 'ಸ್ಕಿಲ್ ಕನೆಕ್ಟ್ ಪೋರ್ಟಲ್'ಗೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಆನ್‌ಲೈನ್ ಡಿಜಿಟಲ್ ಕಲಿಕಾ ಕಾರ್ಯಕ್ರಮಗಳನ್ನು ಪರಿಚಯಿಸಲಾಗುವುದು ಎಂದರು.

ಈ ತಿಂಗಳ ಕೊನೆಯ ವೇಳೆಗೆ ಪ್ರತಿ ವಿಶ್ವವಿದ್ಯಾಲಯವೂ ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್‌ನಲ್ಲಿ ತಮ್ಮನ್ನು ನೋಂದಾಯಿಸಿಕೊಳ್ಳಬೇಕು ಮತ್ತು ಮೂರು ತಿಂಗಳಲ್ಲಿ ಕನಿಷ್ಠ 5 ಉದ್ಯಮ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಕಡ್ಡಾಯ ಎಂದು ಅವರು ವಿವರಿಸಿದರು.

ಆಧುನಿಕ ಜಗತ್ತಿನಲ್ಲಿ ಯುವಜನರಿಗೆ ಕೌಶಲ ಕಲಿಕೆ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕೌಶಲಾಭಿವೃದ್ಧಿ ಇಲಾಖೆ ಸ್ಕಿಲ್ ಕನೆಕ್ಟ್ ಪೋರ್ಟಲ್‌ಗೆ ಹೊಸ ರೂಪ ನೀಡಲಾಗಿದೆ. ಇದರಿಂದ ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರ ನಡುವೆ ಸಕ್ರಿಯ ಸಂಬಂಧ ಏರ್ಪಡಲಿದೆ ಎಂದರು.

ಜಪಾನ್ ಭಾಷೆ ಕಲಿಕೆಗೆ ವ್ಯವಸ್ಥೆ: 'ಇಂಗ್ಲಿಷ್ ಭಾಷೆಯ ಕಲಿಕೆ ಲ್ಯಾಬ್‌ಗಳ ಸ್ಥಾಪನೆಯ ಜತೆಗೆ, ಜಪಾನಿನಲ್ಲಿ ರಾಜ್ಯದ ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸಲು ಜಪಾನಿ ಭಾಷೆಯ ಕಲಿಕೆಗೆ ವ್ಯವಸ್ಥೆ ಮಾಡಲಾಗುವುದು' ಎಂದು ಅವರು ತಿಳಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಅಲ್ಲದೆ, 13,500 ಮಹಿಳಾ ಉದ್ಯಮಿಗಳಿಗೆ ಸಿ-ಡಾಕ್ ಮೂಲಕ ಪ್ರೇರಣಾ ಶಿಬಿರಗಳನ್ನು ಆಯೋಜಿಸಲಾಗುವುದು. ಒಟ್ಟಿನಲ್ಲಿ 10 ಸಾವಿರ ಜನರಿಗೆ ಏಕಕಾಲದಲ್ಲಿ ನೇಮಕಾತಿ ಪತ್ರಗಳನ್ನು ನೀಡಲಾಗುವುದು ಎಂದು ಅಶ್ವತ್ಥನಾರಾಯಣ ಹೇಳಿದರು.

ಸುಶಾಸನ ಮಾಸಾಚರಣೆ ಅಂಗವಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಹೊಸ ರೂಪ ನೀಡಲಾಗಿದೆ. ಇಲ್ಲಿ ನೇಮಕಾತಿ ವಿಭಾಗ ಮತ್ತು ಸೀಟು ಹಂಚಿಕೆ ವಿಭಾಗಗಳನ್ನು ಸೃಷ್ಟಿಸಿ 20 ಹೊಸ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಇದಕ್ಕೆ ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

5 ಕಂಪನಿಗಳ ಜತೆ ಒಡಂಬಡಿಕೆ

ಟ್ಯಾಲೆನ್ಸಿಯಾ ಗ್ಲೋಬಲ್, ಇನ್ಫೋಸಿಸ್, ಫ್ಯೂಯಲ್, ಎಐಎಸ್ಇಸಿಟಿ ಮತ್ತು ಇನ್ನಿಟ್ಟ ಆಟೋ ಟೆಕ್ನಾಲಜೀಸ್ ಕಂಪನಿಗಳ ಮುಖ್ಯಸ್ಥರೊಂದಿಗೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ಅವರು ಹಲವು ಒಪ್ಪಂದಗಳಿಗೆ ಸಹಿ ಮಾಡಿದರು.

'40 ಪರ್ಸೆಂಟ್ ಸರ್ಕಾರ ಕಿತ್ತೊಗೆಯುವ ಸಂಕಲ್ಪ'

ಕಲಬುರಗಿ: 'ರಾಜ್ಯದಲ್ಲಿ ಬಿಜೆಪಿ ನೇತೃತ್ವದ 40 ಪರ್ಸೆಂಟ್ ಕಮಿಷನ್ ಸರ್ಕಾರವನ್ನು ಕಿತ್ತೊಗೆಯುವುದೇ ಕಾಂಗ್ರೆಸ್ ಆದ್ಯತೆಯಾಗಿದೆ. ಜನರೂ ಈ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರದಿಂದ ರೋಸಿ ಹೋಗಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅಭಿಪ್ರಾಯಪಟ್ಟರು.

'ಬಸವರಾಜ ಬೊಮ್ಮಾಯಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಪ್ರತಿ ನೇಮಕಾತಿಗಳಲ್ಲಿ ಹಣ ಇಲ್ಲದೇ ಕೆಲಸ ಆಗದು ಎಂಬ ಪರಿಸ್ಥಿತಿ ತಲೆದೋರಿದೆ. ಡಿಜಿಪಿ ಹಂತದ ಅಧಿಕಾರಿಯೇ ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದಲ್ಲಿ ಜೈಲಿಗೆ ಹೋಗಿದ್ದಾರೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದರು.

> **ಕಾಂಗ್ರೆಸ್‌ನ ಪ್ರತಿಯೊಬ್ಬ ಕಾರ್ಯಕರ್ತರೂ ಸಿಎಂ ಅಭ್ಯರ್ಥಿಯೇ ಆಗಿದ್ದಾರೆ. ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಚರ್ಚೆ ನಡೆಯುತ್ತಿಲ್ಲ.**
> **ರಣದೀಪ್ ಸಿಂಗ್ ಸುರ್ಜೇವಾಲಾ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

'ರಾಜ್ಯಕ್ಕೆ ಬರಬೇಕಿದ್ದ ಉದ್ಯಮಗಳು ಚೆನ್ನೈ, ಹೈದರಾಬಾದ್‌ನತ್ತ ಮುಖ ಮಾಡಿವೆ. ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಲಕ್ಷಾಂತರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳುತ್ತಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಲ್ಯಾಣ ಕರ್ನಾಟಕ ಭಾಗದ ಜನರ ಏಳ್ಗೆಗೆ 371 (ಜೆ) ಕಲಂ ಜಾರಿಗೊಳಿಸಲು ಶ್ರಮಿಸಿದರು. ಆದರೆ, ಇದನ್ನು ಸಹಿಸದ ಬಿಜೆಪಿ ಇಲ್ಲಿನ ಜನರಿಗೆ ಉದ್ಯೋಗ ನೀಡುತ್ತಿಲ್ಲ ' ಎಂದರು.

'ಬಡ ಮಕ್ಕಳ ಅನುಕೂಲಕ್ಕೆ ಇದ್ದ ವಿದ್ಯಾರ್ಥಿವೇತನವನ್ನು ರದ್ದುಗೊಳಿಸಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಭಾರಿ ಅನ್ಯಾಯ ಮಾಡಿದೆ' ಎಂದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ. ತಾ:: ಹುಬ್ಬಳ್ಳಿ, ಜಿ: ಧಾರವಾಡ 580023.
ಫೋನ್: 0836–2315225 ಫ್ಯಾಕ್ಸ್: 2315226. e-mail:- eemrbcc3byt@gmail.com
ಸಂ.ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2022–23/1911 ದಿನಾಂಕ:–30–11–2022

ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ 4701 ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 01 ಕಸ್ಸಲ್ಸನ್ಸಿ ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.
Work Indent No :-34411
ಕಾಮಗಾರಿಯ ಅಂದಾಜು ಮೊತ್ತ: ರೂ. 50.00 ಲಕ್ಷಗಳು
ಇ.ಎಂ.ಡಿ ಮೊತ್ತ:– ರೂ. 1.00 ಲಕ್ಷಗಳು
ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ: 12/12/2022 ರ 4.00 PM ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14/12/2022 ರಂದು ಮುಂಜಾನೆ: 11.00 AM ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ http://eproc.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾಸಾಸಂಇ/ಧಾ/ದಿಶಾ/807/2022–23

ಕರ್ನಾಟಕ ಸರಕಾರ
(ಜಲ ಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ.4, ಬೀಳಗಿ, ಕ್ಯಾಂಪ:ನವನಗರ–ಬಾಗಲಕೋಟೆ ಇವರ ಕಾರ್ಯಾಲಯ.
ಸಂ:ಕೃಮೇಯೋ/ಕಾನಿಅ/ಪುವಿ–4/ಯೋವಿ–2/ಟೆಂಡರ್–08/2022–23/1296 ದಿನಾಂಕ:01–12–2022

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ) (ಇ–ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂ: 896 (ರೂ: 440.39 ಲಕ್ಷ) ಕಾಮಗಾರಿಗೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಕೊನೆಯ ದಿನಾಂಕ: 16–12–2022 ಸಂಜೆ 17.30 ಗಂಟೆವರೆಗೆ. ಟೆಂಡರ್ ಮಾಹಿತಿ, ನಿಬಂಧನೆ ಹಾಗೂ ವಿವರಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ www.eproc.karnataka govt.in ನಲ್ಲಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಪುನರವಸತಿ ವಿಭಾಗ ನಂ.4 ಬೀಳಗಿ, ಕ್ಯಾಂಪ:ನವನಗರ–ಬಾಗಲಕೋಟೆ
DIPR/BGK/RO-NO-638/MCA/2022-23

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
Ref. VTU/BGM/SAP/CW1/T-610/2022-23/4536 dtd.01-12-2022

ಟೆಂಡರ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು/ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು:ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪರೀಕ್ಷಾ ವಿಭಾಗಕ್ಕೆ ಮುಖ್ಯ ಉತ್ತರ ಪತ್ರಿಕೆಗಳನ್ನು (ಪದವಿ ಮತ್ತು ಸ್ನಾತಕೊತ್ತರ) ಡಿಸೆಂಬರ–2022/ಜನೆವರಿ–2023 ಮತ್ತು ಜುಲೈ–ಅಗಷ್ಟ–2023 ರ ಪರೀಕ್ಷೆಗಳಿಗೆ ವಾರ್ಷಿಕ ದರ ಒಪ್ಪಂದದ ಮೆರೆಗೆ ಮುದ್ರಣ ಮಾಡಿ ಪೂರೈಸುವುದು. ಟೆಂಡರಿಗಿಟ್ಟ ಮೊತ್ತ: ರೂ. 4,89,60,560/– ಮುಂಗಡ ಠೇವಣಿ: ರೂ.7,35,000/–, ಟೆಂಡರ ಪ್ರಿ ಬಿಡ್ ಮಿಟಿಂಗ ದಿನಾಂಕ.07–12–2022 ರಂದು 11.00 ಗಂಟೆಗೆ ಆನ ಲೈನ ಮೂಲಕ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:30–12–2022 ರ 2.30 ರ ವರೆಗೆ. ಟೆಂಡರ ತೆರೆಯುವ ದಿನಾಂಕ:31–12–2022 ರ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.
DIPR/BGM/RO-NO-1290/MCA/2022-23 ಸಹಿ/–ಕುಲಸಚಿವರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂ:ಕಾಇಂ:ಗ್ರಾ.ಕು.ನೀ&ನೈವಿ/ದಾ/ಸ.ಇಂ–2/ಜೆ.ಜೆ.ಎಂ/ಟೆಂಡರ್/1055 ದಿ:25/11/2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2022–23 ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆಯ ದಾವಣಗೆರೆ ಚನ್ನಗಿರಿ ತಾಲ್ಲೂಕಿಗೆ ಅನುಮೋದನೆಯಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ (ಅಗಮೆಂಟೇಷನ್ ಕಲ್ಪಿಸುವ) ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿ: 27/12/2022 ರ ಸಂಜೆ 5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಕಾಮಗಾರಿಯ ಹೆಸರು:– Improvement works of existing Multi village scheme to Santhebennur and other 05 villages of Channagiri taluk of Davangere district. ಅಂದಾಜು ಮೊತ್ತ 998.00 ಲಕ್ಷಗಳು. ಯಾವುದೇ ಕಾರಣವನ್ನು ನೀಡದೇ ಟೆಂಡರ್ ಕಾಮಗಾರಿಗಳನ್ನು ಮುಂದೂಡುವ, ಅಂಗೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿರುವವರು ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.
ವಾಸಾಇ/ಡಿವಿಜಿ/643/ಎಂಸಿಎ/2022–23 ಸಹಿ/– ಕಾರ್ಯಪಾಲಕ ಇಂಜಿನಿಯರ್

ನಗರಸಭೆ ಕಾರ್ಯಾಲಯ ಬೀದರ
ಸಂಖ್ಯೆ:ಬಿಎಂಸಿ/ಎನ್‌ಜಿ/ಸಿಆರ್–64/2022–23 ದಿನಾಂಕ:30–11–2022.

ಟೆಂಡರ್ ಪ್ರಕಟಣೆ

1) ಕಾಮಗಾರಿ/ಸರಕು/ಸೇವೆಯ ವಿವರ : DMA/2021-22/WS/WORK_INDENT128416/Call-4 BMC/ENG/CR-29/2022-23/CALL-2. 2) ಕಾಮಗಾರಿಯ ಅಂದಾಜು ಮೊತ್ತ : e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : e-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು : 16–12–2022 upto 04.00 PM, 6) ಟೆಂಡರ ತೆರೆಯುವ ದಿನಾಂಕ : 17–12–2022 at 04.30 PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಪೌರಾಯುಕ್ತರು ನಗರಸಭೆ ಬೀದರ. ಇ–ಮೇಲ್: itstaff_ulb_bidar@yahoo.com, 08482–240432, 8) ಅಂತರಜಾಲ ತಾಣದ ವಿಳಾಸ : www.eproc.karnataka.gov.in
ಸಹಿ/– ಪೌರಾಯುಕ್ತರು
ನಗರಸಭೆ ಬೀದರ
ವಾ.ಸಾ.ಸಂ.ಇ/ಬೀದರ/346/ಎಂಸಿ&ಎ/2022–23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–1/Bly&Snd/JJM/Ten.Nofi-No-08/2022–23/1695 ದಿನಾಂಕ:29.11.2022

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ – 2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ ಬಳ್ಳಾರಿರವರು, ಬಳ್ಳಾರಿ ಜಿಲ್ಲೆಯ 2021–22 ಸಾಲಿನ ಬಳ್ಳಾರಿ ತಾಲ್ಲೂಕಿನ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಗ್ರಾಮೀಣ ಪ್ರದೇಶದ ಜನವಸತಿಗಳ ಮನೆ ಮನೆಗೆ ಕಾರ್ಯತ್ಮಕ ನಳ ಸಂಪರ್ಕ ಒದಗಿಸುವ Retrofitting ಕಾಮಗಾರಿಗಳನ್ನು, ಹಾಗೂ ಸಂಡೂರು ತಾಲೂಕಿನ ಕೆ.ಕೆ.ಆರ್.ಡಿ.ಬಿ., ಡಿ.ಎಮ್.ಎಫ್. ಹಾಗೂ ಎಸ್.ಬಿ.ಎಮ್. ಯೋಜನೆಯಡಿಯಲ್ಲಿ ಅನುಮೋದನೆಗೊಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ: 30–11–2022 ರಿಂದ ದಿನಾಂಕ 14–12–2022 ರಂದು ಸಂಜೆ 4.00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ 15–12–2022 ರಂದು ಸಂಜೆ 5.00 ಗಂಟೆಗೆ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ತಾಂತ್ರಿಕ ಬಿಡ್‌ಲ್ಲಿ ಅರ್ಹತೆ ಹೊಂದಿದವರಿಗೆ ತಿಳಿಸಲಾಗುವುದು ಹಾಗೂ ದಿನಾಂಕ 07–12–2022 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ 07–12–2022 ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/674/ಎಂಸಿಎ/2022–23

TUNGABHADRA BOARD : TB DAM
e-procurement Long Term Tender Notice IFB No. 92/2022-23 & 93/2022-23 Dt: 23-09-2022 (2nd Call)

Tender for 02 Nos. of works under Dam Safety Works (DRIP) category are re-invited in respect of HW & HLC Division, TB Dam through e-Procurement.

Bid Document downloading Start Date & Time	:	02.12.2022 at 11.00 AM
Bid Document downloading End Date & Time	:	21.12.2022 at 3.00 PM
Bid Submission Eng Date & Time	:	21.12.2022 at 5.30 PM
Date of opening of PQ Sate	:	21.12.2022 at 6.00 PM
Date of opening of Commercial Stage	:	26.12.2022 at 11:00 AM
Date of opening of TQ Stage	:	26.12.2022 at 03.00 PM
Pre Bid Meeting Date & Time	:	07.12.2022 at 11.00 AM

Further details can be seen @ https://tender.apeprocurement.gov.in
Commencement of Reverse Tendering
08394 - 259114
Fax: 08394-259167
Sd/- Superintending Engineer
I.B, TB Board, TB Dam

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೆ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22113255
No: BMC/PAPER/02/2022-23 Date: 01.12.2022

ಇ–ಟೆಂಡರ್ ಅಧಿಸೂಚನೆ

ರಾಜ್ಯದ 31 ಜಿಲ್ಲಾಧಿಕಾರಿಗಳ ಕಛೇರಿಗಳಿಗೆ **80 GSM A4 Size Paper** ಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. **ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 21.12.2022 ರಂದು ಸಂಜೆ 5.30 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು **http://eproc.karnataka.gov.in** ರಲ್ಲಿ ಪಡೆಯಬಹುದಾಗಿದೆ.
ಸಹಿ/–
ಸಹಾಯಕ ಆಯುಕ್ತರು,
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
ವಾಸಾಸಂಇ/ವಾಪ್ರ/3323/2022–23

Visvesvaraya Technological University, Belagavi
Ref No: VTU/BGM/SAP/CW4/T-597-2nd Call/2022-23/ 4534 Date :01/12/2022

ಅಲ್ಪಾವಧಿ ಟೆಂಡರ ಪ್ರಕಟಣೆ –2ನೇ ಕರೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ ಇ–ಟೆಂಡರ (ದ್ವಿ ಲಕೋಟೆ ಪದ್ಧತಿ) ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು/ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು: "ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗದ ಅಂತರ ಕಾಲೇಜು ಕ್ರೀಡಾ ಕೂಟಗಳಿಗೆ ಬೇಕಾದ ಸಿಲ್ವರ ಮೆಡಲಗಳನ್ನು ಪೂರೈಸುವುದು". ಟೆಂಡರಿಗಿಟ್ಟ ಮೊತ್ತ: ರೂ.36,48,000,/– ಮುಂಗಡ ಠೇವಣಿ–. ರೂ.73,000/– .ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:07/12/2022 ರಂದು 2.30 ರವರೆಗೆ ಟೆಂಡರ ತೆರೆಯುವ ದಿನಾಂಕ:08/12/2022– ರಂದು 4.00 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ www.eproc. karnataka.gov.in ಮತ್ತು www.vtu.ac.in ನೋಡಬಹುದು.
DIPR/BGM/RO-NO-1291/MCA/2022-23

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಬಸ್ ಡಿಪೊ ಹತ್ತಿರ, ಬೆಂಗಳೂರು–560038, ದೂ: 080–25196124–129, ಇ–ಮೇಲ್: info@kuidfc.com ವೆಬ್‌ಸೈಟ್: www.kuidfc.com
ಸಂ. ಕೆಯುಐಡಿಎಫ್‌ಸಿ/ಆಡಳಿತ/ಯುಐಬಿ/HVAC-CAMC/2022–23 ದಿನಾಂಕ: 02.12.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ – 2ನೇ ಕರೆ

ಕೆಯುಐಡಿಎಫ್‌ಸಿ ಸಂಸ್ಥೆಯಲ್ಲಿ 3 ವರ್ಷಗಳ ಕಾಲ ಶಾಖ ವಾತಾಯನ ಮತ್ತು ಹವಾನಿಯಂತ್ರಣ ವ್ಯವಸ್ಥೆಯ (HVAC) ಸಮಗ್ರ ವಾರ್ಷಿಕ ನಿರ್ವಹಣೆಯನ್ನು ಒದಗಿಸುವ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ವೆಬ್‌ಸೈಟ್ ವಿಳಾಸ: **https://www.eproc.karnataka.gov.in** ರಲ್ಲಿ ದಿನಾಂಕ **02.12.2022** ರಿಂದ **12.12.2022** ರ **17.30** ಗಂಟೆಯ ವರೆಗೆ ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರವೇ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ. ಇದರ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿದುಕೊಳ್ಳಬಹುದು.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
''ಬೀಜ ಭವನ'', ಹೆಬ್ಬಾಳ, ಬೆಂಗಳೂರು–560 024.
ದೂರವಾಣಿ: 080–23415652, 23415656, ಫ್ಯಾಕ್ಸ್: 080–23415895
ಸಂ.: ಕರಾಬೀನಿ/ಕಾರ್ಯಕಾರಿ/3390/2022–23 ದಿನಾಂಕ: 01.12.2022

49ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಪ್ರಕಟಣೆ

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 49ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು **ಡಿಸೆಂಬರ್ 30, 2022 ಶುಕ್ರವಾರ ಬೆಳಿಗ್ಗೆ 11.00 ಘಂಟೆಗೆ, ಕರ್ನಾಟಕ ಪಶುವೈದ್ಯಕೀಯ ಪರಿಷತ್ತು, ಪಶುವೈದ್ಯಕೀಯ ಕಾಲೇಜು ಆವರಣ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು–560024** ಇಲ್ಲಿ ನಡೆಯಲಿದೆ. ಸದಸ್ಯರುಗಳಿಗೆ ಪ್ರತ್ಯೇಕವಾಗಿ ಅಂಚೆಯ ಮೂಲಕ ನೋಟೀಸು ಮತ್ತು ವಾರ್ಷಿಕ ವರದಿಯನ್ನು ಕಳುಹಿಸಲಾಗುತ್ತದೆ. ನಿಗಮದ ಸದಸ್ಯರುಗಳು ಸಭೆಯಲ್ಲಿ ಖುದ್ದಾಗಿ ಭಾಗವಹಿಸಿ ಸಭೆಯು ಸುಸೂತ್ರವಾಗಿ ನಡೆಯಲು ಸಹಕಾರ ನೀಡಲು ಕೋರಲಾಗಿದೆ.
ನಿರ್ದೇಶಕ ಮಂಡಳಿಯ ಪರವಾಗಿ
ಸಹಿ/–
(ಹೆಚ್.ಎಸ್.ದೇವರಾಜ)
ವ್ಯವಸ್ಥಾಪಕ ನಿರ್ದೇಶಕರು.

ನಗರಸಭಾ ಕಾರ್ಯಾಲಯ, ಚಳ್ಳಕರೆ. (ಚಿತ್ರದುರ್ಗ ಜಿಲ್ಲೆ)
ಫೋನ್ ನಂ. 08195–250958 ಸಹಾಯವಾಣಿ: 080–23108108
ಸಂಖ್ಯೆ:ಚ.ನ/ತಾಂತ್ರಿಕ/ನ.ಉ.ನಿ./ಟೆಂಡರ್–01/ಸಿಆರ್–1/2022–23/ ದಿ:30.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ ನಗರಸಭಾ ಉದ್ದಿಮೆ ನಿಧಿಯಡಿ & 2018–19ನೇ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿಯ ಎಸ್.ಎಫ್.ಸಿ. ವಿಶೇಷ ಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000, ಹಾಗೂ ಆರ್ಥಿಕ ಇಲಾಖೆಯ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW–3/4 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿ: 09.12.2022 ರ ಸಂಜೆ 4:30 ಗಂಟೆ ವರೆಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.challakerecity.mrc.gov.in ಮತ್ತು http://eproc.karnataka.gov.in ಹಾಗೂ ಕಛೇರಿಯು ಸೂಚನಾ ಫಲಕದಲ್ಲಿ ಹಾಕಲಾಗಿರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು. ಕಾಮಗಾರಿಯ ವಿವರಗಳು:– ನಗರಸಭಾ ಉದ್ದಿಮೆ ನಿಧಿಯಡಿಯಲ್ಲಿ (ರೂ. 280.00 ಲಕ್ಷಗಳು) ಪ್ಯಾಕೇಜ್ ನಂ:01:– 1) ಚಳ್ಳಕರೆ ನಗರಸಭಾ ವ್ಯಾಪ್ತಿಯಲ್ಲಿ ಬೆಂಗಳೂರು ರಸ್ತೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಮುಂಭಾಗ ನಗರಸಭಾ ಜಾಗದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ: 95.00 ಲಕ್ಷಗಳು 2) ಚಳ್ಳಕೆರೆ ನಗರದ ಬೆಂಗಳೂರು ರಸ್ತೆಯಲ್ಲಿರುವ ವಿನಾಯಕ ಕಾಂಪ್ಲೆಕ್ಸ್ ಹಿಂಭಾಗವಿರುವ ಸಂತೇ ಮಾರುಕಟ್ಟೆಯ ನಗರಸಭಾ ಜಾಗದಲ್ಲಿ ಮತ್ತು ಚಿತ್ರದುರ್ಗ ರಸ್ತೆ ನಗರಸಭಾ ಆಧುನಿಕ ಬಸ್ ನಿಲ್ದಾಣದ ಪಕ್ಕ ವಾಣಿಜ್ಯ ಮಳಿಗೆ ನಿರ್ಮಾಣ ಕಾಮಗಾರಿ, ಅಂದಾಜು ಮೊತ್ತ: 90,00 ಲಕ್ಷಗಳು. 3) ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ ನಗರದಲ್ಲಿರುವ ಬೀದಿ ವ್ಯಾಪರಾಸ್ಥರನ್ನು ಸ್ಥಳಾಂತರಿಸುವುದರಿಂದ ಪುಟ್ ಫಾತ್ ಒತ್ತುವರಿ ತೆರವು, ಸಂಚಾರಿ ದಟ್ಟಣೆ ತೆರವು ಹಾಗೂ ನಗರದ ಸೌಂದರ್ಯ ಹೆಚ್ಚಿಸುವ ಸಲುವಾಗಿ ಬಳ್ಳಾರಿ ರಸ್ತೆಯ ನಗರಸಭಾ ಹಳೇ ಟೋಲ್‌ಗೇಟ್‌ನಿಂದ ವೀರಶೈವ ಸ್ಮಶಾನದವರೆಗೆ ವ್ಯಾಣಿಜ್ಯ ಶೆಡ್‌ಗಳನ್ನು ನಿರ್ಮಿಸುವ ಕಾಮಗಾರಿ. ಅಂದಾಜು ಮೊತ್ತ: 95.00. INDENT NO: DMA/2021-22/BD/WORK INDENT 128563 ಅಂದಾಜು ಮೊತ್ತ:– 280.00 ಲಕ್ಷ.
2018–19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿಯ ಎಸ್.ಎಫ್.ಸಿ. ವಿಶೇಷ ಅನುದಾನದಡಿಯಲ್ಲಿ (ರೂ. 244.50 ಲಕ್ಷಗಳು):– (1) ಚಳ್ಳಕೆರೆ ನಗರದ ವಾರ್ಡ್ ನಂ. 28,15,14,31,27,8,29ರ ವಿವಿಧ ಪ್ರದೇಶಗಳಲ್ಲಿ ಇಂಟರ್‌ಲಾಕಿಂಗ್ ಪೇವರ್ಸ್ ಅಳವಡಿಸುವ ಕಾಮಗಾರಿ. INDENT NO: DMA/2022-23/RD/WORK INDENT 135111 ಅಂದಾಜು ಮೊತ್ತ:– 95.10 ಲಕ್ಷ. (2) ಚಳ್ಳಕೆರೆ ನಗರದ ವಾರ್ಡ್ ನಂ 20,13,24,26,23,14,7,3 ರ ವಿವಿಧ ಪ್ರದೇಶಗಳಲ್ಲಿ ಇಂಟರ್‌ಲಾಕಿಂಗ್ ಪೇವರ್ಸ್ ಅಳವಡಿಸುವ ಕಾಮಗಾರಿ. INDENT NO: DMA/2022-23/RD/WORK INDENT135112 ಅಂದಾಜು ಮೊತ್ತ:– 94.25 ಲಕ್ಷ. (3) ಚಳ್ಳಕೆರೆ ನಗರದ ವಾರ್ಡ್ ನಂ 13,26,23,21,02 ರ ವಿವಿಧ ಪ್ರದೇಶಗಳಲ್ಲಿ ಸಿ.ಸಿ ಚರಂಡಿ, ಡೆಕ್ ಸ್ಲಾಬ್ ನಿರ್ಮಾಣ ಹಾಗೂ ಕವರ್‌ಸ್ಲಾಬ್ ಅಳವಡಿಸುವ ಕಾಮಗಾರಿ. INDENT NO: DMA/2022-23/OW/WORK INDENT135115 ಅಂದಾಜು ಮೊತ್ತ:– 55.15 ಲಕ್ಷ.
ಸಹಿ/– ಅಧ್ಯಕ್ಷರು, ನಗರಸಭೆ, ಚಳ್ಳಕೆರೆ ಸಹಿ/– ಉಪಾಧ್ಯಕ್ಷರು ನಗರಸಭೆ, ಚಳ್ಳಕೆರೆ ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ಚಳ್ಳಕೆರೆ
DIPR/CTA/MCA/733/2022-23 ಸಹಿ/– ಪೌರಾಯುಕ್ತರು, ನಗರಸಭೆ, ಚಳ್ಳಕೆರೆ

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
(An Autonomous Institute of Govt. Of
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599
ಸಂಖ್ಯೆ:ಹಿಮ್ಸ್/ಟಿ.ಎಸ್(ಹೊಗು)/ಭದ್ರತಾ ಮತ್ತು ಇತರೆ ಸೇವೆ/20/2022–23
ದಿನಾಂಕ:30.11.2022

ಇ–ಟೆಂಡರ್ ಪ್ರಕಟಣೆ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ 2023–24ನೇ ಸಾಲಿಗೆ ಭದ್ರತಾ ಮತ್ತು ಇತರೆ ಸೇವೆಯನ್ನು ನೊಂದಾಯಿತ ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ಇ–Procurement Portal ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್‌ನ ಆಂದಾಜು ಮೊತ್ತ ರೂ :470.81 ಲಕ್ಷಗಳು ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ ರೂ :7.06 ಲಕ್ಷಗಳು E-Procurement Portal ನಲ್ಲಿ ಟೆಂಡರ್ ಪ್ರಕಟಣೆಯ ದಿನಾಂಕ :02.12.2022 ಇ–ಟೆಂಡರ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 31.12.2022 ಪ್ರೀ– ಬಿಡ್ ಮೀಟಿಂಗ್ ದಿನಾಂಕ: 14.12.2022 ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.01.2023 ಆರ್ಥಿಕ ಬಿಡ್ ತೆರೆಯುವ ದಿನಾಂಕ: "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 1.ಟೆಂಡರ್‌ದಾರರು ತಮ್ಮ ಬಿಡ್ ಅನ್ನು ಇ–Procurement Portal ನಲ್ಲಿ ಸಲ್ಲಿಸುವುದು. ಈ ಬಗ್ಗೆ ಟೆಂಡರುದಾರರಿಗೆ ನಿಗದಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು. ಇ–ಟೆಂಡರ್‌ನಲ್ಲಿ ಬಿಡ್ ಸಲ್ಲಿಸುವಾಗ ಎಲ್ಲಾ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡತಕ್ಕದ್ದು ಮತ್ತು E-Procurement Portal ನಲ್ಲಿ ನಿಗದಿಪಡಿಸಿರುವ ಇ.ಎಂ.ಡಿ.ಮೊತ್ತ ಮತ್ತು ಪ್ರೋಸೆಸಿಂಗ್ ಫೀಯನ್ನು ಸಲ್ಲಿಸುವುದು. 2.ಈ ಸಂಬಂಧದ ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ. (ರಜಾ ದಿನಗಳನ್ನು ಹೊರತು ಪಡಿಸಿ) ಟೆಂಡರ್‌ದಾರರು ಇ–ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಮತ್ತು ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ನಲ್ಲಿ Download ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/785/2022–23

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಿಲ್ಲಾ ಪಂಚಾಯತ್, ಹಾವೇರಿ
ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ , ಕಾರ್ಯಾಲಯ, ಜಿಲ್ಲಾ ಕ್ರೀಡಾಂಗಣ, ಹಾವೇರಿ–581110
ದೂ: 08375-232070 ಫ್ಯಾಕ್ಸ್ : 08375-232443 ಇ–ಮೇಲ್: adysshvr@gmail.com
ಸಂಖ್ಯೆ:ಸನಿ/ಯುಸೇಕ್ರೀಇ/ಕಾ/ಮೆಸ್/ಅ.ಇ.ಟೆಂಡರ್/2022–23 ದಿನಾಂಕ:25–11–2022

ಡಿಸೆಂಬರ್–**2022** ರಿಂದ ನವೆಂಬರ್-**2023**ರ ವರೆಗೆ ಹಾವೇರಿ ಜಿಲ್ಲೆಯ ಹಾವೇರಿ ಕ್ರೀಡಾ ವಸತಿ ನಿಲಯದ **5** ರಿಂದ **10** ನೇ ತರಗತಿ ಕ್ರೀಡಾಪಟುಗಳಿಗೆ ಊಟೋಪಹಾರ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ **1999** ಮತ್ತು ನಿಯಮ **2000** ರ ಪ್ರಕಾರ ಮೆಸ್ ಗುತ್ತಿಗೆಯನ್ನು ನೀಡುವ ಸಲುವಾಗಿ ಅರ್ಹ ಗುತ್ತಿಗೆದಾರರನ್ನು ಪಡೆಯಲು ಇ–ಪ್ರಕ್ಯೂರಮೆಂಟ್**(E-Procurement)** ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಅನುಬಂಧ–1

1. ಟೆಂಡರ್ ಪ್ರಕಟಣೆ ದಿನಾಂಕ ಸನಿ/ಯುಸೇಕ್ರೀಇ/ಕಾ/ಮೆಸ್/ಅ.ಇ.ಟೆಂಡರ್/**2022-23** ದಿನಾಂಕ:**25-11-2022**. **2.** ಆನ್ ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಪಡೆಯುವ ದಿನಾಂಕ. ದಿನಾಂಕ:**28-11-2022** ರಿಂದ **08-12-2022** ಮಧ್ಯಾಹ್ನ: **4.00** ಗಂಟೆಯವರೆಗೆ. **3.** ಇ ಟೆಂಡರ್‌ನಲ್ಲಿ (ದ್ವಿ ಲಕೋಟೆ) ಯಲ್ಲಿ ಅಪ್ ಲೋಡ್ ಮಾಡಿ ಸಲ್ಲಿಸಲು ಕೊನೆಯ ದಿನಾಂಕ. ದಿನಾಂಕ:**09-12-2022** ಮಧ್ಯಾಹ್ನ: **4.00** ಗಂಟೆ ಗಂಟೆಯವರೆಗೆ. **4.** ತಾಂತ್ರಿಕ ಲಕೋಟೆ ತೆರೆಯುವ ಸ್ಥಳ ಮತ್ತು ದಿನಾಂಕ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾವೇರಿ ದಿನಾಂಕ:**12-12-2022** ಮಧ್ಯಾಹ್ನ **04:00** ಗಂಟೆಗೆ. **5.** ಆರ್ಥಿಕ ಲಕೋಟೆ ತೆರೆಯುವ ಸ್ಥಳ ಮತ್ತು ದಿನಾಂಕ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾವೇರಿ **16-12-2022** ಮಧ್ಯಾಹ್ನ **04:00** ಗಂಟೆಗೆ (ಸಾಧ್ಯವಾದಲ್ಲಿ). **6.** ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. **36,56,250-00**. **7.** ಇ–ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ ರೂ.**73,125/-** . **8.** ಟೆಂಡರ್ ಅವಧಿ ಡಿಸೆಂಬರ್-**2022** ರಿಂದ ನವೆಂಬರ್-**2023**ರ ವರೆಗೆ. **9.** ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ಮತ್ತು ದೂರವಾಣಿ ಸಂಖ್ಯೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಹಾವೇರಿ ದೂರವಾಣಿ ಸಂಖ್ಯೆ: 08375–232070
ಸಹಿ/–ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾವೇರಿ
ವಾ.ಸಾ.ಇ/ಹಾವೇರಿ/398/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯ ನಿರ್ವಾಹಕ ಇಂಜನಿಯರ್‌ರವರ ಕಚೇರಿ, ನಂ.2ನೇ ವಿಭಾಗ ಜಾವಾ ಫ್ಯಾಕ್ಟರಿ ರಸ್ತೆ, ಹೈವೇ ಸರ್ಕಲ್ ಹತ್ತಿರ, ಮೈಸೂರು–570001
ದೂರವಾಣಿ: 0821–2410999, ಇ–ಮೇಲ್: ksdb_mys2@yahoo.com
ವೆಬ್‌ಸೈಟ್: https://ksdb.karnataka.gov.in
ಸಂಖ್ಯೆ: ಕಕೊಅಮ/ಕಾನಿ.ಇಂ/ಮೈ–ವಿ–2/ಪ.ಜಾ./2022–23/532 ದಿನಾಂಕ: 30–11–2022

ಟೆಂಡರ್ ಆಹ್ವಾನ (ಐಎಫ್‌ಟಿ) – ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕಾರ್ಯನಿರ್ವಾಹಕ ಇಂಜನಿಯರ್ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.2ನೇ ವಿಭಾಗ, ಮೈಸೂರು ಇವರು ಮಂಡಳಿಯ ಆಯುಕ್ತರು, ಕಕೊಅಮ, ಬೆಂಗಳೂರು ರವರ ಪರವಾಗಿ **ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ 11 ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ **ರೂ.42,33,489/– ಮತ್ತು** ಕನಿಷ್ಠ ಅಂದಾಜು ಮೊತ್ತ **ರೂ.8,45,807/– ಗರಿಷ್ಠ ಇ.ಎಂ.ಡಿ ರೂ. 85,000/–** ಮತ್ತು **ಕನಿಷ್ಠ ಇ.ಎಂ.ಡಿ. ರೂ 21,500/–.** ಟೆಂಡರ್ ಪ್ರಕಟಣೆ, ವೇಳಾಪಟ್ಟಿ ಹಾಗೂ ಇತರೆ ವಿವರಗಳು ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ಲಭ್ಯವಿರುತ್ತದೆ.

1	ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ	12–12–2022ರ ಸಂಜೆ 4.00 ಗಂಟೆಯವರೆಗೆ.
2	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	14–12–2022ರ ಸಂಜೆ 4.00 ಗಂಟೆಯವರೆಗೆ.
3	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	16–12–2022ರ ಬೆಳಿಗ್ಗೆ 11.00 ಗಂಟೆಗೆ.
4	ಟೆಂಡರ್‌ಗಳನ್ನು ತೆರೆಯುವ ಹಾಗೂ ಪ್ರಿ–ಬಿಡ್ ಕಾನ್ಫರೆನ್ಸ್ ನಡೆಯುವ ಸ್ಥಳದ ವಿಳಾಸ	ಕಾರ್ಯನಿರ್ವಾಹಕ ಇಂಜನಿಯರ್‌ರವರ ಕಚೇರಿ, ಕಕೊಅಮ, 2ನೇ ವಿಭಾಗ , ಹೈವೇ ಸರ್ಕಲ್ ಹತ್ತಿರ, ಜಾವಾ ಫ್ಯಾಕ್ಟರಿ ರಸ್ತೆ , ಮೈಸೂರು-570001

ಸಹಿ/– ಕಾರ್ಯನಿರ್ವಾಹಕ ಇಂಜನಿಯರ್, ಕಕೊಅಮ ನಂ. 2ನೇ ವಿಭಾಗ, ಮೈಸೂರು.
DIPR/CP/3316/Yakshi/2022-23

ಸಿನಿಮಾ ಪುರವಣಿ

ಇದು ಅಭಿಷೇಕ್ ಮ್ಯಾನರ್ಸ್

'ಅಮರ್' ಚಿತ್ರದಿಂದ ಆರಂಭಿಸಿ ಈಗ ಹಂತಹಂತವಾಗಿ ಚಿತ್ರರಂಗದಲ್ಲಿ ಮುಂದುವರಿಯುತ್ತಿರುವ ಅಭಿಷೇಕ್ ಅಂಬರೀಷ್ ಅವರು ಪಾತ್ರಗಳ ಆಯ್ಕೆಯಲ್ಲಿ ಪಕ್ಕಾ ಇದ್ದಾರೆ. ಪಾತ್ರಕ್ಕೆ ತಕ್ಕಂತೆ ದೇಹವನ್ನೂ ಒಗ್ಗಿಸುವ, ಅಭಿನಯದ ಕಸುವು ತುಂಬುವ ಅವರು ತಮ್ಮ ಸಿನಿಪಯಣದ ಕುರಿತು ಮಾತಿಗಿಳಿದದ್ದು ಹೀಗೆ...

ಶರತ್ ಹೆಗ್ಡೆ

ಅಭಿಷೇಕ್ ಅಂಬರೀಷ್

●ಅಭಿಷೇಕ್ ಅವರ ಸಿನಿಬದುಕಿನಲ್ಲಿ ಅಪ್ಪ ಅಂಬರೀಷ್, ಅಮ್ಮ ಸುಮಲತಾ ಅವರ ಪ್ರಭಾವ ಎಷ್ಟಿದೆ?

ಖಂಡಿತವಾಗಿಯೂ ತುಂಬಾ ಇದೆ. ಕಥೆ ಅಥವಾ ವಿಷಯದ ಆಯ್ಕೆ ಇತ್ಯಾದಿಯಲ್ಲಿ ಸಾಕಷ್ಟು ಆಲೋಚನೆ ಮಾಡುತ್ತೇನೆ. ಕೆಲಸದ ಶಿಸ್ತು, ಬದ್ಧತೆಯಲ್ಲಿ ಹೆತ್ತವರ ಪ್ರಭಾವ ಖಂಡಿತಾ ಇದೆ. ಅಪ್ಪನ ಕಾಲದಲ್ಲಿ ಒಂದು ಸಿನಿಮಾದಿಂದ ಇನ್ನೊಂದಕ್ಕೆ ಸಾಕಷ್ಟು ವಿರಾಮ ಇತ್ತು. ಈಗ ಹಾಗಲ್ಲ. ಈಗ ಹೆಚ್ಚು ಪರಿಶ್ರಮ ಹಾಕಬೇಕು. ನಾನೂ ಪ್ರೇಕ್ಷಕರನ್ನು ರಂಜಿಸಬೇಕು. ಆ ನಿಟ್ಟಿನಲ್ಲಿ ಸಿದ್ಧತೆ ಇದ್ದೇ ಇದೆ.

●ಸಿನಿಮಾ ಕ್ಷೇತ್ರಕ್ಕೆ ಬರುವಾಗ ನಿಮ್ಮ ಸಿದ್ಧತೆ ಏನಿತ್ತು?

ಎಲ್ಲ ಕಲಾವಿದರು ಏನೇನೆಲ್ಲಾ ಕಲಿತಿದ್ದಾರೋ ಅದನ್ನೇ ನಾನೂ ಕಲಿತಿದ್ದೇನೆ. ಸಿನಿಮಾ ಕ್ಷೇತ್ರಕ್ಕೆ ಬರುವುದು ಅಂದರೆ ತಮಾಷೆ ಅಲ್ಲ. ಸಿದ್ಧತೆ, ಬದ್ಧತೆ, ಗಾಂಭೀರ್ಯ ಇರಲೇಬೇಕು. ಇಂದಿನ ಪ್ರೇಕ್ಷಕರು ಸಣ್ಣ ಸಣ್ಣ ಸಂಗತಿಗಳನ್ನೆಲ್ಲಾ ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಾರೆ. ಪ್ರತಿಯೊಬ್ಬ ಹೀರೊ ಕೂಡಾ ಅಪೂರ್ವ ವ್ಯಕ್ತಿಯೇ ಆಗಿರುತ್ತಾನೆ. ಅವನ ಹಿಂದೆ ದೊಡ್ಡ ಶ್ರಮ ಇದ್ದೇ ಇರುತ್ತದೆ.

●ನಿಮ್ಮ ಸಿನಿಮಾ ಸಂಖ್ಯೆ ಗಮನಿಸಿದರೆ ನಿಧಾನಗತಿಯ ಚಲನೆಯೇ ಅಥವಾ ಎಚ್ಚರಿಕೆಯ ಹೆಜ್ಜೆಯೇ?

ಎರಡೂ ಅಲ್ಲ. ಸಿನಿಮಾಗಳ ಸಂಖ್ಯೆ ಮುಖ್ಯವಾಗುವುದಿಲ್ಲ. ನನಗೆ ಸರಿ ಎನಿಸಿದಾಗಲಷ್ಟೇ ಮುಂದುವರಿಯುತ್ತೇನೆ. ಉದಾಹರಣೆಗೆ ಕೋವಿಡ್‌ನಿಂದಾಗಿ ಸುಮಾರು ಎರಡು ವರ್ಷ ಚಿತ್ರರಂಗದ ಎಲ್ಲ ಚಟುವಟಿಕೆಗಳೂ ನಿಧಾನವಾದವಲ್ಲವೇ? ಈಗ ನೋಡಿ ನನ್ನ ಮುಂದಿನ ವರ್ಷದ ಯೋಜನೆಗಳೆಲ್ಲಾ ಕೈಯಲ್ಲಿವೆ. ಒಂದೊಂದು ಸಿನಿಮಾ ಒಂದೊಂದು ಅವಧಿಯನ್ನು ಬೇಡುತ್ತದೆ. ಕೆಲವು ವೇಗವಾಗಿ ಆಗಿಬಿಡುತ್ತವೆ. ಕೆಲವು ನಿಧಾನವಾಗುತ್ತವೆ. ಪ್ರಕೃತಿಯೂ ನೆರವಾಗಬೇಕು. ಕಾಲಪರಿಸ್ಥಿತಿಗಳೂ ಕಾರಣವಾಗುತ್ತವೆ. ಹಾಗಾಗಿ ಸಂಖ್ಯೆಗಳಿಗೆ ಕಟ್ಟುಬಿದ್ದು ಸಿನಿಮಾ ಮಾಡುತ್ತಲೇ ಹೋಗುವುದಿಲ್ಲ. ನಾನು ಯಾವುದೇ ಸಿನಿಮಾ ಮಾಡಿದರೂ ಪ್ರೇಕ್ಷಕನ ದುಡ್ಡಿಗೆ ಮೋಸ ಆಗಬಾರದು. ಜನ ಪ್ರೀತಿಸುವಂತಾಗಬೇಕು.

●ಬ್ಯಾಡ್ ಮ್ಯಾನರ್ಸ್, ಕಾಳಿ, ಎಎ04... ಏನೇನಿವೆ ಈ ಚಿತ್ರಗಳಲ್ಲಿ?

ಮೂರೂ ಚಿತ್ರಗಳು ಮತ್ತು ಅವುಗಳ ಕಥಾ ಹಿನ್ನೆಲೆ ಬೇರೆ ಬೇರೆಯೇ ಆಗಿವೆ. ಪಾತ್ರಗಳೂ ಬೇರೆಯೇ. ನಾಯಕ ಪಾತ್ರಧಾರಿ ನಾನೊಬ್ಬನೇ. ಹಾಗಾಗಿ ಮೂರೂ ಭಿನ್ನ ಚಿತ್ರಗಳು. ಒಟ್ಟಾರೆ ಈ ಚಿತ್ರಗಳು ಅತ್ಯುತ್ತಮ ರೀತಿಯಲ್ಲಿ ಜನರಿಗೆ ತಲುಪಬೇಕು. ಇವುಗಳ ಹಿಂದೆ ನಿರ್ದೇಶಕರ ಹಾಗೂ ಇಡೀ ತಂಡದ ಪರಿಶ್ರಮ ಇದೆ.

●ಪಾತ್ರದಿಂದ ಪಾತ್ರಕ್ಕೆ ಬದಲಾಗುವಾಗ ನಿಮ್ಮ ದೇಹ ಪ್ರಕೃತಿಯನ್ನು ಹೇಗೆ ಒಗ್ಗಿಸಿಕೊಳ್ಳುತ್ತೀರಿ?

ಅಭಿನಯ ಎಂದರೆ ಕೇವಲ ಜಿಮ್, ದೇಹ ಪ್ರದರ್ಶನ ಅಲ್ಲ. ಆದರೆ, ಅದೂ ಮುಖ್ಯ. ಪ್ರತಿಯೊಬ್ಬ ಕಲಾವಿದನೂ ಆಯಾ ಪಾತ್ರದ ಬದಲಾವಣೆಗೆ ತಕ್ಕಂತೆ ಒಗ್ಗಿಕೊಳ್ಳಲೇಬೇಕು. ಅದಕ್ಕೆ ತಕ್ಕಹಾಗೆ ಸಿದ್ಧನಾಗುತ್ತೇನೆ. ಈಗ ಹೀರೊ ಎಂದರೆ ಯಾವುದೇ ಸಿದ್ಧ ಸೂತ್ರಗಳಿಲ್ಲ. ಹೀಗೇ ಇರುತ್ತಾನೆ ಎನ್ನಲಾಗದು. ಅವುಗಳನ್ನು ಮೀರಿ ಚಿತ್ರರಂಗ ಎಷ್ಟೋ ಮುಂದಕ್ಕೆ ಹೋಗಿದೆ. ಈಗ ಕಂಟೆಂಟ್ (ಕಥಾವಸ್ತು) ಮಾತ್ರ ಹೀರೊ. ಅದು ಸಮರ್ಪಕವಾಗಿದ್ದರೆ ಮಾತ್ರ ಪ್ರೇಕ್ಷಕ ಸ್ವೀಕರಿಸುತ್ತಾನೆ.

●ರಾಜಕೀಯದತ್ತ ಆಸಕ್ತಿ ಇದೆಯೇ?

ಅಮ್ಮ ರಾಜಕಾರಣದಲ್ಲಿ ಇದ್ದಾರೆ. ಅವರಿಗೆ ಜೊತೆಯಾಗಿ ನಿಲ್ಲುತ್ತೇನೆ. ಸದ್ಯ ರಾಜಕೀಯದ ಯಾವುದೇ ಯೋಚನೆ ಇಲ್ಲ. ಜನರಿಗೆ ಸೇವೆ ಮಾಡಬೇಕೆಂದರೆ ರಾಜಕೀಯವೇ ಆಗಬೇಕೆಂದಿಲ್ಲವಲ್ಲ. ಸದ್ಯ ಸಿನಿಮಾ. ಅದರ ನಡುವೆ ಒಂದಿಷ್ಟು ಜನರ ಸೇವೆ. ಇಷ್ಟು ಸಾಕಲ್ಲವೇ. ನನಗೆ ಅಂಥ ಆಸಕ್ತಿ ಇಲ್ಲ.

●ಅಭಿಮಾನಿಗಳಿಗೆ ನಿಮ್ಮ ಮಾತು?

ತಂದೆಯವರನ್ನು ಪ್ರೀತಿಸಿದ್ದೀರಿ. ಈಗಲೂ ಪ್ರೀತಿಸುತ್ತಿದ್ದೀರಿ. ನನ್ನ ಚಿತ್ರಗಳಿಗೂ ಅದೇ ಪ್ರೀತಿ, ಬೆಂಬಲವಿರಲಿ.

ಪ್ರೇಮ್ ಪುತ್ರಿಯ 'ಅಮೃತ' ಹೆಜ್ಜೆ

ಟಗರು ಪಲ್ಯ
ಅಮೃತ

ಉಮೇಶ್ ಕೆ.ಕೃಪ ಆ್ಯಕ್ಷನ್ ಕಟ್ ಹೇಳಲಿರುವ, ನಟ 'ಡಾಲಿ' ಧನಂಜಯ ಅವರ ಡಾಲಿ ಪಿಕ್ಚರ್ಸ್‌ನ ಹೊಸ ಪ್ರಾಜೆಕ್ಟ್ 'ಟಗರು ಪಲ್ಯ' ಸೆಟ್ಟೇರಿದೆ. ಇತ್ತೀಚೆಗಷ್ಟೇ ಚಿತ್ರದ ನಾಯಕ ಯಾರೆಂದು ಘೋಷಿಸಿದ್ದ ಚಿತ್ರತಂಡ, ಇದೀಗ ನಾಯಕಿಯ ಪರಿಚಯ ಮಾಡಿದೆ.

'ಟಗರು ಪಲ್ಯ' ಸಿನಿಮಾದಲ್ಲಿ 'ಇಕ್ಕಟ್' ಖ್ಯಾತಿಯ ನಟ ನಾಗಭೂಷಣ್ ಅವರಿಗೆ ಜೋಡಿಯಾಗಿ 'ನೆನಪಿರಲಿ' ಖ್ಯಾತಿಯ ಲವ್ಲಿ ಸ್ಟಾರ್ ಪ್ರೇಮ್ ಮಗಳು ಅಮೃತ ಪ್ರೇಮ್ ಜೋಡಿಯಾಗಲಿದ್ದಾರೆ. ಇದು ಅಮೃತ ಅವರ ಚೊಚ್ಚಲ ಸಿನಿಮಾ. ಡಾಲಿ ಪಿಕ್ಚರ್ಸ್ ನಿರ್ಮಾಣ ಸಂಸ್ಥೆ ಮೂಲಕ ಅಮೃತ ಚಂದನವನದಲ್ಲಿ ತಮ್ಮ ಸಿನಿಪಯಣವನ್ನು ಆರಂಭಿಸಿದ್ದಾರೆ. ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು ಅಮೃತ ಲುಕ್ ಗಮನ ಸೆಳೆಯುತ್ತಿದೆ. ಇತ್ತೀಚೆಗಷ್ಟೇ ಚಿತ್ರದ ಮುಹೂರ್ತವೂ ನಡೆಯಿತು.

'ಸಿನಿಮಾಗೆ ಫ್ರೆಶ್ ಫೇಸ್ ಹುಡುಕಾಟದಲ್ಲಿದ್ದೆವು. ಕಾರ್ಯಕ್ರಮವೊಂದರಲ್ಲಿ ಅಮೃತ ಅವರನ್ನು ಭೇಟಿಯಾದಾಗ ಈ ಸಿನಿಮಾ ಬಗ್ಗೆ ಹೇಳಿದೆ. ಕಥೆ ಕೇಳಿ ನಿರ್ಧಾರ ಹೇಳುತ್ತೇನೆ ಎಂದಿದ್ದರು. ಅವರಿಗೂ ಈ ಕಥೆ ಇಷ್ಟವಾಯಿತು. ಸಿನಿಮಾ ಮಾಡಲು ಒಪ್ಪಿಕೊಂಡರು. ಚಿತ್ರದಲ್ಲಿ ಹಳ್ಳಿ ಹುಡುಗಿ ಪಾತ್ರವನ್ನು ಅಮೃತ ನಿರ್ವಹಿಸಲಿದ್ದಾರೆ. ಈ ಪಾತ್ರಕ್ಕಾಗಿ ಕಳೆದ 20 ದಿನಗಳಿಂದ ಅವರಿಗೆ ವರ್ಕ್ ಶಾಪ್ ನೀಡಲಾಗುತ್ತಿದೆ' ಎನ್ನುತ್ತಾರೆ ಉಮೇಶ್.

'ಧನಂಜಯ ಅವರ ಸಿನಿಮಾಗಳನ್ನು ಚಿತ್ರಮಂದಿರದಲ್ಲಿ ನೋಡಿ ಇಷ್ಟಪಡುತ್ತಿದ್ದವಳು ನಾನು. ಇದೀಗ ಅವರದ್ದೇ ಪ್ರೊಡಕ್ಷನ್ ಹೌಸ್‌ನಲ್ಲಿ ಸಿನಿಮಾ ಮಾಡುತ್ತಿದ್ದೇನೆ. ನಟನಾ ಕ್ಷೇತ್ರಕ್ಕೆ ಬರುತ್ತೇನೆ ಎಂದು ಅಂದುಕೊಂಡಿರಲಿಲ್ಲ. ಕಲಿಯುವ ನಂಬಿಕೆ, ಶ್ರದ್ಧೆ ಇದ್ದರೆ ಚಿತ್ರರಂಗದಲ್ಲಿ ಯಾರೂ ಬೇಕಾದರೂ ಬೆಳೆಯಬಹುದು ಎಂದು ಅಪ್ಪ ಧೈರ್ಯ ತುಂಬಿದರು' ಎಂದು ನೆನಪಿಸಿಕೊಂಡರು ಅಮೃತ.

ಪ್ರಸ್ತುತ ಬಯೋ ಮೆಡಿಕಲ್ ಎಂಜಿನಿಯರಿಂಗ್ ಓದುತ್ತಿರುವ ಅಮೃತ, ಓದು ಮುಂದುವರಿಸುವುದರ ಜೊತೆಗೆ ಚಿತ್ರರಂಗದಲ್ಲೂ ತೊಡಗಿಸಿಕೊಳ್ಳಲಿದ್ದಾರೆ. ರಂಗಾಯಣ ರಘು, ನಾಗಭೂಷಣ್, ತಾರಾ, ಶರತ್ ಲೋಹಿತಾಶ್ವ ಒಳಗೊಂಡ ದೊಡ್ಡ ತಾರಾಬಳಗ ಸಿನಿಮಾದಲ್ಲಿದೆ ಎಂದಿದೆ ಚಿತ್ರತಂಡ. ವಾಸುಕಿ ವೈಭವ್ ಸಂಗೀತ ನಿರ್ದೇಶನ, ಎಸ್.ಕೆ.ರಾವ್ ಛಾಯಾಗ್ರಹಣ, ವಿನೋದ್ ಮಾಸ್ಟರ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ

'ಕಾಳಿ' ಹಿಂದೆ ಬಿದ್ದ 'ಲೀಲ'

ಯಂಗ್ ರೆಬಲ್ ಸ್ಟಾರ್ ಅಭಿಷೇಕ್ ಅಂಬರೀಷ್ 'ಬ್ಯಾಡ್ ಮ್ಯಾನರ್ಸ್' ಬಳಿಕ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ಕೃಷ್ಣ ಅವರು ಆ್ಯಕ್ಷನ್ ಕಟ್ ಹೇಳಲಿರುವ 'ಕಾಳಿ' ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆದಿದ್ದು, ಅಭಿಷೇಕ್‌ಗೆ 'ಕಾಂತಾರ' ಖ್ಯಾತಿಯ ನಟಿ ಸಪ್ತಮಿ ಗೌಡ ಜೋಡಿಯಾಗಿದ್ದಾರೆ.

2014ರಲ್ಲಿ ಯಶ್ ಅಭಿನಯದ 'ಗಜಕೇಸರಿ' ಚಿತ್ರದ ಮೂಲಕ ಡೈರೆಕ್ಟರ್ ಕ್ಯಾಪ್ ತೊಟ್ಟ ಕೃಷ್ಣ ಅವರು ನಂತರದಲ್ಲಿ ಸುದೀಪ್ ಅಭಿನಯದ 'ಹೆಬ್ಬುಲಿ' ಮತ್ತು 'ಪೈಲ್ವಾನ್' ಚಿತ್ರಗಳನ್ನು ನಿರ್ದೇಶಿಸಿದ್ದರು. 'ಕಾಳಿ' ಕೃಷ್ಣ ಅವರ ನಾಲ್ಕನೇ ಸಿನಿಮಾ. 1990ರ ದಶಕದ ಕಾವೇರಿ ಗಲಭೆಯ ಹಿನ್ನೆಲೆಯಲ್ಲಿ ನಡೆಯುವ 'ಕಾಳಿ' ಚಿತ್ರವನ್ನು, ಕೃಷ್ಣ ಅವರ ಪತ್ನಿ ಸ್ವಪ್ನಾ ಕೃಷ್ಣ ತಮ್ಮ ಆರ್‌ಆರ್‌ಆರ್ ಮೋಷನ್ ಪಿಕ್ಚರ್ಸ್ ಸಂಸ್ಥೆಯಡಿ ನಿರ್ಮಾಣ ಮಾಡುತ್ತಿದ್ದಾರೆ. ಇದು ಈ ಸಂಸ್ಥೆಯ ಮೂರನೇ ಸಿನಿಮಾ. ಅಭಿಷೇಕ್ ಅವರಿಗೆ ಇದು ಮೂರನೇ ಚಿತ್ರ. 'ಅಮರ್' ಚಿತ್ರದ ಮುಖಾಂತರ ಚಂದನವನಕ್ಕೆ ಕಾಲಿಟ್ಟಿದ್ದ ಅಭಿಷೇಕ್, ಸದ್ಯ ಸೂರಿ ನಿರ್ದೇಶನದ 'ಬ್ಯಾಡ್ ಮ್ಯಾನರ್ಸ್' ಚಿತ್ರದ ಚಿತ್ರೀಕರಣ ಪೂರ್ಣಗೊಳಿಸಿ, 'ಕಾಳಿ' ಸೆಟ್‌ಗೆ ಧುಮುಕಿದ್ದಾರೆ.

'ಹೆಬ್ಬುಲಿ' ಮತ್ತು 'ಪೈಲ್ವಾನ್' ಚಿತ್ರಗಳಿಗೆ ಛಾಯಾಗ್ರಾಹಕರಾಗಿದ್ದ ಕರುಣಾಕರ್ 'ಕಾಳಿ' ಚಿತ್ರಕ್ಕೂ ಕ್ಯಾಮೆರಾ ಹಿಡಿದಿದ್ದಾರೆ. ಚರಣ್ ರಾಜ್ ಈ ಚಿತ್ರದ ಸಂಗೀತ ನಿರ್ದೇಶಕರು. ದೀಪು ಎಸ್. ಕುಮಾರ್ ಸಂಕಲನ ಮತ್ತು 'ಕೆಜಿಎಫ್' ಖ್ಯಾತಿಯ ಚಂದ್ರಮೌಳಿ ಈ ಚಿತ್ರಕ್ಕೆ ಸಂಭಾಷಣೆ ನೀಡಿದ್ದಾರೆ. ಮುಂದಿನ ಜನವರಿಯಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ ಎಂದಿದೆ ಚಿತ್ರತಂಡ.

ಮತ್ತೆ 'ಯುದ್ಧಕಾಂಡ'!

'ಯುದ್ಧಕಾಂಡ' ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಹಿಟ್ ಚಿತ್ರ. ಇದೀಗ ಇದೇ ಶೀರ್ಷಿಕೆ ಹೊತ್ತ ಸಿನಿಮಾವೊಂದು ಮತ್ತೆ ತೆರೆಗೆ ಬರಲಿದೆ. 'ಯುದ್ಧಕಾಂಡ'ಕ್ಕೆ ಇಳಿಯಲು ನಟ ಅಜಯ್ ರಾವ್ ಸಜ್ಜಾಗಿದ್ದಾರೆ.

'ತಾಜ್ ಮಹಲ್', 'ಕೃಷ್ಣ ಲೀಲಾ', 'ಕೃಷ್ಣ ರುಕ್ಮಿಣಿ' ಸಿನಿಮಾ ಖ್ಯಾತಿಯ ಅಜಯ್ ರಾವ್, ಚಂದನವನದ ಯುವ ನಿರ್ದೇಶಕನೊಂದಿಗೆ ಹೊಸ ಸಿನಿಮಾ ಘೋಷಿಸಿದ್ದಾರೆ. 'ಕಟಿಂಗ್ ಶಾಪ್' ಸಿನಿಮಾ ನಿರ್ದೇಶಿಸಿದ್ದ ಪವನ್ ಭಟ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಚಿತ್ರದ ಟೈಟಲ್ ಟೀಸರ್ ಬಿಡುಗಡೆಯಾಗಿದ್ದು, ಚಿತ್ರಕ್ಕೆ 'ಯುದ್ಧಕಾಂಡ' ಎಂಬ ಶೀರ್ಷಿಕೆ ಇಡಲಾಗಿದೆ. ಇದೇ ಮೊದಲ ಬಾರಿಗೆ ಲಾಯರ್ ಪಾತ್ರದಲ್ಲಿ ಅಜಯ್ ಕಾಣಿಸಿಕೊಳ್ಳಲಿದ್ದಾರೆ. 'ಯುದ್ಧಕಾಂಡ' ಚಿತ್ರದಲ್ಲಿ ರವಿಚಂದ್ರನ್ ಅವರೂ ಲಾಯರ್ ಪಾತ್ರದಲ್ಲಿ ನಟಿಸಿದ್ದರು.

ಈ ಚಿತ್ರವನ್ನು ಅಜಯ್ ತಮ್ಮದೇ ನಿರ್ಮಾಣ ಸಂಸ್ಥೆ 'ಶ್ರೀಕೃಷ್ಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್' ಮತ್ತು 'ಅಜಯ್ ರಾವ್ ಪ್ರೊಡಕ್ಷನ್ಸ್'ನಡಿ ನಿರ್ಮಾಣ ಮಾಡುತ್ತಿದ್ದಾರೆ. ಈ ಮೂಲಕ 'ಕೃಷ್ಣ ಲೀಲಾ' ಸಿನಿಮಾ ನಂತರ ಮತ್ತೊಮ್ಮೆ ನಿರ್ಮಾಣ ಸಾಹಸಕ್ಕೆ ಅವರು ಮುಂದಾಗಿದ್ದಾರೆ. ಚಿತ್ರದಲ್ಲಿ ವಕೀಲರಾಗಿ ಕಾಣಿಸಿಕೊಳ್ಳುತ್ತಿರುವ ಅಜಯ್, ಸಿನಿಮಾವನ್ನು ವಕೀಲರಿಂದಲೇ ಲಾಂಚ್ ಮಾಡಿಸಿದ್ದು ವಿಶೇಷವಾಗಿತ್ತು.

'ಯುದ್ಧಕಾಂಡ' ಎಂದಾಗ ಎಲ್ಲರಿಗೂ ನೆನಪಾಗುವುದು ರವಿಚಂದ್ರನ್ ಅವರ ಹಿಟ್ ಸಿನಿಮಾ. ಆ ಸಿನಿಮಾದ ನಿರ್ದೇಶಕರಾದ ಕೆ.ವಿ.ರಾಜು ಅವರ ಜೊತೆ ನಾನು ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ ಎನ್ನುವುದು ನನ್ನ ಅದೃಷ್ಟ. ಶೀರ್ಷಿಕೆ ಘೋಷಣೆಗೂ ಮೊದಲೇ ರವಿಚಂದ್ರನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದೇನೆ. ಆಗ ಬಂದ 'ಯುದ್ಧಕಾಂಡ' ಚಿತ್ರಕ್ಕೂ, ಈ ಚಿತ್ರಕ್ಕೂ ಯಾವುದೇ ಸಂಬಂಧ ಇಲ್ಲ. ಇದು ರಿಮೇಕ್ ಸಿನಿಮಾ ಕೂಡ ಅಲ್ಲ ಎಂದು ಅಜಯ್ ಮಾಹಿತಿ ಹಂಚಿಕೊಂಡರು.

ಕಾರ್ತಿಕ್ ಶರ್ಮಾ ಛಾಯಾಗ್ರಹಣ, ಕೆ.ಬಿ.ಪ್ರವೀಣ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಸದ್ಯದಲ್ಲೇ ಸಿನಿಮಾ ಬಗ್ಗೆ ಹೆಚ್ಚಿನ ಮಾಹಿತಿ ಹಂಚಿಕೊಳ್ಳುತ್ತೇವೆ ಎಂದಿದೆ ಚಿತ್ರತಂಡ.

ಪೃಥ್ವಿ ಹೊಸ ಚಿತ್ರ 'ಮತ್ಸ್ಯಗಂಧ'

ಕೋಸ್ಟಲ್‌ವುಡ್‌ನಿಂದ ಚಂದನವನಕ್ಕೆ ಹೆಜ್ಜೆ ಇಟ್ಟು, 'ದಿಯಾ' ಸಿನಿಮಾ ಮೂಲಕ ಕನ್ನಡಿಗರ ಮನಗೆದ್ದ ಪೃಥ್ವಿ ಅಂಬಾರ್ ತಮ್ಮ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ.

ಹೊಸ ಚಿತ್ರದ ಶೀರ್ಷಿಕೆಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ ಪೃಥ್ವಿ. ಅವರ ನಟನೆಯ ಹೊಸ ಚಿತ್ರ 'ಮತ್ಸ್ಯಗಂಧ'ಕ್ಕೆ ದೇವರಾಜ್ ಪೂಜಾರಿ ಆ್ಯಕ್ಷನ್ ಕಟ್ ಹೇಳಲಿದ್ದಾರೆ. 'A story of Uttara Kannada' ಎನ್ನುವ ಟ್ಯಾಗ್‌ಲೈನ್ ಸಿನಿಮಾದ ಮೇಲೆ ಕುತೂಹಲ ಮೂಡಿಸಿದೆ.

'ಪ್ರಕೃತಿಯ ಮಡಿಲಲ್ಲಿರುವ ಉತ್ತರ ಕನ್ನಡದ ಮಣ್ಣಿನಲ್ಲಿ ಪ್ರತಿಭಾವಂತ ತಂಡದೊಂದಿಗೆ ರೋಚಕತೆ ತುಂಬಿರುವ ಕಥೆಯಲ್ಲಿ ನನ್ನೊಳಗಿರುವ ಹೊಸ ಆಯಾಮಕ್ಕೆ ಅದ್ಭುತ ಪಾತ್ರ ನಿರ್ವಹಿಸವ ಸದವಕಾಶ ನನಗೆ ದೊರಕಿದೆ' ಎಂದು ಪೃಥ್ವಿ ತಮ್ಮ ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಚಿತ್ರದಲ್ಲಿ ಖಾಕಿ ತೊಟ್ಟು ಖಡಕ್ ಪೊಲೀಸ್ ಅಧಿಕಾರಿಯಾಗಿ ಪೃಥ್ವಿ ಕಾಣಿಸಿಕೊಂಡಿದ್ದಾರೆ. ಕಲಿಕಾ ಪ್ರೊಡಕ್ಷನ್ಸ್‌ನಡಿ ಈ ಚಿತ್ರ ತಯಾರಾಗುತ್ತಿದೆ. ಇದು ದೇವರಾಜ್ ಪೂಜಾರಿ ಅವರ ನಿರ್ದೇಶನದ ಎರಡನೇ ಚಿತ್ರ. ದೇವರಾಜ್ ಈ ಹಿಂದೆ 'ಕಿನಾರೆ' ಅನ್ನೋ ಸಿನಿಮಾ ಮಾಡಿದ್ದರು.

ಶಿವಮೂರ್ತಿ ಶರಣರ ಜಾಮೀನು ಅರ್ಜಿ ತಿರಸ್ಕೃತ

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದ ಎರಡನೇ ಪ್ರಕರಣದಲ್ಲಿ ಮುರುಘಾ ಮಠದ ಶಿವಮೂರ್ತಿ ಶರಣರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಗುರುವಾರ ತಿರಸ್ಕರಿಸಿದೆ.

ಮಹಿಳೆಯೊಬ್ಬರು ತನ್ನ ಇಬ್ಬರು ಮಕ್ಕಳು ಸೇರಿ ನಾಲ್ವರು ವಿದ್ಯಾರ್ಥಿನಿಯರಿಗೆ ಶಿವಮೂರ್ತಿ ಶರಣರು ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಮೈಸೂರಿನಲ್ಲಿ, ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಿದ್ದರು. ನ್ಯಾಯಾಂಗ ಬಂಧನದಲ್ಲಿರುವ ಶಿವ ಮೂರ್ತಿ ಶರಣರಿಗೆ ಜಾಮೀನು ನೀಡುವಂತೆ ಕೋರಿ ಅವರ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ವಾದ ಆಲಿಸಿದ ನ್ಯಾಯಾಧೀಶೆ ಕೋಮಲಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು. ಮೊದಲ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು.

ಡಿ.6ರಂದು ಮಹಾಪರಿನಿರ್ವಾಣ ಸಮಾರಂಭಕ್ಕೆ ಬರುವುದಾಗಿ ಸಚಿವ ಚಂದ್ರಕಾಂತ ಟ್ವೀಟ್

ಮಹಾರಾಷ್ಟ್ರ ಸಚಿವರ ಪ್ರವಾಸ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ, ಶಂಭುರಾಜ್ ದೇಸಾಯಿ ಹಾಗೂ ಮಹಾರಾಷ್ಟ್ರ ಗಡಿ ಸಲಹಾ ಸಮಿತಿ ಅಧ್ಯಕ್ಷ, ಸಂಸದ ಧೈರ್ಯಶೀಲ ಮಾನೆ ಅವರ ಬೆಳಗಾವಿ ಪ್ರವಾಸವನ್ನು ಡಿ.6ಕ್ಕೆ ಮುಂದೂಡಲಾಗಿದೆ.

‘ಡಿ.3ರಂದು ಬೆಳಗಾವಿಯಲ್ಲಿ ವಿವಿಧ 10 ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ, ಡಿ. 6ರಂದು ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನಾಚರಣೆ ಇರುವ ಕಾರಣ, ಆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ದಲಿತ ಸಂಘಟನೆಗಳು ಕೋರಿವೆ. ಹೀಗಾಗಿ, ನಾನು ಮತ್ತು ಸಚಿವ ಶಂಭುರಾಜ್ ದೇಸಾಯಿ ಪ್ರವಾಸ ಮುಂದೂಡಿದ್ದೇವೆ’ ಎಂದು ಸಚಿವ ಚಂದ್ರಕಾಂತ ಪಾಟೀಲ ಟ್ವೀಟ್ ಮಾಡಿದ್ದಾರೆ.

ಮಹಾರಾಷ್ಟ್ರ ಸಚಿವರ ಸಭೆಗಳಿಗಾಗಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರು ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಗಡಿ ವಿವಾದದ ಮೂಲಕ ಕನ್ನಡಿಗರನ್ನು ಮತ್ತೆ ಕೆಣಕಲು ತಂತ್ರ ರೂಪಿಸುತ್ತಿದ್ದರು. ಗುರುವಾರ ಕೂಡ ಇಡೀ ದಿನ ಇದರ ಭರದ ಸಿದ್ಧತೆಗಳನ್ನು ನಡೆಸಿದ್ದರು.

ಎಂಇಎಸ್‌ಗೆ ಹಿನ್ನಡೆ: ಗಡಿ ಉಸ್ತುವಾರಿ ಸಚಿವರನ್ನು ಕರೆಯಿಸಿ ದೊಡ್ಡಮಟ್ಟದ ಸಮಾರಂಭ ಮಾಡಿ, ತಮ್ಮ ವರ್ಚಸ್ಸು ಹೆಚ್ಚಿಸಿಕೊಳ್ಳಲು ಎಂಇಎಸ್ ಮುಖಂಡರು ತುದಿಗಾಲ ಮೇಲೆ ನಿಂತಿದ್ದರು. ಕೊನೆಯ ಕ್ಷಣದಲ್ಲಿ ಸಚಿವರು ಕೈಕೊಟ್ಟಿದ್ದರಿಂದ ಮುಖಭಂಗ ಅನುಭವಿಸುವಂತಾಗಿದೆ.

‘ಮಹಾ’ ಸಚಿವರ ಆಗಮನಕ್ಕಾಗಿ ಇಲ್ಲಿನ ಶಹಾಪುರದ ಶಿವಾಜಿ ಉದ್ಯಾನ, ರಾಮಲಿಂಗಖಿಂಡ ಗಲ್ಲಿಯ ಎಂಇಎಸ್ ಕಚೇರಿ, ತಾಲ್ಲೂಕಿನ ಹಿಂಡಲಗಾದಲ್ಲಿರುವ ಗಡಿ ಹುತಾತ್ಮರ ಸ್ಮಾರಕ ಸೇರಿದಂತೆ 10 ಸ್ಥಳಗಳಲ್ಲಿ ನಡೆದಿದ್ದ ಭರದ ಸಿದ್ಧತೆಗಳನ್ನು ಅರ್ಧಕ್ಕೆ ನಿಲ್ಲಿಸಲಾಗಿದೆ.

‘ಮಹಾ’ ಸಚಿವರು ಬೆಳಗಾವಿಗೆ ಭೇಟಿ ನೀಡಿದರೆ ಕಾನೂನು, ಸುವ್ಯವಸ್ಥೆಗೆ ಧಕ್ಕೆ ಬರಬಹುದು. ಅವರಿಗೆ ಬೆಳಗಾವಿ ಪ್ರವೇಶ ನಿರ್ಬಂಧಿಸಬೇಕು ಎಂದು ಕನ್ನಡಪರ ಸಂಘಟನೆಗಳು ಪೊಲೀಸ್ ಆಯುಕ್ತರಿಗೆ ಮನವಿ ನೀಡಿದ್ದವು.

ಮಾರ್ಗ ಬದಲಿಸಿದ ರಾಜ್ ಠಾಕ್ರೆ

ಬೆಳಗಾವಿ: ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಗುರುವಾರ ಬರಬೇಕಿದ್ದ ಮಹಾರಾಷ್ಟ್ರ ನವನಿರ್ಮಾಣ ಸೇನಾ ಮುಖ್ಯಸ್ಥ ರಾಜ್ ಠಾಕ್ರೆ ಅವರು, ಗಡಿ ವಿವಾದ ತಾರಕಕ್ಕೇರಿದ ಕಾರಣ ತಮ್ಮ ಪ್ರವಾಸದ ಮಾರ್ಗ ಬದಲಿಸಿದರು.

ಮಹಾರಾಷ್ಟ್ರದ ಸಾವಂತವಾಡಿಯಲ್ಲಿ ಬುಧವಾರ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ಗುರುವಾರ ರಸ್ತೆ ಮೂಲಕ ಬೆಳಗಾವಿಗೆ ಬಂದು, ಇಲ್ಲಿಂದ ವಿಮಾನದ ಮೂಲಕ ಮುಂಬೈಗೆ ತೆರಳುವವರಿದ್ದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಲು ಎಂಇಎಸ್ ಮುಖಂಡರು ಸಿದ್ಧತೆ ಮಾಡಿಕೊಂಡಿದ್ದರು.

ಆದರೆ, ‘ಗಡಿ ವಿಚಾರವಾಗಿ ನಡೆಯುತ್ತಿರುವ ಗಲಾಟೆಯ ರಗಳೆಯೇ ಬೇಡ’ ಎಂದು ಅವರು ಗೋವಾ ಮೂಲಕ ಮುಂಬೈಗೆ ತೆರಳಿದರು ಎಂದು ಎಂಇಎಸ್ ಹಿರಿಯ ಮುಖಂಡರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಸಂವಿಧಾನಬದ್ಧ ನಿಲುವು– ಸಿ.ಎಂ

ಬೆಂಗಳೂರು: ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಪ್ರಕರಣ ವಿಚಾರಣೆಗೆ ಬರಲಿದ್ದು, ಸಂವಿಧಾನಬದ್ಧವಾಗಿ ಮತ್ತು ಕಾನೂನಿನ ಪ್ರಕಾರವೇ ರಾಜ್ಯದ ನಿಲುವು ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಪುಣ್ಯತಿಥಿ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಹನುಮಂತಯ್ಯ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಮಹಾರಾಷ್ಟ್ರದ ಅರ್ಜಿ ಸಮರ್ಥನೀಯ ಅಲ್ಲ ಎನ್ನುವುದು ನಮ್ಮ ನಿಲುವು. ಅದನ್ನೇ ನಮ್ಮ ವಕೀಲರು ವಾದ ಮಂಡಿಸಿದ್ದಾರೆ. ನಮ್ಮ ನಿಲುವು ಸಂವಿಧಾನಬದ್ಧ ಹಾಗೂ ಕಾನೂನಾತ್ಮಕವಾಗಿದೆ. ಎಲ್ಲಾ ಅಂಶಗಳ ಬಗ್ಗೆ ವಕೀಲರು ವಾದ ಮಾಡಲಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

‘ಅಲ್ಪಸಂಖ್ಯಾತ ಮಕ್ಕಳಿಗೆ ಪ್ರತ್ಯೇಕ ಶಿಕ್ಷಣ ಸಂಸ್ಥೆಯ ಪ್ರಸ್ತಾವ ಇಲ್ಲ’

ಶಿವಮೊಗ್ಗ: ‘ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶಿಕ್ಷಣ ಸಂಸ್ಥೆ ಆರಂಭಿಸುವ ಯಾವುದೇ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಭದ್ರಾವತಿ ಸಮೀಪದ ಕಾರೇಹಳ್ಳಿಯಲ್ಲಿ ಬಿಜಿಎಸ್ ಕೇಂದ್ರೀಯ ವಿದ್ಯಾಲಯ ಗುರುವಾರ ಹಮ್ಮಿಕೊಂಡಿದ್ದ ಕ್ರೀಡಾಕೂಟ ಉದ್ಘಾಟಿಸಲು ಬಂದಿದ್ದ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಪ್ರತ್ಯೇಕ ಶಿಕ್ಷಣ ಸಂಸ್ಥೆ ವಿಚಾರ ಯಾರು ಹೇಳಿದ್ದಾರೋ ಗೊತ್ತಿಲ್ಲ. ಹಿಜಾಬ್ ವಿವಾದದ ನಂತರ ಕಾಲೇಜುಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿಲ್ಲ. ಮೊದಲಿನಂತೆಯೇ ಮಕ್ಕಳು ಕಲಿಯಲು ಬರುತ್ತಿದ್ದಾರೆ. ಹೀಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡುವ ಪ್ರಶ್ನೆಯೇ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ನೇಮಕಾತಿ ಪತ್ರಕ್ಕೆ ಟೆಕ್ನಿಷಿಯನ್ ಅಭ್ಯರ್ಥಿಗಳ ಆಗ್ರಹ

ಹುಬ್ಬಳ್ಳಿ: ನೈರುತ್ಯ ರೈಲ್ವೆಯು 2018ರಲ್ಲಿ ನಡೆಸಿದ್ದ ರೈಲ್ವೆ ಟೆಕ್ನಿಷಿಯನ್ ನೇಮಕಾತಿ ಪರೀಕ್ಷೆಯಲ್ಲಿ ಆಯ್ಕೆಯಾದವರಿಗೆ ನೇಮಕಾತಿ ಪತ್ರ ನೀಡಬೇಕು ಎಂದು ಆಗ್ರಹಿಸಿ ನಗರದ ಗದಗ ರಸ್ತೆಯಲ್ಲಿರುವ ರೈಲ್ ಸೌಧದ ಎದುರು ಅಭ್ಯರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು.

ದೇಶದ ವಿವಿಧ ಭಾಗಗಳಿಂದ ಬಂದಿದ್ದ ಅಭ್ಯರ್ಥಿಗಳು ‘ನೇಮಕಾತಿ ಪತ್ರ ಬೇಗ ಕೊಡಿ’ ಎಂದು ಘೋಷಣೆ ಕೂಗಿದರು.

320 ಟೆಕ್ನಿಷಿಯನ್ ಗಳ ಜೊತೆಗೆ, ಲೋಕೋಪೈಲಟ್ ಗಳ ನೇಮಕಾತಿಗೂ ಪರೀಕ್ಷೆ ನಡೆಸಲಾಗಿತ್ತು. ಲೋಕೋಪೈಲಟ್ ಹುದ್ದೆಗೆ ನೇಮಕವಾದವರಿಗೆ ಈಗಾಗಲೇ ನೇಮಕಾತಿ ಪತ್ರ ನೀಡಿ, ಕೆಲಸಕ್ಕೆ ಸೇರಿಸಿಕೊಳ್ಳಲಾಗಿದೆ. ಆದರೆ, ಟೆಕ್ನಿಷಿಯನ್ ಅಭ್ಯರ್ಥಿಗಳ ವಿಷಯದಲ್ಲಿ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಪ್ರತಿಭಟನಕಾರರು ಅಸಮಾಧಾನ ವ್ಯಕ್ತಪಡಿಸಿದರು.

‘ಬೇಡಿಕೆ ಆಲಿಸಲು ಪ್ರಧಾನ ವ್ಯವಸ್ಥಾಪಕರು ಸಂಜೆಯಾದರೂ ಬರಲಿಲ್ಲ. ಹಾಗಾಗಿ, ಶುಕ್ರವಾರವೂ ಪ್ರತಿಭಟನೆ ಮುಂದುವರಿಸಲಿದ್ದೇವೆ’ ಎಂದು ಪ್ರತಿಭಟನನಿರತ ಅಭ್ಯರ್ಥಿ ವಿಲಾಸ್ ಮೇತ್ರಿ ‘ಪ್ರಜಾವಾಣಿ’ಗೆ ತಿಳಿಸಿದರು.

ಸರ್ಕಾರಕ್ಕೆ ಹೈಕೋರ್ಟ್ ತಾಕೀತು

ಹರಾಜಿನಲ್ಲಿ ಸಾರ್ವಜನಿಕರು ಭಾಗವಹಿಸಬೇಕು. ಸರ್ಕಾರಿ ಆಸ್ತಿಯನ್ನು ಬೇಕಾಬಿಟ್ಟಿ ಹಂಚಿಕೆ ಮಾಡುತ್ತಿರುವುದಕ್ಕೆ ಇದೇ ಕೊನೇ ಎಚ್ಚರಿಕೆಯಾಗಬೇಕು

‘ಸರ್ಕಾರಿ ಆಸ್ತಿ ಗುತ್ತಿಗೆ ಬೇಕಾಬಿಟ್ಟಿ ಬಳಕೆ ಸಲ್ಲ’

ಬೆಂಗಳೂರು: ‘ಸರ್ಕಾರಿ ಆಸ್ತಿಯನ್ನು ಸಾರ್ವಜನಿಕ ಹರಾಜು ಅಥವಾ ಟೆಂಡರ್ ಪ್ರಕ್ರಿಯೆ ಮೂಲಕವೇ ಗುತ್ತಿಗೆ ನೀಡಬೇಕು. ಇಲ್ಲವಾದರೆ ಅಧಿಕಾರವನ್ನು ನಿರಂಕುಶವಾಗಿ ಬಳಕೆ ಮಾಡಿದಂತಾಗುತ್ತದೆ. ಆದ್ದರಿಂದ, ಸಾರ್ವಜನಿಕ ಆಸ್ತಿ ಹಂಚಿಕೆಯಲ್ಲಿ ಸರ್ಕಾರ ಪಾರದರ್ಶಕತೆ ಕಾಯ್ದುಕೊಳ್ಳಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

ಮಲ್ಪೆ ಬಂದರಿನ ಮೀನು ಸಂಸ್ಕರಣಾ ಘಟಕದಲ್ಲಿ 700 ಚದರ ಮೀಟರ್ ಜಾಗವನ್ನು ಸಂತೋಷ್ ವಿ. ಸಾಲ್ಯಾನ್ ಎಂಬುವವರಿಗೆ ಗುತ್ತಿಗೆ ನೀಡಿ ಉಡುಪಿಯ ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕರು 2022ರ ಸೆಪ್ಟೆಂಬರ್ 23ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಚಂದ್ರ ಸುವರ್ಣ ಎಂಬುವವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಬಂದರಿನ ಜಾಗವನ್ನು ಸಂತೋಷ್ ವಿ.ಸಾಲ್ಯಾನ್ ಅವರಿಗೆ ಗುತ್ತಿಗೆ ನೀಡಲು ಶಾಸಕರಾದ ಲಾಲಾಜಿ ಆರ್.ಮೆಂಡನ್ ಮತ್ತು ರಘುಪತಿ ಭಟ್ ನೀಡಿದ್ದ ಶಿಫಾರಸು ಪತ್ರಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, ಬಂದರಿನ ಜಾಗವನ್ನು ಸಂತೋಷ್ ವಿ. ಸಾಲ್ಯಾನ್ ಅವರಿಗೆ ಗುತ್ತಿಗೆ ನೀಡಿ ಉಡುಪಿಯ ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕರು ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಿದೆ.

‘ಸರ್ಕಾರಿ ಆಸ್ತಿಯನ್ನು ಸಾರ್ವಜನಿಕರ ಗಮನಕ್ಕೆ ಬಾರದಂತೆ ವೈಯಕ್ತಿಕ ಹಿತಾಸಕ್ತಿಗಳಡಿ ಬೇಕೆಂದವರಿಗೆ ಮನಬಂದಂತೆ ಹಂಚಿಕೆ ಮಾಡಲು ಅವಕಾಶವಿಲ್ಲ. ಒಂದು ವೇಳೆ ಇದೇ ಪ್ರವೃತ್ತಿ ಮರುಕಳಿಸಿದರೆ ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ಕೋರ್ಟ್ ಯಾವುದೇ ವಿನಾಯ್ತಿ ನೀಡುವುದಿಲ್ಲ’ ಎಂದು ನ್ಯಾಯಪೀಠ ಖಡಕ್ ಎಚ್ಚರಿಕೆ ನೀಡಿದೆ.

ರಸ್ತೆತಡೆ, ಪ್ರತಿಭಟನಕಾರರು ವಶಕ್ಕೆ

ನಾಡಧ್ವಜ ಹಿಡಿದು ಕುಣಿದ ವಿದ್ಯಾರ್ಥಿ: ಠಾಣೆಗೆ ಕರೆಸಿ ಹೊಡೆದರು– ಆರೋಪ

ಪ್ರಜಾವಾಣಿ ವಾರ್ತೆ

ಬೆಳಗಾವಿಯಲ್ಲಿ ಗುರುವಾರ ಗೋಗಟೆ ಕಾಲೇಜಿಗೆ ಮುತ್ತಿಗೆ ಹಾಕಲು ಯತ್ನಿಸಿದ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರನ್ನು ಪೊಲೀಸರು ತಡೆದರು – ಪ್ರಜಾವಾಣಿ ಚಿತ್ರ

ಬೆಳಗಾವಿ: ಇಲ್ಲಿನ ಕರ್ನಾಟಕ ಲಾ ಸೊಸೈಟಿಯ ಗೋಗಟೆ ಪದವಿಪೂರ್ವ ಕಾಲೇಜಿನಲ್ಲಿ ಬುಧವಾರ ನಾಡಧ್ವಜ ಹಿಡಿದು ಕುಣಿದ ವಿದ್ಯಾರ್ಥಿಯ ಮೇಲೆ ಸಹಪಾಠಿಗಳು ಹಲ್ಲೆ ಮಾಡಿದ ಘಟನೆ ಖಂಡಿಸಿ, ಕರ್ನಾಟಕ ರಕ್ಷಣಾ ವೇದಿಕೆಯ ವಿವಿಧ ಬಣಗಳ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಕಾಲೇಜು ಸಮೀಪದ ಆರ್.ಪಿ.ಡಿ ವೃತ್ತದಲ್ಲಿ ಮೂರು ತಾಸು ಹೆದ್ದಾರಿ ಬಂದ್ ಮಾಡಿ ಧರಣಿ ಕುಳಿತರು. ಟೈರ್‌ಗೆ ಬೆಂಕಿ ಹಚ್ಚಿದರು. ಪೊಲೀಸರು, ಸ್ಥಳೀಯ ಜನಪ್ರತಿನಿಧಿಗಳು, ಎಂಇಎಸ್ ವಿರುದ್ಧ ಘೋಷಣೆ ಮೊಳಗಿಸಿದರು. ಈ ವೇಳೆ ಕಾಲೇಜಿಗೆ ನುಗ್ಗಲು ಯತ್ನಿಸಿದ ಕೆಲವು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಧರಣಿಯಿಂದಾಗಿ ಗೋವಾ, ಖಾನಾಪುರ ಮಾರ್ಗದಲ್ಲಿ ಸಂಚರಿಸಬೇಕಾದ ಹಲವು ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಕರವೇ ನಾರಾಯಣಗೌಡ ಬಣದ ಜಿಲ್ಲಾ ಘಟಕದ ಅಧ್ಯಕ್ಷ ದೀಪಕ್ ಗುಡಗನಟ್ಟಿ, ‘ಧ್ವಜ ಹಿಡಿದು ಕುಣಿದ ವಿದ್ಯಾರ್ಥಿಗೆ ನ್ಯಾಯ ಕೊಡಿಸಬೇಕಾದ ಪೊಲೀಸರೇ ಅವನನ್ನು ಠಾಣೆಗೆ ಕರೆಯಿಸಿ ಹೊಡೆದಿದ್ದಾರೆ. ಕನ್ನಡ ಧ್ವಜಕ್ಕೂ ಅವಮಾನಕರ ಪದ ಬಳಸಿ ಬೈದಿದ್ದಾರೆ. ಈ ಬಗ್ಗೆ ವಿದ್ಯಾರ್ಥಿಯೇ ಮಾಧ್ಯಮದ ಮುಂದೆ ಹೇಳಿಕೆ ನೀಡಿದ್ದಾನೆ. ವಿದ್ಯಾರ್ಥಿಯನ್ನು ಠಾಣೆಗೆ ಕರೆಯಿಸಿ ಹೆದರಿಸಲಾಗಿದೆ. ಕೂಡಲೇ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ವಹಿಸಬೇಕು’ ಎಂದರು.

‘ಹಲ್ಲೆಕೋರರನ್ನು ಕಾಲೇಜಿನಿಂದ ಹೊರಹಾಕಬೇಕು, ಕರ್ನಾಟಕದಲ್ಲಿ ಶಿಕ್ಷಣ ಪಡೆಯಲು ಅವಕಾಶ ನೀಡಬಾರದು, ಅಪ್ರಾಪ್ತರಾಗಿದ್ದರೆ ಕಾನೂನು ಸಂಘರ್ಷಕ್ಕೆ ಒಳಪಟ್ಟವರು ಎಂದು ಪ್ರಕರಣ ದಾಖಲಿಸಬೇಕು’ ಎಂದರು.

ಕಾಲೇಜಿಗೆ ಮುತ್ತಿಗೆ ಯತ್ನ: ಗೋಗಟೆ ಕಾಲೇಜಿಗೆ ಮುತ್ತಿಗೆ ಹಾಕಲು ಯತ್ನಿಸಿದ 15ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು. ಇದರಿಂದ ಸ್ಥಳದಲ್ಲಿ ನೂಕಾಟ ತಳ್ಳಾಟ ಆರಂಭವಾಯಿತು. ಕೆಲವರು ಕಾಲೇಜಿನ ಮುಖ್ಯದ್ವಾರದ ಮೇಲೆ ಹತ್ತಿ ಕನ್ನಡ ಧ್ವಜ ಕಟ್ಟಿದರು. ಮತ್ತಿಬ್ಬರು ಪೊಲೀಸ್ ವಾಹನದ ಮೇಲೆಯೇ ಹತ್ತಿ ಧ್ವಜ ಹಾರಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದರು.

ನಾರಾಯಣ ಗೌಡ ಬಣದ ಮುಖಂಡರಾದ ಮುಖಂಡರಾದ ಸುರೇಶ ಗವನ್ನವರ, ಸುಧೀರ ರೋಕಡೆ ಹಾಗೂ ಕರವೇ ಸ್ವಾಭಿಮಾನಿ ಬಣದ ಅಧ್ಯಕ್ಷ ಕೃಷ್ಣೇಗೌಡ, ಜಿಲ್ಲಾ ಘಟಕದ ಅಧ್ಯಕ್ಷ ಈಶ್ವರಗೌಡ ಪಾಟೀಲ, ಉಪಾಧ್ಯಕ್ಷ ರಾಜು ಯರಗಾಣಿ ಹಲವರು ಇದ್ದರು.

ವಿಚಾರಣೆಗೆ ಕ್ರಮ: ಎಡಿಜಿಪಿ ಟ್ವೀಟ್

ಬೆಳಗಾವಿ: ‘ಇಲ್ಲಿನ ಗೋಗಟೆ ಕಾಲೇಜಿನಲ್ಲಿ ವಿದ್ಯಾರ್ಥಿ ಮೇಲೆ ಸಹಪಾಠಿಗಳಿಂದ ನಡೆದ ಹಲ್ಲೆಯ ಘಟನೆ ಬಗ್ಗೆ ಐಜಿಪಿ ನೇತೃತ್ವದಲ್ಲಿ ವಿಚಾರಣೆ ನಡೆಸಲಾಗುವುದು’ ಎಂದು ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.

ಈ ಬಗ್ಗೆ ಗುರುವಾರ ಟ್ವೀಟ್ ಮಾಡಿರುವ ಅವರು, ‘ಧ್ವಜ ಹಿಡಿದು ಕುಣಿದ ವಿದ್ಯಾರ್ಥಿ ಮೇಲೆ ಹಲ್ಲೆ ಮಾಡಿದ ಪ್ರಕರಣ ಕುರಿತು ಪೊಲೀಸರು ಈಗಾಗಲೇ ಸೂಕ್ತ ಕ್ರಮ ವಹಿಸಿದ್ದಾರೆ’ ಎಂದು ತಿಳಿಸಿದ್ದಾರೆ.

‘ಕಾಲೇಜಿನಲ್ಲಿ ನಡೆದ ಘಟನೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಗೋಗಟೆ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಎ.ಎಸ್. ಕೇರೂರ ತಿಳಿಸಿದ್ದಾರೆ.

ಚಿರತೆ ದಾಳಿ: ಯುವತಿ ಸಾವು

ಮೇಘನಾ

ಮೈಸೂರು: ತಿ.ನರಸೀಪುರ ತಾಲ್ಲೂಕಿನ ಎಸ್.ಕೆಬ್ಬೆಹುಂಡಿ ಗ್ರಾಮದಲ್ಲಿ ಗುರುವಾರ ಚಿರತೆ ದಾಳಿ ನಡೆಸಿ ಯುವತಿಯನ್ನು ಕೊಂದು ಹಾಕಿದೆ.

ಗ್ರಾಮದ ಮೇಘನಾ (22) ಮೃತ ಯುವತಿ. ಸಂಜೆ ಮನೆ ಹಿತ್ತಲಿಗೆ ತೆರಳಿದ್ದಾಗ ದಾಳಿ ನಡೆಸಿದ್ದು, ತೀವ್ರ ಗಾಯಗೊಂಡ ಅವರನ್ನು ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಪ್ರತಿಭಟನೆ: ‘ಕಳೆದ ತಿಂಗಳಷ್ಟೇ ಚಿರತೆಯು ಎಂ.ಎಲ್.ಹುಂಡಿ ಗ್ರಾಮದ ಚನ್ನಮಲ್ಲು ಎಂಬ ಯುವಕನನ್ನು ಕೊಂದಿತ್ತು. ಇದೀಗ ಯುವತಿಯ ಬಲಿ ಪಡೆದಿದೆ. ನಿರಂತರ ದಾಳಿ ನಡೆಯುತ್ತಿದ್ದರೂ ಅರಣ್ಯ ಇಲಾಖೆ ಹಾಗೂ ತಾಲ್ಲೂಕು ಆಡಳಿತ ಕ್ರಮವಹಿಸಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು ಆಸ್ಪತ್ರೆ ಬಳಿ ಪ್ರತಿಭಟನೆ ನಡೆಸಿದರು.

ಚಿರತೆಯು ಗ್ರಾಮದ ಹೊರವಲಯದ ರಸ್ತೆಯಲ್ಲಿ ಓಡಾಡುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಚುನಾವಣೆ: ಅಭ್ಯರ್ಥಿಗಳ ಮೊದಲ ಪಟ್ಟಿ ಶಾಶ್ವತವಲ್ಲ – ಎಚ್‌.ಡಿ. ದೇವೇಗೌಡ

‘ಮುಂದಿನ ತಿಂಗಳಿಂದ ಪ್ರಚಾರ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಪರವಾಗಿ ಮುಂದಿನ ತಿಂಗಳಿನಿಂದ ಪ್ರಚಾರಕ್ಕೆ ಹೋಗುತ್ತೇನೆ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಜೆಡಿಎಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಶಾಶ್ವತವಲ್ಲ. ಪ್ರತಿ ದಿನ ಪಟ್ಟಿ ಬದಲಾಗುತ್ತದೆ, ಸಮೀಕ್ಷೆಯೂ ನಡೆಯುತ್ತಿದೆ. ಅದನ್ನು ಆಧರಿಸಿ ನಿರ್ಧರಿಸಲಾಗುತ್ತದೆ. ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಕುಮಾರಸ್ವಾಮಿ ಜೊತೆ ಮಾತನಾಡಿದ್ದಾರೆ. ಸಮಸ್ಯೆ ಬಗೆಹರಿದಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಹಾಸನದಲ್ಲಿ ಶಾಸಕ ಪ್ರೀತಂ ಗೌಡಗೆ ಬಿ.ಎಸ್.ಯಡಿಯೂರಪ್ಪ ಸರ್ಕಾರವಿದ್ದಾಗ ಸರ್ವ ಶಕ್ತಿ ಕೊಟ್ಟಿದ್ದರು. ಯಾವ್ಯಾವ ಕೆಲಸ ಕೊಟ್ಟಿದ್ದಾರೆ, ಅದರಿಂದ ಎಷ್ಟು ಹಣ ಸಂಪಾದಿಸಿದ್ದಾರೆ? ಅವರ ಶಕ್ತಿಗೆ ಯಡಿಯೂರಪ್ಪ ಹಾಗೂ ಅವರ ಮಕ್ಕಳೇ ಕಾರಣ’ ಎಂದರು.

‘ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್‌ಗೆ ಪಕ್ಷದಲ್ಲಿ ಬಹಳ ಮಂದಿ ಆಕಾಂಕ್ಷಿಗಳಿದ್ದಾರೆ. ಕುಮಾರಸ್ವಾಮಿ, ರೇವಣ್ಣ ಚರ್ಚಿಸಿ ಅಭ್ಯರ್ಥಿಗಳನ್ನು ಅಂತಿಮಗೊಳಿಸುತ್ತಾರೆ. ಯಾರು ಮುಖ್ಯಮಂತ್ರಿ ಆಗಬೇಕು ಎಂಬುದನ್ನು ಜನ ತೀರ್ಮಾನಿಸುತ್ತಾರೆ’ ಎಂದರು.

ಎಚ್.ಡಿ.ದೇವೇಗೌಡ ಅವರು ಪತ್ನಿ ಚನ್ನಮ್ಮ ಜೊತೆ ನಂಜನಗೂಡಿನ ಶ್ರೀಕಂಠೇಶ್ವರ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

‘ಚಿಕ್ಕವನಾಗಿದ್ದಾಗಿನಿಂದಲೂ ಬರುತ್ತಿದ್ದೇನೆ. ಆಗ ಕಿವಿ ಸಮಸ್ಯೆಯಾಗಿತ್ತು. ಎಷ್ಟು ವೈದ್ಯರಿಗೆ ತೋರಿಸಿದರೂ ಪ್ರಯೋಜನವಾಗಿರಲಿಲ್ಲ. ನಂಜುಂಡೇಶ್ವರನಲ್ಲಿ ಪ್ರಾರ್ಥಿಸಿದ ನಂತರ ಗುಣವಾಗಿತ್ತು’ ಎಂದರು.

ಅಭ್ಯರ್ಥಿ ಬದಲು: ಎಲ್ಲ ಕ್ಷೇತ್ರಗಳಿಗೆ ಅನ್ವಯಸಲ್ಲ– ಎಚ್‌ಡಿಕೆ

ತುಮಕೂರು: ಮುಂಬರುವ ವಿಧಾನಸಭೆ ಚುನಾವಣೆಗೆ ಕೆಲವು ಕಡೆ ಜೆಡಿಎಸ್ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ಆದರೆ, ಇದೇ ಅಂತಿಮ ಪಟ್ಟಿಯಲ್ಲ. ಕೆಲ ಕ್ಷೇತ್ರಗಳಲ್ಲಿ ಬದಲಾಗಬಹುದು ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಸುಳಿವು ನೀಡಿದ್ದಾರೆ.

ಪಂಚರತ್ನ ರಥಯಾತ್ರೆ ಸಮಯದಲ್ಲಿ ಸಿದ್ಧಗಂಗಾ ಮಠದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಈಗಾಗಲೇ ಪ್ರಕಟಿಸಿದ ಅಭ್ಯರ್ಥಿಗಳ ಪಟ್ಟಿ ಅಂತಿಮವಲ್ಲ’ ಎಂದು ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಇದು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸದು. ಕೆಲ ಕ್ಷೇತ್ರಗಳಲ್ಲಿ ಬದಲಾಗುವ ಸಾಧ್ಯತೆಗಳಿವೆ’ ಎಂದು ಸ್ಪಷ್ಟಪಡಿಸಿದರು.

‘ಮೈಸೂರು ಜಿಲ್ಲೆ ವರುಣಾ ಕ್ಷೇತ್ರದಿಂದ ಸಿದ್ದರಾಮಯ್ಯ ಸ್ಪರ್ಧಿಸಿದರೆ ಅವರನ್ನು ಸೋಲಿಸಲು ನಮ್ಮಲ್ಲಿ ಸಮರ್ಥ ಅಭ್ಯರ್ಥಿ ಇದ್ದಾರೆ. ಕಡಿಮೆ ಸ್ಥಾನದಲ್ಲಿ ಗೆಲ್ಲಿಸಿ ಬಿಜೆಪಿ, ಕಾಂಗ್ರೆಸ್‌ನವರ ಮನೆ ಬಾಗಿಲಿಗೆ ಹೋಗುವಂತೆ ಮಾಡಬೇಡಿ. ಇಬ್ಬರ ಸಹವಾಸ ಮಾಡಿ ಸಾಕಾಗಿದೆ. ಸ್ವತಂತ್ರವಾಗಿ ಸರ್ಕಾರ ರಚಿಸಲು ಅವಕಾಶ ಮಾಡಿಕೊಡಿ’ ಎಂದು ಮನವಿ ಮಾಡಿಕೊಂಡರು.

ಏಕರೂಪ ನಾಗರಿಕ ಸಂಹಿತೆಗೆ ವಿರೋಧ

ಮೈಸೂರು: ‘ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಅಸಾಧ್ಯ. ಸಂವಿಧಾನದಲ್ಲಿ ಇದಕ್ಕೆ ಅವಕಾಶವಿಲ್ಲ’ ಎಂದು ದೇವೇಗೌಡ ಹೇಳಿದರು.

‘ಏಕರೂಪ ನಾಗರಿಕ ಸಂಹಿತೆ ಜಾರಿಯಿಂದ ಬಿಜೆಪಿಗೆ ಲಾಭ ಆಗುತ್ತದೆಯೋ, ಬಿಡುತ್ತದೆಯೋ ಎಂಬುದು ಪ್ರಶ್ನೆ ಅಲ್ಲ. ಜಾರಿಗೆ ವ್ಯಾಪಕ ವಿರೋಧ ವ್ಯಕ್ತವಾಗುತ್ತದೆ. ನಮ್ಮ ವಿರೋಧವೂ ಇದೆ’ ಎಂದರು.

‘ಮೇಕೆದಾಟು ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅನುಮತಿ ನೀಡಲಿಲ್ಲ. ಆದರೆ, ಸಮುದ್ರಕ್ಕೆ ಹರಿಯುವ ಕಾವೇರಿ ನೀರು ಬಳಸಲು ತಮಿಳುನಾಡು ಸರ್ಕಾರಕ್ಕೆ ಅನುಮತಿ ಕೊಟ್ಟಿದ್ದಾರೆ. ಎಐಎಡಿಎಂಕೆ ಜೊತೆ ಬಿಜೆಪಿ ಒಳ ಒಪ್ಪಂದ ಮಾಡಿಕೊಂಡಿದೆ’ ಎಂದು ದೂರಿದರು.

‘ಮೇಕೆದಾಟು ವಿಚಾರವಾಗಿ ಪ್ರಧಾನಿಗೆ ಪತ್ರ ಬರೆದಿದ್ದೆ. ಆದರೆ, ಪ್ರತಿಕ್ರಿಯೆ ಬಂದಿಲ್ಲ. ಮುಂಬರುವ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸುವೆ’ ಎಂದರು.

ಮಕ್ಕಳಿಗೆ ವಿಷವುಣಿಸಿ ತಾಯಿ ಆತ್ಮಹತ್ಯೆ

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದ ಹೊಳೇಬೀದಿಯಲ್ಲಿ ಮಹಿಳೆಯೊಬ್ಬರು ಗುರುವಾರ ರಾತ್ರಿ ತಮ್ಮ ಮೂವರು ಮಕ್ಕಳಿಗೆ ವಿಷವುಣಿಸಿ, ಬಳಿಕ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೊಳೇಬೀದಿ ನಿವಾಸಿ, ಕಾರ್ ಮೆಕ್ಯಾನಿಕ್ ಆಗಿರುವ ಆಖಿಲ್ ಎಂಬವರ ಪತ್ನಿ ಊಸನಾ ಕೌಸರ್ (30) ತನ್ನ ಮಕ್ಕಳಾದ ಹ್ಯಾರೀಶ್ (7), ಪುತ್ರಿಯರಾದ ಆಲಿಸಾ (4), ಫಾತಿಮಾ (2) ಅವರಿಗೆ ರಾತ್ರಿ 9ರ ವೇಳೆಗೆ ವಿಷ ಉಣಿಸಿದ್ದಾರೆ. ಮಕ್ಕಳು ಮೃತಪಟ್ಟ ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಿಖರ ಕಾರಣ ಗೊತ್ತಾಗಿಲ್ಲ.

‘ಊಸನಾ ತುಮಕೂರು ಮೂಲದವರು. ಹತ್ತು ವರ್ಷದ ಹಿಂದೆ ಆಖಿಲ್ ಜೊತೆ ಮದುವೆಯಾಗಿತ್ತು. ಮೊಬೈಲ್ ಫೋನ್‌ಗೆ ಕರೆ ಮಾಡಿದಾಗ ಸ್ವೀಕರಿಸದಿದ್ದಕ್ಕೆ ಪತಿಯು ಮನೆಗೆ ಬಂದು ನೋಡಿದ್ದಾರೆ. ಕೂಗಿದರೂ ಹೊರಬಾರದಿದ್ದಕ್ಕೆ ಅನುಮಾನಗೊಂಡು, ಬಾಗಿಲು ಒಡೆದು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಹಾಗೂ ಮಕ್ಕಳು ಸಾವಿಗೀಡಾಗಿರುವುದು ಗೊತ್ತಾಗಿದೆ. ಆತ್ಮಹತ್ಯೆಗೂ ಮುನ್ನ ಊಸನಾ ತಮ್ಮ ತಾಯಿಗೆ ಕರೆ ಮಾಡಿ, ಮದ್ದೂರಿಗೆ ಬರುವಂತೆ ಹೇಳಿದ್ದಾರೆ ಎಂದು ಗೊತ್ತಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು. ಮದ್ದೂರು ಠಾಣೆ ಪೊಲೀಸರು ಪತಿ ಆಖಿಲ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಮತದಾರರ ಮಾಹಿತಿ ಸಂಗ್ರಹ ಆರೋಪ: ಎಫ್‌ಐಆರ್

ಹುಬ್ಬಳ್ಳಿ: ಇಲ್ಲಿನ ನವ ಅಯೋಧ್ಯಾ ನಗರದಲ್ಲಿ ಮತದಾರರ ಮಾಹಿತಿ ಸಂಗ್ರಹಿಸುತ್ತಿದ್ದ ಆರೋಪದ ಮೇಲೆ, ದೆಹಲಿ ಮೂಲದ ಎಎಸ್‌ಆರ್ ರಿಸರ್ಚ್ ಆ್ಯಂಡ್ ಕನ್ಸಲ್ಟಿಂಗ್ ಕಂಪನಿಯ ಮೂವರು ಸಿಬ್ಬಂದಿಯನ್ನು ಕಾಂಗ್ರೆಸ್ ಕಾರ್ಯಕರ್ತರು ಹಿಡಿದು ಗುರುವಾರ ಪೊಲೀಸರಿಗೆ ಒಪ್ಪಿಸಿದ್ದಾರೆ.

ಕಾಂಗ್ರೆಸ್‌ನ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ ಉಳ್ಳಾಗಡ್ಡಿಮಠ ನೀಡಿದ ದೂರಿನ ಮೇರೆಗೆ, ವೀರೇಶ, ಮಂಜುನಾಥ ಹಾಗೂ ನಿತೀಶ್ ವಿರುದ್ಧ ನಗರದ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪೊಲೀಸರು ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಕಂಪನಿಯ ಮೇಲಾಧಿಕಾರಿಗಳಿಗೂ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

‘ಮತದಾರರ ಮಾಹಿತಿ ಸಂಗ್ರಹಿಸಿ, ಜಿಲ್ಲೆಯಲ್ಲಿ 84 ಸಾವಿರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗಿದೆ. ಈ ಬಗ್ಗೆ ಪಕ್ಷದಿಂದ ಚುನಾವಣಾ ಆಯುಕ್ತರಿಗೆ ದೂರು ನೀಡಲಾಗುವುದು’ ಎಂದು ಮಹಾನಗರ ಕಾಂಗ್ರೆಸ್ ಅಧ್ಯಕ್ಷ ಅಲ್ತಾಫ ಹಳ್ಳೂರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಸಮೀಕ್ಷೆಗೆ ನಾವು ಯಾರಿಗೂ ಅನುಮತಿ ಕೊಟ್ಟಿಲ್ಲ. ಪ್ರಕರಣ ಕುರಿತು, ಪರಿಶೀಲನೆ ನಡೆಸಿ ವರದಿ ನೀಡುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದೇನೆ’ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಪ್ರಕರಣ ಕುರಿತು ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸಲಾಗುವುದು’ ಎಂದು ಪೊಲೀಸ್ ಕಮಿಷನರ್ ಲಾಭೂರಾಮ್ ಹೇಳಿದರು.

ಹೆಜಮಾಡಿ: ಪರಿಷ್ಕೃತ ಟೋಲ್ ಆದೇಶಕ್ಕೆ ತಾತ್ಕಾಲಿಕ ತಡೆ

ಉಡುಪಿ/ಮಂಗಳೂರು: ಸಮೀಪದ ಸುರತ್ಕಲ್ ಟೋಲ್‌ಗೇಟ್‌ನಲ್ಲಿ ಶುಲ್ಕ ಸಂಗ್ರಹಿಸುವುದನ್ನು ಗುರುವಾರದಿಂದ ಸ್ಥಗಿತಗೊಳಿಸಲಾಗಿದೆ. ಇನ್ನೊಂದೆಡೆ, ಕಾಪು ತಾಲ್ಲೂಕಿನ ಹೆಜಮಾಡಿ ಟೋಲ್ ಕೇಂದ್ರದಲ್ಲಿ ತಾಂತ್ರಿಕ ಕಾರಣದಿಂದ ಪರಿಷ್ಕೃತ ಟೋಲ್ ದರ ಜಾರಿಯಾಗಿಲ್ಲ.

ಸುರತ್ಕಲ್ ಟೋಲ್ ರದ್ದಾಗುತ್ತಿರುವುದರಿಂದ, ಡಿ.1ರಿಂದ ಜಾರಿಯಾಗುವಂತೆ ಹೆಜಮಾಡಿ ಟೋಲ್ ಕೇಂದ್ರದಲ್ಲಿ ಪರಿಷ್ಕೃತ ದರ ವಸೂಲಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೆಲ ದಿನಗಳ ಹಿಂದೆ ಸೂಚನೆ ನೀಡಿತ್ತು. ಆದರೆ, ಪರಿಷ್ಕೃತ ಟೋಲ್ ವಸೂಲಿಗೆ ಅಂತಿಮ ಆದೇಶ ಬಾರದ ಕಾರಣ ಹೆಚ್ಚುವರಿ ಟೋಲ್ ವಸೂಲಿಗೆ ತಾತ್ಕಾಲಿಕ ತಡೆ ಬಿದ್ದಿದೆ.

‘ತಾಂತ್ರಿಕ ಕಾರಣದಿಂದ ಟೋಲ್ ಕೇಂದ್ರದಲ್ಲಿ ಪರಿಷ್ಕೃತ ದರ ಅನುಷ್ಠಾನಗೊಂಡಿಲ್ಲ’ ಎಂದು ನವಯುಗ ಕಂಪನಿ ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದೆಡೆ, ಉಡುಪಿ ಶಾಸಕ ಕೆ. ರಘುಪತಿ ಭಟ್ ಅವರು ದೆಹಲಿಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿ ಹೆಜಮಾಡಿ ಟೋಲ್ ಕೇಂದ್ರದಲ್ಲಿ ದುಪ್ಪಟ್ಟು ಟೋಲ್ ವಸೂಲಿ ಮಾಡುವ ನಿರ್ಧಾರ ಕೈಬಿಡುವಂತೆ ಮನವಿ ಸಲ್ಲಿಸಿದ್ದಾರೆ.

ಈ ಸಂಬಂಧ ಡಿ.5ರಂದು ಗಡ್ಕರಿ ಅವರು ಹಿರಿಯ ಅಧಿಕಾರಿಗಳ ಸಭೆ ನಡೆಸಲಿದ್ದಾರೆ ಎಂದು ಶಾಸಕ ರಘುಪತಿ ಭಟ್ ತಿಳಿಸಿದರು.

ವಿಜಯೋತ್ಸವ: ಸುರತ್ಕಲ್ ಟೋಲ್ ಸಂಗ್ರಹ ಕೇಂದ್ರವನ್ನು ಮುಚ್ಚುವಂತೆ ಒತ್ತಾಯಿಸಿ 35 ದಿನಗಳಿಂದ ನಡೆಯುತ್ತಿದ್ದ ಧರಣಿಯನ್ನು ಬುಧವಾರ ಮುಕ್ತಾಯಗೊಳಿಸಲಾಗಿದೆ. ಟೋಲ್ ಸಮೀಪದಲ್ಲೇ ಹೋರಾಟ ಸಮಿತಿಯವರು ಹೋರಾಟದ ಸಮಾರೋಪ ಸಮಾರಂಭದ ಜತೆಗೆ ಗುರುವಾರ ವಿಜಯೋತ್ಸವವನ್ನೂ ಆಚರಿಸಿದರು.

ಇಂದು ಪ್ರತಿಭಟನೆ

ಹೆಜಮಾಡಿ ಟೋಲ್‌ನಲ್ಲಿ ದುಪ್ಪಟ್ಟು ಟೋಲ್ ವಸೂಲಿ ಮಾಡುವ ತೀರ್ಮಾನ ವಿರೋಧಿಸಿ, ಟೋಲ್ ವಿರೋಧಿ ಹೋರಾಟ ಸಮಿತಿ ಹಾಗೂ ಸಮಾನ ಮನಸ್ಕ ಸಂಘಟನೆಗಳು ಡಿ.2ರಂದು ಪ್ರತಿಭಟನೆ ಹಮ್ಮಿಕೊಂಡಿವೆ.

ನರ್ಸಿಂಗ್: ಎರಡು ವಾರಗಳಲ್ಲಿ ಮರು ಪರೀಕ್ಷೆ

ಶಿವಮೊಗ್ಗ: ಬೆಂಗಳೂರಿನ ಕೆಲವು ನರ್ಸಿಂಗ್ ಕಾಲೇಜುಗಳಲ್ಲಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಸಾಮೂಹಿಕ ನಕಲು ಮಾಡಿರುವ ಆರೋಪ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಇನ್ನೆರಡು ವಾರಗಳಲ್ಲಿ ಮರು ಪರೀಕ್ಷೆ ನಡೆಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಸುಧಾಕರ್ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನರ್ಸಿಂಗ್ ಪರೀಕ್ಷೆ ಹಗರಣದ ಬಗ್ಗೆ ವರದಿ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಶೀಘ್ರದಲ್ಲೇ ವರದಿ ಬರಲಿದೆ. ನಂತರ ಲಭ್ಯವಿರುವ ಎಲ್ಲ ತಂತ್ರಜ್ಞಾನ ಬಳಸಿ ರಾಜ್ಯದಾದ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸಲಾಗುವುದು’ ಎಂದರು.

‘ಅಂಗನವಾಡಿ: ಸುಪ್ರೀಂ ಕೋರ್ಟ್ ಆದೇಶ ಪಾಲಿಸಿ’

ಗ್ರಾಚ್ಯುಟಿಗಾಗಿ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ನೌಕರರು ಗುರುವಾರ ಪ್ರತಿಭಟನೆ ವೇಳೆ ಸರ್ಕಾರ ನೀಡಿರುವ ಹಾಳಾದ ಮೊಬೈಲ್‌ಗಳನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಅಂಗನವಾಡಿ ನೌಕರರಿಗೂ ಗ್ರಾಚ್ಯುಟಿ ಪಾವತಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರು ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

‘ಅಂಗನವಾಡಿ ನೌಕರರು ಗ್ರಾಚ್ಯುಟಿಗೆ ಅರ್ಹರು’ ಎಂಬ ಐತಿಹಾಸಿಕ ತೀರ್ಪನ್ನು ಸುಪ್ರೀಂ ಕೋರ್ಟ್ ಏಪ್ರಿಲ್‌ನಲ್ಲಿ ನೀಡಿದೆ. ನಿವೃತ್ತಿ ಹೊಂದಿರುವ ಸಾವಿರಾರು ಅಂಗನವಾಡಿ ನೌಕರರು ಅರ್ಜಿ ಸಲ್ಲಿಸಿದ್ದು, ಅದನ್ನು ಕೆಲವೆಡೆ ಅಧಿಕಾರಿಗಳು ತಿರಸ್ಕರಿಸಿದ್ದಾರೆ. ಈ ಅರ್ಜಿದಾರರಿಗೆ ಕೂಡಲೇ ಗ್ರಾಚ್ಯುಟಿ ಪಾವತಿಸಲು ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಬೇಕು. ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು’ ಎಂದು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಒತ್ತಾಯಿಸಿದರು.

ಅನ್ನದೊಟ್ಟಿಗೆ ಅಕ್ಷರ ಕೇಂದ್ರವಾಗಿ ಅಂಗನವಾಡಿಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆ ತನಕ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ಸಮಯ ನಿಗದಿ ಮಾಡಬೇಕು. ಆ ಮೂಲಕ ಅಂಗನವಾಡಿ ಕೇಂದ್ರಗಳ ವೇಳಾಪಟ್ಟಿ ಬದಲಿಸಬೇಕು. ಈ ಸಮಯದಲ್ಲಿ ಅಂಗನವಾಡಿ ಕೇಂದ್ರಕ್ಕೆ ಸಾರ್ವಜನಿಕರ ಭೇಟಿಗೆ ಅವಕಾಶ ಇಲ್ಲ ಎಂಬುದನ್ನು ಖಚಿತಪಡಿಸಬೇಕು ಎಂದು ಮನವಿ ಮಾಡಿದರು.

ನ್ಯಾಯಯುತ ಮುಂಬಡ್ತಿಗಳನ್ನು ನೀಡಬೇಕು, ನೌಕರರ ಮೇಲೆ ಹೆಚ್ಚುತ್ತಿರುವ ಶಿಸ್ತು ಕ್ರಮಗಳ ಕಡಿಮೆ ಮಾಡಬೇಕು. ಉಚಿತ ಕೆಲಸ ನಿಲ್ಲಿಸಿ, ಸಮಯಕ್ಕೆ ಸರಿಯಾಗಿ ವೇತನ ಪಾತಿಸಬೇಕು ಎಂದು ಒತ್ತಾಯಿಸಿದರು.

‘ಮನವಿ ಪತ್ರಗಳನ್ನು ಅಧಿಕಾರಿಗಳು ಪಡೆದಿದ್ದಾರೆ. ಬೇಡಿಕೆಗಳ ಈಡೇರದಿದ್ದರೆ ಮುಂದಿನ ದಿನಗಳಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು’ ಎಂದು ವರಲಕ್ಷ್ಮಿ ತಿಳಿಸಿದರು.

ಶಿಕ್ಷಕರ ಅರ್ಹತಾ ಪರೀಕ್ಷೆ ತೇರ್ಗಡೆಯಾದರೂ ಅವಕಾಶ ನೀಡದ ಸರ್ಕಾರ

ವಾಣಿಜ್ಯಶಾಸ್ತ್ರ ಅಭ್ಯರ್ಥಿಗಳಿಗೆ ಫಲಿಸದ ಉದ್ಯೋಗ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ತೇರ್ಗಡೆಯಾದರೂ, ನೇಮಕಾತಿಗೆ ಪರಿಗಣಿಸದ ಕಾರಣ ವಾಣಿಜ್ಯಶಾಸ್ತ್ರ ಬಿ.ಇಡಿ ಪದವೀಧರ ಅಭ್ಯರ್ಥಿಗಳು ಉದ್ಯೋಗಾವಕಾಶ ಕಳೆದುಕೊಂಡಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ (6ರಿಂದ 8ನೇ ತರಗತಿ) ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕ ವೃಂದದ 15 ಸಾವಿರ ಶಿಕ್ಷಕರ ಹುದ್ದೆಗಳಿಗೆ ಇದೇ ವರ್ಷದ ಮಾರ್ಚ್‌ನಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಇದಕ್ಕೂ ಮೊದಲು ಟಿಇಟಿ ತೇರ್ಗಡೆಯಾಗಿದ್ದ ಇತರೆ ವಿಷಯಗಳ ಪದವೀಧರರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ವಾಣಿಜ್ಯಶಾಸ್ತ್ರ ಪದವೀಧರರನ್ನು ಮಾತ್ರ ಪ್ರಕ್ರಿಯೆಯಿಂದ ಹೊರಗಿಟ್ಟಿದೆ.

ಪ್ರಜಾವಾಣಿ ವಿಶೇಷ

‘ಸರ್ಕಾರ 2015 ರಿಂದ ವಾಣಿಜ್ಯಶಾಸ್ತ್ರ ಪದವೀಧರರಿಗೂ ಬಿ.ಇಡಿ ಮಾಡುವ ಅವಕಾಶ ಕಲ್ಪಿಸಿದೆ. 2020ರಿಂದ ಇಲ್ಲಿಯವರೆಗೂ ಮೂರು ಬಾರಿ ಶಿಕ್ಷಕರ ಅರ್ಹತಾ ಪರೀಕ್ಷೆ ನಡೆದಿದೆ. ಐದು ಸಾವಿರಕ್ಕೂ ಹೆಚ್ಚು ವಾಣಿಜ್ಯಶಾಸ್ತ್ರ ಬಿ.ಇಡಿ ಪದವೀಧರರು ತೇರ್ಗಡೆಯಾಗಿದ್ದಾರೆ. ಪ್ರತಿ ಬಾರಿಯ ನೇಮಕಾತಿಯಲ್ಲೂ ಇದೇ ರೀತಿ ಕಡೆಗಣಿಸಲಾಗಿದೆ’ ಎನ್ನುತ್ತಾರೆ ಶಿಕ್ಷಕರ ಅರ್ಹತಾ ಪರೀಕ್ಷೆ ತೇರ್ಗಡೆಯಾಗಿರುವ ಎಂ.ಆರ್. ಕಿರಣ್, ಸೌಮ್ಯಾ, ಶ್ರೀಶೈಲ, ಮಹೇಶ್ವರಿ ಅಣ್ಣಿಗೇರಿ.

ವಿಷಯಗಳಿದ್ದರೂ ಕಡೆಗಣನೆ: ‘ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ (6ರಿಂದ 8ನೇ ತರಗತಿ) ಸಮಾಜ ವಿಜ್ಞಾನದಲ್ಲಿ ಬೋಧನಾ ಶಾಸ್ತ್ರವಿದೆ. ಪ್ರೌಢಶಾಲೆಗಳಲ್ಲಿ ವ್ಯವಹಾರ ಅಧ್ಯಯನವಿದೆ. ಬಿ.ಇಡಿಯಲ್ಲಿ ಕನ್ನಡ, ಇತಿಹಾಸ, ಇಂಗ್ಲಿಷ್, ಮನೋವಿಜ್ಞಾನ ಅಧ್ಯಯನ ಮಾಡಿರುತ್ತೇವೆ. ಹಾಗಾಗಿ, ಸಮಾಜ ವಿಜ್ಞಾನ ವಿಷಯಕ್ಕೆ ಶಿಕ್ಷಕರಾಗಿ ಆಯ್ಕೆ ಮಾಡಲು ಯಾವುದೇ ತೊಡಕುಗಳಿಲ್ಲ. ಬಿ.ಇಡಿಗೆ ಸೇರಲು ಅವಕಾಶ ಕೊಟ್ಟಿದ್ದಾದರೂ ಏಕೆ? ಸರ್ಕಾರದ ನಡೆ ನಮಗೆ ಅರ್ಥವಾಗುತ್ತಿಲ್ಲ’ ಎನ್ನುವುದು ಅವರ ಅಳಲು.

‘ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕ್ರಿಯೆಗಳು ಆರಂಭವಾದ ನಂತರ ಪಠ್ಯ ವಿಷಯಗಳಲ್ಲೂ ಸಾಕಷ್ಟು ಬದಲಾವಣೆಗಳಾಗುತ್ತಿವೆ. ವಿದ್ಯಾರ್ಥಿಗಳಿಗೆ ವಿಷಯ ಆಯ್ಕೆಯ ಸ್ವಾತಂತ್ರ್ಯವನ್ನೂ ನೀಡಲಾಗಿದೆ. ಹಾಗಾಗಿ, ಹರಿಯಾಣ, ಉತ್ತರ ಪ್ರದೇಶ ಸರ್ಕಾರಗಳು ವಾಣಿಜ್ಯಶಾಸ್ತ್ರ ಪದವೀಧರರನ್ನೂ ಶಿಕ್ಷಕರಾಗಿ ನೇಮಕ ಮಾಡಲು ಅವಕಾಶ ನೀಡಿವೆ. ರಾಜ್ಯ ಸರ್ಕಾರ ಈ ವಿಷಯದಲ್ಲಿ ಅನ್ಯಾಯ ಮಾಡುತ್ತಿದೆ. ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯವಾಗಿದೆ’ ಎನ್ನುತ್ತಾರೆ ಕರ್ನಾಟಕ ಸ್ಪರ್ಧಾ ಪರೀಕ್ಷೆ ಅಭ್ಯರ್ಥಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಿದ್ದೇಶ್.

ಎಂಜಿನಿಯರಿಂಗ್‌ಗೆ ಮಣೆ; ವಾಣಿಜ್ಯ ಕಡೆಗಣನೆ: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಈ ಬಾರಿ ಎಂಜಿನಿಯರಿಂಗ್ ಪದವೀಧರರಿಗೆ ಅವಕಾಶ ನೀಡಲಾಗಿದೆ. ಎಂಜಿನಿಯರಿಂಗ್ ಪದವಿ ಪಡೆದ 34 ಅಭ್ಯರ್ಥಿಗಳು ಗಣಿತ ಮತ್ತು ವಿಜ್ಞಾನ ಶಿಕ್ಷಕರ ಹುದ್ದೆಗಳಿಗೆ ಪರೀಕ್ಷೆ ಬರೆದಿದ್ದರು. ಅವರಲ್ಲಿ 19 ಮಂದಿ ಆಯ್ಕೆಯಾಗಿದ್ದಾರೆ. ಇದು ತಾರತಮ್ಯಕ್ಕೆ ಒಂದು ಉದಾಹರಣೆ ಎನ್ನುವುದು ಉದ್ಯೋಗ ವಂಚಿತ ಅಭ್ಯರ್ಥಿಗಳ ಆರೋಪ.

ಈ ಕುರಿತು ಮಾಹಿತಿ ಪಡೆಯಲು ಆಯುಕ್ತ ಆರ್.ವಿಶಾಲ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ, ಅವರು ಕರೆ ಸ್ವೀಕರಿಸಲಿಲ್ಲ.

ಕೋರ್ಟ್ ಆದೇಶಕ್ಕೂ ಇಲ್ಲ ಮನ್ನಣೆ

ಟಿಇಟಿ ತೇರ್ಗಡೆಯಾದ ವಾಣಿಜ್ಯಶಾಸ್ತ್ರ ಬಿ.ಇಡಿ ಪದವೀಧರರನ್ನೂ ಶಿಕ್ಷಕರ ನೇಮಕಾತಿಗೆ ಪರಿಗಣಿಸುವಂತೆ ಹೈಕೋರ್ಟ್ ಧಾರವಾಡ ಪೀಠ ಕಳೆದ ಏಪ್ರಿಲ್‌ನಲ್ಲೇ ಆದೇಶಿಸಿದೆ.

ಮಾರ್ಚ್‌ನಲ್ಲಿ ಸರ್ಕಾರ ಹೊರಡಿಸಿದ್ದ ಶಿಕ್ಷಕರ ನೇಮಕಾತಿ ಅಧಿಸೂಚನೆ ಪ್ರಕಾರ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಗದಗದ ಜಯಶ್ರೀ ಗುರುಪಾದಪ್ಪ ಎನ್ನುವ ಅಭ್ಯರ್ಥಿ ಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ಕೋರ್ಟ್, 2022ರ ನೇಮಕಾತಿಗೆ ಪರಿಗಣಿಸುವಂತೆ ಆದೇಶ ನೀಡಿತ್ತು. ಆದರೂ, ಸರ್ಕಾರ ಆದೇಶ ಪಾಲಿಸಿಲ್ಲ ಎಂದು ಅಭ್ಯರ್ಥಿಗಳು ದೂರುತ್ತಾರೆ.



ಭಾರತವು ಗುರುವಾರ ಜಿ 20 ಅಧ್ಯಕ್ಷ ಸ್ಥಾನ ವಹಿಸಿಕೊಂಡ ಪ್ರಯುಕ್ತ ದೆಹಲಿಯ ಕೆಂಪು ಕೋಟೆ ದೀಪಾಲಂಕಾರದಿಂದ ಕಂಗೊಳಿಸಿತು –ಪಿಟಿಐ ಚಿತ್ರ

ಜಿ20 ಅಧ್ಯಕ್ಷ ಸ್ಥಾನ ವಹಿಸಿಕೊಂಡ ಭಾರತ

100 ಸ್ಮಾರಕಗಳಿಗೆ ದೀಪಾಲಂಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ಜಿ–20 ಗುಂಪಿನ ಅಧ್ಯಕ್ಷತೆಯನ್ನು ಗುರುವಾರ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳೂ ಸೇರಿದಂತೆ ದೇಶದ 100 ಸ್ಮಾರಕಗಳು ಡಿಸೆಂಬರ್ 1ರಿಂದ 7 ರವರೆಗೆ ಜಿ–20 ಲಾಂಛನವನ್ನು ಒಳಗೊಂಡಂತೆ ದೀಪಾಲಂಕಾರದಿಂದ ಝುಗಮಗಿಸಲಿವೆ.

ದೆಹಲಿಯ ಕೆಂಪು ಕೋಟೆ, ಹುಮಾಯೂನ್ ಸಮಾಧಿ, ಶ್ರೀನಗರದ ಶಂಕರಾಚಾರ್ಯ ದೇವಸ್ಥಾನ, ತಂಜಾವೂರಿನ ಚೋಳ ದೇವಸ್ಥಾನ, ಗುಜರಾತ್‌ನ ಸೂರ್ಯ ದೇವಾಲಯ, ಒಡಿಶಾದ ಕೊನಾರ್ಕ್ ಸೂರ್ಯ ದೇವಾಲಯ, ಬಿಹಾರದ ಶೇರ್ ಷಾ ಸೂರಿ ಸಮಾಧಿ 100 ಸ್ಮಾರಕಗಳ ಪಟ್ಟಿಯಲ್ಲಿ ಸೇರಿವೆ.

ಜಿ–20 ಅಧ್ಯಕ್ಷತೆ ಅವಧಿಯಲ್ಲಿ ಭಾರತದ 50ಕ್ಕೂ ಹೆಚ್ಚು ಪ್ರಮುಖ ನಗರಗಳ 32 ವಿವಿಧ ವಲಯಗಳಲ್ಲಿ 200 ಸಭೆಗಳನ್ನು ಆಯೋಜಿಸಲಾಗುತ್ತಿದೆ.

ನವೆಂಬರ್ 16ರಂದು ಇಂಡೋನೇಷ್ಯಾ ಅಧ್ಯಕ್ಷ ಜೊಕೊ ವಿಡೊಡೊ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಧ್ಯಕ್ಷ ಸ್ಥಾನವನ್ನು ಹಸ್ತಾಂತರಿಸಿದ್ದರು.

‘ಜಿ–20 ಅಧ್ಯಕ್ಷ ಭಾರತದ ಪ್ರಯತ್ನಕ್ಕೆ ಬೆಂಬಲ’

ವಾಷಿಂಗ್ಟನ್ (ಪಿಟಿಐ): ಆಹಾರ ಮತ್ತು ಇಂಧನ ಭದ್ರತೆ ಸಹಿತ ಹಲವು ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಜಿ–20 ಅಧ್ಯಕ್ಷತೆ ವಹಿಸಿಕೊಂಡಿರುವ ಭಾರತಕ್ಕೆ ಬೆಂಬಲವಾಗಿ ನಿಲ್ಲುವುದನ್ನು ಅಮೆರಿಕ ಎದುರು ನೋಡುತ್ತಿದೆ ಎಂದು ಶ್ವೇತಭವನ ತಿಳಿಸಿದೆ.

ಜಿ–20 ಗುಂಪಿನ ಅಧ್ಯಕ್ಷತೆಯನ್ನು ಗುರುವಾರ ಭಾರತ ವಹಿಸಿಕೊಂಡಿದ್ದರ ಹಿನ್ನೆಲೆಯಲ್ಲಿ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್-ಪಿಯರ್ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ. ‘ಪುಟಿದೇಳಬಲ್ಲ ಜಾಗತಿಕ ಆರ್ಥಿಕತೆಯನ್ನು ಕಟ್ಟುವ ಪ್ರಯತ್ನದಲ್ಲಿ ನಮ್ಮ ಪ್ರಯತ್ನ ಮುಂದುವರಿಯಲಿದೆ. ಆಹಾರ, ಇಂಧನ ಭದ್ರತೆಯಂತಹ ಸದ್ಯದ ಸವಾಲುಗಳ ವಿಚಾರದಲ್ಲೂ ಜಿ–20 ಅಧ್ಯಕ್ಷತೆ ವಹಿಸಿರುವ ಭಾರತಕ್ಕೆ ಬೆಂಬಲವಾಗಿ ನಿಲ್ಲುವುದನ್ನು ನಾವು ಎದುರು ನೋಡುತ್ತಿದ್ದೇವೆ’ ಎಂದು ಅವರು ತಿಳಿಸಿದರು.

ಜಿ–20 ಗುಂಪಿನ ರಾಷ್ಟ್ರಗಳು ಜಗತ್ತಿನ ಜಿಡಿಪಿಯ ಶೇ 80ರಷ್ಟು, ಅಂತರರಾಷ್ಟ್ರೀಯ ವ್ಯಾಪಾರದ ಶೇ 75ರಷ್ಟು ಹಾಗೂ ಒಟ್ಟಾರೆ ಜನಸಂಖ್ಯೆಯ ಮೂರನೇ ಎರಡರಷ್ಟು ಭಾಗವನ್ನು ಹೊಂದಿವೆ.

‘ಯೂನಿವರ್ಸಿಟಿ ಕನೆಕ್ಟ್’ ಆರಂಭ

ನವದೆಹಲಿ (ಪಿಟಿಐ): ‘ದೇಶದ ಎಲ್ಲಾ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಗೆ ವೇದಿಕೆ ಕಲ್ಪಿಸುವ ‘ಯೂನಿವರ್ಸಿಟಿ ಕನೆಕ್ಟ್’ ಕಾರ್ಯಕ್ರಮದ ಮೂಲಕ ಭಾರತ ತನ್ನ ಜಿ–20 ಅಧ್ಯಕ್ಷತೆ ಆರಂಭಿಸಿದೆ’ ಎಂದು ಯುಜಿಸಿ ಮುಖ್ಯಸ್ಥ ಎಂ.ಜಗದೀಶ್‌ಕುಮಾರ್ ಅವರು ಹೇಳಿದ್ದಾರೆ.

‘ಅಧ್ಯಕ್ಷತೆಯ ಅವಧಿಯಲ್ಲಿ ವಿವಿಧ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಭಾರತದ ಜಿ–20 ಅಧ್ಯಕ್ಷತೆಯ ಮಹತ್ವದ ಕುರಿತು ಅರಿವು ಮೂಡಿಸಲಿದ್ದಾರೆ. ಸಾಮರಸ್ಯವನ್ನು ಪ್ರತಿಪಾದಿಸುವ ಮೂಲಕ ಭಾರತವು ಜಗತ್ತಿನ ಇತರ ರಾಷ್ಟ್ರಗಳಿಗೆ ಹೇಗೆ ಮಾದರಿಯಾಗಲಿದೆ ಎಂಬುದನ್ನೂ ತಿಳಿಸಿಕೊಡಲಿದ್ದಾರೆ’ ಎಂದಿದ್ದಾರೆ.

ಎಚ್‌ಐವಿ ಸೋಂಕು ತಡೆ ಸೌಲಭ್ಯ ಎಲ್ಲರಿಗೂ ಸಿಗಲಿ: ಡಬ್ಲ್ಯುಎಚ್‌ಒ

ನವದೆಹಲಿ (ಪಿಟಿಐ): ‘ಏಡ್ಸ್ ರೋಗವನ್ನು 2030ರ ಹೊತ್ತಿಗೆ ನಿರ್ಮೂಲನೆ ಮಾಡುವ ಗುರಿ ಹೊಂದಲಾಗಿದೆ. ಈ ದಿಸೆಯಲ್ಲಿ ಎಚ್‌ಐವಿ ತಡೆ ಸೌಲಭ್ಯ, ಚಿಕಿತ್ಸೆ ಮತ್ತು ಆರೈಕೆಯು ಎಲ್ಲರಿಗೂ ಸಮಾನವಾಗಿ ಸಿಗುವಂತೆ ಮಾಡುವ ಜರೂರು ಇದೆ’ ಎಂದು ವಿಶ್ವ ಆರೋಗ್ಯ ಸಂಸ್ಥೆ ಗುರುವಾರ ಅಭಿಪ್ರಾಯಪಟ್ಟಿದೆ.

ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಡಬ್ಲ್ಯುಎಚ್‌ಒದ ಆಗ್ನೇಯ ಏಷ್ಯಾ ವಿಭಾಗದ ಪ್ರಾದೇಶಿಕ ನಿರ್ದೇಶಕಿ ಡಾ. ಪೂನಂ ಖೇತ್ರಪಾಲ್ ಅವರು ಮಾತನಾಡಿದರು. ‘ನಮ್ಮ ಭಾಗದಲ್ಲಿ ಸುಮಾರು 38 ಲಕ್ಷ ಜನರು ಎಚ್‌ಐವಿ ಸೋಂಕಿತರಾಗಿದ್ದಾರೆ. ಇದು ಜಾಗತಿಕ ಸಂಖ್ಯೆಯ ಶೇ 10ರಷ್ಟಾಗುತ್ತದೆ’ ಎಂದರು.

‘ಶೇ 95ರಷ್ಟು ಹೊಸ ಎಚ್‌ಐವಿ ಸೋಂಕಿನ ಪ್ರಕರಣಗಳು, ಲೈಂಗಿಕ ಕಾರ್ಯಕರ್ತರು, ಸಿರೆಂಜ್ ಮೂಲಕ ಮಾದಕವಸ್ತು ತೆಗೆದುಕೊಳ್ಳುವವರು, ಪುರುಷ–ಪುರುಷ ಹಾಗೂ ಪುರುಷ–ಲಿಂಗಪರಿವರ್ತಿತರ ಜೊತೆಗಿನ ಲೈಂಗಿಕ ಸಂಪರ್ಕದಿಂದಾಗಿ ಹರಡುತ್ತಿವೆ’ ಎಂದರು.

‘ಎಚ್‌ಐವಿ ತಡೆ ಸೌಲಭ್ಯಗಳ ಕುರಿತು ಶೇ 22ರಷ್ಟು ಯುವಕರಿಗೆ ಮಾತ್ರ ತಿಳಿದಿದೆ. ಎಚ್‌ಐವಿ ಸೋಂಕಿನ ಸ್ವ–ಪರೀಕ್ಷೆ ಹಾಗೂ ರೋಗ ನಿರೋಧಕ ಔಷಧಗಳ ಬಗ್ಗೆ ಇನ್ನೂ ವರೆಗೂ ಯುವಕರಿಗೆ ಮಾಹಿತಿ ಇಲ್ಲ. ಸಿರಿಂಜ್ ಮೂಲಕ ಮಾದಕ ವಸ್ತು ತೆಗೆದುಕೊಳ್ಳುತ್ತಿರುವವರ ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸಿದರೆ ಸೋಂಕು ತಡೆಗಟ್ಟುವ ಕಾರ್ಯದಲ್ಲಿ ಸುಧಾರಣೆಯಾಗಲಿದೆ’ ಎಂದರು.

ಕೋಲ್ಕತಾದಲ್ಲಿ ವಿಶ್ವ ಏಡ್ಸ್ ದಿನದ ಪ್ರಯುಕ್ತ ಗುರುವಾರ ಆಯೋಜಿಸಿದ್ದ ಜಾಗೃತಿ ಅಭಿಯಾನದಲ್ಲಿ ಸಾಮಾಜಿಕ ಕಾರ್ಯಕರ್ತರು ರಿಬ್ಬನ್ ಚಿಹ್ನೆಯ ಉದ್ದಕ್ಕೂ ಮೇಣದಬತ್ತಿಗಳನ್ನು ಬೆಳಗಿಸಿದರು –ಎಎಫ್‌ಪಿ ಚಿತ್ರ

‘ದಿ ಕಾಶ್ಮೀರ್ ಫೈಲ್ಸ್’ ವಿವಾದ: ಕ್ಷಮೆ ಕೇಳಿದ ನಾದವ್ ಲಾಪಿಡ್

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ವಿವೇಕ್ ಅಗ್ನಿಹೋತ್ರಿ ನಿರ್ದೇಶನದ ‘ದಿ ಕಾಶ್ಮೀರ್ ಫೈಲ್ಸ್’ ಹಿಂದಿ ಚಿತ್ರದ ಬಗ್ಗೆ ಟೀಕಿಸಿ, ವಿವಾದಾತ್ಮಕ ಹೇಳಿಕೆ ನೀಡಿದ್ದ ಇಸ್ರೇಲಿ ಚಿತ್ರನಿರ್ದೇಶಕ ನಾದವ್ ಲಾಪಿಡ್ ಗುರುವಾರ ತಮ್ಮ ಹೇಳಿಕೆಗಾಗಿ ಕ್ಷಮೆಯಾಚಿಸಿದ್ದಾರೆ.

‘ಚಿತ್ರದ ಕುರಿತ ನನ್ನ ಹೇಳಿಕೆಗಳನ್ನು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ. ಕಾಶ್ಮೀರ ಪಂಡಿತರನ್ನು ಅಥವಾ ಅಲ್ಲಿ ನೋವುಂಡವರನ್ನು ಅವಮಾನಿಸುವುದು ನನ್ನ ಉದ್ದೇಶವಾಗಿರಲಿಲ್ಲ. ಇದರಲ್ಲಿ ಒಟ್ಟಾರೆ ಕ್ಷಮೆಯಾಚಿಸುವೆ’ ಎಂದು ಲಾಪಿಡ್ ಅವರು ಭಾರತದಿಂದ ನಿರ್ಗಮಿಸುವಾಗ, ಬುಧವಾರ ರಾತ್ರಿ ‘ಸಿಎನ್‌ಎನ್– ನ್ಯೂಸ್ 18’ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ಈ ಚಿತ್ರ ಅಸಭ್ಯ, ಪ್ರಚಾರತಂತ್ರದ ಉದ್ದೇಶದ್ದಾಗಿದೆ ಎಂಬುದು ನನ್ನ ಮತ್ತು ಜ್ಯೂರಿ ಸದಸ್ಯರ ಸ್ಪಷ್ಟ ಅಭಿಪ್ರಾಯವಾಗಿತ್ತು. ಪ್ರತಿಷ್ಠಿತ ಚಿತ್ರೋತ್ಸವದ ಸ್ಪರ್ಧಾತ್ಮಕ ವಿಭಾಗಕ್ಕೆ ಇದು ಸೂಕ್ತವಲ್ಲವೆಂಬುದನ್ನು ಈಗಾಗಲೇ ಸ್ಪಷ್ಟಪಡಿಸಿರುವೆ. ನಾನು ಇದನ್ನು ಮತ್ತೆ ಮತ್ತೆ ಹೇಳಲು ಬಯಸುತ್ತೇನೆ’ ಎಂದೂ ಹೇಳಿದ್ದಾರೆ.

ಗೋವಾದಲ್ಲಿ ಕಳೆದ ವಾರ ನಡೆದ 53ನೇ ಇಫಿ (ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ) ಜ್ಯೂರಿ ಮುಖ್ಯಸ್ಥರಾಗಿದ್ದ ಅವರು, ‘ಪ್ರತಿಷ್ಠಿತ ಚಿತ್ರೋತ್ಸವಕ್ಕೆ ಇಂತಹ ಅಸಭ್ಯ, ಕೀಳು ಅಭಿರುಚಿಯ ಹಾಗೂ ಪ್ರಚಾರತಂತ್ರದ ಚಿತ್ರ ಆಯ್ಕೆ ಮಾಡಿರುವುದು ತಪ್ಪು. ಈ ಚಿತ್ರ ಭಾರತೀಯ ಪನೋರಮಾ ವಿಭಾಗದಲ್ಲಿ ಪ್ರದರ್ಶನವಾದಾಗ ವಿಚಲಿತಗೊಂಡೆ. ಮುಜುಗರವೂ ಆಯಿತು’ ಎಂದು ‘ದಿ ಕಾಶ್ಮೀರ್ ಫೈಲ್ಸ್’ ಚಿತ್ರವನ್ನು ಟೀಕಿಸಿದ್ದರು.

ಐಎಎಸ್ ಅಧಿಕಾರಿಗೆ ಸೇರಿದ ₹ 82 ಕೋಟಿ ಮೌಲ್ಯದ ಸ್ಥಿರಾಸ್ತಿ ಜಪ್ತಿ

ರಾಂಚಿ: ಜಾರ್ಖಂಡ್‌ನಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಬಂಧಿಯಾಗಿರುವ ಐಎಎಸ್ ಅಧಿಕಾರಿ ಪೂಜಾ ಸಿಂಘಾಲ್ ಅವರ ₹ 82.77 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ತಾತ್ಕಾಲಿಕವಾಗಿ ಜಪ್ತಿ ಮಾಡಿದೆ.

ಪಲ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಡಯಾಗ್ನೋಸ್ಟಿಕ್ ಸೆಂಟರ್ ಸೇರಿದಂತೆ ರಾಂಚಿಯಲ್ಲಿ ಇರುವ ಜಮೀನನ್ನು ಇ.ಡಿ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಸುಮಾರು ₹ 82 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ಭ್ರಷ್ಟಾಚಾರದಲ್ಲಿ ತೊಡಗಿದ್ದ ಅವರು, ತಮಗೆ ಬರುತ್ತಿದ್ದ ಕಮಿಷನ್ ಹಣವನ್ನು ಸಂಬಂಧಿಕರ ಖಾತೆಗಳಿಗೆ ವರ್ಗಾವಣೆ ಮಾಡುತ್ತಿದ್ದರು ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಗಣಿ ಇಲಾಖೆ ಕಾರ್ಯದರ್ಶಿಯಾಗಿದ್ದ ಅವರನ್ನು ಜಾರಿ ನಿರ್ದೇಶನಾಲಯ ಮೇ 11ರ.ದಿ ಬಂಧಿಸಿತ್ತು. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗಾ) ಅನುದಾನ ದುರುಪಯೋಗ ಮತ್ತಿತರ ಪ್ರಕರಣ ಸಂಬಂಧ ಅವರನ್ನು ಬಂಧಿಸಲಾಗಿದೆ.

ಜಾರಿ ನಿರ್ದೇಶನಾಲಯವು ಪೂಜಾ ಅವರ ವ್ಯಾಪಾರೋದ್ಯಮಿ ಪತಿಗೆ ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಿತ್ತು. ನಂತರದಲ್ಲಿ ಪೂಜಾ ಅವರನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿತ್ತು. ಸಿಂಘಾಲ್ ಅವರು 2000ನೇ ಬ್ಯಾಚಿನ ಐಎಎಸ್ ಅಧಿಕಾರಿಯಾಗಿದ್ದಾರೆ.

‘ಜೈಲಿನಲ್ಲಿ ಸಚಿವರಿಂದ ಅಧಿಕಾರ ದುರ್ಬಳಕೆ’

ನವದೆಹಲಿ (ಪಿಟಿಐ): ಬಂಧನದಲ್ಲಿರುವ ಸಚಿವ ಸತ್ಯೇಂದರ್ ಜೈನ್ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದು, ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಹ ಆರೋಪಿಯನ್ನು ಜೈಲಿನಲ್ಲಿ ಭೇಟಿಯಾಗಿದ್ದಾರೆ ಎಂದು ಲೆಫ್ಟಿನಂಟ್ ಗವರ್ನರ್ ರಚಿಸಿದ್ದ ತನಿಖಾ ಸಮಿತಿ ಹೇಳಿದೆ. ದೆಹಲಿ ಸರ್ಕಾರದ ಗೃಹ, ಕಾನೂನು ಮತ್ತು ಗುಪ್ತಚರ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳನ್ನು ಒಳಗೊಂಡ ಸಮಿತಿಯನ್ನು ಲೆಫ್ಟಿನಂಟ್ ಗವರ್ನರ್ ವಿ.ಕೆ.ಸಕ್ಸೇನಾ ರಚಿಸಿದ್ದರು.

ದಕ್ಷಿಣ ಕೊರಿಯಾ ಮಹಿಳಾ ಯೂಟ್ಯೂಬರ್‌ಗೆ ಲೈಂಗಿಕ ಕಿರುಕುಳ: ಇಬ್ಬರ ಬಂಧನ

ಮುಂಬೈ (ಪಿಟಿಐ): ದಕ್ಷಿಣ ಕೊರಿಯಾದ ಮಹಿಳಾ ಯೂಟ್ಯೂಬರ್ ಒಬ್ಬರಿಗೆ ಲೈಂಗಿಕ ಕಿರುಕುಳ ನೀಡಿ, ಅವರನ್ನು ಹಿಂಬಾಲಿಸಿದ ಆರೋಪದ ಮೇಲೆ ಮುಂಬೈ ಪೊಲೀಸರು ಇಬ್ಬರನ್ನು ಗುರುವಾರ ಬಂಧಿಸಿದ್ದಾರೆ.

‘ಕಿರುಕುಳ ನೀಡುತ್ತಿದ್ದ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಮಂಗಳವಾರ ರಾತ್ರಿ ಈ ಘಟನೆ ನಡೆದಿದೆ. ಮಹಿಳೆಯು ಖಾರ್ ಉಪನಗರವನ್ನು ತಮ್ಮ ಯೂಟ್ಯೂಬ್ ಚಾನೆಲ್‌ನ ನೇರ-ಪ್ರಸಾರದಲ್ಲಿ ತೋರಿಸುತ್ತಿದ್ದರು. ಈ ವೇಳೆ ಇದೇ ಪ್ರದೇಶದ ಯುವಕನೊಬ್ಬ ಆಕೆಗೆ ಕಿರುಕುಳ ನೀಡಿದ್ದಾನೆ’ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

‘ಯುವಕನೊಬ್ಬ ಮಹಿಳೆಯ ಹತ್ತಿರಕ್ಕೆ ಬಂದು ಆಕೆಯ ಕೈಹಿಡಿಯಲು ಯತ್ನಿಸುತ್ತಾನೆ. ಮಹಿಳೆ ಇದಕ್ಕೆ ಪ್ರತಿಭಟಿಸುತ್ತಾರೆ ಮತ್ತು ಅಲ್ಲಿಂದ ಓಡಿ ಹೋಗುತ್ತಾರೆ. ಮಹಿಳೆ ಓಡಿಹೋಗುತ್ತಿರುವಾಗ ತನ್ನ ಸ್ನೇಹಿತನೊಂದಿಗೆ ದ್ವಿಚಕ್ರವಾಹನದಲ್ಲಿ ಬಂದ ಯುವಕ ಲಿಫ್ಟ್ ಕೊಡುವುದಾಗಿ ಪೀಡಿಸುತ್ತಾನೆ. ಈ ದೃಶ್ಯಗಳು ವಿಡಿಯೊದಲ್ಲಿದೆ’ ಎಂದರು.

‘ಬುಧವಾರ ನಮಗೆ ಈ ವಿಡಿಯೊ ಟ್ವಿಟರ್‌ನಲ್ಲಿ ದೊರೆತಿದೆ. ಇದನ್ನೇ ಆಧಾರವಾಗಿಟ್ಟುಕೊಂಡು, ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, 19 ಮತ್ತು 21 ವರ್ಷದ ಯುವಕರನ್ನು ಬಂಧಿಸಿದ್ದೇವೆ’ ಎಂದು ಖಾರ್ ಪೊಲೀಸ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸುನಂದಾ ಪುಷ್ಕರ್ ಸಾವಿನ ಪ್ರಕರಣ

ಹೈಕೋರ್ಟ್‌ನಲ್ಲಿ ತರೂರ್ ಖುಲಾಸೆ ಪ್ರಶ್ನಿಸಿದ ಪೊಲೀಸರು

ಶಶಿ ತರೂರ್

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದ ಶಶಿ ತರೂರ್ ಪತ್ನಿ ಸುನಂದಾ ಪುಷ್ಕರ್ ನಿಗೂಢ ಸಾವಿನ ಪ್ರಕರಣದಿಂದ ತರೂರ್ ಅವರನ್ನು ದೋಷಮುಕ್ತಗೊಳಿಸಿರುವ ವಿಚಾರಣಾಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿ ಇಲ್ಲಿನ ಪೊಲೀಸರು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದಾರೆ.

ದೆಹಲಿ ಪೊಲೀಸರು ಸಲ್ಲಿಸಿರುವ ಮರುಪರಿಶೀಲನಾ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಶರ್ಮಾ ಅವರಿದ್ದ ಏಕಸದಸ್ಯ ನ್ಯಾಯಪೀಠವು ಈ ಸಂಬಂಧ ಪ್ರತಿಕ್ರಿಯೆ ನೀಡುವಂತೆ ತರೂರ್ ಅವರಿಗೆ ನೋಟಿಸ್ ಜಾರಿಗೊಳಿಸಿದೆ.

ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯ ಪ್ರತಿಯನ್ನು ದೆಹಲಿ ಪೊಲೀಸರು ತಮಗೆ ನೀಡಿಲ್ಲ. ಅದನ್ನು ಉದ್ದೇಶಪೂರ್ವಕವಾಗಿಯೇ ತಪ್ಪಾದ ಇ–ಮೇಲ್ ವಿಳಾಸಕ್ಕೆ ರವಾನಿಸಲಾಗಿದೆ ಎಂದು ತರೂರ್ ಪರ ವಕೀಲರು ಆರೋಪಿಸಿದರು.

ಇದನ್ನು ಆಲಿಸಿದ ನ್ಯಾಯಪೀಠವು ಅರ್ಜಿಯ ಪ್ರತಿಯನ್ನು ತರೂರ್ ಪರ ವಕೀಲರಿಗೆ ನೀಡುವಂತೆ ದೆಹಲಿ ಪೊಲೀಸರ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲರಿಗೆ ಸೂಚಿಸಿತು.

ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇನ್ನಿತರ ಮಾಹಿತಿಗಳನ್ನು ಉಭಯ ಬಣದವರನ್ನು ಬಿಟ್ಟು ಇನ್ನಾರಿಗೂ ಒದಗಿಸಬಾರದು ಎಂದೂ ನ್ಯಾಯಪೀಠ ನಿರ್ದೇಶಿಸಿತು. ಪ್ರಕರಣದ ವಿಚಾರಣೆಯನ್ನು 2023ರ ಫೆಬ್ರುವರಿ 7ಕ್ಕೆ ಮುಂದೂಡಿತು.

2014ರ ಜನವರಿಯಲ್ಲಿ ಸುನಂದಾ ಅವರು ನವದೆಹಲಿಯ ಹೋಟೆಲ್‌ವೊಂದರಲ್ಲಿ ಮೃತಪಟ್ಟಿದ್ದರು. ಕ್ರೌರ್ಯ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪೊಲೀಸರು ತರೂರ್ ವಿರುದ್ಧ ಪ್ರಕರಣ ದಾಖಲಿಸಿದ್ದರು. ಆದರೆ ಅವರನ್ನು ಬಂಧಿಸಿರಲಿಲ್ಲ. 2021ರ ಆಗಸ್ಟ್ 18ರಂದು ವಿಚಾರಣಾಧೀನ ನ್ಯಾಯಾಲಯವು ತರೂರ್ ಅವರನ್ನು ದೋಷಮುಕ್ತಗೊಳಿಸಿತ್ತು.

ರಾಜ್ಯಪಾಲರ ಹುದ್ದೆ ನಿಷ್ಪ್ರಯೋಜಕ: ಡಿಎಂಕೆ

ಚೆನ್ನೈ (ಪಿಟಿಐ): ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರನ್ನು ಗುರಿಯಾಗಿಸಿಕೊಂಡು ಡಿಎಂಕೆ ಶಾಸಕ ಟಿ.ಆರ್.ಬಿ. ರಾಜಾ ಅವರು, ‘ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರ ಹುದ್ದೆಯು ಅತ್ಯಂತ ನಿಷ್ಪ್ರಯೋಜಕ’ ಎಂದು ಟೀಕಿಸಿದ್ದಾರೆ.

ಈ ಬಗ್ಗೆ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಬರೆದುಕೊಂಡಿರುವ ರಾಜಾ ಅವರು, ‘ರಾಜಕೀಯವಾಗಿ ನೇಮಕಗೊಂಡ ವ್ಯಕ್ತಿಯೊಬ್ಬರು ರಾಜ್ಯಪಾಲರ ಹುದ್ದೆಯನ್ನು ಹಾಳುಗೆಡವಲು ಯತ್ನಿಸುತ್ತಿದ್ದಾರೆ’ ಎಂದು ಆರೋಪಿಸಿದ್ದು, ‘ಪ್ರಜಾಪ್ರಭುತ್ವದ ಮೇಲೆ ಕಳಂಕ’. ‘ಗೆಟ್ ಔಟ್ ರವಿ’ ಎನ್ನುವ ಹ್ಯಾಷ್ ಟ್ಯಾಗ್ ಅನ್ನೂ ಬಳಸಿದ್ದಾರೆ.

ಅಷ್ಟೇ ಅಲ್ಲ, ರಾಜಾ ತಮ್ಮ ಟ್ವೀಟ್‌ನಲ್ಲಿ ‘ಜಗತ್ತಿನ ಅತ್ಯಂತ ಅನುಪಯುಕ್ತ ವಸ್ತುಗಳು’ ಎನ್ನುವ ಪಟ್ಟಿ ಮಾಡಿ ಅದರಲ್ಲಿ ವಿವಿಧ ರೀತಿಯ ವಸ್ತುಗಳ ಜತೆಗೆ ಆರ್.ಎನ್. ರವಿ ಅವರ ಚಿತ್ರವನ್ನೂ ಹಾಕಿದ್ದಾರೆ.

ಡಿಎಂಕೆ ಐಟಿ ವಿಭಾಗದ ಕಾರ್ಯದರ್ಶಿಯೂ ಆಗಿರುವ ರಾಜಾ, ಶಾಸಕ ಹಾಗೂ ಪಕ್ಷದ ಹಿರಿಯ ನಾಯಕ ಟಿ.ಆರ್. ಬಾಲು ಅವರ ಪುತ್ರ.

ಪೋಸ್ಟ್‌ನಲ್ಲಿ ಡಿಎಂಕೆಯ ಸಂಸ್ಥಾಪಕ ಸಿ.ಎನ್. ಅಣ್ಣಾದೊರೈ ಅವರ ಜನಪ್ರಿಯ ಹೇಳಿಕೆಯೊಂದನ್ನು ಉಲ್ಲೇಖಿಸಿರುವ ರಾಜಾ, ‘ಮೇಕೆಗೆ ಗಡ್ಡ ಬೇಕೇ? ರಾಜ್ಯಕ್ಕೆ ರಾಜ್ಯಪಾಲರು ಬೇಕೆ? ಎರಡೂ ಅಗತ್ಯವಿಲ್ಲ’ ಎಂದೂ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಹಾಗೂ ಡಿಎಂಕೆ ಸಿದ್ಧಾಂತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ರವಿ ಅವರೊಂದಿಗೆ ಡಿಎಂಕೆ ಈ ಹಿಂದೆಯೂ ವಾಗ್ದಾಳಿ ನಡೆಸಿತ್ತು. ರವಿ ಅವರು ಬಲಪಂಥೀಯ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದು, ರಾಷ್ಟ್ರೀಯ ಶಿಕ್ಷಣ ನೀತಿ ಸೇರಿದಂತೆ ಅನೇಕ ವಿಷಯಗಳಲ್ಲಿ ಬಿಜೆಪಿಯ ಮಾರ್ಗವನ್ನು ಅನುಸರಿಸುತ್ತಿದ್ದಾರೆ ಎಂದೂ ಡಿಎಂಕೆಯು ಆರೋಪಿಸಿದೆ.

ಮನೆ ಬಾಗಿಲಿಗೆ ಆರೋಗ್ಯ ಸೇವೆ ಶೀಘ್ರ

ಬೆಂಗಳೂರು: ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಸಂಚಾರಿ ಕ್ಲಿನಿಕ್‌ಗಳ ಮೂಲಕ ಮನೆ ಬಾಗಿಲಿನಲ್ಲಿಯೇ ವೈದ್ಯಕೀಯ ಸೇವೆಗಳನ್ನು ಒದಗಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಕೋಲ್ಕತ್ತದಲ್ಲಿ ಆರೋಗ್ಯ ವಾಹಿನಿ ಟ್ರಸ್ಟ್‌ನ ಶ್ರೀ ಸತ್ಯಸಾಯಿ ಆರೋಗ್ಯ ವಾಹಿನಿ ಸಂಚಾರಿ ಕ್ಲಿನಿಕ್‌ಗಳ ಮೂಲಕ ಗ್ರಾಮೀಣ ಭಾಗದ ಜನರಿಗೆ ಅವರು ಇದ್ದಲ್ಲಿಯೇ ವೈದ್ಯಕೀಯ ಸೌಲಭ್ಯವನ್ನು ಒದಗಿಸುತ್ತಿದೆ. ಇದೇ ಮಾದರಿಯನ್ನು ಅನುಸರಿಸಲು ಇಲಾಖೆ ಮುಂದಾಗಿದೆ. ‘ಮುಖ್ಯಮಂತ್ರಿ ಆರೋಗ್ಯ ವಾಹಿನಿ’ ಯೋಜನೆಯಡಿ ಬೀದರ್, ಚಾಮರಾಜನಗರ, ಹಾವೇರಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಸಂಚಾರಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸಲಿವೆ. ಇದಕ್ಕಾಗಿ ₹ 11 ಕೋಟಿ ಮೀಸಲಿಡಲಾಗಿದೆ.

ಸಂಚಾರಿ ಕ್ಲಿನಿಕ್‌ಗಳ ಸ್ಥಾಪನೆ ಸಂಬಂಧ ಇಲಾಖೆಯು ರೋಟರಿ ಸಂಸ್ಥೆಯ ಜತೆಗೆ ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದು, ಸಂಸ್ಥೆಯು ಇಲಾಖೆಗೆ ನಾಲ್ಕು ಬಸ್‌ಗಳನ್ನು ಒದಗಿಸಿದೆ. ವೈದ್ಯಕೀಯ ಉಪಕರಣಗಳ ಅಳವಡಿಕೆ ಬಳಿಕ ಸಂಚಾರಿ ಕ್ಲಿನಿಕ್‌ಗಳು ರಸ್ತೆಗಿಳಿಯಲಿವೆ. ಈ ಕ್ಲಿನಿಕ್‌ಗಳಿಗೆ ಪ್ರತ್ಯೇಕವಾಗಿ ವೈದ್ಯರು ಹಾಗೂ ಸಿಬ್ಬಂದಿಯನ್ನು ನೇಮಕ ಮಾಡಲಾಗುತ್ತದೆ.

‘ತಜ್ಞವೈದ್ಯರು ಸ್ಥಳದಲ್ಲಿಯೇ ಚಿಕಿತ್ಸೆ ಒದಗಿಸಲಿದ್ದಾರೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಆಸ್ಪತ್ರೆಗಳಿಗೆ ಶಿಫಾರಸು ಮಾಡುತ್ತಾರೆ’ ಎಂದು ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದರು. ‘ಬಸ್‌ನಲ್ಲಿ ಎಲ್ಲ ರೀತಿಯ ವೈದ್ಯಕೀಯ ಉಪಕರಣಗಳು ಇರಲಿವೆ. ಜನವರಿ ವೇಳೆಗೆ ಈ ಸೇವೆ ಪ್ರಾರಂಭವಾಗಲಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

ಕ್ಷೇತ್ರ ಮರುವಿಂಗಡಣೆ: ತೀರ್ಪು ಕಾಯ್ದಿರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆ ಮತ್ತು ಲೋಕಸಭೆ ಕ್ಷೇತ್ರಗಳ ಮರುವಿಂಗಡಣೆಗಾಗಿ ಸೀಮಾ ನಿರ್ಣಯ ಸಮಿತಿಯನ್ನು ರಚಿಸುವ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ತೀರ್ಪನ್ನು ಸುಪ್ರಿಂ ಕೋರ್ಟ್ ಗುರುವಾರ ಕಾಯ್ದಿರಿಸಿದೆ.

ಚುನಾವಣಾ ಆಯೋಗದ ಪರವಾಗಿ ಕೋರ್ಟ್‌ಗೆ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ಹೇಳಿಕೆಯನ್ನು ದಾಖಲಿಸಿಕೊಂಡ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಅಭಯ್ ಎಸ್. ಓಕ ಅವರಿದ್ದ ಪೀಠವು ತೀರ್ಪನ್ನು ಕಾಯ್ದಿರಿಸಿತು.

ಸರ್ಕಾರದ ಈ ನಿರ್ಧಾರವು ಸಾಂವಿಧಾನಿಕ ಅವಕಾಶಗಳ ಉಲ್ಲಂಘನೆಯಾಗಲಿದೆ ಎಂದು ಆಕ್ಷೇಪಿಸಿ ಹಾಜಿ ಅಬ್ದುಲ್ ಗನಿ ಖಾನ್ ಮತ್ತು ಮೊಹಮ್ಮದ್ ಆಯುಬ್ ಮಟ್ಟೂ ಅವರು ಸುಪ್ರಿಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಮಾದಕವಸ್ತು ವೈಭವೀಕರಿಸುವ ಹಾಡುಗಳು ಬೇಡ

ನವದೆಹಲಿ: ಮದ್ಯಪಾನ, ಮಾದಕವಸ್ತು ಮತ್ತು ಬಂದೂಕು ಸಂಸ್ಕೃತಿಯನ್ನು ವೈಭವೀಕರಿಸುವ ಹಾಡುಗಳನ್ನು ಹಾಗೂ ವಿಷಯಗಳನ್ನು ಪ್ರಸಾರ ಮಾಡಬಾರದು ಎಂದು ಕೇಂದ್ರ ಸರ್ಕಾರವು ಎಫ್‌ಎಂ ರೇಡಿಯೊ ವಾಹಿನಿಗಳಿಗೆ ಎಚ್ಚರಿಗೆ ನೀಡಿದೆ.

ಅನುಮತಿ ನೀಡಿಕೆ ಒಪ್ಪಂದದ (ಜಿಒಪಿಎ) ನಿಯಮಗಳು ಮತ್ತು ಷರತ್ತುಗಳನ್ನು ಎಫ್‌ಎಂ ರೇಡಿಯೊ ವಾಹಿನಿಗಳು ಕಡ್ಡಾಯವಾಗಿ ಪಾಲಿಸಬೇಕು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಮಾರ್ಗಸೂಚಿಯಲ್ಲಿ ಹೇಳಿದೆ.

ಇದನ್ನು ಉಲ್ಲಂಘಿಸಿದರೆ ದಂಡ ವಿಧಿಸಲಾಗುವುದು ಎಂದೂ ತಿಳಿಸಿದೆ. ಮಾದಕವಸ್ತುಗಳ ಬಳಕೆ ಮತ್ತು ಬಂದೂಕು ಸಂಸ್ಕೃತಿಯನ್ನು ವೈಭವೀಕರಿಸುವ ಹಾಡುಗಳನ್ನು ಕೆಲವು ಎಫ್‌ಎಂ ರೇಡಿಯೊ ವಾಹಿನಿಗಳು ಪ್ರಸಾರ ಮಾಡುತ್ತಿರುವ ಕಾರಣ ಈ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂತಹ ವಿಷಯಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತವೆ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೇಳಿರುವುದನ್ನೂ ಸಚಿವಾಲಯ ಉಲ್ಲೇಖಿಸಿದೆ.

ಒಂದು ಇಲಿಯ ಸಾವಿನ ಸುತ್ತಾ..

ಬುದೌನ್, ಉತ್ತರ ಪ್ರದೇಶ (ಪಿಟಿಐ): ‘ಕಲ್ಲು ಹೊಡೆದಿದ್ದರಿಂದ ಇಲಿ ಸತ್ತಿಲ್ಲ. ಸೋಂಕಿನಿಂದಾಗಿ ಇಲಿಯ ಶ್ವಾಸಕೋಶದಲ್ಲಿ ಊತ ಕಂಡುಬಂದಿದೆ. ಇಲಿಯ ಸಾವಿಗೆ ಸೋಂಕು ಕಾರಣ’.

ಪೊಲೀಸ್ ಠಾಣೆ ಮೆಟ್ಟಿಲೇರಿದ್ದ ಇಲಿಯ ‘ಶಂಕಾಸ್ಪದ’ ಸಾವಿನ ಪ್ರಕರಣದ ಸಂಬಂಧ, ಇಲಿಯ ಕಳೇಬರದ ಪರೀಕ್ಷೆ ನಡೆಸಿದ ಇಬ್ಬರು ಪಶುಸಂಗೋಪನಾ ವೈದ್ಯರು ಸಲ್ಲಿಸಿದ ವರದಿಯ ಸಾರಾಂಶ ಇದು.

ಪ್ರಾಣಿರಕ್ಷಣಾ ಕಾರ್ಯಕರ್ತರೊಬ್ಬರ ದೂರು ಆಧರಿಸಿ ಮನೋಜ್ ಕುಮಾರ್ ಎಂಬವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದರು. ಸದ್ಯ, ಅವರು ಜಾಮೀನು ಮೇಲೆ ಹೊರಗಿದ್ದಾರೆ. ‘ಇಲಿ ಬಾಲಕ್ಕೆ ಕಲ್ಲಿನಿಂದ ಹೊಡೆದು ಚರಂಡಿಗೆ ಎಸೆದಿದ್ದು, ಇಲಿ ಸತ್ತಿದೆ’ ಎಂಬುದು ಆರೋಪ.

ದೂರು ದಾಖಲಿಸಿದ ಪೊಲೀಸರು, ಇಲಿ ಕಳೇಬರವನ್ನು ಪಶುಸಂಗೋಪನಾ ಆಸ್ಪತ್ರೆಗೆ ಕಳುಹಿಸಿದರು. ಆದರೆ, ಆಸ್ಪತ್ರೆ ಸಿಬ್ಬಂದಿ ಪರೀಕ್ಷೆ ನಡೆಸಲು ನಿರಾಕರಿಸಿದರು. ಬಳಿಕ ಕಳೇಬರವನ್ನು ಭಾರತೀಯ ಪಶುಸಂಗೋಪನಾ ಸಂಶೋಧನಾ ಸಂಸ್ಥೆಗೆ(ಐವಿಆರ್‌ಐ) ಕಳುಹಿಸಲಾಯಿತು.

‘ವರದಿ ಬಂದಿದೆ. ಶ್ವಾಸಕೋಶದಲ್ಲಿ ಸೋಂಕು ಉಂಟಾಗಿ ಇಲಿ ಸತ್ತಿದೆ’ ಎಂದು ಐವಿಆರ್‌ಐ ಜಂಟಿ ನಿರ್ದೇಶಕ ಕೆ.ಪಿ.ಸಿಂಗ್ ತಿಳಿಸಿದರು. ‘ವರದಿ ಇನ್ನೂ ನಮ್ಮ ಕೈಸೇರಿಲ್ಲ’ ಎಂದು ಪೊಲೀಸ್ ಅಧಿಕಾರಿ ಅಲೋಕ್ ಮಿಶ್ರಾ ಹೇಳಿದ್ದಾರೆ.

ಆರೋಪಿ ಸದ್ಯ ಜಾಮೀನು ಪಡೆದಿದ್ದಾರೆ.

ಶಾಸಕರ ಖರೀದಿ ಪ್ರಕರಣ: ಮೂವರಿಗೆ ಜಾಮೀನು

ಹೈದರಾಬಾದ್ (ಪಿಟಿಐ): ಭಾರತ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಶಾಸಕರನ್ನು ಖರೀದಿಸಲು ಯತ್ನಿಸಲಾಗಿತ್ತೆಂಬ ಆರೋಪದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಮೂವರು ಆರೋಪಿಗಳಿಗೆ ತೆಲಂಗಾಣ ಹೈಕೋರ್ಟ್ ಗುರುವಾರ ಷರತ್ತುಬದ್ಧ ಜಾಮೀನು ನೀಡಿದೆ.

ರಾಮಚಂದ್ರ ಭಾರತಿ ಅಲಿಯಾಸ್ ಸತೀಶ್ ಶರ್ಮಾ, ನಂದಕುಮಾರ್ ಮತ್ತು ಸಿಂಹಯಾಜಿ ಸ್ವಾಮಿ ಅವರ ಜಾಮೀನು ಕೋರಿಕೆ ಅರ್ಜಿಗಳನ್ನು ಕೋರ್ಟ್ ಪರಿಗಣಿಸಿತು. ಮೂವರು ಆರೋಪಿಗಳಿಗೂ ತಲಾ ₹3 ಲಕ್ಷದ ವೈಯಕ್ತಿಕ ಬಾಂಡ್ ಜತೆಗೆ ಇಬ್ಬರ ಶ್ಯೂರಿಟಿ ನೀಡಬೇಕು, ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಎದುರು ಪ್ರತಿ ಸೋಮವಾರ ಹಾಜರಾಗಬೇಕು ಎನ್ನುವ ಷರತ್ತುಗಳನ್ನು ಕೋರ್ಟ್ ವಿಧಿಸಿದೆ.

ಶಾಸಕರ ಖರೀದಿಗೆ ಹಣದ ಆಮಿಷವೊಡ್ಡಿರುವ ಸಂಬಂಧ ಬಿಆರ್‌ಎಸ್ ಶಾಸಕ ಪೈಲಟ್ ರೋಹಿತ್ ರೆಡ್ಡಿ ಸೇರಿ ನಾಲ್ವರು ಶಾಸಕರು, ಅಕ್ಟೋಬರ್ 26ರಂದು ದೂರು ನೀಡಿದ್ದರು. ನಗರ ಪೊಲೀಸರು ಪ್ರಕರಣ ದಾಖಲಿಸಿ, ಮೂವರು ಆರೋಪಿಗಳನ್ನು ಬಂಧಿಸಿದ್ದರು. ಸದ್ಯ ಮೂವರೂ ಜೈಲಿನಲ್ಲಿದ್ದಾರೆ.

‘ಗೋಲ್ಡಿ ಬ್ರಾರ್ ತಲೆಗೆ ಬಹುಮಾನ ಘೋಷಿಸಿ’

ಚಂಡೀಗಢ (ಪಿಟಿಐ): ಪಂಜಾಬಿ ಗಾಯಕ ಸಿಧು ಮೂಸೆವಾಲಾ ಅವರ ಹತ್ಯೆ ಪ್ರಕರಣದ ಸಂಚುಕೋರ ಕೆನಡಾ ಮೂಲದ ಗ್ಯಾಂಗ್‌ಸ್ಟರ್ ಗೋಲ್ಡಿ ಬ್ರಾರ್ ಬಗ್ಗೆ ಮಾಹಿತಿ ನೀಡುವವರಿಗೆ ಕೇಂದ್ರ ಸರ್ಕಾರವು ₹ 2 ಕೋಟಿ ಬಹುಮಾನ ಘೋಷಿಸಬೇಕು ಎಂದು ಸಿಧು ಮೂಸೆವಾಲಾ ಅವರ ತಂದೆ ಬಲ್ ಕೌರ್‌ಸಿಂಗ್ ಅವರು ಗುರುವಾರ ಆಗ್ರಹಿಸಿದ್ದಾರೆ.

‘ಈ ಮೊತ್ತವನ್ನು ಸರ್ಕಾರಕ್ಕೆ ನೀಡಲು ಸಾಧ್ಯವಾಗದಿದ್ದರೆ ನಾನೇ ಆ ಹಣವನ್ನು ನೀಡುತ್ತೇನೆ’ ಎಂದೂ ಅವರು ಹೇಳಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಮಹಿಳೆಯೊಬ್ಬರನ್ನು ಹತ್ಯೆಗೈದು ಪರಾರಿಯಾಗಿದ್ದ ಭಾರತ ಮೂಲದ ವ್ಯಕ್ತಿಯ ಪತ್ತೆಗಾಗಿ ಆಸ್ಟ್ರೇಲಿಯಾ ಪೊಲೀಸರು ನಗದು ಬಹುಮಾನ ಘೋಷಿಸಿದ್ದನ್ನೂ ಅವರು ಉದಾಹರಿಸಿದ್ದಾರೆ. ಗೋಲ್ಡಿ ಬ್ರಾರ್‌ನನ್ನು ಭಾರತಕ್ಕೆ ಕರೆ ತರಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಹೂಡಿಕೆಗೆ ಬ್ರಿಟನ್ ಕಂಪನಿಗಳಿಗೆ ಆಹ್ವಾನ

ಬೆಂಗಳೂರು: ಬ್ರಿಟನ್ ದೇಶದ ಹೂಡಿಕೆದಾರರು ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಉತ್ಪಾದನಾ ಘಟಕಗಳ ಸ್ಥಾಪನೆಗೆ ಮುಂದಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಗುರುವಾರ ತಮ್ಮನ್ನು ಭೇಟಿಯಾದ ಭಾರತದ ಬ್ರಿಟಿಷ್ ಹೈಕಮಿಷನರ್ ಅಲೆಕ್ಸ್ ಎಲ್ಲಿಸ್ ಹಾಗೂ ಕರ್ನಾಟಕ ಮತ್ತು ಕೇರಳದ ನೂತನ ಬ್ರಿಟಿಷ್ ಡೆಪ್ಯುಟಿ ಹೈಕಮಿಷನ್ ಆಗಿ ನೇಮಕಗೊಂಡಿರುವ ಚಂದ್ರ ಅಯ್ಯರ್ ಅವರ ಜತೆ ಮಾತುಕತೆ ನಡೆಸಿದರು.

ಕರ್ನಾಟಕವು ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಹೊಂದಿದ್ದು, ಸಂಶೋಧನೆ ಮತ್ತು ಅಭಿವೃದ್ಧಿಗೂ ಹೊಸ ನೀತಿಯನ್ನು ಜಾರಿಗೆ ತರಲಾಗಿದೆ. ಈ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳುವಂತೆಯೂ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಬ್ರಿಟಿಷ್ ಹೈಕಮಿಷನರ್ ಅಲೆಕ್ಸ್ ಎಲ್ಲಿಸ್ ಹಾಗೂ ಡೆಪ್ಯುಟಿ ಹೈಕಮಿಷನರ್ ಚಂದ್ರು ಅಯ್ಯರ್ ಅವರು ಬ್ರಿಟನ್ ಮತ್ತು ಕರ್ನಾಟಕ ನಡುವಿನ ಬಾಂಧವ್ಯ ವಿಶೇಷವಾದುದು. ಕರ್ನಾಟಕದಲ್ಲಿರುವ ಬ್ರಿಟಿಷ್ ಕಂಪನಿಗಳ ಸಂಖ್ಯೆ ಗಣನೀಯವಾಗಿದೆ. ವರದಿ ಪ್ರಕಾರ 618 ಬ್ರಿಟಿಷ್ ಮಾಲೀಕತ್ವದ ಕಂಪನಿಗಳಲ್ಲಿ ಶೇ 14 ರಷ್ಟು ಕರ್ನಾಟಕದಲ್ಲಿದ್ದು, ದಕ್ಷಿಣ ಭಾರತದಲ್ಲಿಯೇ ಇದು ಹೆಚ್ಚು ಎಂದರು.

ಜೈಲಿಗೆ ಹಾಕಿ, ಹೆದರುವುದಿಲ್ಲ: ಕೆಸಿಆರ್ ಪುತ್ರಿ ಸವಾಲು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ‘ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ನನ್ನನ್ನು ಜೈಲಿಗೆ ಕಳುಹಿಸಿ. ಆದರೆ ನಾನು ಹೆದರುವುದಿಲ್ಲ’ ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರ ಪುತ್ರಿ ಕೆ. ಕವಿತಾ ಅವರು ಗುರುವಾರ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಸವಾಲು ಹಾಕಿದ್ದಾರೆ.

ಪ್ರಕರಣದ ಆರೋಪಿ ಅಮಿತ್ ಅರೋರಾ ಅವರ ರಿಮಾಂಡ್ ವರದಿಯಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ತಮ್ಮ ಹೆಸರು ಉಲ್ಲೇಖಿಸಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ‘ಇದು ಬಿಜೆಪಿಯ ರಾಜಕೀಯ ಪಿತೂರಿ’ ಎಂದು ಆರೋಪಿಸಿದ್ದಾರೆ. ‘ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಮೋದಿ ಬರುವುದಕ್ಕಿಂತಲೂ ಮೊದಲೇ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಭೇಟಿ ನೀಡುವುದು ಸಾಮಾನ್ಯ. ನಿಮ್ಮ ಇ.ಡಿ, ಸಿಬಿಐ ತಂತ್ರಗಳು ತೆಲಂಗಾಣದಲ್ಲಿ ನಡೆಯುವುದಿಲ್ಲ’ ಎಂದು ಕವಿತಾ ಅವರು ಹೇಳಿದ್ದಾರೆ.

ರಿಮಾಂಡ್ ವರದಿಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಸಂಸದ ಮಾಗುಂಟ ಶ್ರೀನಿವಾಸುಲು ಅವರ ಹೆಸರನ್ನೂ ಇ.ಡಿ ಉಲ್ಲೇಖಿಸಿದ್ದು, ಅದಕ್ಕೆ ಪ್ರತಿಕ್ರಿಯಿಸಿದ ರೆಡ್ಡಿ, ‘ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ನನ್ನ ಕುಟುಂಬ ಭಾಗಿಯಾಗಿಲ್ಲ’ ಎಂದಿದ್ದಾರೆ.

ಎಎಪಿ ನಾಯಕ ವಿಜಯ್ ನಾಯರ್ ಬಂಧನ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಎಎಪಿ ನಾಯಕ ವಿಜಯ್ ನಾಯರ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿದೆ. ಉದ್ಯಮಿ ಶರತ್ ರೆಡ್ಡಿ ಮತ್ತು ರಾಜಕಾರಣಿ ಕವಿತಾ ರೆಡ್ಡಿ ನಿರ್ವಹಿಸುತ್ತಿರುವ ‘ಸೌಥ್ ಗ್ರೂಪ್’ ಎಂಬ ಸಂಸ್ಥೆಯಿಂದ ಅವರು ಪಕ್ಷದ ಪರವಾಗಿ ಸುಮಾರು ₹100 ಕೋಟಿ ಕಿಕ್‌ಬ್ಯಾಗ್ ಪಡೆದಿದ್ದಾರೆ ಎಂದು ಈ ವರೆಗೂ ನಡೆಸಿರುವ ತನಿಖೆಯಿಂದ ತಿಳಿದುಬಂದಿದೆ. ಈ ಕುರಿತು ಸ್ಥಳೀಯ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುಭಾಷಿತ

ಉನ್ನತ ವ್ಯಕ್ತಿ ಮಾತನಾಡುವ ಮುನ್ನ ಕೆಲಸ ಮಾಡುತ್ತಾನೆ ಮತ್ತು ನಂತರ ಅವನ ಕೃತ್ಯಕ್ಕೆ ಅನುಗುಣವಾಗಿ ಮಾತನಾಡುತ್ತಾನೆ.

-ಕನ್‌ಫ್ಯೂಷಿಯಸ್

ಜಿಡಿಪಿ ಇಳಿಕೆ: ಆರ್ಥಿಕತೆಗೆ ಇನ್ನಷ್ಟು ಬಲ ಬೇಕೆಂಬುದರ ಸೂಚನೆ

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣ ಎಷ್ಟಿತ್ತು ಎಂಬುದಕ್ಕೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಜುಲೈನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ದೇಶದ ಜಿಡಿಪಿ ಶೇಕಡ 6.3ರಷ್ಟು ಬೆಳವಣಿಗೆ ಸಾಧಿಸಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 13.5ರಷ್ಟು ಇತ್ತು. ಜೂನ್ ತ್ರೈಮಾಸಿಕಕ್ಕೆ ಹೋಲಿಕೆ ಮಾಡಿದರೆ ಜಿಡಿಪಿ ಬೆಳವಣಿಗೆ ದರವು ಅರ್ಧಕ್ಕಿಂತ ಹೆಚ್ಚು ಕುಸಿತ ಕಂಡಿದೆ. ಹಿಂದಿನ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 8.4ರಷ್ಟು ಇತ್ತು. ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಕೆ ಮಾಡಿ ನೋಡಿದರೂ, ಜಿಡಿಪಿ ಬೆಳವಣಿಗೆಯು ತಗ್ಗಿರುವುದು ಸ್ಪಷ್ಟವಾಗುತ್ತದೆ. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ವಲಯವಾರು ಬೆಳವಣಿಗೆ ಹಾಗೂ ಕುಸಿತವನ್ನು ಪರಿಶೀಲಿಸಿದರೆ, ತಯಾರಿಕೆ ವಲಯ ಹಾಗೂ ಗಣಿಗಾರಿಕೆ ವಲಯದಲ್ಲಿ ಕುಸಿತ ದಾಖಲಾಗಿರುವುದು ಗೊತ್ತಾಗುತ್ತದೆ. ತಯಾರಿಕಾ ವಲಯ ಶೇ –4.3ರಷ್ಟು ಹಾಗೂ ಗಣಿಗಾರಿಕೆ ಶೇ –2.8ರಷ್ಟು ಕುಸಿದಿವೆ. ಈ ಎರಡು ವಲಯಗಳಲ್ಲಿನ ಕುಸಿತವು ಒಟ್ಟು ಜಿಡಿಪಿ ಬೆಳವಣಿಗೆ ಪ್ರಮಾಣವು ತಗ್ಗಿರಲು ಒಂದು ಕಾರಣವಾಗಿದೆ. ಇತರ ಹಲವು ಪ್ರಮುಖ ವಲಯಗಳು ಬೆಳವಣಿಗೆ ಸಾಧಿಸಿವೆ. ಅದರಲ್ಲೂ ಮುಖ್ಯವಾಗಿ ಕೋವಿಡ್ ಅವಧಿಯಲ್ಲಿ ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದ ಹೋಟೆಲ್, ಸಾರಿಗೆಯಂತಹ ವಲಯಗಳಲ್ಲಿ ಶೇ 14.7ರಷ್ಟು ಬೆಳವಣಿಗೆ ಸಾಧ್ಯವಾಗಿದೆ.

ಜಿಡಿಪಿ ಬೆಳವಣಿಗೆ ತಗ್ಗಿರುವುದನ್ನು ಸಹಜವೆಂಬಂತೆ ಸ್ವೀಕರಿಸಬಾರದು. ಬಂಡವಾಳ ವೆಚ್ಚ, ಉದ್ಯೋಗ ಸೃಷ್ಟಿಯಂತಹ ಕೆಲಸಗಳಿಗೆ ಆದ್ಯತೆ ನೀಡಬೇಕು

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕೋವಿಡ್ ಸಾಂಕ್ರಾಮಿಕವು ವಾಣಿಜ್ಯ ಚಟುವಟಿಕೆಗಳ ಮೇಲೆ ಯಾವ ರೀತಿಯಲ್ಲಿಯೂ ಪರಿಣಾಮ ಬೀರಿದಂತೆ ಮೇಲ್ನೋಟಕ್ಕೆ ಕಾಣುತ್ತಿಲ್ಲ. ಜನವರಿ–ಫೆಬ್ರುವರಿ ಹೊತ್ತಿನಲ್ಲಿ ಕಾಣಿಸಿಕೊಂಡ ಮೂರನೆಯ ಅಲೆಯ ನಂತರದಲ್ಲಿ ಕೋವಿಡ್ ಸಾಂಕ್ರಾಮಿಕವು ವಾಣಿಜ್ಯ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಬೀರಿದಂತಿಲ್ಲ. ದೇಶದ ಉದ್ದಗಲಕ್ಕೂ ಆಚರಿಸುವ ನವರಾತ್ರಿ ಹಬ್ಬವು ಸೆಪ್ಟೆಂಬರ್ ಕೊನೆಯ ವಾರದಲ್ಲಿ ಶುರುವಾಗಿತ್ತು. ಹಬ್ಬಗಳ ಸಂದರ್ಭದಲ್ಲಿ ಖರೀದಿ ಚಟುವಟಿಕೆ ಹೆಚ್ಚುವುದು ಸಹಜ. ಆದರೂ ಜಿಡಿಪಿ ಬೆಳವಣಿಗೆ ಇಳಿಮುಖವಾಗಿರುವುದಕ್ಕೆ ಒಂದು ಕಾರಣ ಹಣದುಬ್ಬರದ ಹೆಚ್ಚಳವೂ ಆಗಿರಬಹುದು. ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಏರಿಕೆ ಆಗುತ್ತಲೇ ಸಾಗಿದೆ. ಜುಲೈನಲ್ಲಿ ಶೇ 6.71, ಆಗಸ್ಟ್‌ನಲ್ಲಿ ಶೇ 7 ಹಾಗೂ ಸೆಪ್ಟೆಂಬರ್‌ನಲ್ಲಿ ಶೇ 7.41ರಷ್ಟು ಚಿಲ್ಲರೆ ಹಣದುಬ್ಬರ ದಾಖಲಾಗಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಹೆಚ್ಚಾಗಿದೆ ಅಂದರೆ, ಅದು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿ ಮಾಡಿಕೊಂಡಿರುವ ಮಿತಿಯನ್ನು ಮೀರಿದೆ ಎಂದು ಅರ್ಥ. ಮಿತಿಯನ್ನು ಮೀರಿರುವ ಹಣದುಬ್ಬರ ಪ್ರಮಾಣವು ಜನರ ಕೊಳ್ಳುವ ಶಕ್ತಿಯನ್ನು ಸಹಜವಾಗಿಯೇ ಕುಗ್ಗಿಸುತ್ತದೆ. ಜನರ ಕೊಳ್ಳುವ ಶಕ್ತಿ ಕುಗ್ಗಿದಾಗ ಆರ್ಥಿಕ ವಹಿವಾಟುಗಳು ಮಂಕಾಗುತ್ತವೆ. ಇದು ಜಿಡಿಪಿ ಬೆಳವಣಿಗೆ ದರ ತಗ್ಗುವುದಕ್ಕೆ ಒಂದು ಕಾರಣವಾಗಿರಬಹುದು. ಹಣದುಬ್ಬರ ನಿಯಂತ್ರಿಸುವಲ್ಲಿ ತಾನು ಸೋತಿದ್ದು ಏಕೆ ಎಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ನೀಡುವುದಾಗಿ ಹೇಳಿರುವ ಆರ್‌ಬಿಐ, ಆ ವರದಿಯನ್ನು ತಾನು ಬಹಿರಂಗಪಡಿಸುವುದಿಲ್ಲ ಎಂದು ಈಗಾಗಲೇ ತಿಳಿಸಿದೆ. ಆದರೆ, ಹಣದುಬ್ಬರ ಏರಿಕೆ ಹಾಗೂ ಜಿಡಿಪಿ ಕುಸಿತ ಇವು ಕಾಗದದ ಮೇಲಿನ ಅಂಕಿ–ಅಂಶ ಮಾತ್ರವೇ ಅಲ್ಲ. ಅವು ಜನರ ಅನುಭವಕ್ಕೆ ನೇರವಾಗಿ ತಟ್ಟುವಂಥವು. ಹೀಗಾಗಿ, ವೈಫಲ್ಯಕ್ಕೆ ಕಾರಣವೇನು ಎಂಬುದನ್ನು ಆರ್‌ಬಿಐ, ಸಾರ್ವಜನಿಕರಿಗೆ ತಿಳಿಸುವುದು ಉತ್ತಮ.

ಹಣದುಬ್ಬರದ ತೀವ್ರ ಹೆಚ್ಚಳದ ಕಾರಣದಿಂದಾಗಿ ಜಗತ್ತಿನ ಕೆಲವು ದೇಶಗಳು ಆರ್ಥಿಕ ಹಿಂಜರಿತದ ಭೀತಿ ಎದುರಿಸುತ್ತಿವೆ. ತಾನು ಈಗಾಗಲೇ ಆರ್ಥಿಕ ಹಿಂಜರಿತದ ಸ್ಥಿತಿಯಲ್ಲಿ ಇರುವುದಾಗಿ ಬ್ರಿಟನ್ ಹೇಳಿದೆ. ಅಮೆರಿಕದಲ್ಲಿ ಕೂಡ ಆರ್ಥಿಕ ಹಿಂಜರಿತ ಎದುರಾಗುವ ಸಾಧ್ಯತೆ ಇದೆ. ಆದರೆ, ದೇಶಿ ಬೇಡಿಕೆಯನ್ನು ಆಧರಿಸಿ ಮುನ್ನಡೆಯುತ್ತಿರುವ ಭಾರತಕ್ಕೆ ಆರ್ಥಿಕ ಹಿಂಜರಿತದ ಭೀತಿ ಇಲ್ಲ ಎಂದು ಕೆಲವು ಸಂಸ್ಥೆಗಳು, ಹಲವು ಮಂದಿ ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ. ಈ ಸಂಸ್ಥೆಗಳು ಹಾಗೂ ತಜ್ಞರ ಮಾತುಗಳು ಭರವಸೆ ಮೂಡಿಸುವಂಥವು. ಅಲ್ಲದೆ, ಈಗಿನ ಜಿಡಿಪಿ ಬೆಳವಣಿಗೆ ದರವು ಆರ್‌ಬಿಐ ಅಂದಾಜಿಗೆ ಅನುಗುಣವಾಗಿಯೇ ಇದೆ. ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆ ಭಾರತದ್ದೇ ಆಗಿದೆ. ಹೀಗಿದ್ದರೂ, ಜಿಡಿಪಿ ಬೆಳವಣಿಗೆ ತಗ್ಗಿರುವುದನ್ನು ಸಹಜವೆಂಬಂತೆ ಸ್ವೀಕರಿಸಬಾರದು. ಬಂಡವಾಳ ವೆಚ್ಚ, ಉದ್ಯೋಗ ಸೃಷ್ಟಿಯಂತಹ ಕೆಲಸಗಳಿಗೆ ಆದ್ಯತೆ ನೀಡಬೇಕು. ತಯಾರಿಕಾ ಚಟುವಟಿಕೆಗಳಲ್ಲಿ ಖಾಸಗಿ ವಲಯವು ಹೆಚ್ಚು ಉತ್ಸಾಹದಿಂದ ಪಾಲ್ಗೊಳ್ಳುವಂತೆ ಮಾಡಬೇಕು.

ದಿನದ ಟ್ವೀಟ್

ಮತ ನೀಡುವ ಮುನ್ನ...

ಪ್ರಜಾಪ್ರಭುತ್ವವನ್ನು ಸಂರಕ್ಷಿಸಲು ನೀವು ಬಯಸುವಿರಾದರೆ, ಸತ್ಯವನ್ನು ತನಿಖೆ ಮಾಡಿ ಪ್ರಕಟಿಸುವ ಸಂಸ್ಥೆಗಳನ್ನು ಗೌರವಿಸುವ ರಾಜಕಾರಣಿಗಳಿಗೆ ಮತ ನೀಡಿ. ನಿಮಗೆ ಇಷ್ಟವಾದ ಸರ್ಕಾರವನ್ನು ಆಯ್ಕೆ ಮಾಡುವ ಹಕ್ಕು ನಿಮಗಿದೆ, ಆದರೆ ನಿಮಗೆ ಸರಿಕಂಡಿದ್ದನ್ನೇ ಸತ್ಯವೆಂದು ಆಯ್ಕೆ ಮಾಡಿಕೊಳ್ಳಲು ಅವಕಾಶವಿಲ್ಲ ಎಂಬುದನ್ನು ಜನರಿಗೆ ತಿಳಿಸುವ ಪಕ್ಷಕ್ಕೆ ಮತ ನೀಡಿ.

ಯುವಲ್ ನೋವಾ ಹರಾರಿ, ಇತಿಹಾಸ ತಜ್ಞ

ಕಿಡಿನುಡಿ



ಕರ್ನಾಟಕದ ಎಪಿಎಂಸಿಗಳಲ್ಲಿ ಈರುಳ್ಳಿ, ಟೊಮೆಟೊ ಬೆಲೆ ತೀವ್ರ ಕುಸಿದಿದೆ. ಒಬ್ಬ ರೈತ ತನ್ನ ಎಲ್ಲಾ ಉತ್ಪನ್ನಕ್ಕೆ ಸಾರಿಗೆ ಮತ್ತು ಇತರ ಖರ್ಚು ಕಳೆದು 10 ರೂಪಾಯಿಗಿಂತ ಕಡಿಮೆ ಹಣ ಪಡೆದಿದ್ದಾನೆ. ಬೆಲೆಗಳಲ್ಲಿ ಏರಿಳಿಕೆಯಾಗುವುದು ಸಹಜ. ಆದರೆ, ರೈತರು ತಮಗೆ ಎಷ್ಟು ಬೆಲೆ ಸಿಗುತ್ತದೆ ಎಂಬುದನ್ನು ತಮ್ಮ ಉತ್ಪನ್ನವನ್ನು ಎಪಿಎಂಸಿಗೆ ತೆಗೆದುಕೊಂಡು ಹೋಗಿಯೇ ತಿಳಿದುಕೊಳ್ಳಬೇಕೆ?

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಮಂಗಳವಾರ, 2-12-1997

● **ಸರ್ಕಾರ ರಚನೆಗೆ ಅವಕಾಶ: ರಾಷ್ಟ್ರಪತಿಗೆ ಕಾಂಗ್ರೆಸ್ ಮನವಿ**

ನವದೆಹಲಿ, ಡಿ. 1– ಕೇಂದ್ರದಲ್ಲಿ ಸರ್ಕಾರ ರಚಿಸಲು ತನಗೊಂದು ಅವಕಾಶ ನೀಡುವಂತೆ ಕಾಂಗ್ರೆಸ್ ಪಕ್ಷವು ಇಂದು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರಿಗೆ ಮನವಿ ಮಾಡಿದೆ.

ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ಸಿನ ಏಳು ಸದಸ್ಯರ ನಿಯೋಗವೊಂದು ರಾಷ್ಟ್ರಪತಿ ಅವರನ್ನು ಇಂದು ರಾತ್ರಿ ಭೇಟಿ ಮಾಡಿ ಸುಮಾರು 45 ನಿಮಿಷಗಳ ಕಾಲ ಚರ್ಚೆ ನಡೆಸಿತು.

ಸಂಯುಕ್ತರಂಗ ಮತ್ತು ಬಿಜೆಪಿಗೆ ಈ ಹಿಂದೆ ಸರ್ಕಾರ ರಚಿಸಲು ಅವಕಾಶ ನೀಡಿರುವುದರಿಂದ ಈ ಬಾರಿ ತನಗೆ ಅವಕಾಶ ನೀಡುವಂತೆ ರಾಷ್ಟ್ರಪತಿಯವರನ್ನು ಕಾಂಗ್ರೆಸ್ ಕೋರಿತು.

● **ಪಕ್ಷ ಬಿಟ್ಟು ಬನ್ನಿ: ಕಾಂಗ್ರೆಸ್ ಸಂಸದರಿಗೆ ಅಟಲ್ ಕರೆ**

ನವದೆಹಲಿ, ಡಿ.1 (ಯುಎನ್‌ಐ)– 'ಹೊಸ ಚುನಾವಣೆಯನ್ನು ತಡೆಯಬೇಕು ಅನ್ನುವುದೇ ಆದರೆ ಕಾಂಗ್ರೆಸ್ ಪಕ್ಷದ ಲೋಕಸಭಾ ಸದಸ್ಯರು ತಮ್ಮ ಮಾತೃಪಕ್ಷ ತೊರೆದು ಬಿಜೆಪಿ ನೇತೃತ್ವದ ಸರ್ಕಾರವನ್ನು ಬೆಂಬಲಿಸಬೇಕು' ಎಂದು ಭಾರತೀಯ ಜನತಾ ಪಕ್ಷ ಇಂದು ಬಹಿರಂಗ ಕರೆ ನೀಡಿದೆ.

'ಕೇಂದ್ರದಲ್ಲಿ ಸರ್ಕಾರ ರಚಿಸುವ ಬಗ್ಗೆ ಕಾಂಗ್ರೆಸ್‌ನ ಹಲವರು ಹಾಗೂ ಇತರೆ ಪಕ್ಷಗಳ ಕೆಲವು ಲೋಕಸಭಾ ಸದಸ್ಯರು ತಮ್ಮೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಾರೆ' ಎಂದು ಬಿಜೆಪಿ ನಾಯಕ ಎ.ಬಿ. ವಾಜಪೇಯಿ ಅವರು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 2-12-1972

● **ಭಾರತ- ಪಾಕ್‌ನಿಂದ ಯುದ್ಧ ಕೈದಿಗಳು ಸ್ವದೇಶಗಳಿಗೆ ವಾಪಸ್**

ಅಮೃತಸರ, ಡಿ. 1– ಕಳೆದ ವರ್ಷ ಡಿಸೆಂಬರ್ ಸಮರದಲ್ಲಿ ಸೆರೆಹಿಡಿಯಲಾದ ಯುದ್ಧ ಬಂದಿಗಳನ್ನು ಇಂದು ಭಾರತ- ಪಾಕಿಸ್ತಾನ ವಾಘಾ ಗಡಿ ಮೂಲಕ ಸ್ವದೇಶಕ್ಕೆ ವಾಪಸು ಕಳುಹಿಸಿದವು.

ಸುಮಾರು 540 ಪಾಕಿಸ್ತಾನಿ ಯುದ್ಧ ಬಂದಿಗಳನ್ನು 19 ತಂಡಗಳಲ್ಲಿ ಭಾರತವು ಪಾಕಿಸ್ತಾನದ ವಶಕ್ಕೊಪ್ಪಿಸಿತು. ಪಾಕಿಸ್ತಾನ 616 ಮಂದಿ ಭಾರತೀಯ ಯೋಧರನ್ನು ಭಾರತದ ವಶಕ್ಕೊಪ್ಪಿಸಿತು.

● **ಭೂಸುಧಾರಣೆ ಮಸೂದೆ: ವಿಧಾನಮಂಡಲಕ್ಕೆ ಪರಮಾಧಿಕಾರ– ಕಂದಾಯ ಸಚಿವರ ಸ್ಪಷ್ಟನೆ**

ಬೆಂಗಳೂರು, ಡಿ.1– ಭೂಸುಧಾರಣೆ ಮಸೂದೆ ವಿರುದ್ಧ ಕಾಂಗ್ರೆಸ್ ಪಕ್ಷದ ಕೆಲವು ಸಿರಿವಂತ ಜಮೀನ್ದಾರರು ಚಳವಳಿ ಮಾರ್ಗ ಅನುಸರಿಸುತ್ತಿರುವರೆಂಬ ವಿಚಾರ ಸರ್ಕಾರಕ್ಕೆ ಅಧಿಕೃತವಾಗಿ ತಿಳಿದುಬಂದಿಲ್ಲವೆಂದೂ ಮಸೂದೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಪರಮಾಧಿಕಾರ ವಿಧಾನ ಮಂಡಲಕ್ಕೆ ಮಾತ್ರ ಇದೆಯೆಂದೂ ಕಂದಾಯ ಸಚಿವ ಶ್ರೀ ಎನ್. ಹುಚ್ಚಮಾಸ್ತಿಗೌಡ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಶ್ರೀ ಎಚ್.ಕೆ. ವೀರಣ್ಣಗೌಡ ಅವರಂತಹ ಕಾಂಗ್ರೆಸ್ ನಾಯಕರು ದೊಡ್ಡ ಪ್ರಚಾರ ಮಾಡುತ್ತಿರುವುದು ಗಮನಕ್ಕೆ ಬಂದಿದೆಯೆಂದು ಶ್ರೀ ಎಂ.ಎಸ್. ಕೃಷ್ಣನ್ ಅವರು ಹೇಳಿದಾಗ ಸಚಿವರು ತಾವೂ ಅದನ್ನು ಪತ್ರಿಕೆಗಳಲ್ಲಿ ನೋಡಿರುವುದಾಗಿಯೂ ಪತ್ರಿಕೆಗಳಲ್ಲಿ ಬಂದದ್ದೆಲ್ಲವನ್ನೂ ಗಣನೆಗೆ ತೆಗೆದುಕೊಂಡರೆ ಕಷ್ಟವಾಗುವುದೆಂದೂ ವಿವರಿಸಿದರು.

ಇತ್ತೀಚಿನ ದಶಕಗಳಲ್ಲೇ ಚೀನಾ ಕಂಡ ಅತಿದೊಡ್ಡ ಪ್ರತಿಭಟನೆ

ದಮನ, ಕಣ್ಗಾವಲಿನ 'ಅಸ್ತ್ರ' ಹಿಡಿದು...

ವಿಶ್ಲೇಷಣೆ

ಕ್ರಿಸ್ ಬಕ್ಲಿ

ಚೀನಾ, ಈಗ ತನ್ನಲ್ಲಿ ನಡೆದಿರುವಂತಹ ಬಲು ದಿಟ್ಟ ಹಾಗೂ ವ್ಯಾಪಕ ಪ್ರತಿಭಟನೆಗಳಿಗೆ ಇತ್ತೀಚಿನ ದಶಕಗಳಲ್ಲಿ ಒಮ್ಮೆಯೂ ಸಾಕ್ಷಿಯಾಗಿರಲಿಲ್ಲ. ಈ ಪ್ರತಿಭಟನೆಗಳನ್ನು ಹತ್ತಿಕ್ಕಲು ಅಧ್ಯಕ್ಷ, ಕಮ್ಯುನಿಸ್ಟ್ ಪಕ್ಷದ ನೇತಾರ ಷಿ ಜಿನ್‌ಪಿಂಗ್ ಹೊಸ ಭದ್ರತಾ ವ್ಯವಸ್ಥೆಯೊಂದನ್ನು ಸನ್ನದ್ಧಗೊಳಿಸಿದ್ದಾರೆ. ಆದರೆ, ದಶಕಗಳಷ್ಟು ಹಳೆಯದಾದ ದಮನ ಮತ್ತು ಕಣ್ಗಾವಲು ಎಂಬ 'ಅಸ್ತ್ರ'ಗಳನ್ನೇ ಅವರು ಈ ಹೊಸ ವ್ಯವಸ್ಥೆಯಲ್ಲೂ ಗುರಾಣಿಗಳನ್ನಾಗಿ ಮಾಡಿಕೊಂಡಿದ್ದಾರೆ.

'ಸಾಮಾಜಿಕ ಸುವ್ಯವಸ್ಥೆಗೆ ಧಕ್ಕೆ ತರುವ ಕಾನೂನುಬಾಹಿರ ಮತ್ತು ಕ್ರಿಮಿನಲ್ ಕೃತ್ಯಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಬೇಕು' ಎಂದು ಭದ್ರತಾ ಮುಖ್ಯಸ್ಥರ ಸಭೆಯಲ್ಲಿ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿರುವ ಕುರಿತು ಸರ್ಕಾರಿ ಮಾಧ್ಯಮದಲ್ಲಿ ಮಂಗಳವಾರ ವರದಿಯಾಯಿತು. ಮತ್ತು ಅದೇ ದಿನ ಸಂಜೆಯ ಹೊತ್ತಿಗೆ ಪ್ರತಿಭಟನೆಗಳು ಗಾತ್ರದಲ್ಲಿ ಚಿಕ್ಕದಾಗಿರುವಂತೆ ಹಾಗೂ ಚದುರಿ ಹೋಗುತ್ತಿರುವಂತೆ ಗೋಚರಿಸಿದವು. ಪ್ರತಿಭಟನಾ ಸುದ್ದಿಗಳು ವ್ಯಾಪಕವಾಗಿ ಹರಡಲು ಕಾರಣವಾಗಿದ್ದ ಸಾಮಾಜಿಕ ಜಾಲತಾಣಗಳಲ್ಲಿ ಮಾತ್ರ ಲಾಕ್‌ಡೌನ್‌ನಿಂದ ಬಾಧಿತವಾದ ನಿವಾಸಿಗಳ ಗುಂಪುಗಳು ತಮ್ಮನ್ನು ಮುಕ್ತಗೊಳಿಸುವಂತೆ ಆಗ್ರಹಿಸುತ್ತಿದ್ದವು.

ಅದೇ ಹೊತ್ತಿಗೆ, ಎಲ್ಲ ಹಿರಿಯ ವಯಸ್ಕರಿಗೆ ಲಸಿಕೆ ಹಾಕಲಾಗುವುದು ಎಂದೂ ಸರ್ಕಾರ ಘೋಷಣೆ ಮಾಡಿತು. ಜನರ ಆಕ್ರೋಶಕ್ಕೆ ಕಾರಣವಾಗಿರುವ ಅತ್ಯಂತ ಕಟ್ಟುನಿಟ್ಟಿನ ಕೋವಿಡ್–19 ನಿಯಂತ್ರಣ ನಿಯಮಾವಳಿಯನ್ನು ಸಡಿಲಗೊಳಿಸುವ ಸಂಕೇತವಾಗಿ ಈ ಘೋಷಣೆ ಕಂಡಿತು. ಭಿನ್ನ ಧ್ವನಿಯನ್ನು ಹತ್ತಿಕ್ಕುವ ಸ್ಪಷ್ಟ ಸಂದೇಶ ನೀಡುತ್ತಲೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸರ್ಕಾರ ಉತ್ಸುಕವಾಗಿದೆ ಎಂದೂ ಜನತೆಗೆ ಮನದಟ್ಟು ಮಾಡಲು ಯತ್ನಿಸಲಾಯಿತು.

ಭದ್ರತಾ ಸಿಬ್ಬಂದಿ ಮತ್ತು ಅವರ ವಾಹನಗಳು ಸಂಭಾವ್ಯ ಪ್ರತಿಭಟನಾ ಸ್ಥಳಗಳನ್ನು ಆವರಿಸಿದರೆ, ನಿಷೇಧಿತ ಆ್ಯಪ್‌ಗಳನ್ನು ಬಳಕೆ ಮಾಡಿದ ಗುಮಾನಿ ಮೇಲೆ ಪೊಲೀಸ್ ಅಧಿಕಾರಿಗಳು ಕೆಲವು ನಿವಾಸಿಗಳ ಫೋನ್‌ಗಳನ್ನು ತಡಕಾಡಲು ಆರಂಭಿಸಿದರು. ಪ್ರತಿಭಟನೆ ನಡೆಸಲು ಹೋಗಬಹುದು ಎಂಬ ಅನುಮಾನ ಇರುವ ವ್ಯಕ್ತಿಗಳ ಮನೆಗಳಿಗೆ ಅಧಿಕಾರಿಗಳು ಹೋಗಿ ಎಚ್ಚರಿಕೆ ನೀಡತೊಡಗಿದರು. ಕೆಲವರನ್ನು ವಿಚಾರಣೆಗಾಗಿ ಕರೆದೊಯ್ದರು. ಹಾಗೆಯೇ ಸಾಮಾಜಿಕ ಜಾಲತಾಣಗಳಲ್ಲಿದ್ದ ಪ್ರತಿಭಟನಾ ಸಂಕೇತಗಳು ಹಾಗೂ ಘೋಷಣೆಗಳನ್ನೆಲ್ಲ ತೆಗೆದುಹಾಕಿದರು. ತಮ್ಮ ಪಾರಮ್ಯವನ್ನು ಇನ್ನಷ್ಟು ಗಟ್ಟಿಯಾಗಿ ಬೇರೂರಿಸಬೇಕು ಎಂಬ ಹಂಬಲದಲ್ಲಿ ಷಿ ಅವರೇ ರೂಪಿಸಿದ ತಂತ್ರಗಾರಿಕೆ ಇದಾಗಿದೆ. ಪೊಲೀಸ್ ಬಲ ಹೆಚ್ಚಿಸಿರುವ ಅವರು, ಆಯಕಟ್ಟಿನ ಜಾಗಗಳಲ್ಲಿ ನಂಬಿಕಸ್ಥರನ್ನೇ ತುಂಬಿದ್ದಾರೆ. 'ರಾಜಕೀಯ ಭದ್ರತೆಯೇ– ತಮಗೆ ಮತ್ತು ತಮ್ಮ ಪಕ್ಷಕ್ಕೆ– ರಾಷ್ಟ್ರೀಯ ಭದ್ರತೆಗೆ ತಳಹದಿಯಾಗಿದೆ' ಎಂದೂ ಘೋಷಿಸಿದ್ದಾರೆ.

ಬೀದಿಗಳಿಗೆ ಪೊಲೀಸರನ್ನು ನುಗ್ಗಿಸಲಾಗಿದ್ದರೂ ವ್ಯಾಪಾರ ವಹಿವಾಟು ಅಬಾಧಿತವಾಗಿ ನಡೆಯಲಿದೆ ಎಂದು ಷಿ ಲೆಕ್ಕಹಾಕಿದ್ದಾರೆ. ತಮ್ಮ ಆಡಳಿತಕ್ಕೆ ಬಲು ಅಪರೂಪ ಎನ್ನುವಂತಹ ಬಹಿರಂಗ ಸವಾಲು ಎದುರಾದರೂ– ಅಷ್ಟೇ ಅಲ್ಲ, ತಾವು ಅಧಿಕಾರದಿಂದಲೇ ಕೆಳಗಿಳಿಯಬೇಕು ಎನ್ನುವ ಒತ್ತಾಯ ಕೇಳಿಬಂದರೂ– ಏನೂ ಹೇಳದೆ ಮೌನವಾಗಿಯೇ ಇದ್ದಾರೆ. ಬಾಹ್ಯವಾಗಿ ಅವರು ಪ್ರತಿಭಟನಕಾರರನ್ನು ಸಂಪೂರ್ಣ ಅಲಕ್ಷಿಸಲು ಪಣ ತೊಟ್ಟವರಂತೆ ಕಾಣುತ್ತಿದ್ದಾರೆ. ಭದ್ರತಾ ಪಡೆಗಳು ಪ್ರತಿಭಟನಕಾರರ ಮೇಲೆ ಮುಗಿಬಿದ್ದಿರುವುದು ಮತ್ತು ಪಕ್ಷದ 'ಆನ್‌ಲೈನ್ ಸೇನೆ'ಯು ಪ್ರತಿಭಟನಕಾರರನ್ನು ಅಮೆರಿಕ ನೇತೃತ್ವದ ವಿಧ್ವಂಸಕ ಶಕ್ತಿಗಳ ಕೈಗೊಂಬೆಗಳು ಎಂದು ಮೂದಲಿಸುತ್ತಿರುವುದು ಷಿ ಅವರ ಆಕ್ರೋಶವನ್ನು ತಣಿಸಿರಬಹುದು.

'ಅವರು ಎಷ್ಟು ಸಾಧ್ಯವೋ ಅಷ್ಟು ದೀರ್ಘ ಸಮಯದವರೆಗೆ, ಎಷ್ಟು ಸಾಧ್ಯವೋ ಅಷ್ಟು ಕಡಿಮೆ ವಿಷಯವನ್ನಷ್ಟೇ ಹೇಳಲು ಯತ್ನಿಸುತ್ತಿರುತ್ತಾರೆ' ಎಂದು ಚೀನಾದ ರಾಜಕೀಯ ಮತ್ತು ಪ್ರತಿಭಟನೆಗಳ ಇತಿಹಾಸದ ಕುರಿತು ಅಧ್ಯಯನ ನಡೆಸಿರುವ ಕೇಂಬ್ರಿಜ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವಿಲಿಯಂ ಹರ್ಸ್ಟ್ ಹೇಳುತ್ತಾರೆ. 'ಅವರೊಂದು ವೇಳೆ ಮಾತನಾಡಿದರೆ ಉರಿಯುವ ಬೆಂಕಿಗೆ ಮತ್ತಷ್ಟು ತುಪ್ಪ ಸುರಿದಂತೆ ಆಗಬಹುದು. ಆದ್ದರಿಂದ ಏನೂ ಆಗಿಯೇ ಇಲ್ಲ ಎನ್ನುವಂತೆ ನಟಿಸುವುದೇ ಅವರಿಗೆ ಉತ್ತಮ ದಾರಿಯಾಗಿ ಕಂಡಿದೆ' ಎಂದು ವಿಶ್ಲೇಷಿಸುತ್ತಾರೆ. ಕಮ್ಯುನಿಸ್ಟ್ ಪಕ್ಷದ ಮುಖವಾಣಿಯಾದ 'ದಿ ಪೀಪಲ್ಸ್ ಡೇಲಿ' ಪತ್ರಿಕೆಯು ಮಂಗೋಲಿಯಾ ಅಧ್ಯಕ್ಷ ಮತ್ತು ಷಿ ಅವರ ನಡುವಿನ ಮಾತುಕತೆ ವಿವರವನ್ನು ಮಂಗಳವಾರ ಮುಖಪುಟದಲ್ಲಿ ದೊಡ್ಡದಾಗಿ ಪ್ರಕಟಿಸಿದೆ. ಷಿ ಅವರು ಅಧಿಕಾರದ ಗದ್ದುಗೆಗೇರಿ ಹತ್ತು ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ನಡೆದ ಸಂಭ್ರಮಾಚರಣೆ ಸುದ್ದಿಯೂ ಪ್ರಮುಖ ಸ್ಥಾನ ಪಡೆದಿದೆ. ಆದರೆ, ಪ್ರತಿಭಟನೆಯ ಕುರಿತು ಒಂದೇ ಒಂದು ಪದವನ್ನೂ ಬರೆಯಲಾಗಿಲ್ಲ. 1989ರಲ್ಲಿ ಟಿಯನಾನ್ಮೆನ್ ಸ್ಕ್ವೇರ್‌ನಲ್ಲಿ ಪ್ರಜಾಪ್ರಭುತ್ವ ಪರವಾಗಿ ನಡೆದಿದ್ದ ಪ್ರತಿಭಟನೆಯ ಬಳಿಕ ಚೀನಾ ಇಂತಹ ವ್ಯಾಪಕ ಪ್ರತಿಭಟನೆಗೆ ಸಾಕ್ಷಿಯಾಗಿರಲಿಲ್ಲ.

ಬೀಜಿಂಗ್‌ನ ಸರ್ಪಗಾವಲಿನ ನಡುವಿರುವ ಪಕ್ಷದ ಕಚೇರಿಯಲ್ಲಿ ಕುಳಿತು ಷಿ ಮತ್ತು ಅವರ ಸಲಹೆಗಾರರೇ ಪ್ರತಿಭಟನೆಗಳನ್ನು ನಿಭಾಯಿಸುತ್ತಿರುವುದರಲ್ಲಿ ಯಾವ ಅನುಮಾನವೂ ಇಲ್ಲ. 1989ರ ಪ್ರತಿಭಟನೆಗಳ ಬಳಿಕ ಚೀನಿ ನಾಯಕರಿಗೆ ಆಡಳಿತವಿರೋಧಿ ಸಾಮಾಜಿಕ ಚಳವಳಿಗಳ ಅಪಾಯದ ಅರಿವು ಚೆನ್ನಾಗಿದೆ. ಹೀಗಾಗಿ ಮತ್ತೊಂದು ರಕ್ತಸಿಕ್ತ ದಮನಕ್ಕೆ ಮುಂದಾಗುವಂತಹ ಅಪಾಯ ತಂದುಕೊಳ್ಳುವ ಬದಲು ಮೊಗ್ಗಿನಲ್ಲೇ ಪ್ರತಿಭಟನೆಯನ್ನು ಚಿವುಟಿ ಹಾಕಲು ನಿರ್ಧರಿಸಿದ್ದಾರೆ.

ಸಾರ್ವಜನಿಕರ ಆಕ್ರೋಶ ಹೀಗೆ ಸಂಘಟಿತವಾಗಿ ಮೊದಲು ವ್ಯಕ್ತವಾಗಿದ್ದು ಚೀನಾದ ಪಶ್ಚಿಮ ಭಾಗದಲ್ಲಿರುವ ಉರಮ್‌ಕಿ ಎಂಬ ನಗರದಲ್ಲಿ. ಆ ನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಹತ್ತು ಜನ ಸಾವನ್ನಪ್ಪಿದ ಮೇಲೆ ಈ ಆಕ್ರೋಶ ಭುಗಿಲೆದ್ದಿತ್ತು. ಸಾಂಕ್ರಾಮಿಕದ ಕಾರಣದಿಂದ ವಿಧಿಸಲಾದ ನಿರ್ಬಂಧಗಳಿಂದಾಗಿ ನಿವಾಸಿಗಳು ಅಪಾರ್ಟ್‌ಮೆಂಟ್‌ನಲ್ಲೇ ಬಲವಂತವಾಗಿ ಉಳಿಯುವಂತಾಗಿ ಈ ಸಾವುಗಳು ಸಂಭವಿಸಿದವು ಎಂಬುದು ಜನರ ದೂರು. ಈ ಸಂಬಂಧದ ಪ್ರತಿಭಟನೆಗಳು ಬರುಬರುತ್ತಾ ಚೀನಾದ ಸಾಂಕ್ರಾಮಿಕ ತಡೆಗಟ್ಟುವ ನೀತಿಗಳನ್ನೇ ಖಂಡಿಸುವ ವೇದಿಕೆಗಳಾದವು. ಪ್ರಜಾಪ್ರಭುತ್ವಕ್ಕಾಗಿ ಆಗ್ರಹ ಮತ್ತು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಬೇಡಿಕೆ ಢಾಳಾಗಿ ಕೇಳಿಬಂದಿದ್ದು ದೇಶದ ಸರ್ವಾಧಿಕಾರಿಗಳಿಗೆ ಅಪಥ್ಯವಾಗುವಂತೆ ಆಯಿತು. ಹೀಗಾಗಿ ಈ ವಾರ, ಭದ್ರತಾ ಪಡೆಗಳ ಬಲ ಇನ್ನೂ ಹೆಚ್ಚಿದ್ದು, ಹೊಸದಾಗಿ ಪ್ರತಿಭಟನೆ ನಡೆಸುವುದು ಕಠಿಣ ಮತ್ತು ಅಪಾಯಕಾರಿ ಎನ್ನುವಂತಹ ಸನ್ನಿವೇಶ ನಿರ್ಮಾಣವಾಗಿದೆ.

ಕೋವಿಡ್–19 ತಡೆಗಟ್ಟಲು ಚೀನಾ ವಿಧಿಸಿರುವ 20 ಅಂಶಗಳ ನಿರ್ಬಂಧಗಳಿಗೆ ಸಂಬಂಧಿಸಿದ ಜನರ ಅಹವಾಲುಗಳನ್ನು (ವ್ಯಾಪಾರ ಮಾಡಲು ಸಾಧ್ಯವಾಗುತ್ತಿಲ್ಲ, ಮಕ್ಕಳನ್ನು ಶಾಲೆಗೆ ಕಳಿಸಲು ಆಗುತ್ತಿಲ್ಲ, ನಿತ್ಯದ ಬದುಕು ದುಸ್ತರ...) ಅಧಿಕಾರಿಗಳು ಸಮಾಧಾನದಿಂದ ಆಲಿಸಿ, ಸಮಾಧಾನ ಹೇಳುವ ಯತ್ನವನ್ನೂ ಮಾಡುತ್ತಿದ್ದಾರೆ. ವಾರಾಂತ್ಯದಲ್ಲಿ ಪ್ರತಿಭಟನೆಗಳು ಹೆಚ್ಚುತ್ತಿರುವುದರಿಂದ ಚೀನಾದಾದ್ಯಂತ ಸ್ಥಳೀಯ ಆಡಳಿತಗಳು ನಿವಾಸಿಗಳನ್ನು ಮನೆಯಲ್ಲೇ ಕೂಡಿಹಾಕುವುದಿಲ್ಲ ಎಂದು ಭರವಸೆ ನೀಡಿವೆ. ಸರ್ಕಾರಿ ಮಾಧ್ಯಮದಲ್ಲಿ ಪ್ರಕಟಿಸಲಾದ ಲೇಖನವೊಂದರಲ್ಲಿ, ತೀವ್ರ ನಿರಾಸೆಯಲ್ಲಿರುವ ಜನರ ಕುರಿತು ಅಧಿಕಾರಿಗಳು ಸಹಾನುಭೂತಿ ತೋರಬೇಕು ಎಂದು ಅಭಿಪ್ರಾಯಪಡಲಾಗಿದೆ. ಜನರ ಆಕ್ರೋಶವನ್ನು ಹೀಗೂ ತಣಿಸುವ ಯತ್ನ ನಡೆದಿದೆ.

ಚೀನಾದಲ್ಲಿ ಇಂತಹ ಪ್ರತಿಭಟನೆಗಳು ಪ್ರಭುತ್ವ ವಿರೋಧಿ ಎಂದೇ ಪರಿಗಣಿತ. ಆದರೆ, ಅಧಿಕಾರಸ್ಥರು ಇವುಗಳನ್ನು ತೀವ್ರವಾಗಿ ದಮನಿಸುವ ಕಾರ್ಯಕ್ಕೆ ಇಳಿದಿಲ್ಲ. ಹಾಗೆಂದು ಪ್ರತಿಭಟನಕಾರರ ಬಗ್ಗೆ ಸರ್ಕಾರ ಮೃದು ಧೋರಣೆ ತಾಳಿದೆ ಎಂದಲ್ಲ. ನೇರವಾಗಿ ಮಾತನಾಡದೆ ತನ್ನ ಅನುಯಾಯಿಗಳನ್ನು ದಾಳ ಮಾಡಿಕೊಂಡು ಸಾಮಾಜಿಕ ಜಾಲತಾಣಗಳ ಮೂಲಕ ಪ್ರತಿಭಟನಕಾರರ ಮೇಲೆ ದಾಳಿ ಮಾಡುತ್ತಿದೆ. ಚೀನಾದಲ್ಲಿ 20 ಲಕ್ಷ ಪೊಲೀಸ್ ಅಧಿಕಾರಿಗಳಿದ್ದಾರೆ. ಆದರೆ, ಪ್ರತಿಭಟನೆಗಳನ್ನು ಹತ್ತಿಕ್ಕಲು ಇನ್ನೂ ಹತ್ತು ಲಕ್ಷ ಜನರಿಗೆ ಸಶಸ್ತ್ರ ತರಬೇತಿ ಕೊಟ್ಟು 'ಹೆಚ್ಚುವರಿ ಸಿಬ್ಬಂದಿ'ಯನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ. ಎಲ್ಲದಕ್ಕಿಂತ ದೊಡ್ಡದಾಗಿ ಚೀನಾ ಸೇನೆಯೂ ಪ್ರತಿಭಟನಕಾರರ ಧ್ವನಿ ಅಡಗಿಸಲು ಸಿದ್ಧವಾಗಿಯೇ ಇದೆ.

ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ

ತಲೆ ಪುರಾಣ!

● ಬಿ.ಎನ್.ಮಲ್ಲೇಶ್

'ಲೇ ಗುಡ್ಡೆ, ಕೊರೊನಾ ಹಾವಳಿ ಇನ್ನೂ ಮುಗಿದಿಲ್ಲ, ಆಗ್ಲೇ ಅದ್ಯಾವುದೋ ದೇಶದಾಗೆ ವಿಜ್ಞಾನಿಗಳು ಸಾವಿರಾರು ವರ್ಷದ ವೈರಸ್‌ಗಳಿಗೆ ಮತ್ತೆ ಜೀವ ಕೊಟ್ಟಾರಂತೆ. ಅವರಿಗೇನು ತಲೆಗಿಲಿ ಐತಿಲ್ಲಲೆ?' ತೆಪರೇಸಿಗೆ ಕೋಪ ನೆತ್ತಿಗೇರಿತ್ತು.

'ಸ್ವಲ್ಪ ತಡಿ, ಅವರಿಗೆ ತಲಿ ಐತೋ ಇಲ್ಲೋ, ಆದ್ರೆ ತಲೆಗಳ ಬಗ್ಗೆ ಈಗ ಜೋರಾಗಿ ಮಾತಾಡಂಗಿಲ್ಲ. ದೇಶದಾಗೀಗ ತಲೆಗಳ ಗದ್ಲ ನಡೆದೈತಿ' ಗುಡ್ಡೆ ನಕ್ಕ.

'ಹೌದಲ್ಲಲೆ, ರಾವಣನಿಗೆ ನೂರು ತಲೆನಾ? ಹತ್ತಲ್ವಾ?' ಕೊಟ್ರೇಶಿಗೆ ಅನುಮಾನ.

'ಅಪ್ಪ ಮಾರಾಯ, ಮಾತಿನ ಭರದಾಗೆ ಒಂದು ಸೊನ್ನಿ ಜಾಸ್ತಿ ಹೇಳಿರ್ತಾರೆ, ಅದಕ್ಯಾಕ್ ಅಷ್ಟ್ ತಲೆ ಕೆಡಿಸ್ಕಂತಿ?' ಚಾದಂಗಡಿ ಮಂಜಮ್ಮಗೂ ನಗು.

'ಮಂಜಮ್ಮ, ಈ ದೇಶ ನಿಂತಿರೋದೇ ಸೊನ್ನಿ ಮ್ಯಾಲೆ. ಈಗ ನಿನ್ ಜುಜುಬಿ ಚಾಗೆ ಇಪ್ಪತ್ ರೂಪಾಯಿ, ಸೊನ್ನಿ ಬಿಟ್ಟು ಕೊಟ್ರೆ ರೊಕ್ಕ ಇಸ್ಕಂತಿಯೇನು?' ಕೊಟ್ರೇಶಿ ತಿರುಗೇಟು ಕೊಟ್ಟ.

'ನಿಂದೂ ಭಾರಿ ತಲಿ ಬಿಡಲೆ, ಈಗ ನಂದೊಂದ್ ಪ್ರಶ್ನಿ, ರಾವಣನಿಗ್ಯಾಕೆ ಹತ್ತು ತಲಿ?' ತೆಪರೇಸಿ ಕೇಳಿದ.

'ಅದು ಅವನಿಷ್ಟ, ನಿಂಗ್ಯಾಕೆ?'

'ಆತುಬಿಡಪ, ನಿನ್ನ ಕೇಳಿದ್ನಲ್ಲ, ನಂಗೆ ತಲಿ ಇಲ್ಲ'.

'ಲೇ ತೆಪರ, ರಾವಣನಿಗೆ ಹತ್ತು ತಲಿ ಆದ್ರೆ ನಮ್ಮ ರಾಜಕಾರಣಿಗಳಿಗೆ ನೂರೆಂಟು ತಲಿ. ಅಂದ್ರೆ ಅವರು ಅಷ್ಟು ಬುದ್ಧಿವಂತರು ಅಂತ...' ಗುಡ್ಡೆ ಬಿಡಿಸಿ ಹೇಳಿದ.

'ಕರೆಕ್ಟ್, ಅದೇ ತರ ನಮ್ ತೆಪರೇಸಿಗೆ ಎರಡು ತಲಿ, ಅವ್ನೂ ಭಾರಿ ಬುದ್ಧಿವಂತ' ದುಬ್ಬೀರ ನಕ್ಕ.

ತೆಪರೇಸಿಗೆ ಸಿಟ್ಟು ಬಂತು 'ನಂಗೆ ಎರಡು ತಲಿನಾ? ನಿಂಗೆ ತಲೀನೇ ಇಲ್ಲ' ಎಂದ.

'ಆತಪ, ನಂಗೆ ತಲಿ ಇಲ್ಲ. ಇವತ್ತು ಬದುಕೋಕೆ ತಲಿ ಬೇಕಿಲ್ಲ...'

'ಮತ್ತೇನ್ ಬೇಕು?'

'ದುಡ್ಡು ಬೇಕು, ಕೊಡ್ತೀಯಾ? ಇವತ್ತು ತಲಿ ಇಲ್ಲದೆ ಬದುಕಬಹುದು, ದುಡ್ಡಿಲ್ಲದೆ ಬದುಕೋಕಾಗಲ್ಲ'.

ದುಬ್ಬೀರನ ಮಾತಿಗೆ ತೆಪರೇಸಿ ಪಿಟಿಕ್ಕೆನ್ನಲಿಲ್ಲ.

ಸಂಗತ

ಬದುಕೋಣ ವಿಭಜನೆಯ ಮೀರಿ

ಮನುಷ್ಯ ಬಾಹ್ಯಾಡಂಬರಕ್ಕೆ ನೀಡುವಷ್ಟು ಮಹತ್ವವನ್ನು ಆಂತರಿಕ ಸೌಂದರ್ಯಕ್ಕೂ ನೀಡಿದ್ದರೆ ಅವನಿಗೀಗ ಇಂತಹ ಒಂಟಿಭಾವ ಕಾಡುತ್ತಿರಲಿಲ್ಲ!

● ಸತೀಶ್ ಜಿ.ಕೆ. ತೀರ್ಥಹಳ್ಳಿ

ಚರಿತ್ರೆಯ ಅಧ್ಯಯನದಲ್ಲಿ ಕಂಡುಬರುವ ಸಂಗತಿಯೆಂದರೆ, ಮನುಷ್ಯ ಸ್ವಭಾವತಃ ಅಲೆಮಾರಿ. ಆಹಾರ ಹುಡುಕಿ ಅಲೆಯುತ್ತಿದ್ದವನು ಮುಂದೆ ಒಂದೆಡೆ ನೆಲೆ ನಿಂತು, ಬಿತ್ತಿಬೆಳೆದು ಕೃಷಿಕಸುಬನ್ನು ಆರಂಭಿಸಿದ. ಸಹಜವಾಗಿ ಎದುರಾಗುತ್ತಿದ್ದ ಪ್ರಕೃತಿ ವೈಪರೀತ್ಯ, ರೋಗರುಜಿನ, ಕಷ್ಟಕಾರ್ಪಣ್ಯಗಳನ್ನು ಮೀರಲು ಶಕ್ತಿಯೊಂದರ ಮೊರೆಹೋದ. ಪ್ರಕೃತಿಯ ಆರಾಧನೆಯೇ ಭಕ್ತಿಯ ಮೂಲವಾಗಿ ನೆಲ, ನೀರು, ಗಾಳಿ, ಸೂರ್ಯಚಂದ್ರರನ್ನು ಪೂಜಿಸಿದ, ಪ್ರಾರ್ಥಿಸಿದ. ಪೂರ್ವಜರ ಬದುಕಿನ ಭರವಸೆಯ ಊರುಗೋಲಾಗಿ ಒದಗಿದ ದೇವರೂ ಮುಂದೆ ಸ್ವಾರ್ಥಸಾಧನೆಗೆ ದಾಳವಾದದ್ದು ಇತಿಹಾಸ.

ಕತೆಯೊಂದರಲ್ಲಿ, ಭೂಲೋಕದ ಮನುಷ್ಯರ ಕರೆಗೆ ಓಗೊಟ್ಟ ಭಗವಂತ ಕುತೂಹಲದಿಂದ ಮನುಷ್ಯ ಸ್ವರೂಪದ ಅಧ್ಯಯನ ಕೈಗೊಳ್ಳಲು ಧರೆಗಿಳಿದು ಬಂದ. ಬರುವ ಮಾರ್ಗದಲ್ಲಿ ಸ್ವಲ್ಪವೇ ಎತ್ತರದಿಂದ ನಿಂತು ಹಾಗೆಯೇ ನೋಡಿದ. ಕೆಲಸ ಮಾಡದೇ ಕೂತವರು, ಸೋಮಾರಿಗಳಂತೆ ನಿಂತವರು, ಯಾವುದೋ ದಿಗಿಲಲ್ಲಿ ಓಡುವವರು, ನೋವುಂಡವರು, ಭಾರ ಹೊತ್ತವರು, ಬಾಗಿದವರು, ಬೀಗುವವರು, ಗೆದ್ದವರು, ಬಿದ್ದವರು, ಉಳ್ಳವರು, ಇಲ್ಲದವರು, ಭಿಕ್ಷುಕರು, ಅಹಂಕಾರಿಗಳು, ಜ್ಞಾನಿಗಳು, ಅಜ್ಞಾನಿಗಳು, ಕಳ್ಳರು, ಕಳಕೊಂಡವರು, ಯೋಚಿಸುವವರು, ಯಾಚಿಸುವವರು, ಶಾಂತಿದೂತರು, ಉಗ್ರವಾದಿಗಳು, ನೋಯಿಸುವವರು, ಸಾಯಿಸುವವರು, ಸಾಯಿಸಲು ಹೊಂಚುಹಾಕುವವರು, ಸಾವಿನ ವ್ಯಾಪಾರಿಗಳು, ಮನೆಮುರುಕರು, ಸಂಚುಕೋರರು, ಶಂಕಿತರು, ಸೋಂಕಿತರು, ನರಳುವವರು, ಅಳುವವರು, ಅಳಿಸುವವರು, ಆಳುವವರು, ಉಳುವವರು, ಕೆಲವೇ ವರ್ಷ ಬದುಕಬಲ್ಲವರು, ಕಂಡೆಕಂಡೆ ಅನ್ನುವಷ್ಟರಲ್ಲಿ ಹೆಣವಾಗಿ ತಾನೇ ಕಟ್ಟಿದ ಮನೆಯಿಂದ ಹೊರಗಾಗಬಲ್ಲ ಮನುಷ್ಯನೆಂಬ ವಿಶಿಷ್ಟಜೀವಿಯ ವೈವಿಧ್ಯಮಯ ಸ್ವರೂಪ, ಬಣ್ಣಗಳು... ಎರಡು ಹೊತ್ತಿನ ತುತ್ತಿಗೆ ಪರದಾಡುವವರ ನಡುವೆಯೇ ಸಕಲ ವೈಭವಗಳಲ್ಲಿ ತಿಂದು ತೇಗುತ್ತಾ ಜೀರ್ಣಿಸಿಕೊಳ್ಳಲು ಒದ್ದಾಡುವವರು, ಬದುಕಿಡೀ ತಲೆಯ ಮೇಲೊಂದು ಸೂರು ಕಾಣದವರ ನಡುವೆಯೇ ಹತ್ತಾರು ತಲೆಮಾರು ಕೂತು ತಿಂದರೂ ಕರಗದಷ್ಟನ್ನು ಕೊಳೆಹಾಕುವವರು... ಬಹುಸಂಕೀರ್ಣ ಭೂಮಂಡಲದ ನಿಗೂಢ ಮನುಷ್ಯನ ಸ್ವಭಾವದ ಜಾಡು ಹುಡುಕುತ್ತಾ ಬಂದ ದೇವರೇ ಕೊನೆಗೆ ಕಂಗಾಲಾಗಿ ಹಿಂತಿರುಗಿದ!

ಕಾಲ ಸರಿದಂತೆ ಆವರಿಸಿಕೊಂಡ ದುರಾಸೆ, ದುರ್ಬುದ್ಧಿಗಳಿಂದ ಶಾಂತಿ, ನೆಮ್ಮದಿಗೆ ಭಂಗ ಬಂದು, ಮೋಸ, ವಂಚನೆಗಳ ಪಾಪಪ್ರಜ್ಞೆಯಲ್ಲಿ ಸೃಷ್ಟಿಯಾಗಿದ್ದೇ ಅನಾಗರಿಕತೆ. ಅದರ ಫಲವೇ ಹಸಿವು, ನಿರುದ್ಯೋಗ, ರೋಗ, ಜೀವಭಯ! ಇರುವ ನೆಲ-ನೀರು ಗಾಳಿಯ ಹಾಳುಗೆಡವಿ ಸ್ವಾರ್ಥ, ಧನದಾಹವನ್ನು ಉಸಿರಾಗಿಸಿಕೊಂಡು ಬದುಕುತ್ತಿರುವವರ ಕಂಡು ಸಂತರೊಬ್ಬರು 'ಭೂಮಿ ಸತ್ತರೆ ಉಳಿಯುವುದೆಲ್ಲಿ' ಅಂತ ಪ್ರಶ್ನಿಸುತ್ತಾರೆ. ಹಿಡಿಮಣ್ಣಿಗೆ ಇಷ್ಟು ತೇವ ಸಿಕ್ಕರೆ ಸಾಕು, ಅಲ್ಲಿ ಜೀವೋತ್ಪತ್ತಿಗೆ! ಅಂತಹ ನೆಲಕೀಗ ಇರವುಂಟೇ? ಅದೀಗ ನಿತ್ಯವೂ ಸಾಯಿಸಲ್ಪಡುತ್ತಿದೆ.

ವಿಶ್ವಪರಿಧಿ ವಿಸ್ತರಿಸುತ್ತಿರುವಂತೆ ವಿಜ್ಞಾನ ಬೆಳೆಯುತ್ತಿದ್ದರೂ ಮನುಷ್ಯನಲ್ಲಿ ಅರಿವು ಮಾತ್ರ ನಿಂತ ನೀರಾಗಿ ಬಗ್ಗಡವಾಗಿ ಕೊಳೆಯುತ್ತಿದೆ. ಈ ಕೊಳಕಲ್ಲಿ ವಿಷಕ್ರಿಮಿಗಳಂತೆ ದ್ವೇಷಾಸೂಯೆಗಳು ಮಾನಸಿಕ ರೋಗವನ್ನು ಸೃಜಿಸುತ್ತಿವೆ. ರೋಗಪೀಡಿತ ಮನಸುಗಳಲ್ಲಿ ಹಣ, ಅಧಿಕಾರ, ಮತಭೇದಗಳೆಲ್ಲವೂ ಹೆಡೆಯೆತ್ತಿ ಮಾನವ ಸಂಬಂಧವನ್ನು ಹಾಳುಗೆಡವುತ್ತಲೇ ಇವೆ. ಜೀವದಯೆ ಮಾಯವಾಗಿದೆ. ಮನುಷ್ಯನ ಜೀವತಣಿಸುವ ಸುಖಕ್ಕಾಗಿ ಇಲ್ಲಿ ಎಲ್ಲವೂ ಇದ್ದರೂ ಮುಖದ ಮೇಲೆ ಗಾಢ ವಿಷಾದವಿದೆ. ಆತ್ಮತೃಪ್ತಿಯ ನಗು ಅರಳುವ ಬದಲು ಅತೃಪ್ತಿಯ ಹೊಗೆ ಹೊರಳುತ್ತಿದೆ. ಅಂತಸ್ತು- ಮಹಲು ಕಟ್ಟಲು ಕೊಡುವಷ್ಟು ಮಹತ್ವವನ್ನು ಮನಸು- ಸಂಬಂಧ ಕಟ್ಟಲು ಕೊಟ್ಟಿದ್ದರೆ ಅವನಿಗೀಗ ಹೊರಗಿನಂತೆ ಅಂತರಂಗದಲ್ಲಿಯೂ ಒಂಟಿಭಾವ ಕಾಡುತ್ತಿರಲಿಲ್ಲ!



ಋಗ್ವೇದದ ಪುರುಷ ಸೂಕ್ತಿಯಲ್ಲಿ ವಿಶ್ವಸೃಷ್ಟಿಯ ಬಗ್ಗೆ ಹೇಳುವಾಗ, ವಿಶ್ವದಲ್ಲಿ ಖಭೌತ ವಲಯದಲ್ಲಿರುವ ನಿಗೂಢತೆ, ಶಕ್ತಿ ಮನುಷ್ಯನ ಭೌತಿಕ ಶರೀರದಲ್ಲಿಯೂ ಇದೆಯೆಂಬ ಬಗ್ಗೆ ಉಲ್ಲೇಖವಿದೆ. ನಮ್ಮೊಳಗಿನ ಸುಪ್ತ ಇಂದ್ರಿಯಾತೀತ ಶಕ್ತಿಯನ್ನು ಬಳಸಿಕೊಂಡರೆ ಅಮೋಘವಾದುದನ್ನೇ ಸಾಧಿಸಬಹುದು. ಆಲೋಚನೆಗೆ ತಕ್ಕಂತೆ ಕೈಯಲ್ಲಿರುವ ಆಯುಧವೊಂದನ್ನು ವಿನಾಶಕ್ಕೂ ವಿಕಾಸಕ್ಕೂ ಬಳಸಬಹುದು. ಹಾಗೆಯೇ ವಿಜ್ಞಾನ- ತಂತ್ರಜ್ಞಾನಗಳು. ಮನುಷ್ಯನ ಜೀವಿತಾವಧಿಯನ್ನು ಸದ್ವಿನಿಯೋಗ, ದುರ್ವಿನಿಯೋಗಗಳೆರಡಕ್ಕೂ ಬಳಸಬಹುದು ಅವನ ಆಂತರ್ಯದ ಗುಣಾವಗುಣಗಳ ಆಧಾರದ ಮೇಲೆಯೇ. ತಮ್ಮೆಲ್ಲಾ ಆಲೋಚನೆಗಳಿಗೆ ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಲೇಪ ನೀಡಿ ಹೊಸ ಹುಮ್ಮಸ್ಸಿನಲ್ಲಿ ಒಡಮೂಡುವುದು ಮತ್ತದೇ ಚೈತನ್ಯವನ್ನು ತಲೆಮಾರುಗಳಿಗೆ ಹಂಚುವುದು ಮೊದಲಾಗಬೇಕು.

ನಿಜ, ಬದಲಾವಣೆಯೊಂದೇ ಶಾಶ್ವತ. ಕಾಲ ಉರುಳುತ್ತಿದ್ದಂತೆ ನಾವೆಲ್ಲರೂ ನಮ್ಮ ನಮ್ಮ ಕೆಲಸ ಮುಗಿಸಿ ಎದ್ದು ಹೊರಡಬೇಕಾದ ಹೊತ್ತು ಒಂದು ದಿನ ಬಂದು ನಮ್ಮೆದುರು ನಿಂತು ಬಿಟ್ಟಿರುತ್ತದೆ. ಆಸ್ತಿ, ಹಣ, ಬಣ್ಣ, ರೂಪ, ಜಾತಿ, ಧರ್ಮ, ಲಿಂಗ, ವಯಸ್ಸು, ದೇಶ, ಭಾಷೆ, ಗಡಿಗಳೆಂಬ ಎಷ್ಟೊಂದು ಗೋಡೆಗಳು ನಮ್ಮನ್ನು ವಿಭಜಿಸುತ್ತಿವೆ ಎಂಬುದನ್ನರಿತು, ಅವನ್ನೆಲ್ಲಾ ಮೀರಿದ ವ್ಯಕ್ತಿತ್ವವೊಂದನ್ನು ಬದುಕುವುದು ನಮಗೀಗ ಸಾಧ್ಯವಾಗಬೇಕು. ಪ್ರೀತಿ-ಕರುಣೆಗಳು ಎಲ್ಲರೂ ಸಾಗಿ ಹೋಗಬೇಕಾದ ಹಾದಿಯಾಗಲಿ. ಅದುವೇ ಜೀವದೊಲವಿನ, ಜಗದ ಗೆಲುವಿನ ರಹದಾರಿಯಾಗಲಿ. ವಿಶ್ವವಿಸ್ತಾರ, ಚಲನೆ, ಕಾಲಮಾನಗಳ ತುಲನೆಯಲ್ಲಿ ನಶ್ವರದಂತಿರುವ ನರಜನ್ಮ ತನ್ನ ಕ್ಷಣಕ್ಷಣದ ಇರವನ್ನೂ ಇಲ್ಲಿ ಹೆಮ್ಮೆಯಿಂದ ಸಂಭ್ರಮಿಸಿ ತಣ್ಣಗೆ ತೆರಳುವಂತಾಗಲಿ.

ವಾಚಕರ ವಾಣಿ

ಗುಲಾಬಿ ನೀಡಿ ಸ್ವಾಗತ: ಶ್ಲಾಘನೀಯ

ಮಹಾರಾಷ್ಟ್ರದಿಂದ ಬರುವ ಬಸ್ ಪ್ರಯಾಣಿಕರಿಗೆ ಗಡಿಯಲ್ಲಿ ಗುಲಾಬಿ ಹೂವು ನೀಡಿ ಸ್ವಾಗತ ಕೋರಿದ ಕರ್ನಾಟಕ ಪೊಲೀಸರ ನಡೆ ಶ್ಲಾಘನೀಯ. ಕರ್ನಾಟಕದ ಬಸ್‌ಗಳಿಗೆ ಕೆಲವು ದಿನಗಳಿಂದ ಮಹಾರಾಷ್ಟ್ರದಲ್ಲಿ ಮಸಿ ಬಳಿಯುವುದು, ಕಲ್ಲು ಎಸೆಯುವುದನ್ನು ಅಲ್ಲಿನ ಕೆಲ ಪುಂಡರು ಮಾಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಕಲ್ಲಿನ ಬದಲು ಹೂವು ನೀಡಿ ನಮ್ಮವರು ಸ್ವಾಗತ ನೀಡಿರುವುದು ಕನ್ನಡಿಗರ ಹೃದಯ ವೈಶಾಲ್ಯಕ್ಕೆ ಸಾಕ್ಷಿ. ದೇಶದ ಯಾವುದೇ ಒಬ್ಬ ನಾಗರಿಕ ದೇಶದ ಯಾವುದೇ ರಾಜ್ಯದಲ್ಲಿ ಮುಕ್ತವಾಗಿ ಸಂಚರಿಸುವ, ವಾಸಿಸುವ, ವ್ಯಾಪಾರ ಮಾಡುವ ಸವಲತ್ತನ್ನು ನಮ್ಮ ಸಂವಿಧಾನ ಕೊಟ್ಟಿದೆ.

ಹಿಂದೊಮ್ಮೆ ಶರದ್ ಪವಾರ್ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಗಡಿ ವಿವಾದ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಆಗ ಅಲ್ಲಿನ ವಿರೋಧ ಪಕ್ಷಗಳು ತಮ್ಮಲ್ಲಿಂದ ಕರ್ನಾಟಕಕ್ಕೆ ವಿದ್ಯುತ್ ಪೂರೈಸುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದವು. ಆಗ ಮುಖ್ಯಮಂತ್ರಿ, 'ಕರ್ನಾಟಕವೇನು ಪಾಕಿಸ್ತಾನದ ಪ್ರಾಂತ್ಯವಲ್ಲ, ಅದು ನಮ್ಮದೇ ದೇಶದ ಒಂದು ಭಾಗ. ವಿದ್ಯುತ್ ಸರಬರಾಜು ನಿಲ್ಲಿಸುವುದು ಸಾಧ್ಯವಿಲ್ಲ' ಎಂದು ಖಡಾಖಂಡಿತವಾಗಿ ಹೇಳಿದ್ದರು. ಇಂತಹ ಮನೋಭಾವವನ್ನು ಅಲ್ಲಿ ಈಗ ಪುಂಡಾಟಿಕೆಯಲ್ಲಿ ತೊಡಗಿರುವ ಪಕ್ಷಗಳ ಮುಖಂಡರು ಬೆಳೆಸಿಕೊಳ್ಳಬೇಕು. ಗಡಿವಿವಾದ, ಜಲವಿವಾದದಂತಹ ಸೂಕ್ಷ್ಮ ವಿಚಾರಗಳಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕೆಲಸವನ್ನು ರಾಜಕಾರಣಿಗಳು ಮಾಡಬಾರದು.

ಗುರುರಾಜ ಪಾಟೀಲ ನಾದ, ಇಂಡಿ

ದಿ ಕಾಶ್ಮೀರ್ ಫೈಲ್ಸ್: ಸಂಗತಿಗಳು ಅವಾಸ್ತವಿಕವಲ್ಲ

'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರವು ತೆರೆಗೆ ಬಂದ ದಿನದಿಂದಲೂ ರಾಜಕೀಯ ವಲಯದೊಳಗೆ ಸೆಳೆಯಲ್ಪಟ್ಟು, ಪರ- ವಿರೋಧದ ಚರ್ಚೆಗಳಿಗೆ ಮುಕ್ತ ಗ್ರಾಸವಾಗಿದೆ. ಗೋವಾದಲ್ಲಿ ನಡೆಯುವ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ತೀರ್ಪುಗಾರರ ಮಂಡಳಿಯ ಅಧ್ಯಕ್ಷ ನೆದಾವ್ ಲಪಿಡ್ ಅವರು ಈಗ ಈ ಚಿತ್ರವು 'ಅಸಭ್ಯವಾದ, ನಿರ್ದಿಷ್ಟ ವಿಚಾರದ ಪ್ರಚಾರಕ್ಕೆ ರೂಪಿಸಿದ್ದು' ಎಂದು ವಿಮರ್ಶಿಸಿದ್ದಾರೆ. 'ವಲ್ಗರ್ ಪ್ರಾಪಗ್ಯಾಂಡ' ಎನ್ನುವ ಪದಗಳನ್ನೂ ಬಳಸಿದ್ದಾರೆ. ಅರ್ಥಾತ್, ಈ ಚಿತ್ರವು ಕೀಳು ಅಭಿರುಚಿಯಿಂದ ಕೂಡಿದ, ಪಕ್ಷಪಾತದ ಅಥವಾ ದಾರಿತಪ್ಪಿಸುವ ರಾಜಕೀಯ ಉದ್ದೇಶವನ್ನು ಹೊಂದಿದೆ ಎಂದಾಯಿತು!

ಚಲನಚಿತ್ರದಲ್ಲಿ ಕಾಣಬರುವ ಘಟನೆಗಳು ಮತ್ತು ಸಂಗತಿಗಳು ಅವಾಸ್ತವಿಕವಾದವು ಎಂದು ಯಾರೂ ಹೇಳಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. ತೀರ್ಪುಗಾರರ ಮಂಡಳಿಯ ಅಧ್ಯಕ್ಷರಾಗಿ ಲಪಿಡ್ ಅವರಿಗೆ ಮಂಡಳಿಯ ಅಭಿಪ್ರಾಯ ತಿಳಿಸುವ ಸ್ವಾತಂತ್ರ್ಯವಿದೆ. ಹೀಗಾಗಿ, ಅವರು ಹೇಳಿರುವುದು ಮಂಡಳಿಯ ಒಟ್ಟು ಅಭಿಪ್ರಾಯ ಎಂದು ಭಾವಿಸಬೇಕಾಗಿದೆ. ಹಾಗಿದ್ದರೆ ಮಂಡಳಿಯ ಸದಸ್ಯರೆಲ್ಲರೂ ಹೀಗೆ ಏಕಾಭಿಪ್ರಾಯದವರೇ? ಈ ಚಿತ್ರದಲ್ಲಿ ಕಲಾತ್ಮಕತೆಯ ಕೊರತೆ ಕಾಣುತ್ತದೆ ಎಂದೂ ಲಪಿಡ್ ಹೇಳಿದ್ದಾರಂತೆ.

ಚಲನಚಿತ್ರಗಳ ಕಲಾತ್ಮಕತೆಯನ್ನು ಅಳೆಯುವ ಮಾಪನಗಳು ಸಾಮಾನ್ಯವಾಗಿ ಚಿತ್ರವೊಂದರ ಅನನ್ಯತೆ, ಸೃಷ್ಟ್ಯಾತ್ಮಕತೆ, ವಸ್ತು ವಿಷಯ, ಅಭಿನಯದ ನಡೆ ಅಥವಾ ಗತಿ, ಚಿತ್ರದ ರಾಚನಿಕತೆ, ಪಾತ್ರಗಳು, ಕ್ಯಾಮೆರಾ ಬಳಕೆ, ಮನರಂಜನೆಯ ಮೌಲ್ಯ, ತಾಂತ್ರಿಕ ಕೌಶಲ, ಚಿತ್ರ ಕೊಡುವ ಸಂದೇಶದ ಮೌಲ್ಯ- ಇಂಥವು ಎಂದು ಹೇಳಲಾಗುತ್ತದೆ. ಈ ನೆಲೆಯಿಂದ ಮಾತ್ರವೇ ಚಿತ್ರವನ್ನು ಅಳೆದಿದ್ದರೆ, ಚಿತ್ರದ ಯಾವ ಭಾಗ, ಎಲ್ಲಿ, ಹೇಗೆ ಅಸಭ್ಯ ಮತ್ತು ಪ್ರಾಪಗ್ಯಾಂಡ ವಾಸನೆಯನ್ನು ಹೇಗೆ ಹೊಡೆಯುತ್ತಿದೆ ಎನ್ನುವುದನ್ನು ಲಪಿಡ್ ವಿವರಿಸಿಲ್ಲ ಏಕೆ? ಅಥವಾ ಅವರ ಮಾತಿನ ಅರ್ಥ, ಮೊದಲಿನಿಂದ ಕೊನೆಯವರೆಗೂ ಈ ಅಂಶಗಳಿಂದಲೇ ಚಿತ್ರ ಕೂಡಿದೆ ಎಂದೇ? ಈ ಪ್ರಶ್ನೆಗಳು ಈಗ ಪ್ರಸ್ತುತ ಆಗುತ್ತವೆ. ಇಲ್ಲವಾದರೆ ವಲ್ಗರ್ ಪ್ರಾಪಗ್ಯಾಂಡ ಎಂದು ಸಾರಾಸಗಟಾಗಿ ಚಿತ್ರವೊಂದನ್ನು ಹಳಿಯುವುದು ಹೊಣೆಗಾರಿಕೆಯ ಲಕ್ಷಣ ಅಲ್ಲ.

ಸಾಮಗ ದತ್ತಾತ್ರಿ, ಬೆಂಗಳೂರು

ನೈಜ ಕಾಳಜಿ ಇರುವವರಿಗೂ ಕಸಿವಿಸಿ

ಕಲಾವಿದರಾಗಿ ಅನುಪಮ್ ಖೇರ್, ಪಲ್ಲವಿ ಜೋಷಿ ಅವರ ಬಗೆಗೆ ಮೆಚ್ಚುಗೆ ಇರುವವರಿಗೂ 'ದಿ ಕಾಶ್ಮೀರ್ ಫೈಲ್ಸ್' ಚಿತ್ರ ನೋಡಿದಾಗ ಸಂಶಯ ಉದ್ಭವವಾಗುತ್ತದೆ. ವಲ್ಗರ್ ಎಂಬುದನ್ನು ಕನ್ನಡದಲ್ಲಿ ಅಸಭ್ಯ ಎನ್ನುವುದು ಸರಳೀಕರಿಸಿದಂತೆ. ಪ್ರಾಪಗ್ಯಾಂಡಿಸ್ಟ್, ಮ್ಯಾನಿಪ್ಯುಲೇಟಿವ್ ಪದಗಳಿಗೂ ವ್ಯಾಪಕ ಅರ್ಥಗಳಿವೆ. ಲಪಿಡ್ ತಮ್ಮ ಅಭಿಪ್ರಾಯಗಳಿಂದ ಹಿಂದೆ ಸರಿದಿಲ್ಲ, ಆದರೆ 'ಕಾಶ್ಮೀರ ಸಮಸ್ಯೆಯ ಬಗೆಗೆ ಹೇಳಿಲ್ಲ, ಅದರ ವಿವರ ತಿಳಿಯಲು ನನಗೆ ಸಾಧ್ಯವಿಲ್ಲ. ವಾಸ್ತವ ಸಂಗತಿಗಳನ್ನು ನಿರಾಕರಿಸುವುದಿಲ್ಲ, ಆದರೆ ಪ್ರಚಾರಕ್ಕೆ ಸಿನಿಮಾದ ವೇಷ ಹಾಕಿ ತರುವುದನ್ನು ಗುರುತಿಸಬಲ್ಲೆ' ಎಂದಿರುವುದು ಗಮನಾರ್ಹ.

ಆಳುವ ಪಕ್ಷದ ಕಾಶ್ಮೀರ್ ಪ್ರಾಜೆಕ್ಟ್ ಜಾರಿಯಲ್ಲಿದೆ. ಆ ರಾಜ್ಯವನ್ನು ವಿಭಜಿಸಿದ ರೀತಿ ಮರ್ಯಾದಾರಹಿತವಾಗಿತ್ತು. ಚಿತ್ರದ ಅಂತಿಮ ಭಾಗದಲ್ಲಿ 'ಹೊಸ ಯುಗದ ಆರಂಭ' ಭಾಷಣದ ತುಣುಕಿದೆ. ಆರಂಭ ಹಾಗೂ ಅಂತ್ಯದ ದೃಶ್ಯಗಳ ಪೇರಿಸುವಿಕೆ ಯೋಜನಾಬದ್ಧವಾಗಿದೆ. ಕಾಶ್ಮೀರ ಪಂಡಿತರ ಸಮಸ್ಯೆಗಳ ಬಗೆಗೆ ನೈಜ ಕಾಳಜಿ ಇರುವವರಿಗೂ ಕಸಿವಿಸಿ ಆಗುತ್ತದೆ. ಕ್ರೂಡ್ ಆ್ಯಂಡ್ ವಯೊಲೆಂಟ್ ಎಂದು ಲಪಿಡ್ ಹೇಳಿರುವುದು ತಪ್ಪಲ್ಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಕಚ್ಚಾಟವೇ ಸಾಧನೆ

'ಕುಚೇಲರ ಕನಸುಗಳು ಹೆಚ್ಚೇನಿಲ್ಲ' ಎಂಬ ರವೀಂದ್ರ ಭಟ್ಟ ಅವರ ಲೇಖನ (ಪ್ರ.ವಾ., ನ. 29) ಸಮಯೋಚಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ರಾಜಕಾರಣಿಗಳು ತಾವು ಜನಪ್ರತಿನಿಧಿಗಳು ಎಂಬುದನ್ನು ಮರೆತು ಭಯೋತ್ಪಾದಕರಂತೆ ನಡೆದುಕೊಳ್ಳುತ್ತಿದ್ದಾರೆ.

ಕಚ್ಚಾಡುವುದು, ಒಬ್ಬರಿಗೊಬ್ಬರು ಕೆಸರು ಎರಚಾಡುವುದು, ಮನಸೋ ಇಚ್ಛೆ ನಾಲಗೆ ಹರಿಯಬಿಡುವುದೇ ಸಾಧನೆ ಎಂದು ತಿಳಿದಿರುವಂತೆ ಇದೆ. ಪ್ರಜೆಗಳು ಇವೆಲ್ಲವನ್ನೂ ಗಮನಿಸುತ್ತಿದ್ದಾರೆ ಎಂಬ ಎಚ್ಚರ ಇರಲಿ. ಪ್ರತಿಯೊಬ್ಬರೂ ಸಂವಿಧಾನದ ಆಶಯಗಳನ್ನು ಅರಿತು ನಡೆದರೆ ಎಲ್ಲರೂ ನೆಮ್ಮದಿಯಿಂದ ಬದುಕಬಹುದು.

ಡಾ. ಎಸ್.ಡಿ.ರಂಗಸ್ವಾಮಿ, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಾತಿ ಗಣತಿ ಇಲ್ಲದ ಸಾಮಾಜಿಕ ನ್ಯಾಯ ಅವೈಜ್ಞಾನಿಕ

ಮೀಸಲಾತಿ ಚುನಾವಣೆಯ ಆಮಿಷವಾಗಿ ಅಸ್ತ್ರವಾಗಿ ಬಳಕೆಯಾಗುವುದು ಕೆಟ್ಟ ಬೆಳವಣಿಗೆ. ಜಾತಿ ಜನಗಣತಿಯ ನಿಜಸ್ವರೂಪ ಗೊತ್ತಿಲ್ಲದೆ ಜನರಿಗೆ ತಪ್ಪು ಮಾಹಿತಿ ನೀಡಿ ಅವರನ್ನು ಮತ್ತು ಜಾತಿಗಳನ್ನು ಚುನಾವಣಾ ದಾಳಗಳಾಗಿ ಬಳಸಿಕೊಳ್ಳುವುದು ಪ್ರಜಾಪ್ರಭುತ್ವಕ್ಕೇ ಮಾರಕವಾದ ನಡೆ. ಮೀಸಲಾತಿ ಅವಮಾನಿತನ ಹಸಿವಿನ ಹಕ್ಕು. ಅದು ಉಂಡವನ ಹುಳಿದೇಗಲ್ಲ, ವಂಚಿತರಾದವರ ಅಸಂಘಟಿತರಾದವರ ಪರಮಾವಕಾಶ

● ಎಸ್.ಜಿ.ಸಿದ್ಧರಾಮಯ್ಯ



ಜಾತಿ ವ್ಯವಸ್ಥೆಯಲ್ಲಿ ಹಸಿವು, ಅವಮಾನ, ಅನಕ್ಷರತೆಯಿಂದ ನರಳುತ್ತಿದ್ದ ಅಸಂಘಟಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಮೀಸಲಾತಿಯು ಅನಿವಾರ್ಯವೂ ಅಗತ್ಯವೂ ಆದ ಸಾಮಾಜಿಕ ನ್ಯಾಯದ ಕ್ರಮವಾಗಿದೆ. ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ವರ್ಗಗಳಿಗೆ ಸಂವಿಧಾನದ 15, 16, 17 ಮತ್ತು 340ನೇ ವಿಧಿಯಲ್ಲಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಈ ಹೊಸ ಅವಕಾಶಗಳಿಗೆ ತೆರೆದುಕೊಳ್ಳತೊಡಗಿದ ಅಕ್ಷರವಂಚಿತ ಸಮುದಾಯಗಳಿಗೆ ಮೀಸಲಾತಿಯು ಭರವಸೆಯ ಬಾಗಿಲನ್ನು ತೆರೆಯಿತು. ಆದರೆ ನಿರೀಕ್ಷಿಸಿದ ಮಟ್ಟದಲ್ಲಿ, ನಿಗದಿಗೊಳಿಸಿದ ಅವಧಿಯಲ್ಲಿ ಅದರ ಅನುಷ್ಠಾನ ಸಾಧ್ಯವಾಗದೆ ಹೋದದ್ದು ಪ್ರಜಾಪ್ರಭುತ್ವದ ದುರಂತ ವ್ಯಂಗ್ಯವೇ ಸರಿ.

ಮೀಸಲಾತಿ ಜಾರಿಗೆ ಬಂದಂದಿನಿಂದಲೂ ದಕ್ಷತೆ, ಗುಣಾತ್ಮಕತೆಯ ಪ್ರಶ್ನೆಗಳನ್ನು ಮುಂದೊಡ್ಡುತ್ತಾ ಅದರ ಫಲಾನುಭವಿಗಳನ್ನು ಹೀಗಳೆಯುತ್ತಾ ಬಂದ ಶ್ರೇಷ್ಠತೆಯ ವ್ಯಸನಮೂಲಿಗಳು ತಮ್ಮ ಹೊಟ್ಟೆಯುರಿಯನ್ನು ಕಾರುತ್ತಲೇ ಬಂದಿದ್ದರು. ಅದರ ಪರಿಣಾಮವೆಂಬಂತೆ ಶೇಕಡ 10ರಷ್ಟು ಮೀಸಲಾತಿಯನ್ನು ಆರ್ಥಿಕವಾಗಿ ಹಿಂದುಳಿದಿರುವ ಸಾಮಾನ್ಯ ವರ್ಗದವರಿಗೆ ಇತ್ತೀಚೆಗೆ ನೀಡಲಾಯಿತು. ಆದರೆ ಮೀಸಲಾತಿಗೆ ವಿರುದ್ಧ ನಡೆ ಇದಾಗಿದೆ.

ಆರ್ಥಿಕವಾಗಿ ಹಿಂದುಳಿದಿರುವಿಕೆಯು ಮೀಸಲಾತಿಯನ್ನು ನೀಡಲು ಮಾನದಂಡವಲ್ಲ. ಬದಲಾಗಿ ಮೀಸಲಾತಿ ಒಂದು ಮಾನವ ಹಕ್ಕು, ಸಮಾನತೆಯ ಸಾಧನೆ, ವಂಚಿತರಿಗೆ ಒಂದು ಪ್ರಾತಿನಿಧ್ಯ, ಎಲ್ಲ ರೀತಿಯ ಪಕ್ಷಪಾತ ಹಾಗೂ ಸಾಮಾಜಿಕ ಬಹಿಷ್ಕಾರಗಳ ವಿರುದ್ಧದ ಒಂದು ಸಾಧನ. ಹೀಗಿರುವಾಗ ಮೀಸಲಾತಿಯ ನೀತಿ ನಿಯಮಗಳನ್ನು ಉಲ್ಲಂಘಿಸಿದಂತೆ ಶೇಕಡ ನಾಲ್ಕರಷ್ಟಿರುವ ಸಂಖ್ಯಾವರ್ಗದವರಿಗೆ ಶೇಕಡ ಹತ್ತರಷ್ಟು ಪ್ರಮಾಣದ ಮೀಸಲಾತಿ ಘೋಷಿಸಿರುವುದು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ಅಪಹಾಸ್ಯ ಮಾಡಿದಂತಿದೆ. ಸಾಮಾಜಿಕ ನ್ಯಾಯದ ಮೂಲತತ್ವಕ್ಕೇ ವಿರುದ್ಧವಾದ ನಡೆ ಇದಾಗಿದೆ. ಮೀಸಲಾತಿಯ ಚರಿತ್ರೆಯಲ್ಲಿ ಯಾವ ಸದ್ದು-ಗದ್ದಲವೂ ಇಲ್ಲದೆ ಜಾರಿಗೆ ಬಂದ ಮೀಸಲಾತಿಯ ಏಕೈಕ ಉದಾಹರಣೆ ಇದಾಗಿದೆ.

ತಮ್ಮ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿಯ ಅನುಪಾತ ಪ್ರಮಾಣವನ್ನು ಹೆಚ್ಚಿಸಿ ಎಂದು ಅರ್ಹ ಜಾತಿಗಳು ಅಧಿಕಾರಯುತವಾಗಿ ಬೀದಿಗಿಳಿದು ಹೋರಾಟ ಮಾಡುತ್ತಿವೆ. ಅವುಗಳ ಕೂಗು, ಆಳುವ ವರ್ಗದ ಜಾಣಕಿವುಡಿಗೆ ಬಲಿಯಾಗಿವೆ. ಸಮಾಜದ ಮುಖ್ಯವಾಹಿನಿಗೇ ಬಾರದಿರುವ ಹಲವು ಅಲೆಮಾರಿ ಸಮುದಾಯಗಳು ಊರು-ಸೂರುಗಳಿಲ್ಲದೆ ಇಂದಿಗೂ ವಿಳಾಸವಿಲ್ಲದವಾಗಿಯೇ ಇವೆ. ಇವುಗಳ ಕುಲಶಾಸ್ತ್ರೀಯ ಅಧ್ಯಯನ ಸರಿಯಾಗಿ ನಡೆದಿಲ್ಲ. ಆದ್ದರಿಂದ ಬಹುನಾಮಿಗಳಾಗಿರುವ ಕೆಲವು ಅಲೆಮಾರಿ ಸಮುದಾಯಗಳನ್ನು ಯಾವ ವರ್ಗಕ್ಕೆ ಸೇರಿಸಬೇಕು ಎಂಬ ಗೊಂದಲವಿದೆ. ಈ ಸಮುದಾಯಗಳಿಗೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ನಾಮವಾಚಕ ಬಳಕೆಯಲ್ಲಿವೆ. ಒಂದೇ ಸಮುದಾಯ ಕೆಲವು ಕಡೆ ಎಸ್‌ಸಿಗೆ ಸೇರಿದ್ದರೆ, ಇನ್ನೊಂದು ಕಡೆ ಎಸ್‌ಟಿಗೆ ಸೇರ್ಪಡೆಯಾಗಿದೆ.

ಇಂಥ ಸಮುದಾಯಗಳ ಹಕ್ಕಿನ ಹೋರಾಟ ನಡೆದೇ ಇದೆ. ಇವು ಅಸಂಘಟಿತ ಮತ್ತು ಶಿಕ್ಷಣವಂಚಿತ ಸಮುದಾಯಗಳು. ಹೀಗಿರುವಾಗ ಉದ್ಯೋಗದ ಮಾತು ದೂರವೇ ಉಳಿಯಿತು. ಈಗಲೂ ಹಾದಿಬೀದಿಗಳಲ್ಲಿ, ರಸ್ತೆ ಬದಿಗಳಲ್ಲಿ ಕೋಲೆಬಸವ, ಗೂಡೆಮಾರಮ್ಮನನ್ನು ಹೊತ್ತು ಬಿಕ್ಷೆ ಬೇಡುವ ಈ ಕೆಲವು ಸಮುದಾಯಗಳಿಗೆ ಯಾವ ಮಠವೂ ಇಲ್ಲ, ಜಗದ್ಗುರುವೂ ಇಲ್ಲ. ಹೀಗಾಗಿ ಇವರು ಆಟಕ್ಕೂ ಇಲ್ಲದ, ಲೆಕ್ಕಕ್ಕೂ ಇಲ್ಲದ ಕಿರು ಸಮುದಾಯಗಳಾಗಿ ಉಳಿದಿವೆ. ಇವರ ಕೂಗು ಅರಣ್ಯರೋದನವಾಗಿದೆ.

ಇಂಥ ಕೆಲವು ಅಲೆಮಾರಿ ಸಮುದಾಯಗಳ ನಾಮಸಾದೃಶ್ಯದ ಮೇಲುಜಾತಿಗಳ ಒಳಪಂಗಡದವರು ಇವರ ಊಟದ ತಟ್ಟೆಗೆ ಕೈಹಾಕಿದಂತೆ, ಇರುವ ಅಲ್ಪಸ್ವಲ್ಪ ಮೀಸಲಾತಿಯನ್ನೂ ಲಪಟಾಯಿಸುತ್ತಿದ್ದಾರೆ. ಈ ವಂಚನೆಯ ಹಗಲು ದರೋಡೆಯನ್ನು ಆಡಳಿತವು ಜಾಣ ಕುರುಡಿನಲ್ಲಿ ಕಡೆಗಣಿಸಿದೆ.

ಇಷ್ಟೆಲ್ಲ ಅಧ್ವಾನಗಳು ಮೀಸಲಾತಿಯಿಂದ ವಂಚಿತರಾಗಿರುವ ಅರ್ಹರ ಅಂಗಳದ ಸಮಸ್ಯೆಗಳಾಗಿವೆ. ಸಮಸ್ಯೆಗಳು ಹೀಗಿರುವಾಗ ಶೇಕಡ ಹತ್ತರ ಮೀಸಲಾತಿ ಘೋಷಣೆಯಾದ ಮೇಲೆ ತಮ್ಮ ದನಿ ಎತ್ತರಿಸಿದಂತೆ ಬಲಿಷ್ಠ ಜಾತಿಗಳು ತಮ್ಮ ತಮ್ಮ ಜಾತಿಗಳ ಜಗದ್ಗುರುಗಳನ್ನು ಬೀದಿಗಿಳಿಸಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳಿಗೆ ಸೇರಿಸಬೇಕೆಂಬ ಅಹವಾಲುಗಳನ್ನು ಕೂಗುತ್ತಿವೆ. ಈ ಕೂಗು ಎಷ್ಟು ಜೋರಾಗಿದೆಯೆಂದರೆ ಕೆಲವು ಮಠಾಧೀಶರು ತಮ್ಮ ಆಗ್ರಹಕ್ಕೆ ದಿನಗಳ ಗಡುವು ಕೊಡತೊಡಗಿದ್ದಾರೆ. ಚುನಾವಣೆ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಇದು ಮತ ಗಳಿಕೆಯ ಗೇಮ್ ಪ್ಲೇ ಆಗಿಯೂ ಬ್ಲಾಕ್‌ಮೇಲ್ ತಂತ್ರವಾಗಿಯೂ ಬೆಳೆಯುತ್ತದೆ. ಮತ್ತೂ ಮುಂದುವರಿದಂತೆ ಕೆಲವು ಮಠಗಳು ನೇರವಾಗಿ ಜಾತಿಯ ಮತಗಳನ್ನು ತಾವು ಗುತ್ತಿಗೆ ತೆಗೆದುಕೊಂಡಂತೆ ಮಾತನಾಡಗೊಡಗಿವೆ. ಧಾರ್ಮಿಕ, ಸಾಂಸ್ಕೃತಿಕ ಮುಖವಾಣಿಯಾಗಬೇಕಾಗಿದ್ದ ಮಠಗಳು ಮಠಾಧೀಶರು ರಾಜಕೀಯ ಪುಡಾರಿಗಳಂತೆ ಮಾತನಾಡತೊಡಗಿರುವುದು ಪ್ರಜಾಪ್ರಭುತ್ವದ ದುರಂತವೇ ಸರಿ.

ಶೇ 10ರ ಮೀಸಲಾತಿಗಾಗಿ ಸಂವಿಧಾನಕ್ಕೆ 103ನೇ ತಿದ್ದುಪಡಿ ತರುವುದಕ್ಕೆ ಮುಂಚೆ ಸರ್ಕಾರ ಯಾವುದೇ ಅಧ್ಯಯನವನ್ನೂ ನಡೆಸಲಿಲ್ಲ. ಮಾಹಿತಿಯನ್ನೂ ಸಂಗ್ರಹಿಸಲಿಲ್ಲ. ಸಂಸತ್ತಿನ ಎಲ್ಲ ಸಂಪ್ರದಾಯಗಳನ್ನು ಬದಿಗೊತ್ತಿ ಒಂದೇ ದಿನದಲ್ಲಿ ಲೋಕಸಭೆಯಲ್ಲಿ ಮತ್ತೆ ಮರುದಿವಸ ರಾಜ್ಯಸಭೆಯಲ್ಲಿ ತಿದ್ದುಪಡಿಗಾಗಿ ಅಂಗೀಕರಿಸಲಾಯಿತು. ಮೂರನೆಯ ದಿನವೇ ರಾಷ್ಟ್ರಪತಿಯವರು ತಿದ್ದುಪಡಿಗೆ ಅಂಕಿತವನ್ನೂ ಹಾಕಿದರು. ಬಹುಪಾಲು ವಿರೋಧ ಪಕ್ಷಗಳು ಚರ್ಚೆಯನ್ನೇ ನಡೆಸಲಿಲ್ಲ. ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರಗಳನ್ನು ಸೂಚಿಸುವಲ್ಲಿ ವಿಫಲವಾದವು. ಹೀಗಾಗಿ, ಒಟ್ಟಾರೆ ಈ ತಿದ್ದುಪಡಿ ಪ್ರಕ್ರಿಯೆ ಸಂಸದೀಯ ಪದ್ಧತಿಗೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಆರೋಗ್ಯಕರ ಬೆಳವಣಿಗೆಯಲ್ಲ.

1931ರಲ್ಲಿ ಆದ ಜಾತಿವಾರು ಜನಗಣತಿ ಬಿಟ್ಟರೆ ದೇಶದಲ್ಲಿ ಮತ್ತೆ ಜಾತಿ ಜನಗಣತಿ ನಡೆದಿಲ್ಲ. ಮೀಸಲಾತಿಗೆ ಸಂಬಂಧಿಸಿದ ವಿಚಾರದಲ್ಲಿ ನಿಖರವಾದ ಜಾತಿ ಜನಗಣತಿಯ ಬಗ್ಗೆ ನ್ಯಾಯಾಲಯವೂ ಹಲವು ಬಾರಿ ಪ್ರಶ್ನೆಗಳನ್ನು ಎತ್ತಿದೆ.

ಕರ್ನಾಟಕದಲ್ಲಿ 2005ರಲ್ಲಿ ಸಮ್ಮಿಶ್ರ ಸರ್ಕಾರವಿದ್ದಾಗ ಆಗಿನ ಹಣಕಾಸು ಸಚಿವರಾಗಿದ್ದ ಸಿದ್ದರಾಮಯ್ಯ ಅವರು ಕೆಲವು ಕೋಟಿ ರೂಪಾಯಿಯನ್ನು ಜಾತಿ ಜನಗಣತಿಗಾ ಮೀಸಲಿರಿಸಿದ್ದರು. ಆದರೆ, ಆ ಬಜೆಟ್‌ನ ಘೋಷಣೆ ಬದಲಾದ ಸರ್ಕಾರದಲ್ಲಿ ಕಾರ್ಯರೂಪಕ್ಕೆ ಬರಲಿಲ್ಲ. 2013ರಲ್ಲಿ ಅವರೇ ಮುಖ್ಯಮಂತ್ರಿಯಾದಾಗ ಮರಳಿ ಅದು ಜೀವ ಪಡೆದುಕೊಂಡಿತು. ಕಾಂತರಾಜು ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿ ಅದು ಕಾರ್ಯೋನ್ಮುಖವಾಯಿತು. ಸಮಿತಿಯು 2018ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತು. ವರದಿ ಸಲ್ಲಿಕೆಯಾಗಿ ಇಷ್ಟು ವರ್ಷಗಳಾದರೂ ಅದನ್ನು ಚರ್ಚೆಗೆ ಎತ್ತಿಕೊಳ್ಳುವ, ಅನುಷ್ಠಾನಕ್ಕೆ ಮುಂದಾಗುವ ಪ್ರಯತ್ನವನ್ನು ಯಾವುದೇ ಸರ್ಕಾರ ಮಾಡಿಲ್ಲ. ವರದಿ ಪ್ರಕಟಗೊಂಡರೆ ವಾಸ್ತವ ಸ್ಥಿತಿ ಏನೆಂಬುದು ಗೊತ್ತಾಗುತ್ತದೆ. ಅದರಿಂದಾಗಿ ಸಾಮಾಜಿಕ ನ್ಯಾಯದ ವಿತರಣೆಗೆ ಒಂದು ಸ್ಪಷ್ಟ, ನಿಖರ, ನಿರ್ದಿಷ್ಟ ಲೆಕ್ಕ ಸಿಕ್ಕಂತಾಗುತ್ತದೆ. ಅದನ್ನು ಬಿಟ್ಟು ಕಲ್ಪಿತ ಪ್ರಮಾಣದಲ್ಲಿ ಜಾತಿಗಳು ರಾಜಕೀಯ ಲಾಭ ಪಡೆಯುತ್ತಿರುವುದು, ಪಡೆಯಲು ಹೋರಾಟಕ್ಕಿಳಿದಿರುವುದು ನಿಜವಾದ ವಂಚಿತ ಸಮುದಾಯಗಳಿಗೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಎಸಗುವ ಘೋರ ಅಪರಾಧವಾಗುತ್ತದೆ.

ಸದ್ಯದ ಸ್ಥಿತಿಯಲ್ಲಿ ದೇಶದ ಉದ್ಯೋಗ ಸೃಷ್ಟಿಯಲ್ಲಿ ಶೇ 2ರಷ್ಟು ಸರ್ಕಾರಿ ಕ್ಷೇತ್ರ, ಉಳಿದ ಶೇ 98ರಷ್ಟು ಖಾಸಗಿ ಕ್ಷೇತ್ರದ್ದು. ಮೀಸಲಾತಿ ಸರ್ಕಾರಿ ಕ್ಷೇತ್ರದ ಕೇವಲ ಶೇ 2ರಷ್ಟು ಪ್ರಮಾಣಕ್ಕೆ ಮಾತ್ರ ಅನ್ವಯಿಸುತ್ತದೆ. ಮಿಕ್ಕ ಶೇ 98ರಷ್ಟರ ಖಾಸಗಿ ವಲಯಕ್ಕೆ ಇದು ಅನ್ವಯಿಸುವುದಿಲ್ಲ. ಸೇನೆ, ನ್ಯಾಯಾಲಯಗಳು, ರಾಜ್ಯಸಭೆ ವಿಧಾನ ಪರಿಷತ್ತು, ಮಂತ್ರಿ ಮಂಡಳ, ನಿಗಮಗಳು, ಪ್ರಾಧಿಕಾರಗಳು, ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿಯೂ ಮೀಸಲಾತಿ ಅನ್ವಯಿಸುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಮಂಜೂರಾದ ಲಕ್ಷಗಟ್ಟಲೆ ಉದ್ಯೋಗಗಳು ಖಾಲಿ ಬಿದ್ದಿವೆ. ಗುತ್ತಿಗೆ ಪದ್ಧತಿ ಹಾಗೂ ಹೊರಗುತ್ತಿಗೆ ಪದ್ಧತಿಯನ್ನು ಜಾರಿಗೆ ತರುವುದರ ಮುಖೇನ ಇರುವ ಮೀಸಲಾತಿಯ ಉಲ್ಲಂಘನೆ ಆಗುತ್ತಿದೆ, ಮೀಸಲಾತಿಯನ್ನು ವಂಚಿಸಲಾಗುತ್ತಿದೆ.

ಪ್ರತಿವರ್ಷ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸಾರ್ವಜನಿಕ ವಲಯದಲ್ಲಿ ಸುಮಾರು 7 ಲಕ್ಷ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಇವುಗಳ ಪೈಕಿ ಶೇಕಡ ಐವತ್ತರಷ್ಟು ಅಂದರೆ 3 ಲಕ್ಷ 50 ಸಾವಿರ ಉದ್ಯೋಗಗಳು ಸಾಮಾನ್ಯ ವರ್ಗದ ಪಾಲಿಗೆ ಬರುತ್ತವೆ. ಈ 3 ಲಕ್ಷ 50 ಸಾವಿರದಲ್ಲಿ ಶೇಕಡ 10ರಷ್ಟು ಅಂದರೆ 35 ಸಾವಿರ ಉದ್ಯೋಗ ಅವಕಾಶಗಳು ಸವರ್ಣೀಯ ಜಾತಿಗಳಲ್ಲಿರುವ ಆರ್ಥಿಕವಾಗಿ ಹಿಂದುಳಿದವರಿಗೆ ಲಭ್ಯವಾಗುತ್ತವೆ. ಇವುಗಳನ್ನು ಇಡೀ ದೇಶದ ಜನರಿಗೆ ನೀಡಲಾಗುತ್ತದೆ. ಆದರೆ ದೇಶದಲ್ಲಿ ಇಂದು ಸುಮಾರು 7 ಕೋಟಿ ನಿರುದ್ಯೋಗಿಗಳು ಇದ್ದಾರೆ. ಪ್ರತಿ ತಿಂಗಳು ಸುಮಾರು 13 ಲಕ್ಷ ಉದ್ಯೋಗಗಳು ಸೃಷ್ಟಿಯಾಗಬೇಕು. ಆದರೆ ಕಳೆದ 3 ವರ್ಷಗಳಲ್ಲಿ 2 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಕಳೆದುಕೊಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಶೇ 10ರಷ್ಟು ಮೀಸಲಾತಿ ಸವರ್ಣೀಯ ಜಾತಿಗಳಲ್ಲಿರುವ ಆರ್ಥಿಕವಾಗಿ ಹಿಂದುಳಿದವರ ಸಮಸ್ಯೆಗೆ ಪರಿಹಾರವೆನ್ನಬಹುದೇ?

ಮೀಸಲಾತಿ ಚುನಾವಣೆಯ ಆಮಿಷವಾಗಿ ಅಸ್ತ್ರವಾಗಿ ಬಳಕೆಯಾಗುವುದು ಕೆಟ್ಟ ಬೆಳವಣಿಗೆ. ಜಾತಿ ಜನಗಣತಿಯ ನಿಜಸ್ವರೂಪ ಗೊತ್ತಿಲ್ಲದೆ ಜನರಿಗೆ ತಪ್ಪು ಮಾಹಿತಿ ನೀಡಿ ಅವರನ್ನು ಮತ್ತು ಜಾತಿಗಳನ್ನು ಚುನಾವಣಾ ದಾಳಗಳಾಗಿ ಬಳಸಿಕೊಳ್ಳುವುದು ಪ್ರಜಾಪ್ರಭುತ್ವಕ್ಕೇ ಮಾರಕವಾದ ನಡೆ. ಮೀಸಲಾತಿ ಅವಮಾನಿತನ ಹಸಿವಿನ ಹಕ್ಕು. ಅದು ಉಂಡವನ ಹುಳಿದೇಗಲ್ಲ, ವಂಚಿತರಾದವರ ಅಸಂಘಟಿತರಾದವರ ಪರಮಾವಕಾಶ. ಮೇಲರಿಮೆಯ ಬಲಿಷ್ಠರ ಠೇಂಕಾರವಲ್ಲ. ಖಾಸಗಿ ಉದ್ಯೋಗ ಸಂಸ್ಥೆಗಳಲ್ಲಿ ಮೀಸಲಾತಿ ನೀತಿಯನ್ನು ಜಾರಿಗೊಳಿಸದೆ ಕೇವಲ ಶೇಕಡ 2ರಷ್ಟು ಉದ್ಯೋಗಗಳಲ್ಲಿ ಮೀಸಲಾತಿ ಹಂಚಿಕೆಯ ಮೂಲಕ ಸಾಮಾಜಿಕ ನ್ಯಾಯದ ಕನಸು ಕಾಣುವುದು ಅತಾರ್ಕಿಕವೂ ಅವೈಜ್ಞಾನಿಕವೂ ಆದುದಾಗಿದೆ.

ಲೇಖಕ: ಸಾಹಿತಿ, ಚಿಂತಕ

ಮೀಸಲಾತಿ ಚರ್ಚೆ 4

‘ಎಸ್‌ಟಿಗೆ ಸೇರಿಸುವ ಬೇಡಿಕೆಗೆ ಅರ್ಥವಿದೆ’

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಳುತ್ತಿರುವ ನಮ್ಮ ಬೇಡಿಕೆಯಲ್ಲಿ ಅರ್ಥವಿದೆ. ಕಲಬುರಗಿ, ಯಾದಗಿರಿ ಮತ್ತು ಕೊಡುಗು ಜಿಲ್ಲೆಯಲ್ಲಿ ನಮ್ಮ ಸಮುದಾಯದವರು ಎಸ್‌ಟಿ ಪಟ್ಟಿಯಲ್ಲಿದ್ದಾರೆ. ಅದನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಬೇಕು ಎಂಬುದಷ್ಟೇ ನಮ್ಮ ಒತ್ತಾಯ. ಕುರುಬ ಸಮುದಾಯವನ್ನು ಇಬ್ಭಾಗ ಮಾಡಿ ರಾಜ್ಯ ಸರ್ಕಾರ ಆಡಳಿತ ನಡೆಸುತ್ತಿದೆ. ಕುರುಬ ಸಮುದಾಯ ಎಸ್‌ಟಿ ಪಟ್ಟಿಗೆ ಸೇರುವುದರಿಂದ ಈಗಾಗಲೇ ಆ ಪಟ್ಟಿಯಲ್ಲಿರುವ ಬೇರೆ ಸಮುದಾಯಗಳಿಗೆ ಯಾವುದೇ ಅನ್ಯಾಯ ಆಗುವುದಿಲ್ಲ. ಪ್ರವರ್ಗ 2ಎ ಅಡಿಯಲ್ಲಿ ಶೇ 18ರಷ್ಟು ಮೀಸಲಾತಿ ಪಡೆಯುತ್ತಿದ್ದೇವೆ. ಅಷ್ಟೇ ಪ್ರಮಾಣದ ಮೀಸಲಾತಿಯನ್ನು ಎಸ್‌ಟಿಗೆ ವರ್ಗಾಯಿಸಿಕೊಡಬೇಕು ಎಂಬುದು ನಮ್ಮ ಬೇಡಿಕೆ. ಕಾಂತರಾಜು ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಜಾತಿ ಸಮೀಕ್ಷೆ ಸರ್ಕಾರದ ಕೈನಲ್ಲೇ ಇದೆ. ಅದರ ಆಧಾರದಲ್ಲಿ ಜಾತಿಗಳ ವರ್ಗೀಕರಣ ಮಾಡಲು ಅವಕಾಶ ಇದೆ. ಇದರ ನಡುವೆ ಕುಲಶಾಸ್ತ್ರೀಯ ಅಧ್ಯಯನವನ್ನೂ ನಡೆಸಲಾಗುತ್ತಿದೆ. ಇವೆಲ್ಲವನ್ನೂ ಪಡೆದು ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕು. ಬಜೆಟ್ ಅಧಿವೇಶನದಲ್ಲಿ ಸರ್ಕಾರ ಈ ನಿರ್ಧಾರ ಕೈಗೊಳ್ಳದಿದ್ದರೆ ಉಗ್ರ ಹೋರಾಟ ನಡೆಯಲಿದೆ.

ಬಿ.ಸುಬ್ರಹ್ಮಣ್ಯ, ಅಧ್ಯಕ್ಷ, ಕರ್ನಾಟಕ ಪ್ರದೇಶ ಕುರುಬರ ಸಂಘ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಶಾಲಾ ವಿದ್ಯಾರ್ಥಿಗಳ ಬ್ಯಾಗ್‌ಗಳಲ್ಲಿ ಕಾಂಡೋಮ್, ಸಿಗರೇಟ್ ಇತರೆ ವಸ್ತುಗಳು ಪತ್ತೆ ಆಗಿರುವುದು ಎಚ್ಚರಿಕೆಯ ಗಂಟೆಯಾಗಿದೆ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

‘ಶೋಷಿತರಿಗೆ ಮಾಡುವ ದ್ರೋಹ’

ಮೀಸಲಾತಿ ಎನ್ನುವುದು ಶೋಷಿತರು ಮತ್ತು ಕಟ್ಟಕಡೆಯ ಜನರನ್ನು ಮೇಲೆತ್ತಲು ಹಾಗೂ ಸಮಾನತೆ ತರಲು ಪ್ರಮುಖ ಪಾತ್ರ ವಹಿಸುತ್ತಿದೆ. ನಾಗರಿಕ ಸಮಾಜಕ್ಕೆ ಇದೊಂದು ದೊಡ್ಡ ಕೊಡುಗೆ. ಮುಂದುವರಿದವರು ಕೆಳಗೆ ಬಂದು ಮೀಸಲಾತಿ ಕೇಳುವುದು ಸರಿಯಲ್ಲ. ಇದು ಶೋಷಿತರಿಗೆ ಕೊಡುವ ತೊಂದರೆಯಾಗಿದೆ. ಹಿಂದಿನಿಂದಲೂ ಅಸಮಾನತೆಯಲ್ಲಿ ಸಿಲುಕಿದ್ದವರನ್ನು ಮುಖ್ಯ ವೇದಿಕೆಗೆ ತರುವ ಪ್ರಯತ್ನವನ್ನು ಅಸಮರ್ಥಗೊಳಿಸಿದಂತೆ ಆಗಲಿದೆ. ಸಮಾನತೆಯ ಕಡೆಗಿನ ಹೆಜ್ಜೆಯನ್ನು ಅವ್ಯವಸ್ಥೆಗೊಳಿಸುವುದು ಶೋಷಿತರಿಗೆ ಮಾಡುವ ದ್ರೋಹ.

ವಿಖ್ಯಾತಾನಂದ ಸ್ವಾಮೀಜಿ, ಆರ್ಯ ಈಡಿಗ ಮಹಾ ಸಂಸ್ಥಾನ, ಸೋಲೂರು

‘ಹಿಂದುಳಿದವರು ಮೀಸಲಾತಿ ಕೇಳುವುದರಲ್ಲಿ ತಪ್ಪೇನು?’



ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರಬಾರದು ಎಂಬುದು ಕಾನೂನು. ಆದರೆ ಸರ್ಕಾರಗಳು ಈಗ ಮೀಸಲಾತಿ ಹೆಚ್ಚಳ ಮಾಡುತ್ತಿವೆ. ಎಸ್‌ಸಿ, ಎಸ್‌ಟಿ ಪಟ್ಟಿಗೆ ಜಾತಿಗಳನ್ನು ಸೇರಿಸಲಾಗುತ್ತಿದೆ. ನಮ್ಮ ಉಪ್ಪಾರ ಸಮುದಾಯ ಕೂಡ ಎಸ್‌ಟಿ ಪಟ್ಟಿಗೆ ಸೇರ್ಪಡೆಗಾಗಿ ಬೇಡಿಕೆ ಮುಂದಿಟ್ಟಿದೆ. ಸಮಾಜದ ಕುಲಶಾಸ್ತ್ರೀಯ ಅಧ್ಯಯನ ನಡೆಯುತ್ತಿದ್ದು, ಅದರ ವರದಿ ಬಂದು ಸರ್ಕಾರ ಅಂಗೀಕರಿಸಬೇಕಿದೆ. ಆ ಬಳಿಕ ಹೋರಾಟಕ್ಕೆ ಹೊಸ ದಿಕ್ಕು ಸಿಗಲಿದೆ.

ಸದ್ಯ, ಉಪ್ಪಾರ ಸೇರಿದಂತೆ ಹಲವು ಜಾತಿಗಳು ಪ್ರವರ್ಗ-1ರ ಅಡಿಯಲ್ಲಿ ಬರುತ್ತವೆ. ನಮ್ಮ ಸಮುದಾಯವನ್ನೇ ತೆಗೆದುಕೊಂಡರೆ, ಉಪ್ಪಾರರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ತುಂಬಾ ಹಿಂದೆ ಉಳಿದಿದ್ದಾರೆ. ಡಿ. ದೇವರಾಜ ಅರಸು ಕಾಲದಲ್ಲೇ ಉಪ್ಪಾರರು ಎಸ್‌ಸಿ/ಎಸ್‌ಟಿ ಪಟ್ಟಿಗೆ ಸೇರ್ಪಡೆಯಾಗಬೇಕಿತ್ತು. ಆದರೆ, ಆಗಿರಲಿಲ್ಲ. ವೀರಪ್ಪ ಮೊಯಿಲಿ ನೇತೃತ್ವದ ಸರ್ಕಾರ ಪ್ರವರ್ಗ-1ಕ್ಕೆ ಸೇರ್ಪಡೆಗೊಳಿಸಿತು. ಈಗ ಪ್ರಬಲ ಜಾತಿಗಳೆಲ್ಲ ಮೀಸಲಾತಿ ಪಟ್ಟಿಯಲ್ಲಿ ಸ್ಥಾನಮಾನ ಕೇಳುತ್ತಿರುವಾಗ ಹಿಂದುಳಿದ ವರ್ಗಗಳು ಕೇಳುವುದರಲ್ಲಿ ತಪ್ಪಿದೆಯೇ? ಉಪ್ಪಾರ ಸೇರಿದಂತೆ ಇನ್ನಿತರ ಹಿಂದುಳಿದ ಜಾತಿಗಳನ್ನು ಎಸ್‌ಸಿ/ಎಸ್‌ಟಿ ಪಟ್ಟಿಗೆ ಸೇರ್ಪಡೆಗೊಳಿಸಲು ಸಾಧ್ಯವಾಗದಿದ್ದರೆ, ಪ್ರವರ್ಗ-1ರ ಮೀಸಲಾತಿ ಪ್ರಮಾಣವನ್ನೇ ಹೆಚ್ಚಳ ಮಾಡಬೇಕು. ಇದರಿಂದ ಬಡವರಿಗೆ ಅನುಕೂಲವಾಗುತ್ತದೆ.

ಸಿ.ಪುಟ್ಟರಂಗಶೆಟ್ಟಿ, ಶಾಸಕ, ಚಾಮರಾಜನಗರ

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಒಂದೇ ಕಾಲಿನ ನಡಿಗೆ

ಒಂದು ದಿನವೌಂತಣಕೆ, ಉಪವಾಸಕಿನ್ನೊಂದು |
ಸಂದಣಿಯ ದಿನವೊಂದು, ಬಿಡುವು ದಿನವೊಂದು
ಹೊಂದರ್‍ದೊಡುಭಯಮುಂ ಜೀವಕದು ಸುಖಚಲನ
ಒಂದು ಕಾಲ್ನಡೆ ಸುಖವೆ ? - ಮಂಕುತಿಮ್ಮ || 769

ಪದ-ಅರ್ಥ: ದಿನವೌತಣಕೆ = ದಿನ + ಔತಣಕೆ, ಉಪವಾಸಕಿನ್ನೊಂದು = ಉಪವಾಸಕೆ + ಇನ್ನೊಂದು, ಸಂದಣಿಯ = ಒತ್ತಡದ, ಹೊಂದರ್‍ದೊಡುಭಯಮುಂ = ಹೊಂದರ್‍ದೊಡೆ(ಹೊಂದಿದರೆ) + ಉಭಯಮುಂ(ಎರಡನ್ನೂ), ಕಾಲ್ನಡೆ = ಕಾಲುನಡೆ.

ವಾಚ್ಯಾರ್ಥ: ಒಂದು ದಿನ ಔತಣದ ಸಂಭ್ರಮ, ಒಂದು ದಿನ ಉಪವಾಸ. ಒಂದು ಒತ್ತಡದ ದಿನ ಮತ್ತೊಂದು ಬಿಡುವಿನ ದಿನ. ಹೀಗೆ ಎರಡೂ ಹೊಂದಿಕೊಂಡಾಗಲೇ ಜೀವಕ್ಕೆ ಸುಖ. ಒಂದೇ ಕಾಲಿನ ಮೇಲೆ ನಡೆಯುವುದು ಸುಲಭವೇ, ಸುಖವೇ?

ವಿವರಣೆ: ಬದುಕೊಂದು ತೆರಪಿಲ್ಲದ ಜೋಕಾಲಿ. ಮೇಲೆ ಹೋಯಿತು ಎಂದುಕೊಳ್ಳುವಷ್ಟರಲ್ಲಿ ಕೆಳಗೆ ಬಂದಿರುತ್ತದೆ. ಕೆಳಗೆ ಬಂತು ಎಂದು ನೋಡುವಾಗ ಅದು ಮೇಲಿದೆ. ಇದು ವ್ಯಕ್ತಿಗೂ ಸತ್ಯ, ಜಗತ್ತಿಗೂ ಸತ್ಯ, ರೋಮ್ ಆಧಿಪತ್ಯ ಶಕ್ತಿಯ, ಖ್ಯಾತಿಯ ಉತ್ತುಂಗಕ್ಕೇರಿತು. ಅದರೊಂದಿಗೆ ಅದನ್ನು ನಡೆಸುವವರ ಅಮಲೂ ಏರಿತು. ಒಂದೇ ದಶಕದಲ್ಲಿ ನೆಲಕ್ಕೆ ಬಿದ್ದು ನಿರ್ನಾಮವಾಯಿತು. ಮತ್ತೊಂದು ಸಾಮ್ರಾಜ್ಯ ಎದ್ದು ನಿಂತಿತು. ತನ್ನ ಅವಧಿ ಮುಗಿದ ಮೇಲೆ ಮರೆಯಾಯಿತು. ಹೀಗೆ ತೆರೆ ಏಳುತ್ತದೆ, ಮೇಲೇರಿ ಮತ್ತೆ ಇಳಿಯುತ್ತದೆ. ಮೇಲೇರಿದಾಗ ಸಂತೋಷದ ಔತಣವಿದ್ದಂತೆ. ಕೆಳಗೆ ಇಳಿದಾಗ ಉಪವಾಸದ ಮನಸ್ಥಿತಿ. ಈಗ ಅಮೇರಿಕೆಯ ಅಧ್ಯಕ್ಷರಾಗಿರುವ ಜೋ ಬೈಡೆನ್ ಅವರ ಬದುಕನ್ನು ಗಮನಿಸಿದರೆ ಅವರು ಹೇಗೆ ಔತಣ ಮತ್ತು ಉಪವಾಸದ ದಿನಗಳನ್ನು ಸಮತ್ವದಿಂದ ನೋಡಿ, ಕೊನೆಗೆ ಈ ಎತ್ತರಕ್ಕೇರಿದರು ಎಂಬುದು ತಿಳಿದೀತು. ಅತ್ಯಂತ ಕಿರಿಯ ವಯಸ್ಸಿಗೇ ರಾಜಕೀಯ ಪ್ರವೇಶಿಸಿದ ಬೈಡೆನ್ ಕ್ಷಿಪ್ರಗತಿಯಲ್ಲಿ ಮೇಲೇರಿ 1972 ರಲ್ಲಿ ಅತ್ಯಂತ ಪ್ರಬಲ ರಿಪಬ್ಲಿಕನ್ ಅಭ್ಯರ್ಥಿಯನ್ನು ಸೋಲಿಸಿ ಕೇವಲ ಮೂವತ್ತು ವರ್ಷಕ್ಕೇ ಸೆನೆಟರ್ ಆದರು. ಆಗ ಎಲ್ಲರೂ ಬೈಡೆನ್ ನಲವತ್ತು ವರ್ಷವಾಗುವುದರೊಳಗೆ ರಾಷ್ಟ್ರಪತಿಯಾಗುತ್ತಾರೆ ಎಂದು ಭವಿಷ್ಯ ನುಡಿದಿದ್ದರು. ಆಗ ಅವರು ಕಂಡದ್ದು ಸಂಭ್ರಮದ ಶಿಖರ. ಆದರೆ ಮುಂದೆರಡು ವಾರದಲ್ಲಿಯೇ ಅವರ ಪತ್ನಿ ಮತ್ತು ಪುತ್ರಿ ಅಪಘಾತಕ್ಕೆ ಬಲಿಯಾಗಿ ಅವರ ಇಬ್ಬರು ಪುತ್ರರು ತೀವ್ರ ಗಾಯಗೊಂಡರು. ಅದು ಬೈಡೆನ್‌ರನ್ನು ನಿರಾಸೆಯ ಕೂಪಕ್ಕೆ ತಳ್ಳಿತು. ಅದರಿಂದ ಪಾರಾಗಿ ಹೊರಬಂದ ಬೈಡೆನ್ ಮುಂದೆ 2004 ರ ವರೆಗೆ ಸೋಲನ್ನೇ ಕಾಣಲಿಲ್ಲ. 1987 ರಲ್ಲಿಯೇ ಅಧ್ಯಕ್ಷ ಹುದ್ದೆಗೆ ಸ್ಪರ್ಧೆ. ಖಂಡಿತ ಆಯ್ಕೆಯಾಗುತ್ತಾರೆ ಎಂಬ ಭರವಸೆಯ ಅಲೆಯಲ್ಲಿ ಸಂತೋಷದಿಂದ ತೇಲಿದರು. ಆದರೆ ಯಾವುದೋ ಉತ್ಸಾಹದಲ್ಲಿ ಕೃತಿಚೌರ್ಯ ಮತ್ತಿತರ ವಿಷಯಗಳ ಮೇಲೆ ವಿವಾದಾತ್ಮಕ ಹೇಳಿಕೆಗಳಿಂದ ತೀವ್ರ ಮುಖಭಂಗ, ಅಪಮಾನ ಕುದಿದು ಸಂಕಟಪಟ್ಟರು ಬೈಡೆನ್. ಎಲ್ಲ ಏಳು ಬೀಳುಗಳ ನಡುವೆ ಜೀವನೋತ್ಸಾಹವನ್ನು ಬಿಡದೆ ಹೋರಾಡಿ ಕೊನೆಗೆ ಉತ್ತುಂಗವನ್ನು ತಲುಪಿದರು. ಕಗ್ಗ ಈ ಮಾತನ್ನು ಹೇಳುತ್ತದೆ.

ಒಂದು ದಿನ ಸಂತೋಷದ ಔತಣ. ಮತ್ತೊಂದು ದಿನ ವೈಫಲ್ಯದ ಉಪವಾಸ. ಒಂದು ದಿನ ಬಿಡುವಿಲ್ಲದ ಜವಾಬ್ದಾರಿ, ಮತ್ತೊಂದು ದಿನ ಯಾವ ಕೆಲಸವೂ ಇಲ್ಲದ ವಿರಾಮ. ಇವೆರಡೂ ಸೇರಿ ಜೀವನದ ಚಲನೆಗೆ ಸುಖ ಕೊಡುತ್ತವೆ. ದು:ಖವೇ ಇಲ್ಲದಿದ್ದರೆ ಸುಖಕ್ಕೇನು ಅರ್ಥ? ಬರೀ ದುಃಖವೇ ಜೀವನವಾದರೆ ಬದುಕಿಗೇನು ಅರ್ಥ? ಯಾವುದೊಂದು ಇಲ್ಲದಿದ್ದರೆ, ಅದು ಒಂದೇ ಕಾಲಿನ ನಡಿಗೆ ಇದ್ದಂತೆ. ಅದು ಸುಖವೂ ಅಲ್ಲ, ಸೌಭಾಗ್ಯವೂ ಅಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಡಿಸೆಂಬರ್ 2, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ದಶಮಿ ಗಂ. 29-40 ನಕ್ಷತ್ರ: ಉತ್ತರಾಭಾದ್ರಾ ಗಂ. 29-45 ಯೋಗ: ವಜ್ರ ಗಂ. 07-29, ಸಿದ್ಧಿ(ಆಸ್ರಿಕ್) ಗಂ. 29-50 ಕರಣ: ತೈತಿಲ ಗಂ. 17-54, ವೃಶ್ಚಿಕ ಮಾಸದ 15 ನೇ ದಿನ. ರಾಹುಕಾಲ : ಬೆಳಿಗ್ಗೆ 10-30-12-00

ಸೂರ್ಯೋದಯ : 06-42 ಸೂರ್ಯಾಸ್ತ : 05-58

ಮುಸ್ಲಿಂ ದಿನಾಂಕ : 07 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ : 1, 3

ಮೇಷ: ಯೋಜನೆಗಳಲ್ಲಿ ಮುಂದಾಳತ್ವ ವಹಿಸಿ. ನಿಮ್ಮ ತಂಡ ಎದುರಿಸುತ್ತಿರುವ ಪ್ರಮುಖ ವಿಷಯಗಳ ತೊಂದರೆ ನಿವಾರಣೆ ಮಾಡುವ ಸಾಮರ್ಥ್ಯ ನಿಮಗೆ ಈ ದಿನ ಸಿಗಲಿದೆ. ಬರವಣಿಗೆಯಲ್ಲಿ ಹೆಚ್ಚಿನ ಉತ್ಸಾಹ ಮೂಡುವುದು.

ವೃಷಭ: ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಓಡಾಡುವ ಸಂದರ್ಭ ಎದುರಾಗುವುದು. ಮನೆಗೆ ಅಲಂಕಾರಿಕವಾದ ಅಥವಾ ಗೃಹೋಪಯೋಗಿ ವಸ್ತು ಖರೀದಿಸಬಹುದು. ಮಕ್ಕಳ ಖುಷಿಗಾಗಿ ಆಟಿಕೆಯ ವಸ್ತು ಕೊಳ್ಳುವಿರಿ.

ಮಿಥುನ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆ ನಡೆಯಲು ಒಪ್ಪುವಿರಿ. ತಾತ್ಕಾಲಿಕ ಉದ್ಯೋಗ ದೊರೆತು ಸಮಾಧಾನವಾಗುವುದು. ದೇವತಾ ಕಾರ್ಯಗಳಿಗಾಗಿ ಪ್ರಯಾಣ.

ಕರ್ಕಾಟಕ: ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಉಂಟಾಗುವುದು. ದಿನದ ಗುತ್ತಿಗೆಯಂತಹ ಕೆಲಸದ ವೃತ್ತಿಯವರಿಗೆ ಆಕಸ್ಮಿಕ ರೀತಿಯಲ್ಲಿ ಉದ್ಯೋಗ ದೊರೆತು ಸಂತೋಷವಾಗುತ್ತದೆ.

ಸಿಂಹ: ಅಂದುಕೊಂಡ ಕೆಲಸ ಯೋಜಿತ ರೀತಿಯಲ್ಲಿ ಮುನ್ನಡೆಯಲಿದೆ. ವಿದ್ಯಾರ್ಥಿಗಳು ಕೇವಲ ಪಠ್ಯದ ವಿಚಾರವಲ್ಲದೇ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತೋರುವುದರಿಂದ ಮನೋಲ್ಲಾಸ ಹೆಚ್ಚುವುದು.

ಕನ್ಯಾ: ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಸಿಗುವ ಸಾಧ್ಯತೆ. ದಾಂಪತ್ಯ ಜೀವನದಲ್ಲಿ ತಾಳ್ಮೆ, ಹೊಂದಾಣಿಕೆ ಮುಂದುವರೆಯುವುದು. ಅನಾರೋಗ್ಯದಿಂದ ವಿದ್ಯಾರ್ಥಿಗಳ ಸಾಧನೆಗೆ ಅಡೆ-ತಡೆ.

ತುಲಾ: ನಿಮ್ಮ ಕೌಟುಂಬಿಕ ವಿಚಾರದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಹಿಂಜರಿಕೆ ಬೇಡ. ಮನೆಯವರ ಒಳಿತಿಗಾಗಿ ಕೆಲವು ಹೊಸ ಮಾರ್ಗಗಳನ್ನು ಕಂಡುಕೊಳ್ಳಲು ಇದು ಸೂಕ್ತ ಸಮಯ. ಗಣಪತಿಯನ್ನು ಆರಾಧಿಸಿ.

ವೃಶ್ಚಿಕ: ಕಲಾವಿದರಿಗೆ ಉತ್ತಮ ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ ದೊರೆತು ಸಂತಸವಾಗಲಿದೆ. ಮಕ್ಕಳ ಮೇಲಿದ್ದ ಮುನಿಸು ಕರಗುವುದು. ದೇವತಾಕಾರ್ಯಗಳಿಂದ ಮನಸ್ಸಿಗೆ ನೆಮ್ಮದಿ ಪ್ರಾಪ್ತಿಯಾಗುತ್ತದೆ.

ಧನು: ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ಪಡೆಯಲು ಪೂರಕ ವಾತಾವರಣ ಸಿಗಲಿದೆ. ಮನೆಯಲ್ಲಿ ಸಂತಾನದ ಶುಭ ಸುದ್ದಿ ಕೇಳುವಿರಿ. ಶ್ರೀ ಮಹಾಲಕ್ಷ್ಮಿಯನ್ನು ಪೂಜಿಸಿ ಹೆಚ್ಚಿನ ಏಳಿಗೆ ಹೊಂದುವಿರಿ.

ಮಕರ: ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಪಾಠವನ್ನು ಇಂದಿನ ದಿನವೇ ನಿಮಗೆ ಬೋಧಿಸುವುದು. ದೈನಂದಿನ ಬದುಕಿನಲ್ಲಿರುವ ಖರ್ಚು ವೆಚ್ಚಗಳ ಮೇಲೆ ಬಿಗಿ ಹಿಡಿತ ಸಾಧಿಸುವುದು ಅನಿವಾರ್ಯವೆನಿಸುವುದು.

ಕುಂಭ: ನಿರುದ್ಯೋಗಿಗಳು ಸದ್ಯದ ಪರಿಸ್ಥಿತಿಯಲ್ಲಿ ಸಿಕ್ಕಿರುವ ಕೆಲಸದಲ್ಲೇ ತೃಪ್ತಿಪಡುವುದು ಉತ್ತಮ. ರಾಜಕೀಯ ವ್ಯಕ್ತಿಗಳಿಗೆ ಸೂಕ್ತ ಸ್ಥಾನ ಲಭ್ಯ. ಕಂಟ್ರಾಕ್ಟರುಗಳು ಮತ್ತು ಬಿಲ್ಡರ್ಸ್‌ರುಗಳಿಗೆ ಅನುಕೂಲಕರ ದಿನವಾಗುವುದು.

ಮೀನ: ಹೊಸ ತಲೆಮಾರಿನವರು ಕುಟುಂಬದಲ್ಲಿ ಇದ್ದಂತಹ ಭಿನ್ನಾಭಿಪ್ರಾಯವನ್ನು ಮುರಿದು ನೂತನವಾಗಿ ಸಂಬಂಧ ಬೆಳೆಸುವಂತಾಗಲಿದೆ. ಸರಕಾರಿ ಕೆಲಸಗಳು ಗುತ್ತಿಗೆಯಾಗಿ ಲಭಿಸುವುದರ ಜತೆಗೆ ಲಾಭದಾಯಕವಾಗಿರುತ್ತದೆ.

ಪದಬಂಧ 5156

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಶಾಪವನ್ನು ಹೊಂದಿರುವವನು (4)
2. ನಡುವೆ ರಂಪವಿದ್ದಾಗಲೇ ಈ ಸಂಪ್ರದಾಯ! (4)
4. ಮನುಷ್ಯನಿಗೆ ಸಂಬಂಧಪಟ್ಟದ್ದು (4)
6. ಪದ ಕೊನೆಗಿದ್ದಾಗ ಐಶ್ವರ್ಯ ಕಾಣುತ್ತದೆ (3)
7. ಕನಸಲ್ಲಿ ಹೆಕ್ಕಿ ತೆಗೆದ ಗಲೀಜು! (2)
9. ನಿರಾಕರಣೆಯನ್ನು ಹೀಗೆನ್ನಿ (3)
11. ಕಂದಾಚಾರದಲ್ಲೇ ಬೆಲೆಯಿದೆ! (2)
13. ಆ ಲೋಲಕದ ಹತ್ತಿರ ಆಸಕ್ತನಿದ್ದಾನೆ (3)
14. ಕಣದಲ್ಲಿ ಹಾಕಿದ ಲಗಾಮು (4)
16. ಹಿರಣ್ಯಯ್ಯ ನಾಟಕದ ಟೋಪಿಯ ನಯವಾದ ಬಟ್ಟೆ (4)
17. ಇದು ಹೋಲಿಕೆಯಿಲ್ಲದ್ದು (4)

ಮೇಲಿಂದ ಕೆಳಕ್ಕೆ

1. ಉಷ್ಣದ ಪ್ರಮಾಣವನ್ನು ಕಂಡು ಹಿಡಿಯುವ ಸಾಧನ (5)
2. ಪರಂಪರೆಯಲ್ಲಿಯೇ ಇದೆ ಕಣ್ಣಿನ ದೋಷ! (2)
3. ಇತರರಿಗೆ ಉಪಕಾರವನ್ನು ಮಾಡುವುದು (5)
5. ಈಕೆ ವಿದೇಶದವಳು (3)
8. ಜೊತೆಯಲ್ಲಿ ಆಲೋಚಿಸುವವನು (5)
10. ಈತ ಶ್ರೀಮಂತ! (3)
12. ತನ್ನ ಗುರಿ ಸಾಧಿಸಲು ಪ್ರತಿಜ್ಞಾಬದ್ಧನಾದವನು (5)
15. ಬಾಯಿಂದ ಸುರಿಯುತ್ತಿರುವ ಲಾಲಾರಸ (2)



5155ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಟಕ 6.ಜವಾಬುದಾರಿ 7.ಶಾರೀರ 8.ವನ 10.ಶರ 11.ಮೂಷಿಕ 13.ಆನೆ 14.ಟದಿ 18.ಗಂಜಲ 19.ಮಾರ್ಗದರ್ಶಕ 20.ರಣಜ

ಮೇಲಿಂದ ಕೆಳಕ್ಕೆ:
1.ಜಯಶಾಲಿ 2.ಕಲರವ 3.ಅಂಜಲಿ 4.ಅಂಬುಧರ 5.ತುರಿಮಣೆ 9.ನಮೂನೆ 10.ಶಕಟ 12.ಅನುಮಾನ 13.ಆಪಾದನೆ 15.ದಿಗಂಬರ 16.ಮಲಯಜ 17.ವಿಕಚ

ಸುಡೊಕು 5542

	6				8			5
1		3		6		8	9	4
	8		5					
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5541 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18758
ಇಂದಿನ ಅಂತ್ಯ	18812
▲	54
ದಿನದ ಕನಿಷ್ಠ	18887

ವಿನಿಮಯ ದರ

$ ಡಾಲರ್	81.26
£ ಪೌಂಡ್	98.23
€ ಯುರೊ	84.8
¥ ಯೆನ್ (100ಕ್ಕೆ)	59.67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹555
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515(1515)
ಸೋಯಾ (ರಿಫೈನ್ಡ್)	₹1280(1300)
ಸೂರ್ಯಕಾಂತಿ (ರಿಫೈನ್ಡ್)	₹1410(1420)
ಪಾಮೋಲಿನ್	₹950(970)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2700
ಮಧ್ಯಮ	₹1500-2000
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹143
ಆರ್‌ಎಸ್‌ಎಸ್-5 ₹ 135
ಗುಡ್ ಲಾಟ್ ₹128
(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

1-12-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525(1525)
ಒಂದು ವಾರದ ಡೆಲಿವರಿ	1520(1520)
ಸೋಯಾ ಕಚ್ಚಾ	1235(1270)
ಪಾಮ್ ವಾರದ ಡೆಲಿವರಿ	948(968)
ಸೂರ್ಯಕಾಂತಿ ಎಣ್ಣೆ ಕಚ್ಚಾ	-- (--)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53000(52625)
ಬೆಳ್ಳಿ ಕೆ.ಜಿ 63150(62100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಚನ್ನಗಿರಿ
ರಾಶಿ 42099-46200

ಚಿತ್ರದುರ್ಗ
ಆಪಿ 43909-44319
ಬೆಟ್ಟೆ 33829-34269
ಕೆಂಪುಗೋಟು 28610-29059
ರಾಶಿ 43439-43889

ಕಾರ್ಕಳ
ಹೊಸತು 25000-37500
ಹಳತು 40000-54500

ಕುಮಟಾ
ಹಳೆಚಾಲಿ 36222-39799
ಹೊಸಚಾಲಿ 28899-33299
ಚಿಪ್ಪು 24141-33489
ಕೋಕ 16299-29699

ಪುತ್ತೂರು
ಹೊಸತು 32000-38000

ಸಾಗರ
ಬಿಳಿಗೋಟು 16110-30612
ಚಾಲಿ 31699-37109
ಕೋಕ 8269-33989
ಕೆಂಪುಗೋಟು 28989-34899
ರಾಶಿ 41209-45809
ಸಿಪ್ಪೆಗೋಟು 10699-19410

ಶಿವಮೊಗ್ಗ
ಬೆಟ್ಟೆ 47700-51800
ಗೊರಬಲು 17119-34500
ಹೊಸತು 42359-45399
ರಾಶಿ 43152-47509
ಸರಕು 57200-80100

ಸಿದ್ದಾಪುರ
ಬಿಳಿಗೋಟು 28699-33299
ಚಾಲಿ 36299-39799
ಕೋಕ 26399-32899
ಕೆಂಪುಗೋಟು 28009-28009
ರಾಶಿ 43509-45099
ತಟ್ಟಿಬೆಟ್ಟೆ 36109-42109

ಶಿರಸಿ
ಬೆಟ್ಟೆ 43218-43808
ಬಿಳಿಗೋಟು 18069-35199
ಚಾಲಿ 33123-41018
ಕೆಂಪುಗೋಟು 22699-34699
ರಾಶಿ 44299-46399

ಯಲ್ಲಾಪುರ
ಆಪಿ 52899-58269
ಬಿಳಿಗೋಟು 24299-33869
ಚಾಲಿ 35399-40299
ಕೋಕ 16122-28809
ಕೆಂಪುಗೋಟು 24899-33400
ರಾಶಿ 45110-50100
ತಟ್ಟಿಬೆಟ್ಟೆ 36699-44216

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)	
ಮುದ್ರೆಮನೆ	
ಎಪಿ	15900
ಎಸಿ	8260
ಆರ್‌ಪಿ	9000
ಆರ್‌ಸಿ	4200

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹389-671
ದ್ವಿತಳಿ (ಬಿ.ವಿ)
₹276-851

ಜಿಎಂ ಸಾಸಿವೆ: ಕೇಂದ್ರಕ್ಕೆ 'ಸುಪ್ರೀಂ' ಚಾಟಿ

ನವದೆಹಲಿ: ಕುಲಾಂತರಿ ಹೈಬ್ರಿಡ್ (ಜಿಎಂ) ಸಾಸಿವೆ ಬಿಡುಗಡೆ ಮಾಡಲು ಯಾರ ಒತ್ತಡಕ್ಕೆ ಸಿಲುಕಿದ್ದೀರಿ? ಈಗ ಉದ್ಭವಿಸಿರುವ ಈ ಸಮಸ್ಯೆ ಇತ್ಯರ್ಥವಾಗುವವರೆಗೆ ಇದನ್ನು ವಿಳಂಬಿಸುವುದು ಉತ್ತಮವಲ್ಲವೇ? ಎಂಬುದನ್ನು ಸ್ಪಷ್ಟಪಡಿಸುವಂತೆ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಗುರುವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠವು, ಪ್ರತಿಕ್ರಿಯಿಸಲು ಎ.ಜಿ ಅವರಿಗೆ ಸೂಚಿಸಿತು.

ಮುಂಬೈ ವಿಮಾನ ನಿಲ್ದಾಣ: ಎರಡು ಗಂಟೆ ಕಂಪ್ಯೂಟರ್ ವ್ಯವಸ್ಥೆ ಸ್ಥಗಿತ

ಸರ್ವರ್ ವೈಫಲ್ಯ: ಅವ್ಯವಸ್ಥೆ, ಗೊಂದಲ

ಪ್ರಜಾವಾಣಿ ವಾರ್ತೆ

ಮುಂಬೈ: ದೇಶದ ಅತಿದೊಡ್ಡ ಮತ್ತು ಹೆಚ್ಚು ದಟ್ಟಣೆಯುಳ್ಳ, ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ಟರ್ಮಿನಲ್‌ನಲ್ಲಿ ಗುರುವಾರ ಸಂಜೆ ಕಂಪ್ಯೂಟರ್ ವ್ಯವಸ್ಥೆಯಲ್ಲಿ ವ್ಯತ್ಯಯವಾಗಿದ್ದು ತೀವ್ರ ಅವ್ಯವಸ್ಥೆ, ಗೊಂದಲಕ್ಕೆ ಕಾರಣವಾಯಿತು.

ಸರ್ವರ್ ವೈಫಲ್ಯದಿಂದಾಗಿ ಕಂಪ್ಯೂಟರ್ ವ್ಯವಸ್ಥೆ ಎರಡು ಗಂಟೆ ಸ್ಥಗಿತಗೊಂಡಿತ್ತು. ಪರಿಣಾಮ, ವಿಮಾನಯಾನ ಸಂಸ್ಥೆಗಳ ಕೌಂಟರ್‌ಗಳ ಎದುರು ಉದ್ದನೆ ಸಾಲು ಕಂಡುಬಂದವು. ಸಾಲು ಕರಗಿಸಲು ಸಿಬ್ಬಂದಿ ಹೆಚ್ಚು ಶ್ರಮಿಸಬೇಕಾಯಿತು.

ಪ್ರಯಾಣಿಕರಿಗೆ ಚೆಕ್ ಇನ್ ಆಗಲು ಹೆಚ್ಚಿನ ಸಮಯ ನೀಡಲಾಯಿತು. ವಿಮಾನನಿಲ್ದಾಣದ ಹೊರಗೆ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಂದಾಗಿ ನೆಟ್‌ವರ್ಕ್ ಸೇವೆ ವ್ಯತ್ಯಯಗೊಂಡಿತ್ತು ಎಂದು ವಿಮಾನನಿಲ್ದಾಣದ ವಕ್ತಾರರು ತಿಳಿಸಿದರು.

ಮುಂಬೈ ವಿಮಾನ ನಿಲ್ದಾಣದಲ್ಲಿ ಗುರುವಾರ ಸರ್ವರ್ ಸಮಸ್ಯೆಯಿಂದಾಗಿ ಕೌಂಟರ್‌ಗಳ ಎದುರು ಸಾಲಾಗಿ ನಿಂತಿರುವ ಪ್ರಯಾಣಿಕರು

ನಿರ್ಮಾಣ ಚಟುವಟಿಕೆಯ ವೇಳೆ ಕೇಬಲ್ ಕಡಿತವಾಗಿತ್ತು. ಇದರಿಂದ ನೆಟ್‌ವರ್ಕ್ ಸಮಸ್ಯೆಯಾಗಿದೆ ಎಂದು ತಪಾಸಣೆ ವೇಳೆ ತಿಳಿದಿದ್ದು, ಕೇಬಲ ಅಳವಡಿಸಿ ದೋಷ ಸರಿಪಡಿಸಲು ಕ್ರಮವಹಿಸಲಾಯಿತು ಎಂದು ತಿಳಿಸಿದರು.

ನೆಟ್‌ವರ್ಕ್ ವ್ಯತ್ಯಯದಿಂದಾದ ಸಮಸ್ಯೆಯನ್ನು ಕುರಿತಂತೆ ಅನೇಕ ಪ್ರಯಾಣಿಕರು #MumbaiAirport ಹ್ಯಾಷ್‌ಟ್ಯಾಗ್ ಬಳಸಿ ಟ್ವೀಟ್ ಮಾಡಿ, ಅಸಹನೆ ಹೊರಹಾಕಿದ್ದಾರೆ.

'2ನೇ ಟರ್ಮಿನಲ್‌ನಲ್ಲಿ ಈಗ ಭಯಂಕರವಾದ ಪರಿಸ್ಥಿತಿ ಇದೆ. ಸರ್ವರ್ ವೈಫಲ್ಯ. ಇನ್ನಿಲ್ಲದ ಗೊಂದಲ. ಮುಂಬೈನಿಂದ ವಿಮಾನಯಾನ ಮಾಡುವವರಿದ್ದರೆ ಗೊಂದಲ ಎದುರಿಸಬೇಕಾದಿತು, ಎಚ್ಚರಿಕೆ' ಎಂದು ಬಸ್ತಾಬ್ ಕೆ.ಪರಿಡಾ ಟ್ವೀಟ್ ಮಾಡಿದ್ದರು.

'ವಿಮಾನನಿಲ್ದಾಣದ 2ನೇ ಟರ್ಮಿನಲ್ ಬಹುತೇಕ ಸ್ತಬ್ಧಗೊಂಡಿದೆ. ಈ ಮೂಲಕ ನಾವು ವಾರಾಂತ್ಯ ಆರಂಭಿಸುತ್ತಿದ್ದೇವೆ' ಎಂದು ಇನ್ನೊಬ್ಬ ಪ್ರಯಾಣಿಕರು ಟ್ವೀಟ್ ಮಾಡಿ ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಂಪ್ಲೆಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸೇವೆಗೆ ಚಾಲನೆ ನೀಡಿದ ಸಚಿವ ಸಿಂಧಿಯಾ: ಪ್ರಯಾಣಿಕರ ಸಮಯ ಉಳಿತಾಯಕ್ಕೆ ಸಹಕಾರಿ

'ಡಿಜಿ ಯಾತ್ರಾ' ಬೆಂಗಳೂರು ಸೇರಿ 3 ಕಡೆ ಜಾರಿ

ನವದೆಹಲಿ (ಪಿಟಿಐ): ಪ್ರಯಾಣಿಕರಿಗೆ ವಿಮಾನ ನಿಲ್ದಾಣದೊಳಗೆ ಹೆಚ್ಚು ಅಡೆತಡೆ ಇಲ್ಲದೆ ಪ್ರವೇಶ ಕಲ್ಪಿಸುವ ಹಾಗೂ ವಿಮಾನ ಹತ್ತುವ ಪ್ರಕ್ರಿಯೆಯನ್ನು ಮತ್ತಷ್ಟು ಸುಲಭಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂಪಿಸಿರುವ 'ಡಿಜಿ ಯಾತ್ರಾ' ಸೇವೆಗೆ ಗುರುವಾರ ಚಾಲನೆ ನೀಡಲಾಗಿದೆ.

ಮೊದಲ ಹಂತದಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-3 (ಟಿ-3) ಹಾಗೂ ವಾರಾಣಸಿಯ ವಿಮಾನ ನಿಲ್ದಾಣದಲ್ಲಿ ಈ ಸೇವೆ ಆರಂಭವಾಗಲಿದೆ.

ಈ ಸೇವೆಗೆ ಚಾಲನೆ ನೀಡಿ ಮಾತನಾಡಿದ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, 'ಮುಂದಿನ ವರ್ಷದ ಮಾರ್ಚ್ ವೇಳೆಗೆ ಈ ಸೇವೆಯನ್ನು ಹೈದರಾಬಾದ್, ಪುಣೆ, ವಿಜಯವಾಡ ಹಾಗೂ ಕೋಲ್ಕತ್ತದ ವಿಮಾನ ನಿಲ್ದಾಣಗಳಿಗೂ ವಿಸ್ತರಿಸಲಾಗುತ್ತದೆ' ಎಂದರು.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–3ರಲ್ಲಿ ಗುರುವಾರ ಡಿಜಿ ಯಾತ್ರಾ ಸೇವೆಗೆ ಚಾಲನೆ ನೀಡಿದರು —ಪಿಟಿಐ ಚಿತ್ರ

'ಆ್ಯಪ್‌ನಲ್ಲಿ ಪ್ರಯಾಣಿಕರು ದಾಖಲಿಸುವ ಮಾಹಿತಿಯನ್ನು ಗೂಢ ಲಿಪೀಕರಣ ಮಾದರಿಯಲ್ಲಿ ಸಂಗ್ರಹಿಸಲಾಗಿರುತ್ತದೆ. ಈ ಮಾಹಿತಿಯು ವಿಕೇಂದ್ರೀಕೃತ ಸ್ವರೂಪದಲ್ಲಿರುವುದರಿಂದ ಅದನ್ನು ಕದಿಯಲು ಅವಕಾಶ ಇರುವುದಿಲ್ಲ. ಇದರಿಂದ ಪ್ರಯಾಣಿಕರ ಗೌಪ್ಯತೆಗೂ ಧಕ್ಕೆ ಉಂಟಾಗುವುದಿಲ್ಲ' ಎಂದಿದ್ದಾರೆ.

'ಪ್ರಯಾಣಿಕರ ಮಾಹಿತಿಯು ಅವರ ಮೊಬೈಲ್‌ನಲ್ಲಿ ಮಾತ್ರ ಲಭ್ಯವಿರಲಿದೆ. ಪ್ರಯಾಣ ಪೂರ್ಣಗೊಂಡ 24 ಗಂಟೆಗಳ ಬಳಿಕ ಅದನ್ನು ವಿಮಾನ ನಿಲ್ದಾಣದ ಸರ್ವರ್‌ನಿಂದ ಕಡ್ಡಾಯವಾಗಿ ಅಳಿಸಿಹಾಕಲಾಗುತ್ತದೆ' ಎಂದು ತಿಳಿಸಿದ್ದಾರೆ.

ಏನಿದು ಡಿಜಿ ಯಾತ್ರಾ?

ಇದು ಆ್ಯಪ್ ಆಧಾರಿತ ಸೇವೆಯಾಗಿದ್ದು, ಮುಖ ಗುರುತಿಸುವಿಕೆ ತಂತ್ರಜ್ಞಾನ (ಫೇಸಿಯಲ್ ರೆಕಗ್ನೈಸೇಷನ್) ಒಳಗೊಂಡಿರಲಿದೆ. ಈ ಆ್ಯಪ್ ಆ್ಯಂಡ್ರಾಯ್ಡ್ ಹಾಗೂ ಐಒಎಸ್ ವೇದಿಕೆಗಳಲ್ಲಿ ಲಭ್ಯವಿರುತ್ತದೆ.

ಈ ಸೇವೆ ಬಳಸಲು ಇಚ್ಛಿಸುವ ಪ್ರಯಾಣಿಕರು ಆಧಾರ್ ಕಾರ್ಡ್‌ನಲ್ಲಿನ ಮಾಹಿತಿಗಳನ್ನು ಆ್ಯಪ್‌ನಲ್ಲಿ ದಾಖಲಿಸಬೇಕಾಗುತ್ತದೆ. ತಾವೇ ಫೋಟೊ ಕ್ಲಿಕ್ಕಿಸಿಕೊಂಡ ಬಳಿಕ 'ಬೋರ್ಡಿಂಗ್ ಪಾಸ್' ಸ್ಕ್ಯಾನ್ ಮಾಡಬೇಕು. ಹೀಗೆ ಒದಗಿಸಿದ ಮಾಹಿತಿ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ರವಾನೆಯಾಗಲಿದೆ.

ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರು ಮೊದಲು ಇ-ಗೇಟ್‌ನಲ್ಲಿ ಬಾರ್ ಕೋಡ್ ಒಳಗೊಂಡ ಬೋರ್ಡಿಂಗ್ ಪಾಸ್ ಸ್ಕ್ಯಾನ್ ಮಾಡಬೇಕು. ಫೇಶಿಯಲ್ ರೆಕಗ್ನೈಸೇಷನ್ ಪೂರ್ಣಗೊಳಿಸಬೇಕು. ಅದು ಪ್ರಯಾಣಿಕರ ಗುರುತನ್ನು ಮೌಲ್ಯೀಕರಿಸುತ್ತದೆ. ಈ ಪ್ರಕ್ರಿಯೆ ಮುಗಿದ ಬಳಿಕ ನಿಲ್ದಾಣದೊಳಗೆ ಪ್ರವೇಶಿಸಬಹುದು. ಭದ್ರತಾ ತಪಾಸಣೆಯ ಸಾಮಾನ್ಯ ಪ್ರಕ್ರಿಯೆ ಮುಗಿಸಿದ ನಂತರ ನೇರವಾಗಿ ವಿಮಾನ ಏರಬಹುದು. ಅಟ್ಲಾಂಟ ವಿಮಾನ ನಿಲ್ದಾಣದಲ್ಲಿ ಈ ಪ್ರಕ್ರಿಯೆಗೆ ಕೇವಲ 9 ನಿಮಿಷ ತಗಲುತ್ತದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ — Drivers — General — Part-Time Jobs — Wanted — ಬಿಲ್ಡರ್ ಎಸೆನ್ಷಿಯಲ್ — Water Proofing — ರಿಯಲ್ ಎಸ್ಟೇಟ್ ಬೈಯಿಂಗ್ — Agricultural Land Converted — General — ವ್ಯಾಪಾರ — Business Offers — Finance — Agricultural Land — Outskirts — ಭವಿಷ್ಯ — Astrology — ಪ್ರವಾಸ — Travel Agencies — Travel

WANT TO buy Farmland, 2 to 20 acres in Doddaballapur, Chikkaballapur Whtsap 9663177822

WANTED AGRICULTURAL LAND (50 - 100 ACRES) within 5 - 10 K.M. from 1. Tondebhavi 2. Gauribidanur 3. Channapatna 4. Maddur. Genuine Owners or Agents may contact: Secretary, THE IDEAL HOMES CO-OPERATIVE BUILDING SOCIETY LIMITED, Ideal Homes Co-Operative Building Society Ltd, Rajarajeswari Nagar, Mysore Road, Bangalore - 98. Ph: 080-28600892 Mob: 9901500872

EARN DAILY 1% Profit. Stock and Crypto Market, Coaching Class Call: 07208451867

DH BOOK YOUR CLASSIFIEDS ONLINE — ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH | MATRI | AUTO | ASTRO | NOTICE | TRAVEL
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in
*conditions apply

ಭಾರತ ಸೆಳೆಯಲು ನ್ಯಾಟೊ ಯತ್ನ

ನ್ಯಾಟೋದಿಂದ ರಷ್ಯಾ ವಿರೋಧಿ ಮೈತ್ರಿ: ವಿದೇಶಾಂಗ ಸಚಿವ ಲಾವ್ರೊವ್

ಮಾಸ್ಕೊ (ಎಪಿ/ರಾಯಿಟರ್ಸ್): 'ಪಾಶ್ಚಿಮಾತ್ಯ ರಾಷ್ಟ್ರಗಳು ರಷ್ಯಾದ ಪ್ರಭಾವ ದಮನಿಸಲು ಪ್ರಯತ್ನಿಸುತ್ತಿದೆ. ರಷ್ಯಾ ವಿರೋಧಿ ಮತ್ತು ಚೀನಾ ವಿರೋಧಿ ಮೈತ್ರಿಕೂಟಕ್ಕೆ ಭಾರತವನ್ನುಎಳೆದುಕೊಳ್ಳಲುನ್ಯಾಟೊಹವಣಿಸುತ್ತಿದೆ' ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೈ ಲಾವ್ರೊವ್ ಆರೋಪಿಸಿದರು.

ಇಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚೀನಾ ಸಮೀಪ ಉದ್ವಿಗ್ನತೆ ಹೆಚ್ಚಿಸಿ ರಷ್ಯಾಕ್ಕೆ ಅಪಾಯ ಉಂಟು ಮಾಡಲು ನ್ಯಾಟೊ ಎದುರು ನೋಡುತ್ತಿದೆ. ಅದರ ಆಕ್ರಮಣಕ್ಕೆ ಸಿಲುಕದೇ ಇದ್ದ ದಕ್ಷಿಣ ಚೀನಾ ಸಮುದ್ರವನ್ನು ಉಕ್ರೇನ್‌ನಲ್ಲಿ ಮಾಡಿದಂತೆ ಉದ್ವಿಗ್ನತೆಯ ಪ್ರದೇಶವಾಗಿಸಲು ಹೊರಟಿದೆ' ಎಂದು ದೂರಿದರು.

'ತೈವಾನ್ ಮತ್ತು ತೈವಾನ್ ಜಲಸಂಧಿ ಉಲ್ಲೇಖಿಸುವುದಿಲ್ಲ. ಇದು ಚೀನಾ ಗಡಿಯಂತೆ ನಮ್ಮ ಸಮುದ್ರ ತೀರಕ್ಕೂ ಹತ್ತಿರದಲ್ಲಿದೆ. ನ್ಯಾಟೊ ಪ್ರಚೋದನೆಗಳನ್ನು ಚೀನಾ ಎಷ್ಟೊಂದು ಗಂಭೀರವಾಗಿ ಪರಿಗಣಿಸಲಿದೆ ಎಂಬುದು ನಮಗೆ ತಿಳಿದಿದೆ. ಈ ಪ್ರದೇಶಗಳಲ್ಲಿ ನ್ಯಾಟೊ ಬೆಂಕಿಯೊಂದಿಗೆ ಸರಸಕ್ಕಿಳಿದಿರುವುದು ರಷ್ಯಾ ಒಕ್ಕೂಟಕ್ಕೆ ಬೆದರಿಕೆ ಮತ್ತು ಅಪಾಯ ತರುವುದಕ್ಕಾಗಿಯೇ ಎನ್ನುವುದನ್ನೂ ನಾವು ಅರಿತಿದ್ದೇವೆ' ಎಂದು ಅವರು ಹೇಳಿದರು.

'ಯುರೋಪಿನ ಹಿನ್ನೆಲೆ ಎಲ್ಲರಿಗೂ ಗೊತ್ತಿದೆ. ಅದಕ್ಕಾಗಿಯೇ ರಷ್ಯಾ ಚೀನಾ ಜತೆಗೆ ಸೇನಾ ಸಹಕಾರ ಬಲಪಡಿಸುತ್ತಿದೆ. ಜಂಟಿ ಸೇನಾ ತಾಲೀಮು ನಡೆಸುತ್ತಿದೆ' ಎಂದರು.

'ಉಕ್ರೇನ್ ಸಂಘರ್ಷದಲ್ಲಿ ನ್ಯಾಟೊ ನೇರ ಭಾಗಿ'

'ಉಕ್ರೇನ್ ಸಂಘರ್ಷದಲ್ಲಿ ನ್ಯಾಟೊ ನೇರವಾಗಿ ಭಾಗಿಯಾಗಿದೆ. ಪಶ್ಚಿಮದ ರಾಷ್ಟ್ರಗಳು ಉಕ್ರೇನ್‌ಗೆ ಶಸ್ತ್ರಾಸ್ತ್ರಗಳ ಪೂರೈಕೆ ಮತ್ತು ಸೈನಿಕರಿಗೆ ತರಬೇತಿ ನೀಡುವ ಮೂಲಕ ಸಂಘರ್ಷದಲ್ಲಿ ನೇರವಾಗಿ ತೊಡಗಿಸಿಕೊಂಡಿದೆ' ಎಂದು ಸೆರ್ಗೈ ಲಾವ್ರೊವ್ ಹೇಳಿದರು.

'ಈ ಯುದ್ಧದಲ್ಲಿ ನೀವು ಭಾಗಿಯಾಗಿಲ್ಲವೆಂದು ಅಮೆರಿಕ ಮತ್ತು ನ್ಯಾಟೊ ಹೇಳುವಂತಿಲ್ಲ. ಶಸ್ತ್ರಾಸ್ತ್ರಗಳ ಪೂರೈಕೆ ಜತೆಗೆ ಸೇನಾ ತರಬೇತಿ ಕೊಡುವ ಮೂಲಕ ನೇರ ಭಾಗಿಯಾಗಿದ್ದೀರಿ. ಬ್ರಿಟನ್, ಜರ್ಮನಿ, ಇಟಲಿ ಹಾಗೂ ಇತರ ರಾಷ್ಟ್ರಗಳು ತಮ್ಮ ನೆಲದಲ್ಲಿ ಉಕ್ರೇನ್ ಸೈನಿಕರಿಗೆ ತರಬೇತಿ ನೀಡುತ್ತಿರುವುದನ್ನು ಕಾಣುತ್ತಿದ್ದೇವೆ' ಎಂದು ಲಾವ್ರೊವ್ ಹೇಳಿದರು. ಈ ವಾರ ನಡೆಯಬೇಕಿದ್ದ ಅಮೆರಿಕ ಜತೆಗಿನ ಅಣ್ವಸ್ತ್ರ ನಿಯಂತ್ರಣದ ಮಾತುಕತೆಯನ್ನು ರಷ್ಯಾ ಮುಂದೂಡಿದ ನಿರ್ಧಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಉಕ್ರೇನ್‌ನಲ್ಲಿ ನಡೆಯುತ್ತಿರುವ ಎಲ್ಲವನ್ನೂ ನಿರ್ಲಕ್ಷಿಸಿ, ಯುದ್ಧಭೂಮಿಯಲ್ಲಿ ರಷ್ಯಾ ಸೋಲಿಸಲು ಅಥವಾ ರಷ್ಯಾ ನಾಶಗೊಳಿಸುವ ಗುರಿ ಘೋಷಿಸಿರುವಾಗ ಇಂತಹ ಚರ್ಚೆ, ಮಾತುಕತೆ ಅಸಾಧ್ಯ' ಎಂದು ಲಾವ್ರೊವ್ ಹೇಳಿದರು.

ರವಿಶಂಕರ್ ಗುರೂಜಿಗೆ 'ದಿ ಎಮಿಸರಿ ಆಫ್ ಪೀಸ್' ಪ್ರಶಸ್ತಿ



ವಾಷಿಂಗ್ಟನ್ (ಪಿಟಿಐ): ಮೆಂಫಿಸ್ ನಗರದ ನ್ಯಾಷನಲ್ ಸಿವಿಲ್ ರೈಟ್ಸ್ ಮ್ಯೂಸಿಯಂ, ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರಿಗೆ 'ದಿ ಎಮಿಸರಿ ಆಫ್ ಪೀಸ್' (ಶಾಂತಿಯ ರಾಯಭಾರಿ) ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

'ಜಾಗತಿಕ ಮಾನವತಾವಾದಿಯಾಗಿರುವ ನೀವು ಜಗತ್ತಿನ 180 ದೇಶಗಳ ಕೋಟಿ ಕೋಟಿ ಜನರನ್ನು ತಲುಪಿದ್ದೀರಿ. ಹಾಗೂ ಯುದ್ಧವನ್ನು ತಡೆಯಲು ನೀವು ಪ್ರತಿಪಾದಿಸುವ ಉಪಕ್ರಮಗಳಿಗಾಗಿ ನಾವು ಈ ಪ್ರಶಸ್ತಿಯನ್ನು ನೀಡುತ್ತಿದ್ದೇವೆ' ಎಂದು ಮ್ಯೂಸಿಯಂನ ನಿರ್ದೇಶಕಿ ಶೈಲಾ ಕರ್ಕೇರ ಅವರು ಹೇಳಿದರು. ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು 'ಐ ಸ್ಟ್ಯಾಂಡ್ ಫಾರ್ ಪೀಸ್' ಎನ್ನುವ ಜಾಗತಿಕ ಪ್ರಯಾಣವನ್ನು ಕೈಗೊಂಡಿದ್ದಾರೆ. ಈ ಪ್ರಯಾಣದ ಭಾಗವಾಗಿ ಅವರು ಸೋಮವಾರ ಮೆಂಫಿಸ್ ನಗರವನ್ನು ತಲುಪಿದ್ದರು. ನವೆಂಬರ್ ಮೊದಲ ವಾರ ಅಟ್ಲಾಂಟಾದಲ್ಲಿ ಗುರೂಜಿ ಅವರಿಗೆ 'ಗಾಂಧಿ ಪೀಸ್ ಪಿಲಿಗ್ರಿಮ್' ಪ್ರಶಸ್ತಿ ನೀಡಲಾಗಿತ್ತು.

ಭದ್ರತಾ ಮಂಡಳಿ: ಭಾರತದ ಅಧ್ಯಕ್ಷತೆ ಆರಂಭ

ವಿಶ್ವ ಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಸರದಿಯಂತೆ ಭಾರತವು ಗುರುವಾರದಿಂದ ಒಂದು ತಿಂಗಳ ಅವಧಿಗೆ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದೆ.

ಡಿಸೆಂಬರ್ ಇಡೀ ತಿಂಗಳು ಭಾರತವು ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿರಲಿದೆ. ಈ ಅವಧಿಯಲ್ಲಿ ಭಯೋತ್ಪಾದನೆ ಎದುರಿಸುವ ಮತ್ತು ಬಹುತ್ವವನ್ನು ಪ್ರತಿಪಾದಿಸುವ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ.

ವಿಶ್ವಸಂಸ್ಥೆಯ ಭಾರತದ ಕಾಯಂ ರಾಯಭಾರಿಯಾಗಿರುವ ರುಚಿರಾ ಕಂಬೋಜ್ ಅವರು ಈ ಅವಧಿಯಲ್ಲಿ ಅಧ್ಯಕ್ಷರಾಗಿರಲಿದ್ದಾರೆ. ಇದೇ ಮೊದಲ ಬಾರಿಗೆ ಭಾರತದ ಮಹಿಳೆಯೊಬ್ಬರಿಗೆ ಈ ಸ್ಥಾನಕ್ಕೇರುವ ಅವಕಾಶ ದೊರೆತಿದೆ.

ಬಹುತ್ವದ ಕುರಿತು ಡಿ.14 ರಂದು ಹಾಗೂ ಭಯೋತ್ಪಾದನೆ ಎದುರಿಸುವ ಕುರಿತು ಡಿ. 15ರಂದು ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ನ್ಯೂಯಾರ್ಕ್‌ಗೆ ತೆರಳಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸೆನ್ಸೆಕ್ಸ್: 8ನೇ ದಿನವೂ ಗಳಿಕೆ ವಹಿವಾಟು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗೂಳಿಯ ಓಟ ಮುಂದುವರಿದಿದೆ. ಮುಂಬೈ ಷೇರುಪೇಟೆ ಮತ್ತು ರಾಷ್ಟ್ರೀಯ ಷೇರುಪೇಟೆಯಲ್ಲಿ ಸತತ ಎಂಟನೆಯ ದಿನವೂ ಏರಿಕೆಯ ವಹಿವಾಟು ನಡೆದಿದೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಗುರುವಾರ ದಾಖಲೆಯ ಮಟ್ಟದಲ್ಲಿ ವಹಿವಾಟು ಕೊನೆಗೊಳಿಸಿವೆ.

ಪಿಎಂಐ ಸೂಚ್ಯಂಕವು ತಯಾರಿಕಾ ವಲಯದಲ್ಲಿ ಬೆಳವಣಿಗೆ ಆಗಿರುವುದನ್ನು ಸೂಚಿಸಿರುವುದು ಹಾಗೂ ಐ.ಟಿ. ವಲಯದ ಷೇರುಗಳಲ್ಲಿ ಹೂಡಿಕೆ ಹೆಚ್ಚಿದ್ದುದು ಸೂಚ್ಯಂಕಗಳ ಏರಿಕೆಗೆ ನೆರವಾಗಿವೆ. ಸೆನ್ಸೆಕ್ಸ್ 184 ಅಂಶ ಏರಿಕೆಯಾಗಿ 63,284 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ. ನಿಫ್ಟಿ 54 ಅಂಶ ಏರಿಕೆ ಕಂಡು 18,812 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ.

'ಅಮೆರಿಕದ ಫೆಡರಲ್ ರಿಸರ್ವ್‌ನ ಮುಖ್ಯಸ್ಥ ಜೆರೋಮ್ ಪೊವೆಲ್ ಅವರು, ಬಡ್ಡಿ ದರ ಏರಿಕೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡುವುದು ಸೂಕ್ತ ಎಂದು ಹೇಳಿರುವುದು ಮಾರುಕಟ್ಟೆಯಲ್ಲಿ ತೇಜಿ ವಹಿವಾಟಿಗೆ ಕಾರಣವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಗಣಿ ಸ್ಫೋಟ: 9 ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವ ಪ್ರಾಂತ್ಯದ ಕಲ್ಲಿದ್ದಲು ಗಣಿಯಲ್ಲಿ ಸಂಭವಿಸಿದ ಅನಿಲ ಸ್ಫೋಟದಿಂದ ಒಂಭತ್ತು ಮಂದಿ ಕಾರ್ಮಿಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಗುರುವಾರ ಪೊಲೀಸರು ತಿಳಿಸಿದ್ದಾರೆ.

'1971 ರ ಸೋಲಿಗೆ ಮಿಲಿಟರಿ ವೈಫಲ್ಯ ಕಾರಣ'

ಕರಾಚಿ (ಪಿಟಿಐ): 1971ರಲ್ಲಿ ನಡೆದ ಭಾರತ ಮತ್ತು ಪೂರ್ವ ಪಾಕಿಸ್ತಾನ ಯುದ್ಧದಲ್ಲಿ ಪಾಕಿಸ್ತಾನ ಸೋಲಲು 'ಮಿಲಿಟರಿ ವೈಫಲ್ಯ' ಕಾರಣ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಬಿಲ್‌ವಾಲ್ ಭುಟ್ಟೋ ಆರೋಪಿಸಿದ್ದಾರೆ.

ರಾವಲ್ಪಿಂಡಿಯಲ್ಲಿ ನವೆಂಬರ್ 26 ರಂದು ಸೇನೆ ಮತ್ತು ಹುತಾತ್ಮ ಸೈನಿಕರನ್ನು ಉದ್ದೇಶಿಸಿ ಮಾತನಾಡಿದ್ದ ಸೇನಾಪಡೆ ಮಾಜಿ ಮುಖ್ಯಸ್ಥ ಕಮರ್ ಜಾವೇದ್ ಬಜ್ವಾ ಅವರು 1971ರ ಯುದ್ಧದಲ್ಲಿ ಪಾಕಿಸ್ತಾನ ಸೋಲಲು 'ರಾಜಕೀಯ ವೈಫಲ್ಯ' ಕಾರಣ ಎಂದು ಹೇಳಿದ್ದರು. ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ (ಪಿಪಿಪಿ) 55ನೇ ಸಂಸ್ಥಾಪನಾ ದಿನದದ ಪ್ರಯುಕ್ತ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ಬಿಲ್‌ವಾಲ್ ಭುಟ್ಟೊ, ಯುದ್ಧದ ಸೋಲಿಗೆ ಮಿಲಿಟರಿ ವೈಫಲ್ಯವೇ ಕಾರಣ ಎಂದು ತಿರುಗೇಟು ನೀಡಿದರು.

'ನನ್ನ ತಾತ ಝುಲ್ಫೀಕರ್ ಅಲಿ ಭುಟ್ಟೊ ಅವರು ಅಧಿಕಾರ ವಹಿಸಿಕೊಂಡಾಗ ಜನ ಎಲ್ಲಾ ನಿರೀಕ್ಷೆಗಳನ್ನೂ ಕಳೆದುಕೊಂಡಿದ್ದರು. ಆದರೆ ಅವರು ದೇಶವನ್ನು ಮತ್ತೆ ಕಟ್ಟಿದರು. ಸೇನಾ ವೈಫಲ್ಯದಿಂದಾಗಿ ಯುದ್ಧ ಕೈದಿಗಳಾಗಿದ್ದ 90 ಸಾವಿರ ಯೋಧರನ್ನು ಅವರು ಕೊನೆಗೂ ದೇಶಕ್ಕೆ ಕರೆತಂದರು. ರಾಜಕೀಯ ಭವಿಷ್ಯ, ಏಕತೆ, ಒಳಗೊಳ್ಳುವಿಕೆಯ ಫಲವಾಗಿಯೇ ಇದೆಲ್ಲ ಸಾಧ್ಯವಾಗಿದೆ' ಎಂದು ಅವರು ಪ್ರತಿಪಾದಿಸಿದ್ದಾರೆ.

ನರೋಡಾ: ಅಪರಾಧಿಯ ಮಗಳ ಕಣಕ್ಕಿಳಿಸಿ ಮತಬೇಟೆ

ಗುಜರಾತ್ ಚುನಾವಣೆ

ಅಖಾಡದಲ್ಲೊಂದು ಸುತ್ತು

ಮಂಜುನಾಥ ಹೆಬ್ಬಾರ್

ನರೋಡಾ (ಗುಜರಾತ್): 2002ರ ಗೋಧ್ರೋತ್ತರ ಕೋಮುಗಲಭೆಯಲ್ಲಿ 97 ಮುಸ್ಲಿಮರ ಹತ್ಯೆಗೆ ಸಾಕ್ಷಿಯಾದ ನರೋಡಾ ಕ್ಷೇತ್ರದಲ್ಲಿ ಚುನಾವಣೆಯ ಕಾವು ಏರಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕ್ಷೇತ್ರದಲ್ಲಿ ಗುರುವಾರವಷ್ಟೇ 'ಬಿರುಗಾಳಿ'ಯಂತೆ ಸಂಚರಿಸಿ ಮತದಾರರ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡಿದ್ದಾರೆ.

ಅಹಮದಾಬಾದ್‌ನಿಂದ 15 ಕಿ.ಮೀ. ದೂರದಲ್ಲಿರುವ ನರೋಡಾ ಕ್ಷೇತ್ರದಲ್ಲಿ ಸಿಂಧಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕ್ಷೇತ್ರದಲ್ಲಿ ಶೇ 2ರಷ್ಟು ಮುಸ್ಲಿಮರಿದ್ದಾರೆ. ಈ ಕ್ಷೇತ್ರವು ಮೂರು ದಶಕಗಳಿಂದ ಬಿಜೆಪಿ ತೆಕ್ಕೆಯಲ್ಲಿ ಇದೆ.

ಶಾಸಕ ಬಲರಾಂ ಥವಾಣಿ ಅವರನ್ನು ಕೈಬಿಟ್ಟು ಅನಸ್ತೇಸಿಯಾ ತಜ್ಞೆ ಪಾಯಲ್ ಕುಕ್ರಾಣಿ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಪಾಯಲ್ ಅವರು ನರೋಡಾ ಪಾಟಿಯಾ ಹತ್ಯಾಕಾಂಡದ ತಪ್ಪಿತಸ್ಥ ಮನೋಜ್ ಕುಕ್ರಾಣಿ ಅಲಿಯಾಸ್ ಸಿಂಧಿಯ ಮಗಳು.

ಅಪರಾಧಿಯ ಮಗಳಿಗೆ ಮಣೆ ಹಾಕಿದ ಬಗ್ಗೆ ಸ್ಥಳೀಯ ಬಿಜೆಪಿ ಮುಖಂಡರು ಆರಂಭದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು. 'ದಲಿತ ವ್ಯಕ್ತಿಯನ್ನು ವಿವಾಹವಾಗಿದ್ದರಿಂದ ಅವರು ಸಿಂಧಿ ಅಲ್ಲ' ಎಂದೂ ಕೆಲವು ಮುಖಂಡರು ತಗಾದೆ ತೆಗೆದಿದ್ದರು. ಈಗ ಅಸಮಾಧಾನ ಮಾಯವಾದಂತೆ ಕಾಣುತ್ತಿದೆ. 'ಅಪರಾಧಿಯ ಮಗಳಿಗೆ ಟಿಕೆಟ್ ನೀಡಿದ್ದರಿಂದ ಮುಜುಗರ ಆಗಿಲ್ಲವೇ' ಎಂದು ಬಿಜೆಪಿ ಕಾರ್ಯಕರ್ತರನ್ನು ಪ್ರಶ್ನಿಸಿದರೆ, 'ಪಾಯಲ್ ಯಾವ ತಪ್ಪೂ ಮಾಡಿಲ್ಲ. ನಾವ್ಯಾಕೆ ಮುಜುಗರ ಪಡಬೇಕು' ಎಂದು ಕೇಳುತ್ತಾರೆ.

ಬಲರಾಂ ಥವಾಣಿ ಸೇರಿದಂತೆ ಸ್ಥಳೀಯ ಮುಖಂಡರೆಲ್ಲ ಬಿಜೆಪಿ ಅಭ್ಯರ್ಥಿ ಪರ ಉತ್ಸಾಹದಿಂದ ಓಡಾಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಕಮಲ ಪಡೆ 60 ಸಾವಿರ ಮತಗಳ ಅಂತರದಿಂದ ಜಯಭೇರಿ ಭಾರಿಸಿತ್ತು. ಪಾಯಲ್ ಅವರು 'ವಿಕಾಸ' ಹಾಗೂ ನರೇಂದ್ರ ಮೋದಿ ಹೆಸರಿನಲ್ಲಿ ಮತ ಕೇಳುತ್ತಿದ್ದಾರೆ. ಈ ಸಲ ನಮ್ಮ ಅಭ್ಯರ್ಥಿ 1 ಲಕ್ಷಕ್ಕಿಂತಲೂ ಹೆಚ್ಚು ಮತಗಳ ಅಂತರದಿಂದ ಗೆಲ್ಲಲಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತರು ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಪಾಟಿಯಾದಲ್ಲಿ ನಡೆದ ಕೋಮುಗಲಭೆಯ ಪ್ರಕರಣದಲ್ಲಿ 32 ಅಪರಾಧಿಗಳಿಗೆ ಶಿಕ್ಷೆ ಆಗಿತ್ತು. 17 ತಪ್ಪಿತಸ್ಥರನ್ನು ಗುಜರಾತ್ ಹೈಕೋರ್ಟ್‌ನ ವಿಭಾಗೀಯ ಪೀಠ 2018ರಲ್ಲಿ ಖುಲಾಸೆ ಮಾಡಿತ್ತು. ಅವರಲ್ಲಿ ಈ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕರಾಗಿದ್ದ ಮಾಜಿ ಸಚಿವೆ ಮಾಯಾ ಕೊಡ್ನಾನಿ ಅವರೂ ಸೇರಿದ್ದಾರೆ. ಮನೋಜ್ ಕುಕ್ರಾಣಿ ಸೇರಿ 15 ಮಂದಿಯ ಶಿಕ್ಷೆಯನ್ನು ನ್ಯಾಯಾಲಯ ಎತ್ತಿ ಹಿಡಿದಿತ್ತು. ಎಲ್ಲ ಅಪರಾಧಿಗಳು ಜಾಮೀನಿನ ಮೇಲೆ ಹೊರಗಿದ್ದಾರೆ. ಪ್ರಕರಣ ಈಗ ಸುಪ್ರೀಂ ಕೋರ್ಟ್ ಅಂಗಳದಲ್ಲಿದೆ.

ಕಾಂಗ್ರೆಸ್ ಪಕ್ಷವು ಎನ್‌ಸಿಪಿ ಜತೆಗೆ ಮೈತ್ರಿ ಮಾಡಿಕೊಂಡು ಚುನಾವಣೆಯನ್ನು ಎದುರಿಸುತ್ತಿದೆ. ಎನ್‌ಸಿಪಿಗೆ ಬಿಟ್ಟುಕೊಟ್ಟ ಕ್ಷೇತ್ರಗಳಲ್ಲಿ ನರೋಡಾ ಸಹ ಒಂದು. ಆ ಪಕ್ಷವು ಮೇಘರಾಜ್ ದೊಡ್ವಾನಿ ಅವರನ್ನು ಹುರಿಯಾಳುವನ್ನಾಗಿ ಮಾಡಿದೆ. 2017ರ ಚುನಾವಣೆಯಲ್ಲಿ 'ಕೈ' ಅಭ್ಯರ್ಥಿಯಾಗಿದ್ದ ಓಂಪ್ರಕಾಶ್ ತಿವಾರಿ ಈ ಸಲ ಎಎಪಿಯಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಬೆಲೆ ಏರಿಕೆ, ಶಿಕ್ಷಣ, ನಿರುದ್ಯೋಗ ಮತ್ತಿತರ ವಿಷಯಗಳನ್ನು ಮುಂದಿಟ್ಟುಕೊಂಡು ಎಎಪಿ ಪ್ರಚಾರದಲ್ಲಿ ತೊಡಗಿದೆ.

ನರೋಡಾದಲ್ಲಿ ಸಿಕ್ಕ ಕಾಂಗ್ರೆಸ್‌ನ ಅಲೋಕ್ ಶರ್ಮ, 'ತಪ್ಪಿತಸ್ಥನ ಮಗಳಿಗೆ ಟಿಕೆಟ್ ನೀಡುವ ಮೂಲಕ ಬಿಜೆಪಿಯ ನಕಲಿ ಹಿಂದುತ್ವ ಮತ್ತೊಮ್ಮೆ ಬಹಿರಂಗವಾಗಿದೆ. ಆ ಪಕ್ಷವು ಬಹುಕಾಲದಿಂದ ಇದನ್ನೇ ಮಾಡುತ್ತಾ ಬಂದಿದೆ' ಎನ್ನುತ್ತಾರೆ.

'ಪ್ರಜಾವಾಣಿ' ಪ್ರತಿನಿಧಿಯೊಂದಿಗೆ ಆತಂಕದಿಂದಲೇ ಮಾತನಾಡಿದ ಪಾಟಿಯಾದ ನಿವಾಸಿ ಉಮರ್ ಶೇಖ್, 'ಆ ಗಲಭೆ ಈಗಲೂ ಕಣ್ಣಿಗೆ ಕಟ್ಟಿದಂತೆಯೇ ಇದೆ. ಆ ಘೋರ ಘಟನೆಯ ನೆನಪಲ್ಲಿ ಎಷ್ಟು ದಿನ ಕಾಲ ಕಾಲ ಕಳೆಯಲು ಸಾಧ್ಯ. ನೋವು ನುಂಗಿಕೊಂಡು ಇರಬೇಕಿದೆ. ಅಪರಾಧಿಯ ಮಗಳನ್ನೇ ಅಭ್ಯರ್ಥಿಯನ್ನಾಗಿ ಮಾಡಿದ ನಂತರ ಮಾತನಾಡಲು ಏನು ಉಳಿದಿದೆ. ನಾಳೆ ಅವರೇ ನಮ್ಮ ಕ್ಷೇತ್ರದ ಪ್ರತಿನಿಧಿಯಾಗುವುದು ಖಚಿತ. ಒಟ್ಟಾರೆ ಇಡೀ ವ್ಯವಸ್ಥೆಯ ಮೇಲೆ ಭರವಸೆ ಕಳೆದುಕೊಂಡಿದ್ದೇವೆ' ಎನ್ನುತ್ತಾರೆ.

ಪಾಟಿಯಾದಲ್ಲಿ ಚಹಾ ಕುಡಿಯುತ್ತಿದ್ದ ಸಲೀಂ, '2002ರ ಘಟನೆಯ ಆಘಾತದಿಂದ ನಾವೆಲ್ಲ ಇನ್ನೂ ಹೊರ ಬಂದಿಲ್ಲ. ಮುಸ್ಲಿಮರ ಮೇಲೆ ದಾಳಿ ನಡೆಸಿದ ಆರೋಪಿಗಳು ಆರಾಮವಾಗಿ ಓಡಾಡಿಕೊಂಡಿದ್ದಾರೆ. ಜತೆಗೆ, ನಮಗೆ ಸರ್ಕಾರ ಚಿಕ್ಕಾಸು ಪರಿಹಾರ ನೀಡಿ ಕೈ ತೊಳೆದುಕೊಂಡಿದೆ. ಕಾಂಗ್ರೆಸ್ ನಮ್ಮ ಧ್ವನಿಯಾಗಿ ನಿಲ್ಲಲಿದೆ ಎಂಬ ಭರವಸೆ ಇತ್ತು. ಅವರು ನಮ್ಮ ನೆರವಿಗೆ ಬಂದಿದ್ದು ಕಡಿಮೆ. ದೆಹಲಿ, ಪಂಜಾಬ್ ಮಾದರಿಯಲ್ಲಿ ಇಲ್ಲೂ ಎಎಪಿಯಿಂದ ಪರಿವರ್ತನೆ ಆಗಬಹುದು ಎಂಬ ಆಶಾವಾದದಲ್ಲಿ ಇದ್ದೇವೆ' ಎಂದು ಹೇಳುತ್ತಾರೆ.

'ಕಳೆದ 20 ವರ್ಷಗಳಲ್ಲಿ ಇಲ್ಲಿ ಭಾರಿ ಅಭಿವೃದ್ಧಿ ಕೆಲಸಗಳೇನೂ ಆಗಿಲ್ಲ. ಚುನಾವಣೆ ಸಮಯದಲ್ಲಷ್ಟೇ ರಾಜಕಾರಣಿಗಳು ನಮ್ಮ ಮನೆಗಳಿಗೆ ಎಡತಾಕುತ್ತಾರೆ' ಎಂದು ನರೋಡಾ ನಿವಾಸಿ ಮೊಹಮ್ಮದ್ ಹನೀಫ್ ಆಕ್ರೋಶ ವ್ಯಕ್ತಪಡಿಸುತ್ತಾರೆ.

ಈ ಮಾತನ್ನು ಒಪ್ಪಲು ಬಿಜೆಪಿ ಕಾರ್ಯಕರ್ತ ರಾಕೇಶ್ ಪಟೇಲ್ ಸಿದ್ಧರಿಲ್ಲ. 'ಕ್ಷೇತ್ರದಲ್ಲಿ ಮೂರು ದಶಕಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಇಲ್ಲದಿದ್ದರೆ ದಶಕಗಳಿಂದ ಒಂದೇ ಪಕ್ಷ ಗೆಲ್ಲಲು ಸಾಧ್ಯವಿತ್ತೇ' ಎಂದು ಪ್ರಶ್ನಿಸುತ್ತಾರೆ.

'ಕ್ಷೇತ್ರದಲ್ಲಿ 1980ರ ದಶಕದಲ್ಲಿ ಸಾಕಷ್ಟು ಗಿರಣಿಗಳಿದ್ದವು. ನಾವು ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದೆವು. ಬಳಿಕ ಅವುಗಳನ್ನು ಮುಚ್ಚಲಾಯಿತು. ಅವುಗಳ ಪುನರುಜ್ಜೀವನಕ್ಕೆ ಕಾಂಗ್ರೆಸ್ ಹಾಗೂ ಬಿಜೆಪಿ ಪ್ರಯತ್ನ ಪಡಲಿಲ್ಲ. ಬಿಜೆಪಿ ದುಡಿಯುವ ವರ್ಗವನ್ನು ಮರೆತೇ ಬಿಟ್ಟಿದೆ. ಬಡವರು ಜೀವನ ನಡೆಸುವುದೇ ಕಷ್ಟ ಎಂಬ ಸ್ಥಿತಿ ನಿರ್ಮಾಣವಾಗಿದೆ. ಎಎಪಿ ಅಲ್ಪ ಭರವಸೆ ಹುಟ್ಟಿಸಿದೆ' ಎಂದು 60 ವರ್ಷದ ಚಾಲಕ ಜಗದೀಶ್ ಠಾಕೂರ್ ತಿಳಿಸುತ್ತಾರೆ.

'ಗುಜರಾತ್‌ನಲ್ಲಿ ಬಿಜೆಪಿಯ ಹುಸಿ ಸಂಕಥನ'

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ ಬಿಜೆಪಿಯ ಚುನಾವಣಾ ಪ್ರಚಾರವು ವಾಸ್ತವವನ್ನು ತಲೆ ಕೆಳಗಾಗಿಸಿದೆ ಮತ್ತು ಹುಸಿ ಸಂಕಥನ ಕಟ್ಟಿದೆ ಎಂದು ಸಿಪಿಎಂ ಆರೋಪಿಸಿದೆ.

ಗುಜರಾತ್‌ನಲ್ಲಿ ಬಿಜೆಪಿಯ ಪ್ರಚಾರವು ವಿಷಮಯವಾಗಿದೆ. ರಾಜ್ಯವು ಹಿಂದುತ್ವವಾದಿ ಶಕ್ತಿಗಳ ಪ್ರಯೋಗಾಲಯವಾಗಿದೆ ಎಂಬುದನ್ನು ಇದು ತೋರಿಸುತ್ತದೆ ಎಂದಿದೆ.

'ಅಮಿತ್ ಶಾ ಅವರು ಭಾಷಣದಲ್ಲಿ ಹೇಳಿರುವ ಕೆಲವು ವಿಚಾರಗಳು ಗುಜರಾತ್‌ನಿಂದ ಹೊರಗೆ ಇರುವವರಲ್ಲಿ ಆಘಾತ ಉಂಟು ಮಾಡಿದೆ. ಆದರೆ, ಆರ್‌ಎಸ್‌ಎಸ್–ಬಿಜೆಪಿ ವಾಸ್ತವವನ್ನು ತಲೆ ಕೆಳಗಾಗಿಸಿ ಹುಸಿ ಸಂಕಥವನ್ನು ಹೇಗೆ ಕಟ್ಟಿದೆ ಎಂಬುದನ್ನು ಇದು ತೋರಿಸುತ್ತದೆ' ಎಂದು ಸಿಪಿಎಂನ ಮುಖವಾಣಿ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಹೇಳಲಾಗಿದೆ.

'ವಿರೋಧ ಪಕ್ಷಗಳು ದೇಶವಿರೋಧಿಗಳಾಗಿವೆ ಮತ್ತು ಗುಜರಾತಿ ವಿರೋಧಿಗಳನ್ನು ಬೆಂಬಲಿಸುತ್ತಿವೆ. ಜಾತ್ಯತೀತತೆಯ ರಕ್ಷಣೆ ಮತ್ತು ಭಯೋತ್ಪಾದನೆಯ ಬಗ್ಗೆ ಮೃದು ನಿಲುವು ತಳೆದಿರುವ ಈ ಪಕ್ಷಗಳು ದೇಶವಿರೋಧಿ ಎಂಬುದೇ ಬಿಜೆಪಿಯ ಪ್ರಚಾರದ ಕೇಂದ್ರವಾಗಿದೆ. ನರೇಂದ್ರ ಮೋದಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೂಡ ಇದೇ ರೀತಿಯ ಪ್ರಚಾರ ನಡೆಸಲಾಗಿತ್ತು. ಪಾಕಿಸ್ತಾನ ಮತ್ತು ಭಯೋತ್ಪಾದನೆಯನ್ನು ಮುಸ್ಲಿಮರ ಜೊತೆಗೆ ತಳಕು ಹಾಕಲಾಗುತ್ತಿತ್ತು. ಜಾತ್ಯತೀತ ಪಕ್ಷಗಳು ಮುಸ್ಲಿಮರ ತುಷ್ಟೀಕರಣದಲ್ಲಿ ತೊಡಗಿವೆ ಮತ್ತು ಭಯೋತ್ಪಾದನೆಯೊಂದಿಗೆ ಕೈಜೋಡಿಸಿವೆ ಎಂದು ಆರೋಪಿಸಲಾಗುತ್ತಿತ್ತು. ಗುಜರಾತ್‌ನ ಸಂಕಥನವನ್ನು ವಿರೋಧಿಸುವವರು ಗುಜರಾತ್ ವಿರೋಧಿಗಳು ಎಂಬ ಹಣೆಪಟ್ಟಿ ಕಟ್ಟಲಾಗುತ್ತಿತ್ತು' ಎಂದು ಸಂಪಾದಕೀಯದಲ್ಲಿ ಹೇಳಲಾಗಿದೆ.

ಹಿಂದುತ್ವ ಕಾರ್ಯಸೂಚಿ ಮತ್ತು ಹೆಚ್ಚು ಹೆಚ್ಚು ಸೌಲಭ್ಯಗಳ ಭರವಸೆಯು ಗೆಲುವು ತಂದುಕೊಡಬಲ್ಲದು ಎಂಬ ವಿಶ್ವಾಸ ಬಿಜೆಪಿಗೆ ಇದೆ. ವಿಷಪೂರಿತ ಕೋಮುವಾದಿ ಪ್ರಚಾರವನ್ನು ತಡೆಯುವ ವ್ಯವಸ್ಥೆಯೇ ಇಲ್ಲದಾಗಿದೆ ಎಂದು ಸಂಪಾದಕೀಯದಲ್ಲಿ ವಿವರಿಸಲಾಗಿದೆ.

ಮೀಸೆ ಭತ್ಯೆ: ಪಕ್ಷೇತರ ಅಭ್ಯರ್ಥಿಯ ಬೇಡಿಕೆ

ಹಿಮಂತನಗರ (ಗುಜರಾತ್) (ಪಿಟಿಐ): ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಹಿಮಂತನಗರ ಕ್ಷೇತ್ರದಿಂದ ಸ್ಪರ್ಧಿಸಿರುವ ಪಕ್ಷೇತರ ಅಭ್ಯರ್ಥಿ ಮಗನ್‌ಭಾಯ್ ಸೋಲಂಕಿ ಅವರಿಗೆ ಅವರ ಮೀಸೆಯೇ ಪ್ರಚಾರದ ವಸ್ತು. ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸಿರುವ ಅವರ ಮೀಸೆಯು ಒಂದು ತುದಿಯಿಂದ ಇನ್ನೊಂದು ತುದಿಗೆ 5 ಅಡಿಯಷ್ಟು ಉದ್ದ ಇದೆ.

57 ವರ್ಷ ವಯಸ್ಸಿನ ಸೋಲಂಕಿ ಅವರು ಸೇನೆಯಿಂದ ನಿವೃತ್ತರಾದವರು. ಹಾನರರಿ ಲೆಫ್ಟಿನೆಂಟ್ ಹುದ್ದೆಯಲ್ಲಿ ಅವರು ಇದ್ದರು. ಅವರಲ್ಲಿ ಒಂದು ಬಲವಾದ ಬೇಡಿಕೆಯೂ ಇದೆ. 'ಯಾರೆಲ್ಲ ಉದ್ದನೆಯ ಮೀಸೆ ಬೆಳೆಸುತ್ತಾರೆಯೋ ಅವರಿಗೆ ಅದರ ನಿರ್ವಹಣೆಗೆ ಸರ್ಕಾರವು ಭತ್ಯೆ ಕೊಡಬೇಕು' ಎಂಬುದೇ ಆ ಬೇಡಿಕೆ.

ತಾವು ಗೆದ್ದರೆ, ಗುಜರಾತ್‌ನ ಯುವಕರು ಉದ್ದಕ್ಕೆ ಮೀಸೆ ಬೆಳೆಸುವುದನ್ನು ಉತ್ತೇಜಿಸಲು ಕಾನೂನು ತರುವಂತೆ ಸರ್ಕಾರವನ್ನು ಒತ್ತಾಯಿಸುವುದಾಗಿಯೂ ಅವರು ಹೇಳಿದ್ದಾರೆ.

'ಸೇನೆಯಲ್ಲಿ ಇದ್ದಾಗ ಮೀಸೆ ನಿರ್ವಹಣೆಗೆ ವಿಶೇಷ ಭತ್ಯೆಯನ್ನು ನೀಡಲಾಗಿತ್ತು. ಮೀಸೆವಾಲಾ ಎಂದೇ ನಾನು ಸೇನೆಯಲ್ಲಿ ಜನಪ್ರಿಯನಾಗಿದ್ದೆ. ನನ್ನ ಮೀಸೆಯು ನನ್ನ ಹೆಮ್ಮೆ. ಯಾವುದೇ ಗುಂಪಿನಲ್ಲಿ ಇದ್ದರೂ ನನ್ನನ್ನು ಇದು ಭಿನ್ನವಾಗಿಸುತ್ತದೆ' ಎಂದು ಸೋಲಂಕಿ ಹೇಳಿದ್ದಾರೆ.

ಮಗನ್‌ಭಾಯ್ ಸೋಲಂಕಿ

ಬಿಜೆಪಿಯ ಭದ್ರಕೋಟೆಯಾಗಿರುವ ಹಿಮಂತನಗರದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂಬುದು ಸೋಲಂಕಿಗೆ ಗೊತ್ತು. ಚುನಾವಣೆಗೆ ಸ್ಪರ್ಧಿಸುವುದು ಅವರಿಗೆ ಇಷ್ಟ. ಅದಕ್ಕಾಗಿ ಮಾತ್ರ ಅವರು ಸ್ಪರ್ಧಿಸುತ್ತಿದ್ದಾರೆ. 2017ರ ಚುನಾವಣೆಯಲ್ಲಿಯೂ ಸ್ಪರ್ಧಿಸಿದ್ದರು. 2017ರ ಚುನಾವಣೆಯಲ್ಲಿ ಅವರು ಬಿಎಸ್‌ಪಿ ಅಭ್ಯರ್ಥಿಯಾಗಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದ್ದರು.

ಗುಜರಾತ್ ಚುನಾವಣಾ ಪ್ರಚಾರ: ಖರ್ಗೆ ಟೀಕೆಗೆ ಮೋದಿ ತೀವ್ರ ಆಕ್ಷೇಪ

'ರಾಮಭಕ್ತನನ್ನು ರಾವಣ ಎನ್ನಬಾರದಿತ್ತು'

ಅಹಮದಾಬಾದ್ (ಪಿಟಿಐ): 'ರಾಮಭಕ್ತರ ನಾಡಿನ ವ್ಯಕ್ತಿಯನ್ನು ಖರ್ಗೆ ಅವರು ರಾವಣ ಎಂದು ಕರೆಯಬಾರದಿತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಗುಜರಾತಿಗರಿಗೆ ಅವಮಾನ ಮಾಡಿದ ಕಾಂಗ್ರೆಸ್ ನಾಯಕರಿಗೆ ಬುದ್ಧಿ ಕಲಿಸಲು ಬಿಜೆಪಿಗೆ ಮತ ನೀಡಿ ಎಂದು ಮೋದಿ ಕರೆ ನೀಡಿದ್ದಾರೆ.

ಈಚೆಗೆ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ್ದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಎಲ್ಲಾ ಚುನಾವಣೆಗಳಲ್ಲೂ ಮೋದಿ ಅವರೇ ಪ್ರಚಾರ ನಡೆಸುತ್ತಾರೆ. ಮೋದಿ ಅವರೇ ನಿಮಗೇನು ರಾವಣನಂತೆ 100 ತಲೆ ಇದೆಯೇ' ಎಂದು ಪ್ರಶ್ನಿಸಿದ್ದರು. ಇದಕ್ಕೆ ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

ಗುರುವಾರ ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೂ, ಖರ್ಗೆ ಅವರ ಮಾತನ್ನು ಟೀಕಿಸಿದರು.

'ಕಾಂಗ್ರೆಸ್‌ನವರು ರಾಮನ ಅಸ್ತಿತ್ವವನ್ನೇ ನಂಬುತ್ತಿರಲಿಲ್ಲ. ಅಂತಹವರು ಈಗ ನನ್ನನ್ನು ತೆಗಳಲು, ರಾಮಾಯಣದಲ್ಲಿನ ರಾವಣನನ್ನು ತಂದಿದ್ದಾರೆ. ಗುಜರಾತ್ ರಾಮಭಕ್ತರ ನಾಡು ಎಂಬುದನ್ನು ಅವರು ಮರೆತಿದ್ದಾರೆ. ಏನೇ ಆದರೂ, ರಾಮಭಕ್ತರ ನಾಡಿನ ವ್ಯಕ್ತಿಯನ್ನು ರಾವಣನಿಗೆ ಹೋಲಿಸಬಾರದಿತ್ತು' ಎಂದು ಮೋದಿ ಹೇಳಿದ್ದಾರೆ.

'ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ನನಗೆ ಗೌರವವಿದೆ. ಆದರೆ, ಕಾಂಗ್ರೆಸ್ ನಾಯಕರು ದೇಶಕ್ಕೆ ನಿಷ್ಠರಾಗಿಲ್ಲ. ಬದಲಿಗೆ ಒಂದು ಕುಟುಂಬಕ್ಕೆ ನಿಷ್ಠರಾಗಿದ್ದಾರೆ. ಆ ಕುಟುಂಬವನ್ನು ಸಂತೋಷಪಡಿಸಲು ಕಾಂಗ್ರೆಸ್ ನಾಯಕರು ಏನು ಬೇಕಾದರೂ ಮಾಡುತ್ತಾರೆ' ಎಂದು ಮೋದಿ ಆರೋಪಿಸಿದ್ದಾರೆ.

'ಕೆಲವರು ನಾನು ನಾಯಿಯಂತೆ ಸಾಯುತ್ತೇನೆ ಎಂದಿದ್ದಾರೆ. ಕೆಲವರು ನಾನು ಹಿಟ್ಲರ್‌ನಂತೆ ಸಾಯುತ್ತೇನೆ ಎಂದಿದ್ದಾರೆ. ಇನ್ನೂ ಒಬ್ಬರು ಅವಕಾಶ ಸಿಕ್ಕರೆ ನನ್ನನ್ನು ಕೊಲೆ ಮಾಡುತ್ತೇನೆ ಎಂದಿದ್ದಾರೆ. ಒಬ್ಬ ಗುಜರಾತಿ ಕೆಳಮಟ್ಟದಿಂದ ಈ ಮಟ್ಟಕ್ಕೆ ಏರಿರುವುದನ್ನು ಕಾಂಗ್ರೆಸ್ಸಿಗರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ' ಎಂದು ಮೋದಿ ಆರೋಪಿಸಿದ್ದಾರೆ.

ಗುಜರಾತ್ ಚುನಾವಣೆ ಪ್ರಚಾರದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಅಹಮದಾಬಾದ್‌ನಲ್ಲಿ ಗುರುವಾರ ಸಂಜೆ ರೋಡ್‌ಷೋ ನಡೆಸಿದರು

50 ಕಿ.ಮೀ. ರೋಡ್‌ಷೋ

ಗುಜರಾತ್ ವಿಧಾನಸಭಾ ಚುನಾವಣೆಯ ಪ್ರಚಾರದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ 50 ಕಿ.ಮೀ.ನಷ್ಟು ರೋಡ್‌ಷೋ ನಡೆಸಿದ್ದಾರೆ. ಗುಜರಾತ್‌ನಲ್ಲಿ ನಡೆದ ಅತ್ಯಂತ ಉದ್ದದ ಚುನಾವಣಾ ಪ್ರಚಾರದ ರೋಡ್‌ಷೋ ಇದಾಗಿದೆ ಎಂದು ಎನ್‌ಡಿ ಟಿ.ವಿ. ವರದಿ ಮಾಡಿದೆ.

2002ರ ಗೋಧ್ರಾ ಗಲಭೆಯ ಕೇಂದ್ರಗಳಲ್ಲಿ ಒಂದಾದ ನರೋಡಾ ಗಾಮ್‌ನಿಂದ ರೋಡ್‌ಷೋ ಆರಂಭವಾಯಿತು. ಒಟ್ಟು 16 ವಿಧಾನಸಭಾ ಕ್ಷೇತ್ರಗಳನ್ನು ಹಾದುಹೋದ ಮೆರವಣಿಗೆಯು ಸಾಬರಮತಿಯಲ್ಲಿ ಕೊನೆಯಾಯಿತು. ರೋಡ್‌ಷೋ ಉದ್ದಕ್ಕೂ 35 ಕಡೆ ಮೋದಿ ಅವರು ಪ್ರಚಾರ ಸಭೆಗಳನ್ನು ನಡೆಸಿದರು.

ಆಂಬುಲೆನ್ಸ್‌ಗೆ ಜಾಗ: ರೋಡ್‌ಷೋ ವೇಳೆ ಆಂಬುಲೆನ್ಸ್ ಬಂದಿದ್ದರಿಂದ, ಮೋದಿ ಅವರು ಕೆಲಕಾಲ ತಮ್ಮ ಪ್ರಚಾರವನ್ನು ನಿಲ್ಲಿಸಿದರು. ಆಂಬುಲೆನ್ಸ್ ಹಾದುಹೋಗಲು ಅನುವು ಮಾಡಿಕೊಟ್ಟರು ಎಂದು ಮೂಲಗಳು ಹೇಳಿವೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ನುಡಿ–ಕಿಡಿ

ನರೇಂದ್ರ ಮೋದಿ ದೇಶದ ಪ್ರಧಾನಿ ಆಗಿದ್ದರೂ, ನನ್ನನ್ನು ತೆಗಳುವುದು ತಮ್ಮ ಹಕ್ಕು ಎಂದು ಕಾಂಗ್ರೆಸ್ ನಾಯಕರು ನಂಬಿದ್ದಾರೆ. ಹೀಗಾಗಿಯೇ ನನ್ನನ್ನು ತೆಗಳಲು ಪರಸ್ಪರ ಪೈಪೋಟಿ ನಡೆಸುತ್ತಾರೆ

ನರೇಂದ್ರ ಮೋದಿ, ಪ್ರಧಾನಿ

ಮನಮೋಹನ್ ಸಿಂಗ್ ಅವರಿಗೆ ರೈನ್‌ಕೋಟ್ ಹಾಕಿಕೊಂಡು ಸ್ನಾನ ಮಾಡುವ ಕಲೆ ಗೊತ್ತಿದೆ ಎಂದು ಮೋದಿ ಅವರು 2017ರಲ್ಲಿ ಹೇಳಿದ್ದರು. ಅದೂ ಪ್ರಜಾಪ್ರಭುತ್ವ ದೇವಾಲಯವಾದ ಸಂಸತ್ ಭವನದಲ್ಲಿ. ಒಬ್ಬ ಮಾಜಿ ಪ್ರಧಾನಿಯ ಬಗ್ಗೆ ಹಾಲಿ ಪ್ರಧಾನಿಯೊಬ್ಬರು ಇದಕ್ಕಿಂತ ಕೀಳಾದ ಮಾತು ಆಡಲು ಸಾಧ್ಯವೇ?

ಜೈರಾಮ್ ರಮೇಶ್, ಕಾಂಗ್ರೆಸ್ ನಾಯಕ

ನೀವು ನಮ್ಮ ಹಿರಿಯರು ಮತ್ತು ನಾಯಕರ ಬಗ್ಗೆ ಸದಾ ಮಾತನಾಡುತ್ತಲೇ ಇರುತ್ತೀರಿ. ಹೀಗಿದ್ದಾಗ, ನಿಮ್ಮ ಬಗ್ಗೆ ಆಡುವ ಮಾತನ್ನೂ ಕೇಳಿಸಿಕೊಳ್ಳುವ ಧೈರ್ಯ ಮಾಡಬೇಕು

ಪವನ್ ಖೇರಾ, ಕಾಂಗ್ರೆಸ್ ಮುಖ್ಯ ವಕ್ತಾರ

ಕಾಂಗ್ರೆಸ್ ನಾಯಕರು ತನ್ನನ್ನು ಬೈಯಲು ಪ್ರತಿದಿನ 2.5 ಕೆ.ಜಿ.ಯಿಂದ–3 ಕೆ.ಜಿ.ಯಷ್ಟು ಬೈಗುಳ ಬಳಸುತ್ತಾರೆ ಎಂದು ಮೋದಿ ಹೇಳಿದ್ದಾರೆ. ಆದರೆ ಮೋದಿ ಅವರು, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಪ್ರತಿದಿನ ಕ್ವಿಂಟಲ್‌ಗಟ್ಟಲೆ ಬೈಗುಳ ಬಳಸುತ್ತಾರೆ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಮತಗಟ್ಟೆಯಲ್ಲಿ ಎಲ್‌ಪಿಜಿ ಸಿಲಿಂಡರ್, ದನ–ಕರು

ಗುಜರಾತ್ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನದ ವೇಳೆ ಹಲವು ಮತದಾರರು ಎಲ್‌ಪಿಜಿ ಸಿಲಿಂಡರ್, ದನ–ಕರುಗಳನ್ನು ಮತಗಟ್ಟೆಗೆ ತಂದು ಪ್ರತಿಭಟನೆ ದಾಖಲಿಸಿದರು.

ಅಡುಗೆ ಅನಿಲ ಸಿಲಿಂಡರ್‌ನ ಬೆಲೆ ಏರಿಕೆಯನ್ನು ಖಂಡಿಸಿ ಜಾಸ್ಮಿನ್ ಮರ್ಚಂಟ್ ಎಂಬುವವರು ಮತಗಟ್ಟೆಗೆ, ಖಾಲಿ ಎಲ್‌ಪಿಜಿ ಸಿಲಿಂಡರ್ ಅನ್ನು ಹೊತ್ತು ತಂದರು.

'ನನ್ನ ಕನಸಿನಲ್ಲಿ ಎಲ್‌ಪಿಜಿ ಸಿಲಿಂಡರ್ ಬಂದಿತ್ತು. ಅದೂ ಮತಹಾಕಬೇಕು ಎಂದು ತನ್ನ ಬಯಕೆ ಹೇಳಿಕೊಂಡಿತು. ಹೀಗಾಗಿ ಅದನ್ನು ಮತಗಟ್ಟೆಗೆ ಹೊತ್ತುತಂದೆ' ಎಂದು ಅವರು ಲೇವಡಿ ಮಾಡಿದ್ದಾರೆ.

ಅಮ್ರೇಲಿ ಕಾಂಗ್ರೆಸ್ ಶಾಸಕ ಪರೇಶ್ ಧನಾನಿ ಮತ್ತು ಸಂಗಡಿಗರು ಮತಗಟ್ಟೆಗೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಸೈಕಲ್‌ನಲ್ಲಿ ಹೊತ್ತು ತಂದರು. '2014ರಲ್ಲಿ ₹450, 2022ರಲ್ಲಿ ₹1,100' ಎಂಬ ಪೋಸ್ಟರ್ ಅನ್ನು ಸಿಲಿಂಡರ್‌ಗಳ ಮೇಲೆ ಅಂಟಿಸಲಾಗಿತ್ತು. 'ಪೆಟ್ರೋಲ್ ಬೆಲೆ ಲೀಟರ್‌ಗೆ ₹100 ದಾಟಿದೆ. ಎಲ್‌ಪಿಜಿ ಸಿಲಿಂಡರ್ ಬೆಲೆ ₹1,100 ದಾಟಿದೆ. ಬಡವರು ಹೇಗೆ ಬದುಕಬೇಕು? ಈ ಬೆಲೆ ಏರಿಕೆಯನ್ನು ಪ್ರತಿಭಟಿಸುವ ಸಲುವಾಗಿ ಸೈಕಲ್ ಮೇಲೆ ಸಿಲಿಂಡರ್ ಹೊತ್ತು ತಂದೆವು' ಎಂದು ಧನಾನಿ ಹೇಳಿದ್ದಾರೆ.

ಗೋವು ಮತ್ತು ಕುರಿಗಳನ್ನು ಸಾಕುವ ಅಲೆಮಾರಿಗಳಾದ ಮಾಲಾಧಾರಿ ಸಮುದಾಯದವರೂ ತಮ್ಮ ಪ್ರತಿಭಟನೆ ದಾಖಲಿಸಲು ಮತದಾನದ ದಿನವನ್ನು ಆಯ್ಕೆ ಮಾಡಿಕೊಂಡಿದ್ದರು. ಕಥ್‌ನ ಮತಗಟ್ಟೆ ಒಂದಕ್ಕೆ ಹಸು ಮತ್ತು ಕರುಗಳನ್ನು ಮಾಲಾಧಾರಿ ಜನರು ಕರೆತಂದಿದ್ದರು. 'ನಮ್ಮ ಕಷ್ಟಗಳಿಗೆ ಸರ್ಕಾರ ಗಮನ ಕೊಡುತ್ತಿಲ್ಲ. ನಮ್ಮ ಕಷ್ಟಗಳ ಬಗ್ಗೆ ಗಮನ ನೀಡಬೇಕು ಎಂದು ಒತ್ತಾಯಿಸಲು ಹಸು–ಕರುಗಳನ್ನು ಮತಗಟ್ಟೆಗೆ ಕರೆತಂದಿದ್ದೇವೆ' ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಮತ್ತು ಎಎಪಿಯ ಕಾರ್ಯಕರ್ತರು ಮತಗಟ್ಟೆಗೆ ಸೈಕಲ್‌ನಲ್ಲಿ ಬರುವ ಮೂಲಕ ಬೆಲೆ ಏರಿಕೆಯನ್ನು ಖಂಡಿಸಿದರು.

ರಾವಲ್ಪಿಂಡಿಯಲ್ಲಿ ರನ್ ರಾಶಿ

ವಿಶ್ವದಾಖಲೆ ಬರೆದ ಇಂಗ್ಲೆಂಡ್: ಬಸವಳಿದ ಪಾಕ್ ತಂಡ

ರಾವಲ್ಪಿಂಡಿ (ಎಎಫ್‌ಪಿ): ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಸೇರಿದಂತೆ ಐವರು ಆಟಗಾರರು ಬುಧವಾರ ಅಸ್ವಸ್ಥರಾಗಿ ತಮ್ಮ ಕೋಣೆಗಳಲ್ಲಿಯೇ ವಿಶ್ರಾಂತಿ ಪಡೆದಿದ್ದರು. ನೆಟ್ ಪ್ರಾಕ್ಟಿಸ್‌ಗೂ ತೆರಳಿರಲಿಲ್ಲ.

ತಂಡದ ಇನ್ನೂ ಕೆಲವು ಆಟಗಾರರು ಹೊಟ್ಟೆನೋವಿನಿಂದ ವಿಶ್ರಾಂತಿಗೆ ತೆರಳುವ ಬಗ್ಗೆ ಮಾತುಗಳು ಕೇಳಿಬಂದಿದ್ದವು. ಅದಕ್ಕಾಗಿ ಇಂಗ್ಲೆಂಡ್ ಮತ್ತು ಪಾಕಿಸ್ತಾನ ನಡುವಣ ಮೊದಲ ಟೆಸ್ಟ್ ಪಂದ್ಯವನ್ನು ಶುಕ್ರವಾರಕ್ಕೆ ಮುಂದೂಡುವ ಕುರಿತೂ ಉಭಯ ದೇಶಗಳ ಕ್ರಿಕೆಟ್ ಮಂಡಳಿಗಳು ಚಿಂತನೆ ನಡೆಸಿದ್ದವು.

ಆದರೆ ಇದಾವುದೂ ಆಗಲಿಲ್ಲ. ಗುರುವಾರ ಬೆಳಿಗ್ಗೆ ಬ್ಯಾಟ್ ಹಿಡಿದು ಮೈದಾನಕ್ಕಿಳಿದ ಇಂಗ್ಲೆಂಡ್ ಆಟಗಾರರ ಆರ್ಭಟ ಮುಗಿಲುಮುಟ್ಟಿತು. ಟೆಸ್ಟ್ ಪಂದ್ಯದ ಮೊದಲ ದಿನವೇ 500ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ತಂಡವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಆತಿಥೇಯ ಬೌಲರ್‌ಗಳು ಸುಸ್ತಾಗಿ ಹೋದರು. ಪ್ರವಾಸಿ ಇಂಗ್ಲೆಂಡ್ ತಂಡದ ನಾಲ್ವರು ಬ್ಯಾಟರ್‌ಗಳಾದ ಜ್ಯಾಕ್ ಕ್ರಾಲಿ (122), ಬೆನ್ ಡಕೆಟ್ (107), ಒಲಿ ಪೋಪ್ (108) ಹಾಗೂ ಹ್ಯಾರಿ ಬ್ರೂಕ್ (ಬ್ಯಾಟಿಂಗ್ 101) ಅವರ ಶತಕ ಗಳಿಸಿದರು. ತಂಡವು ಒಂದೇ ದಿನದಲ್ಲಿ 75 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 506 ರನ್ ಗಳಿಸಿ ವಿಶ್ವದಾಖಲೆ ಬರೆಯಿತು.

ಇಂಗ್ಲೆಂಡ್ ತಂಡದ ಜ್ಯಾಕ್ ಕ್ರಾಲಿ (ಎಡ) ಮತ್ತು ಬೆನ್ ಡಕೆಟ್ –ಎಎಫ್‌ಪಿ ಚಿತ್ರ

ಒಂದೇ ದಿನದಲ್ಲಿ ಅತಿ ಹೆಚ್ಚು ರನ್ ಪೇರಿಸಿದ್ದ 112 ವರ್ಷಗಳಷ್ಟು ಹಳೆಯ ದಾಖಲೆಯನ್ನು ಇಂಗ್ಲೆಂಡ್ ಮುರಿಯಿತು. ಜ್ಯಾಕ್, ಪೋಪ್ ಮತ್ತು ನಾಯಕ ಸ್ಟೋಕ್ಸ್ ಅವರು ಅಸ್ವಸ್ಥರಾಗಿದ್ದು ವಿಶ್ರಾಂತಿ ಪಡೆದಿದ್ದ ಪ್ರಮುಖರು. ದಿನದಾಟದ ಕೊನೆಯಲ್ಲಿ ಹ್ಯಾರಿ ಬ್ರೂಕ್ಸ್ ಜೊತೆಗೆ ಸ್ಟೋಕ್ಸ್ (ಬ್ಯಾಟಿಂಗ್ 34; 15ಎ) ಕ್ರೀಸ್‌ನಲ್ಲಿ ಲಂಗರು ಹಾಕಿದ್ದಾರೆ. ಇಬ್ಬರೂ ಅಬ್ಬರ ಬ್ಯಾಟಿಂಗ್ ಮಾಡಿದ್ದಾರೆ.

73 ಬೌಂಡರಿಗಳು!

ಟಾಸ್ ಗೆದ್ದ ಬೆನ್ ಸ್ಟೋಕ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಪಾಕ್ ಬೌಲರ್‌ಗಳನ್ನು ಎಲ್ಲ ಬ್ಯಾಟರ್‌ಗಳೂ ದಂಡಿಸಿದರು.

ಈ ಇನಿಂಗ್ಸ್‌ನಲ್ಲಿ ಒಟ್ಟು 73 ಬೌಂಡರಿಗಳು ಹಾಗೂ ಮೂರು ಸಿಕ್ಸರ್‌ಗಳು ಸಿಡಿದವು. ಮೊದಲ ವಿಕೆಟ್ ಜೊತೆಯಾಟದಲ್ಲಿ ಜ್ಯಾಕ್ ಮತ್ತು ಡಕೆಟ್ 233 ರನ್ ಸೇರಿಸಿದರು. ಒಲಿ ಪೋಪ್ ಹಾಗೂ ಬ್ರೂಕ್ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 176 ರನ್ ಸೇರಿಸಿದರು.

2005ರ ನಂತರ ಇಂಗ್ಲೆಂಡ್ ತಂಡವು ಪಾಕ್ ಪ್ರವಾಸ ಕೈಗೊಂಡ ಮೊದಲ ಸರಣಿ ಇದಾಗಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ : 75 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 506 (ಜ್ಯಾಕ್ ಕ್ರಾಲಿ 122, ಬೆನ್ ಡಕೆಟ್ 107, ಒಲಿ ಪೋಪ್ 108, ಹ್ಯಾರಿ ಬ್ರೂಕ್ ಬ್ಯಾಟಿಂಗ್ 101, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 34, ಜಹೀದ್ ಮೆಹಮೂದ್ 160ಕ್ಕೆ2)

ಕ್ರಿಕೆಟ್: ಆತಿಥೇಯರಿಗೆ ಹಸನ್, ನಜ್ಮುಲ್ ಆಸರೆ

ಕಾಕ್ಸ್ ಬಜಾರ್, ಬಾಂಗ್ಲಾದೇಶ: ಝಾಕೀರ್ ಹಸನ್ ಮತ್ತು ನಜ್ಮುಲ್ ಹುಸೇನ್ ಶಾಂತೊ ಆತಿಥೇಯ ಬಾಂಗ್ಲಾದೇಶದ ಎ ತಂಡಕ್ಕೆ ಆಸರೆಯಾಗಿದ್ದಾರೆ.

ಶೇಖ್ ಕಮಲ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನ ಎರಡನೇ ಇನಿಂಗ್ಸ್ ಆಡುತ್ತಿರುವ ಬಾಂಗ್ಲಾ ತಂಡವು 63 ಓವರ್‌ಗಳಲ್ಲಿ 1 ವಿಕೆಟ್‌ಗೆ 172 ರನ್ ಗಳಿಸಿದೆ. ಮೊದಲ ಇನಿಂಗ್ಸ್‌ನಲ್ಲಿ ಭಾರತ ಎ ತಂಡವು ಭಾರತ 352 ಮುನ್ನಡೆ ಗಳಿಸಿತ್ತು. ಈ ಮೊತ್ತವವನ್ನು ಚುಕ್ತಾ ಮಾಡಲು ಆತಿಥೇಯರಿಗೆ ಇನ್ನೂ 180ರನ್‌ಗಳ ಅವಶ್ಯಕತೆ ಇದೆ.

ಮೊದಲ ಇನಿಂಗ್ಸ್‌ನಲ್ಲಿ 112 ರನ್‌ಗಳಿಗೆ ಬಾಂಗ್ಲಾ ಎ ತಂಡವು ಆಲೌಟ್ ಆಗಿತ್ತು ಇದರಿಂದಾಗಿ ಎರಡನೇ ಇನಿಂಗ್ಸ್‌ನಲ್ಲಿ ಬ್ಯಾಟರ್‌ಗಳು ಎಚ್ಚರಿಕೆಯಿಂದ ಆಡುತ್ತಿದ್ದಾರೆ. ಝಾಕೀರ್ ಹಸನ್ (ಬ್ಯಾಟಿಂಗ್ 82) ಹಾಗೂ ಮೆಹಮುದುಲ್ಲಾ ಹಸನ್ ಜಾಯ್ (21 ರನ್) ಉತ್ತಮ ಆರಂಭ ನೀಡಿದರು. ಹಸನ್ ಮತ್ತು ನಜ್ಮುಲ್ (ಬ್ಯಾಟಿಂಗ್ 56) ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 101 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 5ಕ್ಕೆ464 ಡಿಕ್ಲೇರ್ಡ್, ಬಾಂಗ್ಲಾದೇಶ ಎ: 45 ಓವರ್‌ಗಳಲ್ಲಿ 112 (ಮೊಸಾದಿಕ್ ಹುಸೇನ್ 63, ಮುಕೇಶ್ ಕುಮಾರ್ 25ಕ್ಕೆ2, ನವದೀಪ್ ಸೈನಿ 21ಕ್ಕೆ3, ಸೌರಭ್ ಕುಮಾರ್ 23ಕ್ಕೆ4), ಬಾಂಗ್ಲಾದೇಶ ಎ: ಎರಡನೇ ಇನಿಂಗ್ಸ್: 63 ಓವರ್‌ಗಳಲ್ಲಿ 1 ವಿಕೆಟ್‌ಗೆ 172 (ಝಾಕೀರ್ ಹಸನ್ ಬ್ಯಾಟಿಂಗ್ 82, ನಜ್ಮುಲ್ ಹುಸೇನ್ ಶಾಂತೊ ಬ್ಯಾಟಿಂಗ್ 56, ಸೌರಭ್ ಕುಮಾರ್ 45ಕ್ಕೆ1)

ಬೆಂಗಳೂರು ರೇಸ್

ಟ್ರಾಂಕ್ವಿಲೊ ಗೆಲ್ಲುವ ನಿರೀಕ್ಷೆ

ಜಯಂತ್ ಶಾ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಬೆಂಗಳೂರು ಚಳಿಗಾಲದ ರೇಸ್‌ಗಳ ಮೊದಲನೇ ದಿನದ ಪ್ರಧಾನ ಆಕರ್ಷಣೆಯಾಗಿದ್ದು, ಟ್ರಾಂಕ್ವಿಲೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ಯಾಷ್ ಔಟ್ 5, ರೈಟ್ಲಿ ನೋಬಲ್ 4, ಪರ್ಫೆಕ್ಟ್ ಹೆಲೊ 9
2ನೇ ರೇಸ್: ಸೀಝ್ ಕರೇಜಿಯಸ್ 4, ಕಂಟೆಂಡರ್ 1, ಮೈ ಸಾಲಿಟೇರ್ 8
3ನೇ ರೇಸ್: ಇಂಗ್ಲಿಷ್ ಬೇ 3, ಸ್ಲಿಂಗ್ ಶಾಟ್ 9, ಜರೇವಿಚ್ 2
4ನೇ ರೇಸ್: ಸ್ವಾರ್ಮಿ ಓಷನ್ 6, ಕೇಪ್ರಿಯಾಟಿ 8, ಮೈಟಿ ಜೊ 2
5ನೇ ರೇಸ್: ಟ್ರಾಂಕ್ವಿಲೊ 5, ಲಾಸ್ಟ್ ವಿಶ್ 1, ಶುಭಾಂಕರ್ 4
6ನೇ ರೇಸ್: ಸೂಪರ್ ವೆಲಾಸ್ 7, ಟ್ರಿಪಿಟಾಕ 9, ಆರ್ಕ್‌ವೇ 2
7ನೇ ರೇಸ್: ಶಾಮ್‌ರಾಕ್ 2, ಮಾಂಟೆಲಿನಾ 4, ಅರ್ಬನ್ ಬಾರ್ಬನ್ 9

ಉತ್ತಮ ಬೆಟ್: ಸೀಝ್ ಕರೇಜಿಯಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ವಿಂಡೀಸ್ ಎದುರು ಬೃಹತ್ ಮೊತ್ತ ಗಳಿಸಿದ ಆಸ್ಟ್ರೇಲಿಯಾ

ಲಾಬುಷೇನ್–ಸ್ಟೀವ್ ಸ್ಮಿತ್ ದ್ವಿಶತಕ

ಪರ್ತ್ (ಎಎಫ್‌ಪಿ): ಮಾರ್ನಸ್ ಲಾಬುಷೇನ್ ಮತ್ತು ಸ್ಟೀವ್ ಸ್ಮಿತ್ ಅವರಿಬ್ಬರೂ ಗಳಿಸಿದ ದ್ವಿಶತಕಗಳ ಬಲದಿಂದ ಆಸ್ಟ್ರೇಲಿಯಾ ತಂಡವು ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಬೃಹತ್ ಮೊತ್ತ ಗಳಿಸಿತು.

ಪರ್ತ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಗುರುವಾರ ಆಸ್ಟ್ರೇಲಿಯಾ ತಂಡವು 152.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 598 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಬ್ಯಾಟಿಂಗ್ ಆರಂಭಿಸಿದ ವೆಸ್ಟ್ ಇಂಡೀಸ್ ತಂಡವು ದಿನದಾಟದ ಮುಕ್ತಾಯಕ್ಕೆ 25 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 74 ರನ್ ಗಳಿಸಿದೆ. ಪದಾರ್ಪಣೆ ಪಂದ್ಯ ಆಡುತ್ತಿರುವ ತೇಜನಾರಾಯಣ್ ಚಂದ್ರಪಾಲ್ (ಬ್ಯಾಟಿಂಗ್ 47) ಮತ್ತು ಕ್ರೇಗ್ ಬ್ರಾಥ್‌ವೇಟ್ (ಬ್ಯಾಟಿಂಗ್ 18) ಕ್ರೀಸ್‌ನಲ್ಲಿದ್ದಾರೆ.

ಮೊದಲ ದಿನದಾಟದಲ್ಲಿ ಆಸ್ಟ್ರೇಲಿಯಾ ತಂಡವು 90 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 293 ರನ್ ಗಳಿಸಿತ್ತು. ಲಾಬುಷೇನ್ 154 ಹಾಗೂ ಸ್ಮಿತ್ 59 ರನ್ ಗಳಿಸಿ ಕ್ರೀಸ್‌ನಲ್ಲಿದ್ದರು. ಎರಡನೇ ದಿನದಲ್ಲಿ ಇಬ್ಬರ ಜೊತೆಯಾಟ ಮುಂದುವರಿಯಿತು.

ಸ್ಟೀವನ್ ಸ್ಮಿತ್ ಮತ್ತು ಮಾರ್ನಸ್ ಲಾಬುಷೇನ್ –ಎಎಫ್‌ಪಿ ಚಿತ್ರ

ಮೂರನೇ ವಿಕೆಟ್‌ಗೆ ಅವರು ಒಟ್ಟು 251 ರನ್‌ಗಳನ್ನು ಸೇರಿಸಿದರು. ಬ್ರೆಥ್‌ವೇಟ್ ಬೌಲಿಂಗ್‌ನಲ್ಲಿ ಲಾಬುಷೇನ್ ಔಟಾದಾಗ ವಿಂಡೀಸ್ ಬಳಗ ಸಂಭ್ರಮಿಸಿತು.

ಆದರೆ ಕ್ರೀಸ್‌ಗೆ ಬಂದ ಟ್ರಾವಿಸ್ ಹೆಡ್ (99; 95ಎ, 4X11) ಇನಿಂಗ್ಸ್‌ನ ಚಹರೆಯನ್ನೇ ಬದಲಿಸಿಬಿಟ್ಟರು. ಟಿ20 ಮಾದರಿಯಲ್ಲಿ ಬ್ಯಾಟ್ ಬೀಸಿದ ಅವರು ಕೇವಲ ಒಂದು ರನ್ ಅಂತರದಿಂದ ಶತಕ ಕೈತಪ್ಪಿಸಿಕೊಂಡರು. ಅವರು ಮತ್ತು ಸ್ಮಿತ್ ಸೇರಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 196 ರನ್‌ಗಳನ್ನು ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 152.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 598 ಡಿಕ್ಲೇರ್ಡ್ (ಉಸ್ಮಾನ್ ಖ್ವಾಜಾ 65, ಮಾರ್ನಸ್ ಲಾಬುಷೇನ್ 204, ಸ್ಟೀವ್ ಸ್ಮಿತ್ ಔಟಾಗದೆ 200, ಟ್ರಾವಿಸ್ ಹೆಡ್ 99, ಕ್ರೇಗ್ ಬ್ರಾಥ್‌ವೇಟ್ 65ಕ್ಕೆ2) ವೆಸ್ಟ್ ಇಂಡೀಸ್: 25 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 74 (ಕ್ರೇಗ್ ಬ್ರಾಥ್‌ವೇಟ್ ಬ್ಯಾಟಿಂಗ್ 18, ತೇಜನಾರಾಯಣ್ ಚಂದ್ರಪಾಲ್ ಬ್ಯಾಟಿಂಗ್ 47)

ಕ್ವಾರ್ಟರ್ ಫೈನಲ್‌ಗೆ ಸ್ವಿಸ್ ರೇ, ಅಡೋಬಿ

ಬೆಂಗಳೂರು: ಸ್ವಿಸ್ ರೇ ಮತ್ತು ಅಡೋಬಿ ತಂಡಗಳು ನೈಸ್ ಡಿಎಚ್ ಕಪ್ ಕಾರ್ಪೊರೇಟ್ 'ಫೈವ್ ಎ ಸೈಡ್ ಫುಟ್‌ಬಾಲ್ ಟೂರ್ನಿ'ಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಗುರುವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಸ್ವಿಸ್ ರೇ 4–1 ಗೋಲುಗಳಿಂದ ಪುರವಂಕರ ತಂಡವನ್ನು ಮಣಿಸಿತು.

ಸ್ವಿಸ್ ರೇ ತಂಡದ ದೀಪಕ್ ಮೇಲ್ವಾನಿ ಮತ್ತು ಎ.ಸಾಗರ್ ಅವರು ತಲಾ ಎರಡು ಗೋಲು ಗಳಿಸಿದರು. ಪುರವಂಕರ ಪರ ಎ.ಕಿರಣ್ ಅವರು ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಅಡೋಬಿ ತಂಡ 6–0 ಗೋಲುಗಳಿಂದ ಎಚ್‌ಎಲ್ ಕ್ಲೆಮೋವ್ ವಿರುದ್ಧ ಗೆದ್ದಿತು.

'ಎ' ಗುಂಪಿನಿಂದ ಟೈಟನ್, ಎಪ್ಸಿಲಾನ್, ತಾವಂತ್ ಮತ್ತು ಸ್ವಿಸ್ ರೇ ತಂಡಗಳು ಹಾಗೂ 'ಬಿ' ಗುಂಪಿನಿಂದ ಬಾಷ್, ವಿಸೆನ್, ಐಕ್ವಿಯಾ ಮತ್ತು ಅಡೋಬಿ ತಂಡಗಳು ಟೂರ್ನಿಯ ಮುಂದಿನ ಹಂತಕ್ಕೆ ಅರ್ಹತೆ ಪಡೆದುಕೊಂಡವು.

ಜಂಪ್‌ರೋಪ್ ಸ್ಪರ್ಧೆ: ತೇಜೇಶ್ವರಿ, ನೀಲಾವತಿಗೆ ಚಿನ್ನ

ಬೆಂಗಳೂರು: ಇಲ್ಲಿಯ ಆರ್.ಆರ್. ಸಂಸ್ಥೆಯ ಎ. ಎಲ್. ಕಾಲೇಜಿನ ಕೆ. ತೇಜೇಶ್ವರಿ, ನೀಲಾವತಿ, ಪ್ರತೀಕ್ಷಾ ಜಿ., ಸಾನಿಯಾ ಎಸ್. ಅವರು ಪದವಿಪೂರ್ವ ಕಾಲೇಜುಗಳ ರಾಜ್ಯಮಟ್ಟದ ಜಂಪ್ ರೋಪ್, ಸಿಲಂಬಮ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಬೆಂಗಳೂರು ಉತ್ತರ ಜಿಲ್ಲೆಯ ವಿದ್ಯಾರ್ಥಿಗಳು ಮಿಂಚಿದರು.

ಕೊಪ್ಪಳ ಜಿಲ್ಲೆಯ ಹನಮಸಾಗರದಲ್ಲಿ ಕ್ರೀಡಾಕೂಟ ನಡೆಯಿತು.

ಫಲಿತಾಂಶಗಳು (ಎ. ಎಲ್. ಕಾಲೇಜು): ಡಬಲ್ ಅಂಡರ್ ರೀಲೆಯಲ್ಲಿ ಕೆ. ತೇಜೇಶ್ವರಿ, ನೀಲಾವತಿ, ಪ್ರತೀಕ್ಷಾ ಜಿ, ಸಾನಿಯಾ ಎಸ್(ಪ್ರಥಮ), ಫ್ರೀಸ್ಟೈಲ್ ವಿಭಾಗದಲ್ಲಿ ಸೃಷ್ಟಿ (ತೃತೀಯ). 30 ಸೆಕೆಂಡ್ ಡಬಲ್ ಅಂಡರ್ ವಿಭಾಗದಲ್ಲಿ ರೇವಾ ಕಾಲೇಜಿನ ಪ್ರೇರಣಾ. ಟಿ. ಎನ್. ಅವರಿಗೆ ಎರಡನೇ ಸ್ಥಾನ. ಬಾಲಕರ ವಿಭಾಗದಲ್ಲಿ ಎ. ಎಲ್. ಕಾಲೇಜಿನ ರಕ್ಷಿತ್‌ಗೆ 30 ಸೆಕೆಂಡ್ ಡಬಲ್ ಅಂಡರ್ ವಿಭಾಗದಲ್ಲಿ ತೃತೀಯ ಸ್ಥಾನ.

ಸಿಲಂಬಮ್ (ಬಾಲಕಿಯರ ವಿಭಾಗ): ಎ. ಎಲ್. ಕಾಲೇಜು: ಸ್ವಿಂಗ್ ವಿಭಾಗ: ಅನುಷಾ (ದ್ವಿತೀಯ). ಸಿಂಗಲ್ ಸ್ಟಿಕ್ ರೊಟೇಷನ್: ರಾಜೇಶ್ವರಿ ಜಿ (ತೃತೀಯ) ಡಬಲ್ ಸ್ಟಿಕ್ ರೊಟೇಷನ್ (ಸೆಂಟ್ ಹ್ಯಾನ್ಸ್ ಕಾಲೇಜ್) : ಪ್ರೀತಿ ಜಿ (ತೃತೀಯ) **ಬಾಲಕರು:** ಎ. ಎಲ್. ಕಾಲೇಜು: ಸ್ವಿಂಗ್ ವಿಭಾಗ: ವರುಣ ಆರ್. (ತೃತೀಯ).

ಪೋಲೆಂಡ್ ವಿರುದ್ಧ 2–0 ಗೆಲುವು; 16ರ ಘಟ್ಟದಲ್ಲಿ ಆಸ್ಟ್ರೇಲಿಯಾ ಎದುರಾಳಿ

ನಾಕೌಟ್ ಹಂತಕ್ಕೆ ಮೆಸ್ಸಿ ಬಳಗ

ಮುಖ್ಯಾಂಶಗಳು

- ಪೆನಾಲ್ಟಿಯಲ್ಲಿ ಗೋಲು ಗಳಿಸಲು ಮೆಸ್ಸಿ ವಿಫಲ
- ಅರ್ಜೆಂಟೀನಾಕ್ಕೆ 'ಸಿ' ಗುಂಪಿನಲ್ಲಿ ಅಗ್ರಸ್ಥಾನ
- ಸೋತರೂ ಪೋಲೆಂಡ್ ತೇರ್ಗಡೆ

ದೋಹಾ (ರಾಯಿಟರ್ಸ್): ಸ್ಟಾರ್ ಆಟಗಾರ ಲಯೊನೆಲ್ ಮೆಸ್ಸಿ ಪೆನಾಲ್ಟಿ ಕಿಕ್ ಅವಕಾಶ ಕೈಚೆಲ್ಲಿದರೂ, ಒತ್ತಡಕ್ಕೆ ಒಳಗಾಗದೆ ದಿಟ್ಟ ಆಟವಾಡಿದ ಅರ್ಜೆಂಟೀನಾ ತಂಡ ವಿಶ್ವಕಪ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟಿತು.

'ಸ್ಟೇಡಿಯಂ 974' ರಲ್ಲಿ ಬುಧವಾರ ತಡರಾತ್ರಿ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಅರ್ಜೆಂಟೀನಾ 2–0 ಗೋಲುಗಳಿಂದ ಪೋಲೆಂಡ್ ತಂಡವನ್ನು ಮಣಿಸಿತು. ಅಲೆಕ್ಸಿಸ್ ಮ್ಯಾಕ್ ಅಲಿಸ್ಟರ್ ಮತ್ತು ಜೂಲಿಯನ್ ಅಲ್ವಾರೆಜ್ ಗೋಲು ತಂದಿತ್ತರು.

ದಕ್ಷಿಣ ಅಮೆರಿಕದ ತಂಡ ಒಟ್ಟು ಆರು ಪಾಯಿಂಟ್ಸ್‌ಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ನಾಕೌಟ್‌ಗೆ ಪ್ರವೇಶಿಸಿತು. ಈ ಪಂದ್ಯದಲ್ಲಿ ಸೋತರೂ ಎರಡನೇ ಸ್ಥಾನ ಪಡೆಯುವ ಮೂಲಕ ಪೋಲೆಂಡ್ ಕೂಡಾ ಅರ್ಹತೆ ಗಳಿಸಿತು.

ಟೂರ್ನಿಯ ಮೊದಲ ಪಂದ್ಯದಲ್ಲಿ ಸೌದಿ ಅರೇಬಿಯಾ ಕೈಯಲ್ಲಿ ಆಘಾತ ಅನುಭವಿಸಿ ಟೀಕೆಗೆ ಗುರಿಯಾಗಿದ್ದು ಅರ್ಜೆಂಟೀನಾ, ಆ ಬಳಿಕದ ಎರಡೂ ಪಂದ್ಯಗಳಲ್ಲಿ ಚೇತೋಹಾರಿ ಪ್ರದರ್ಶನ ನೀಡಿತು. ಮೆಸ್ಸಿ ಅವರು ವಿಶ್ವಕಪ್‌ನಲ್ಲಿ ಇನ್ನೊಂದು ಪಂದ್ಯ ಆಡಲಿರುವುದು ವಿಶ್ವದ ವಿವಿಧೆಡೆಯಿರುವ ಅವರ ಅಭಿಮಾನಿಗಳಲ್ಲಿ ಪುಳಕ ಉಂಟುಮಾಡಿದೆ.

16ರ ಘಟ್ಟ ಪ್ರವೇಶಿಸಲು ಗೆಲುವು ಅನಿವಾರ್ಯವಾಗಿದ್ದ ಪಂದ್ಯದಲ್ಲಿ ಅರ್ಜೆಂಟೀನಾ ಶಿಸ್ತಿನ ಆಟವಾಡಿತು. ಆದರೂ ಮೊದಲ ಅವಧಿ ಗೋಲು-ರಹಿತವಾಗಿತ್ತು.

ಪ್ರಥಮಾರ್ಧದಲ್ಲಿ ಲಭಿಸಿದ ಪೆನಾಲ್ಟಿ ಕಿಕ್ ಅವಕಾಶವನ್ನು ಗೋಲಾಗಿ ಪರಿವರ್ತಿಸಲು ಅರ್ಜೆಂಟೀನಾ ವಿಫಲವಾಯಿತು. ಮೆಸ್ಸಿ ಅವರು ಚೆಂಡನ್ನು ಹೆಡ್ ಮಾಡುವುದನ್ನು ತಡೆಯಲು ಪೋಲೆಂಡ್‌ನ ಗೋಲ್‌ಕೀಪರ್ ವೊಯಿಚೆಕ್ ಸ್ಟೆನ್ಸೆ ಮುಂದಾದಾಗ ಅವರ ಗ್ಲೋವ್, ಮೆಸ್ಸಿ ಮುಖಕ್ಕೆ ಬಡಿಯಿತು. ಇದಕ್ಕೆ ರೆಫರಿ ಪೆನಾಲ್ಟಿ ನೀಡಿದರು. ಪೆನಾಲ್ಟಿ ಕಿಕ್‌ನಲ್ಲಿ ಮೆಸ್ಸಿ ಒದ್ದ ಚೆಂಡನ್ನು ಸ್ಟೆನ್ಸೆ ತಮ್ಮ ಎಡಭಾಗಕ್ಕೆ ಜಿಗಿದು ಒಂದು ಕೈಯಿಂದ ಅಮೋಘವಾಗಿ ತಡೆದರು.

ಎರಡನೇ ಅವಧಿಯ ಆರಂಭದಲ್ಲೇ ಅರ್ಜೆಂಟೀನಾ ಮುನ್ನಡೆ ಗಳಿಸಿತು. ಮೊಲಿನಾ ಅವರು ನೀಡಿದ ಪಾಸ್‌ನಲ್ಲಿ ಅಲೆಕ್ಸಿಸ್ ಚೆಂಡನ್ನು ಗುರಿ ಸೇರಿಸಿದರು.

ಆಟಗಾರರ ನಡುವಿನ ಉತ್ತಮ ಹೊಂದಾಣಿಕೆಯಿಂದ ಎರಡನೇ ಗೋಲು ಬಂತು. ಥ್ರೋಇನ್‌ನಲ್ಲಿ ದೊರೆತ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಎಂಜೊ ಫೆರ್ನಾಂಡಿಸ್ ಅವರು ಎದುರಾಳಿ ಡಿಫೆಂಡರ್‌ಗಳನ್ನು ತಪ್ಪಿಸಿ, ಅಲ್ವಾರೆಜ್‌ಗೆ ನೀಡಿದರು. ಅವರು ಸೊಗಸಾದ ರೀತಿಯಲ್ಲಿ ಗುರಿ ಸೇರಿಸಿದರು.

ಮೆಸ್ಸಿ ಗೋಲು ಗಳಿಸಲು ವಿಫಲರಾದರೂ, ಪೋಲೆಂಡ್‌ನ ರಕ್ಷಣಾ ವಿಭಾಗದ ಮೇಲೆ ನಿರಂತರ ಒತ್ತಡ ಹೇರುವಲ್ಲಿ ಯಶಸ್ವಿಯಾದರು.

ಎದುರಾಳಿ ಗೋಲ್‌ಪೋಸ್ಟ್ ಗುರಿಯಾಗಿಸಿ ದಾಳಿ ನಡೆಸುವುದರಲ್ಲಿ ಪೋಲೆಂಡ್ ಆಟಗಾರರು ಪೂರ್ಣ ವೈಫಲ್ಯ ಅನುಭವಿಸಿದರು. ಇದರಿಂದ ಅರ್ಜೆಂಟೀನಾ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಜ್‌ಗೆ ಹೆಚ್ಚಿನ ಕೆಲಸವಿರಲಿಲ್ಲ.

ಪಂದ್ಯದ ಬಹುತೇಕ ಅವಧಿಯಲ್ಲಿ ಅವರು ಪ್ರೇಕ್ಷಕರಾಗಿ ನಿಂತುಬಿಟ್ಟರು.

'ಪಂದ್ಯದಲ್ಲಿ ಆಡಿದ ರೀತಿ ನನಗೆ ತೃಪ್ತಿ ಉಂಟುಮಾಡಿದೆ. ಗೆಲುವು ಅನಿವಾರ್ಯವಾಗಿದ್ದರಿಂದ ಪಂದ್ಯ ಅಷ್ಟೊಂದು ಸುಲಭದ್ದಾಗಿರಲಿಲ್ಲ' ಎಂದು ಅರ್ಜೆಂಟೀನಾ ಕೋಚ್ ಲಯೊನೆಲ್ ಸ್ಕಾಲೊನಿ ಪ್ರತಿಕ್ರಿಯಿಸಿದ್ದಾರೆ.

ಆಸ್ಟ್ರೇಲಿಯಾ ತಂಡದ ಸವಾಲು

ಅರ್ಜೆಂಟೀನಾ ತಂಡ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 'ಡಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿರುವ ಆಸ್ಟ್ರೇಲಿಯಾ ತಂಡದ ಸವಾಲು ಎದುರಿಸಲಿದೆ. ಪೋಲೆಂಡ್ ತಂಡ 'ಡಿ' ಗುಂಪಿನ ಅಗ್ರಸ್ಥಾನಿ, ಹಾಲಿ ಚಾಂಪಿಯನ್ ಫ್ರಾನ್ಸ್ ವಿರುದ್ಧ ಪೈಪೋಟಿ ನಡೆಸಲಿದೆ.

ಜೂಲಿಯನ್ ಅಲ್ವಾರೆಜ್ (ಎಡ) ಅವರು ಎಂಜೊ ಫೆರ್ನಾಂಡಿಸ್ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಗೋಲುಗಳ ವಿವರ

ಅರ್ಜೆಂಟೀನಾ- 2
ಅಲೆಕ್ಸಿಸ್ ಅಲಿಸ್ಟರ್ (46ನೇ ನಿ.)
ಜೂಲಿಯನ್ ಅಲ್ವಾರೆಜ್ (67ನೇ ನಿ.)
ಪೋಲೆಂಡ್-0

ಗುಂಪು 'ಸಿ' ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಗೋಲು ಅಂತರ	ಪಾಯಿಂಟ್
ಅರ್ಜೆಂಟೀನಾ	3	2	0	1	3	6
ಪೋಲೆಂಡ್	3	1	1	1	0	4
ಮೆಕ್ಸಿಕೊ	3	1	1	1	-1	4
ಸೌದಿ	3	1	0	2	-2	3

ಲೂಯಿಸ್ ಚಾವೆಜ್ ಎರಡನೇ ಗೋಲು ಗಳಿಸಿದಾಗ ಮೆಕ್ಸಿಕೊ ಆಟಗಾರರು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಗೆದ್ದರೂ ಹೊರಬಿದ್ದ ಮೆಕ್ಸಿಕೊ ತಂಡ

ಲುಸೈಲ್, ಕತಾರ್ (ಎಪಿ): ಮೆಕ್ಸಿಕೊ ತಂಡ 'ಸಿ' ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಗೆದ್ದರೂ, ಫಿಫಾ ವಿಶ್ವಕಪ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಲು ವಿಫಲವಾಯಿತು.

ಬುಧವಾರ ನಡೆದ ಪಂದ್ಯದಲ್ಲಿ ಮೆಕ್ಸಿಕೊ 2-1 ಗೋಲುಗಳಿಂದ ಸೌದಿ ಅರೇಬಿಯಾ ತಂಡವನ್ನು ಮಣಿಸಿತು. ಲೀಗ್ ವ್ಯವಹಾರ ಕೊನೆಗೊಳಿಸಿದ ಮೆಕ್ಸಿಕೊ, ನಾಲ್ಕು ಪಾಯಿಂಟ್ಸ್ ಕಲೆಹಾಕಿ ಪೋಲೆಂಡ್ ಜತೆ ಸಮಬಲ ಸಾಧಿಸಿತು. ಅದರೆ ಗೋಲು ಸರಾಸರಿಯಲ್ಲಿ ಹಿಂದೆ ಬಿದ್ದು ಟೂರ್ನಿಯಿಂದ ನಿರ್ಗಮಿಸಿತು.

ಮೊದಲ ಪಂದ್ಯದಲ್ಲಿ ಅರ್ಜೆಂಟೀನಾ ತಂಡವನ್ನು ಮಣಿಸಿ ಐತಿಹಾಸಿಕ ಸಾಧನೆ ಮಾಡಿದ್ದ ಸೌದಿ ಅರೇಬಿಯಾ, ಆ ಬಳಿಕದ ಎರಡೂ ಪಂದ್ಯಗಳನ್ನು ಸೋತು ಟೂರ್ನಿಯಿಂದ ಹೊರಬಿತ್ತು.

ಲುಸೈಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲ ಅವಧಿಯಲ್ಲಿ ಯಾವುದೇ ಗೋಲು ಬರಲಿಲ್ಲ. 47ನೇ ನಿಮಿಷದಲ್ಲಿ ಹೆನ್ರಿ ಮಾರ್ಟಿನ್ ಗೋಲು ಗಳಿಸಿ ಮೆಕ್ಸಿಕೊಗೆ 1-0 ಮುನ್ನಡೆ ತಂದಿತ್ತರು. ಐದು ನಿಮಿಷಗಳ ಬಳಿಕ ಲೂಯಿಸ್ ಚಾವೆಜ್ (52ನೇ ನಿ.) ಅವರು ಮುನ್ನಡೆಯನ್ನು 2-0ಗೆ ಹೆಚ್ಚಿಸಿದರು. ಸೌದಿ ಅರೇಬಿಯಾ ತಂಡದ ಏಕೈಕ ಗೋಲನ್ನು ಸಲೇಂ ಅಲ್‌ದೌಸರಿ ಅವರು ಇಂಜುರಿ ಅವಧಿಯಲ್ಲಿ (90+5 ನಿ.) ಗಳಿಸಿದರು.

ಮೆಕ್ಸಿಕೊ ತಂಡ ವಿಶ್ವಕಪ್‌ನಲ್ಲಿ ಗುಂಪು ಹಂತ ದಾಟಲು ವಿಫಲವಾಗಿದ್ದು 1978ರ ಬಳಿಕ ಇದೇ ಮೊದಲು. ಕಳೆದ ಏಳು ವಿಶ್ವಕಪ್ ಟೂರ್ನಿಗಳಲ್ಲೂ ನಾಕೌಟ್ ಹಂತ ಪ್ರವೇಶಿಸಿದ್ದ ಸಾಧನೆ ಮಾಡಿತ್ತಲ್ಲದೆ, ಬ್ರೆಜಿಲ್ ಬಳಿಕ ಎರಡನೇ ಸ್ಥಾನದಲ್ಲಿತ್ತು. ಬ್ರೆಜಿಲ್ ತಂಡ 1986ರ ಬಳಿಕ ಎಲ್ಲ ವಿಶ್ವಕಪ್ ಟೂರ್ನಿಗಳಲ್ಲೂ ನಾಕೌಟ್ ಹಂತ ಪ್ರವೇಶಿಸಿದೆ.

ಗೋಲು ಸರಾಸರಿಯಲ್ಲಿ ಪೋಲೆಂಡ್ ತಂಡವನ್ನು ಹಿಂದಿಕ್ಕಲು ಮೆಕ್ಸಿಕೊ ತಂಡ ಇನ್ನೊಂದು ಗೋಲಿಗಾಗಿ ಕೊನೆಯ 20 ನಿಮಿಷಗಳಲ್ಲಿ ಎಲ್ಲ ರೀತಿಯ ಪ್ರಯತ್ನ ನಡೆಸಿತಾದರೂ, ಯಶ ಕಾಣಲಿಲ್ಲ. 87ನೇ ನಿಮಿಷದಲ್ಲಿ ಯುರಿಲ್ ಆಂಟನಾ ಅವರು ಚೆಂಡು ಗುರಿ ಸೇರಿಸಿದರೂ, ರೆಫರಿ 'ಆಫ್‌ಸೈಡ್' ಎಂದು ಗೋಲು ಮಾನ್ಯ ಮಾಡಲಿಲ್ಲ.

'ನಮಗೆ ಇನ್ನೊಂದು ಗೋಲು ಬೇಕಾಗಿತ್ತು. ಆದರೆ ಕೊನೆಯಲ್ಲಿ ಏನು ನಡೆಯಿತು ಎಂಬುದು ನನಗೆ ತಿಳಿದಿಲ್ಲ. ಮೂರರಿಂದ ನಾಲ್ಕು ಗೋಲು ಗಳಿಸುವ ಗುರಿಯೊಂದಿಗೆ ಕಣಕ್ಕಿಳಿ-ದಿದ್ದೆವು. ಅದು ಕೈಗೂಡಲಿಲ್ಲ. ಇದು ನಾಚಿಕೆಗೇಡಿನ ಸಂಗತಿ' ಎಂದು ತಮ್ಮ ಐದನೇ ವಿಶ್ವಕಪ್ ಆಡಿದ ಮೆಕ್ಸಿಕೊ ಗೋಲ್‌ಕೀಪರ್ ಗ್ಯುಲೆರ್ಮೊ ಒಕಾವೊ ತಿಳಿಸಿದರು.

ಮೆಕ್ಸಿಕೊ ತನ್ನ ಮೊದಲ ಪಂದ್ಯದಲ್ಲಿ ಪೋಲೆಂಡ್ ಜತೆ ಗೋಲುರಹಿತ ಡ್ರಾ ಮಾಡಿಕೊಂಡಿದ್ದರೆ, ಎರಡನೇ ಪಂದ್ಯದಲ್ಲಿ 0-2 ರಲ್ಲಿ ಅರ್ಜೆಂಟೀನಾ ಎದುರು ಪರಾಭವಗೊಂಡಿತ್ತು.

'ಸೋಲಿನಿಂದ ಹಿನ್ನಡೆ ಆಗಿಲ್ಲ'

ದೋಹಾ (ರಾಯಿಟರ್ಸ್): 'ಕೊನೆಯ ಲೀಗ್ ಪಂದ್ಯದಲ್ಲಿ ಟುನೀಷಿಯಾ ಎದುರಿನ ಸೋಲು ತಂಡದ ಆಟಗಾರರ ಅತ್ಮವಿಶ್ವಾಸಕ್ಕೆ ಧಕ್ಕೆ ಉಂಟುಮಾಡಿಲ್ಲ' ಎಂದು ಫ್ರಾನ್ಸ್ ತಂಡದ ಆಟಗಾರ ಕಿಂಗ್ಸ್‌ಲಿ ಕೊಮಾನ್ ಹೇಳಿದ್ದಾರೆ.

ಬುಧವಾರ ರಾತ್ರಿ ನಡೆದಿದ್ದ ಪಂದ್ಯದಲ್ಲಿ ಫ್ರಾನ್ಸ್ 0–1 ಗೋಲಿನಿಂದ ಸೋತಿತ್ತು. ಫ್ರಾನ್ಸ್ ತಂಡ ಕೊನೆಯ ಪಂದ್ಯಕ್ಕೂ ಮುನ್ನ ನಾಕೌಟ್‌ಗೆ ಅರ್ಹತೆ ಪಡೆದಿತ್ತು. ಆದ್ದರಿಂದ ಕೋಚ್ ದಿದಿಯೆರ್ ದೆಶಾಂಪ್ ಅವರು ಟುನೀಷಿಯಾ ವಿರುದ್ಧದ ಪಂದ್ಯಕ್ಕೆ ಪ್ರಮುಖರಿಗೆ ವಿಶ್ರಾಂತಿ ನೀಡಿದ್ದರು. ಒಟ್ಟು ಒಂಬತ್ತು ಬದಲಾವಣೆಗಳನ್ನು ಮಾಡಿದ್ದರು.



ಮೊರೊಕ್ಕೊ, ಕ್ರೊವೇಷ್ಯಾ ಅರ್ಹತೆ

ದೋಹಾ (ಎಎಫ್‌ಪಿ/ ರಾಯಿಟರ್ಸ್): ಮೊರೊಕ್ಕೊ ಮತ್ತು ಕ್ರೊವೇಷ್ಯಾ ತಂಡಗಳು ವಿಶ್ವಕಪ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಗುರುವಾರ ನಡೆದ 'ಎಫ್' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಮೊರೊಕ್ಕೊ 2–1 ಗೋಲುಗಳಿಂದ ಕೆನಡಾ ತಂಡವನ್ನು ಮಣಿಸಿತು. ಕ್ರೊವೇಷ್ಯಾ ತನ್ನ ಅಂತಿಮ ಪಂದ್ಯದಲ್ಲಿ ಬೆಲ್ಜಿಯಂ ತಂಡವನ್ನು ಗೋಲು ರಹಿತ ಡ್ರಾದಲ್ಲಿ ಕಟ್ಟಿಹಾಕಿತು.

ಒಟ್ಟು ಏಳು ಪಾಯಿಂಟ್ಸ್ ಗಳಿಸಿದ ಮೊರೊಕ್ಕೊ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಕ್ರೊವೇಷ್ಯಾ, ಐದು ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಪಡೆದು ನಾಕೌಟ್ ಹಂತದಲ್ಲಿ ಸ್ಥಾನ ಪಡೆಯಿತು. ಮೂರನೇ ಸ್ಥಾನ ಪಡೆದ ಬೆಲ್ಜಿಯಂ (4 ಪಾಯಿಂಟ್ಸ್) ಮತ್ತು ಕೊನೆಯ ಸ್ಥಾನ ಗಳಿಸಿದ ಕೆನಡಾ ತಂಡ ಹೊರಬಿದ್ದವು.

ಹಕೀಂ ಜಿಯೆಚ್ ಮತ್ತು ಯೂಸುಫ್ ಎನ್ ನೆಸ್ರಿ ಅವರು ಗೋಲು ಗಳಿಸಿ ಮೊರೊಕ್ಕೊ ತಂಡದ ಗೆಲುವಿಗೆ ಕಾರಣರಾದರು. ಉತ್ತರ ಆಫ್ರಿಕಾದ ತಂಡ 36 ವರ್ಷಗಳ ಬಿಡುವಿನ ಬಳಿಕ ನಾಕೌಟ್ ಹಂತ ಪ್ರವೇಶಿಸಿದೆ.

ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಮೊರೊಕ್ಕೊ ತಂಡಕ್ಕೆ ಹಕೀಂ ಅವರು ನಾಲ್ಕನೇ ನಿಮಿಷದಲ್ಲೇ ಮೇಲುಗೈ ತಂದಿತ್ತರು. ಅಲ್ಪ ಸಮಯದ ಬಳಿಕ ನೆಸ್ರಿ ಗೋಲು ಗಳಿಸಿ ಮುನ್ನಡೆಯನ್ನು ಹಿಗ್ಗಿಸಿದರು.

ಕೆನಡಾ ವಿರುದ್ಧ ಕೊನೆಯ ಲೀಗ್ ಪಂದ್ಯದಲ್ಲಿ ಗೆಲುವು ಪಡೆದ ಮೊರೊಕ್ಕೊ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಬೆಲ್ಜಿಯಂಗೆ ನಿರಾಸೆ: ಫಿಫಾ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಬೆಲ್ಜಿಯಂ, ಅರ್ಹತೆ ಗಳಿಸಬೇಕಾದರೆ ಕೊನೆಯ ಪಂದ್ಯದಲ್ಲಿ ಗೆಲ್ಲಲೇಬೇಕಾಗಿತ್ತು. ಆದರೆ ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕ್ರೊವೇಷ್ಯಾದ ರಕ್ಷಣಾ ಕೋಟೆಯನ್ನು ದಾಟಲು ವಿಫಲವಾಯಿತು.

ರೊಮೆಲು ಲುಕಾಕು ಅವರು ಎರಡನೇ ಅವಧಿಯಲ್ಲಿ ಗೋಲು ಗಳಿಸಲು ನಾಲ್ಕು ಉತ್ತಮ ಅವಕಾಶಗ-ಳನ್ನು ಸೃಷ್ಟಿಸಿದರೂ, 'ಫಿನಿಶಿಂಗ್'ನಲ್ಲಿನ ಲೋಪದಿಂದ ಚೆಂಡು ಗುರಿ ಸೇರಲಿಲ್ಲ.

ಘಾನಾಗೆ ಉರುಗ್ವೆ ವಿರುದ್ಧ ಮುಯ್ಯಿ ತೀರಿಸುವ ಅವಕಾಶ

ದೋಹಾ (ಎಪಿ): ಘಾನಾ ಮತ್ತು ಉರುಗ್ವೆ ತಂಡಗಳು ವಿಶ್ವಕಪ್ ಟೂರ್ನಿಯ 'ಎಚ್' ಗುಂಪಿನ ಪಂದ್ಯದಲ್ಲಿ ಶುಕ್ರವಾರ ಎದುರಾಗಲಿದ್ದು, ತುರುಸಿನ ಪೈಪೋಟಿ ನಿರೀಕ್ಷಿಸಲಾಗಿದೆ.

ಈ ಪಂದ್ಯ 2010ರ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದ ಪುನರಾವರ್ತನೆ ಎನಿಸಿದೆ. ಅಂದು ಪೆನಾಲ್ಟಿ ಶೂಟೌಟ್‌ನಲ್ಲಿ ಘಾನಾ ತಂಡವನ್ನು ಮಣಿಸಿದ್ದ ಉರುಗ್ವೆ ಸೆಮಿಫೈನಲ್ ಪ್ರವೇಶಿಸಿತ್ತು. ಆ ಸೋಲಿಗೆ ಮುಯ್ಯಿ ತೀರಿಸುವ ಅವಕಾಶ ಘಾನಾ ತಂಡಕ್ಕೆ ಒದಗಿ ಬಂದಿದೆ.

2010ರ ಪಂದ್ಯದಲ್ಲಿ ಘಾನಾ ತಂಡದ ಸೋಲಿಗೆ ಉರುಗ್ವೆಯ ಲೂಯಿಸ್ ಸೊರೇಜ್ ಅವರು ಕಾರ-ಣರಾಗಿದ್ದರು. ಇಂಜುರಿ ಅವಧಿಯಲ್ಲಿ ಘಾನಾ ತಂಡಕ್ಕೆ ದೊರೆತ ಗೋಲು ಗಳಿಸುವ ಅವಕಾಶವನ್ನು ಸೊರೇಜ್ ಕೈಯಿಂದ ತಡೆದಿದ್ದರು.

ಆ ಬಳಿಕ ಅವರು ರೆಡ್ ಕಾರ್ಡ್ ಪಡೆದು ಅಂಗಳದಿಂದ ಹೊರನಡೆದಿ-ದ್ದರು. ಆದರೆ ಪೆನಾಲ್ಟಿ ಅವಕಾಶದಲ್ಲಿ ಘಾನಾ ತಂಡದ ಅಸಮೋ ಗ್ಯಾನ್ ಗೋಲು ಗಳಿಸಲು ವಿಫಲರಾಗಿದ್ದರು. ಡಗ್‌ಔಟ್‌ನಲ್ಲಿ ಕುಳಿತಿದ್ದ ಸೊರೇಜ್ ಈ ವೇಳೆ ಸಂಭ್ರಮಿಸಿದ್ದರು. ಆ ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ ಘಾನಾ ಸೋತಿತ್ತು. ಮಾತ್ರವಲ್ಲ, ವಿಶ್ವಕಪ್ ಟೂರ್ನಿಯ ಸೆಮಿ ಪ್ರವೇಶಿಸಿದ ಆಫ್ರಿಕಾ ಖಂಡದ ಮೊದಲ ತಂಡ ಎನಿಸಿಕೊಳ್ಳುವ ಅವಕಾಶವನ್ನು ಕಳೆದುಕೊಂಡಿತ್ತು.

ಅಂದು ಎದುರಾಗಿದ್ದ ಸೋಲು ಘಾನಾ ತಂಡವನ್ನು ಈಗಲೂ ಕಾಡುತ್ತಿದ್ದು, ಇದೀಗ ಮುಯ್ಯಿ ತೀರಿಸುವ ಅವಕಾಶ ದೊರೆತಿದೆ. ಗುರುವಾರ ಗೆದ್ದರೆ ಘಾನಾ ತಂಡ ನಾಕೌಟ್ ಹಂತ ಪ್ರವೇಶಿಸಲಿದೆ. ಉರುಗ್ವೆ ಟೂರ್ನಿಯಿಂದ ಹೊರ ಬೀಳಲಿದೆ.

ಇಂದಿನ ಪಂದ್ಯ

ಪಂದ್ಯ	ಸಮಯ
ಘಾನಾ Vs ಉರುಗ್ವೆ	ರಾತ್ರಿ 8.30
ದಕ್ಷಿಣ ಕೊರಿಯಾ Vs ಪೋರ್ಚುಗಲ್	ರಾತ್ರಿ 8.30
ಸರ್ಬಿಯಾ Vs ಸ್ವಿಟ್ಜರ್ಲೆಂಡ್	ತಡರಾತ್ರಿ 12.30
ಕ್ಯಾಮರೂನ್ Vs ಬ್ರೆಜಿಲ್	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ಸಲಹಾ ಸಮಿತಿಗೆ ಜತಿನ್, ಅಶೋಕ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಆಟಗಾರರಾದ ಅಶೋಕ್ ಮಲ್ಹೋತ್ರಾ ಹಾಗೂ ಜತಿನ್ ಪರಾಂಜಪೆ ಅವರನ್ನು ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ)ಗೆ ನೇಮಕ ಮಾಡಲಾಗಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ರಾಷ್ಟ್ರೀಯ ಸೀನಿಯರ್ ಕ್ರಿಕೆಟ್ ಆಯ್ಕೆ ಸಮಿತಿಯನ್ನು ಸಿಎಸಿಯು ಆಯ್ಕೆ ಮಾಡಲಿದೆ.

ಈ ಹಿಂದಿನ ಅವಧಿಯಲ್ಲಿ ಮದನ್ ಲಾಲ್ ಹಾಗೂ ರುದ್ರಪ್ರತಾಪ್ ಸಿಂಗ್ ಈ ಸಮಿತಿಯಲ್ಲಿದ್ದರು. ಅದರಲ್ಲಿದ್ದ ಸುಲಕ್ಷಣಾ ನಾಯಕ್ ಹೊಸ ಸಮಿತಿ ಯಲ್ಲಿಯೂ ಮುಂದುವರಿಯಲಿದ್ದಾರೆ.

'ಅಶೋಕ್ ಅವರು ಏಳು ಟೆಸ್ಟ್ ಹಾಗೂ 20 ಏಕದಿನ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಅವರು ಭಾರತ ಕ್ರಿಕೆಟಿಗರ ಸಂಘದ ನಿಕಟಪೂರ್ವ ಅಧ್ಯಕ್ಷರೂ ಹೌದು. ಪರಾಂಜಪೆ ನಾಲ್ಕು ಏಕದಿನ ಪಂದ್ಯಗಳನ್ನು ಆಡಿದ್ದಾರೆ ಹಾಗೂ ಸೀನಿಯರ್ ಪುರುಷ ತಂಡದ ಆಯ್ಕೆಗಾರರಾಗಿಯೂ ಕಾರ್ಯನಿರ್ವಹಿ-ಸಿದ್ದಾರೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಕ್ವಾರ್ಟರ್ ಫೈನಲ್‌ಗೆ ಉನ್ನತಿ

ನವದೆಹಲಿ (ಪಿಟಿಐ): ಭಾರತದ ಉನ್ನತಿ ಹೂಡಾ ಅವರು ಥಾಯ್ಲೆಂಡ್‌ನಲ್ಲಿ ನಡೆಯುತ್ತಿರುವ ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಇಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಉನ್ನತಿ ಗುರುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 21–11, 21–19 ರಲ್ಲಿ ಥಾಯ್ಲೆಂಡ್‌ನ ನುಚವಿ ಸಿತ್ತಿತೀರನನ್ ವಿರುದ್ಧ ಗೆದ್ದರು.

ಇದೇ ವಿಭಾಗದ ಇನ್ನೊಂದು ಸಿಂಗಲ್ಸ್ ಪಂದ್ಯದಲ್ಲಿ ಭಾರತದ ಅನ್ಮೋಲ್ ಅವರು 17–21, 21–19, 13–21 ರಲ್ಲಿ ಮಲೇಷ್ಯಾದ ಡನಿಯಾ ಸೋಫಿಯಾ ಎದುರು ಪರಾಭವಗೊಂಡರು.

ಬಾಲಕಿಯರ 15 ವರ್ಷದೊಳಗಿನ ಡಬಲ್ಸ್‌ನಲ್ಲಿ ತನ್ವಿ ರೆಡ್ಡಿ– ದುರ್ಗಾ ಇಶಾ 21–18, 22–20 ರಲ್ಲಿ ಸ್ಥಳೀಯ ಸ್ಪರ್ಧಿಗಳಾದ ಸುನಿಸಾ ಲೆಜುಲ–ಪಿಂಚಾನೊಕ್ ಸುತಿವಿರಿಯಕುಲ್ ಅವರನ್ನು ಸೋಲಿಸಿದರು. ನವ್ಯಾ ಖಂಡೇರಿ– ರಕ್ಷಿತಾ ಶ್ರೀ 12–21, 11–21 ರಲ್ಲಿ ಜಪಾನ್‌ನ ಅಕರಿ ಕಮಿಯೊ– ನಯು ಶಿರಕವ ಎದುರು ಆಘಾತ ಅನುಭವಿಸಿದರು.


ಉನ್ನತಿ ಹೂಡಾ –ಪಿಟಿಐ ಚಿತ್ರ

ಬಾಲಕರ 17 ವರ್ಷದೊಳಗಿನ-ವರ ವಿಭಾಗದ ಡಬಲ್ಸ್‌ನಲ್ಲಿ ಭಾರತದ ಅರ್ಶ್ ಮೊಹಮ್ಮದ್ ಮತ್ತು ಶಂಕರ್ ಸಾರಸ್ವತ್ ಜೋಡಿ 21–12, 21–10 ರಲ್ಲಿ ಇಂಡೊನೇಷ್ಯಾದ ದಾನಿಸ್ವರ ಮಹರಿಜಲ್–ಯೆರೆಮಿಯಾ ದ್ವಿ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ವಿಜಯ್ ಹಜಾರೆ ಟ್ರೋಫಿ ಫೈನಲ್ ಋತುರಾಜ್–ಜೈದೇವ್ ಮುಖಾಮುಖಿ

ಅಹಮದಾಬಾದ್ (ಪಿಟಿಐ): ಟೂರ್ನಿಯುದ್ದಕ್ಕೂ ರನ್‌ಗಳ ಮಳೆ ಸುರಿಸುತ್ತಿರುವ ಮಹಾರಾಷ್ಟ್ರದ ಋತುರಾಜ್ ಗಾಯಕವಾಡ್ ಮತ್ತು ತಮ್ಮ ಎಡಗೈ ಬೌಲಿಂಗ್ ಮೂಲಕ ಮಿಂಚಿರುವ ಸೌರಾಷ್ಟ್ರದ ಜೈದೇವ್ ಉನದ್ಕತ್ ಶುಕ್ರವಾರ ಮುಖಾಮುಖಿ-ಯಾಗಲಿದ್ದಾರೆ.

ನರೇಂದ್ರ ಮೋದಿ ಕ್ರೀಡಾಂಗಣ-ದಲ್ಲಿ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಫೈನಲ್‌ನಲ್ಲಿ ಮಹಾರಾಷ್ಟ್ರ ಹಾಗೂ ಸೌರಾಷ್ಟ್ರ ತಂಡಗಳು ಹಣಾಹಣಿ ನಡೆಸಲಿವೆ.

ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವನ್ನು ಸೋಲಿಸಿ ಸೌರಾಷ್ಟ್ರವ-ನ್ನು ಫೈನಲ್‌ಗೆ ತರುವಲ್ಲಿ ಜೈದೇವ್ ಬೌಲಿಂಗ್ ಪ್ರಮುಖವಾಗಿತ್ತು. ಅದೇ ರೀತಿ ಇನ್ನೊಂದು ಸೆಮಿಫೈನಲ್‌ನಲ್ಲಿ ಋತುರಾಜ್ ಬಾರಿಸಿದ್ದ ಶತಕದಿಂದಾಗಿ ಅಸ್ಸಾಂ ಸೋತಿತು.

ಜೈದೇವ್ ಉನದ್ಕತ್

ಋತುರಾಜ್ ಈ ಟೂರ್ನಿಯಲ್ಲಿ ಒಟ್ಟು 552 ರನ್‌ಗಳನ್ನು ಪೇರಿಸಿದ್ದಾರೆ. ಅದರಲ್ಲಿ ಉತ್ತರ ಪ್ರದೇಶ ವಿರುದ್ಧ ಹೊಡೆದ 220 ಹಾಗೂ ಸೆಮಿಯಲ್ಲಿ ಗಳಿಸಿದ 168 ರನ್‌ಗಳೂ ಇವೆ. ಉನದ್ಕತ್ ಅವರು ಇದುವರೆಗೆ 18 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9

ಅಂಧರ ಕ್ರಿಕೆಟ್: ಪಾಕ್ ತಂಡಕ್ಕೆ ವೀಸಾ ಶೀಘ್ರ

ನವದೆಹಲಿ (ಪಿಟಿಐ): ಭಾರತದಲ್ಲಿ ಇದೇ 5 ರಿಂದ 17ರವರೆಗೆ ನಡೆಯಲಿರುವ ಅಂಧರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಪಾಕಿಸ್ತಾನ ತಂಡಕ್ಕೆ ಶೀಘ್ರದಲ್ಲಿಯೇ ವೀಸಾ ಲಭಿಸುವ ನಿರೀಕ್ಷೆ ಇದೆ.

ಭಾರತ ಮತ್ತು ಪಾಕ್ ತಂಡವು ಸಿರಿ ಫೋರ್ಟ್ ಮೈದಾನದಲ್ಲಿ ಮೊದಲ ಪಂದ್ಯ ಆಡಲಿವೆ. ಆದರೆ ವೀಸಾ ಇನ್ನೂ ಸಿಗದ ಕಾರಣ ಪಾಕ್ ತಂಡವು ಭಾರತಕ್ಕೆ ಬಂದಿಳಿಯುವುದು ವಿಳಂಬವಾಗಿದೆ.

'ಪಾಕ್ ಕ್ರಿಕೆಟಿಗರಿಗೆ ವೀಸಾ ಪಡೆಯುವುದು ಬಹಳ ಕ್ಲಿಷ್ಟವಾದ ಕಾರ್ಯವಾಗಿದೆ. ಎಂ.ಇ.ಎ ಈ ಕುರಿತು ಕಾರ್ಯನಿರ್ವಹಿಸುತ್ತಿದೆ. ಪಾಕ್ ತಂಡಕ್ಕೆ ವೀಸಾ ಸಿಗುವ ಭರವಸೆ ಇದೆ' ಎಂದು ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಅಧ್ಯಕ್ಷ ಜಿ.ಕೆ. ಮಹಾಂತೇಶ್ ಗುರುವಾರ ತಿಳಿಸಿದ್ದಾರೆ.

ಟೂರ್ನಿಯಲ್ಲಿ ನ್ಯೂಜಿಲೆಂಡ್, ವೆಸ್ಟ್ ಇಂಡೀಸ್ ಹಾಗೂ ಇಂಗ್ಲೆಂಡ್ ಸ್ಪರ್ಧಿ-ಸುತ್ತಿಲ್ಲ. ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ನೇಪಾಳ, ಶ್ರೀಲಂಕಾ, ಬಾಂಗ್ಲಾದೇಶ ತಂಡಗಳು ಕಣಕ್ಕಿಳಿಯಲಿವೆ.

ಪಂದ್ಯಗಳು ಫರೀದಾಬಾದ್, ದೆಹಲಿ, ಮುಂಬೈ, ಇಂದೋರ್ ಮತ್ತು ಬೆಂಗಳೂರಿನಲ್ಲಿ ನಡೆಯಲಿವೆ.

ಐಪಿಎಲ್: 991 ಆಟಗಾರರ ನೋಂದಣಿ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮುಂದಿನ ಆವೃತ್ತಿಯ ಹರಾಜು ಪ್ರಕ್ರಿಯೆಯಲ್ಲಿ ಸ್ಪರ್ಧಿಸಲು 991 ಆಟಗಾರರು ನೋಂದಣಿ ಮಾಡಿಕೊಂಡಿದ್ದಾರೆ.

ಡಿಸೆಂಬರ್ 23ರಂದು ಕೊಚ್ಚಿಯಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದೆ. ಪ್ರಕ್ರಿ-ಯೆಯಲ್ಲಿ 14 ದೇಶಗಳ ಆಟಗಾರರು ಇದ್ದಾರೆ. ಅದರಲ್ಲಿ ಭಾರತದ 714, ಆಸ್ಟ್ರೇಲಿಯಾ 57, ದಕ್ಷಿಣ ಆಫ್ರಿಕಾದ 52, ವೆಸ್ಟ್ ಇಂಡೀಸ್ 33, ಇಂಗ್ಲೆಂಡ್ 31, ನ್ಯೂಜಿಲೆಂಡ್ 27, ಶ್ರೀಲಂಕಾ 23, ಅಫ್ಗಾನಿಸ್ತಾನ 14, ಐರ್ಲೆಂಡ್ 8, ನೆದರ್ಲೆಂಡ್ಸ್ 7, ಬಾಂಗ್ಲಾದೇಶ 6, ಯುಎಇ 6, ಜಿಂಬಾಬ್ವೆ 6, ನಮಿಬಿಯಾ 5 ಮತ್ತು ಸ್ಕಾಟ್ಲೆಂಡ್‌ನ ಇಬ್ಬರು ಆಟಗಾರರು ಇದ್ದಾರೆ.

2023 ಆವೃತ್ತಿಯಲ್ಲಿ ಆಡುವ ತಂಡಗಳು ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲಿವೆ. ಈಗಾಗಲೇ ತಮ್ಮ ತಂಡಗಳಿಂದ ಆಟಗಾರರನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿವೆ.